
ಪುಸ್ತಕ ಪ್ರಪಂಚ

ಡಿಸೆಂಬರ್ ೧೯೮೮



ನಗೀಬ್ ಮಹ್‌ಫೌಜ್

ಪುಸ್ತಕ ಪ್ರಪಂಚ
ಮಾಸಿಕ

ಪ್ರಧಾನ ಸಂಪಾದಕರು
ಪ್ರೊ|| ದೇ. ಜವರೇಗೌಡ

ಗೌರವ ಸಂಪಾದಕ
ಶ್ರೀಕೃಷ್ಣ ಆಲನಹಳ್ಳಿ

ಸಂಪಾದಕ
ಆರ್. ಬೋರಯ್ಯ

ಸದಸ್ಯರು
ದೇವನೂರು ಶಿವಮಲ್ಲು

ಅಧ್ಯಕ್ಷರು
ಕೆ. ಎನ್. ವೆಂಕಟಕೃಷ್ಣಯ್ಯ

ಪ್ರಧಾನ ಕಾರ್ಯದರ್ಶಿ
ಜಿ. ಟಿ. ನಾರಾಯಣರಾವ್
ಡಾ|| ಎಚ್. ಸಂಜೀವಯ್ಯ
ರಾ. ವೆಂ. ಶ್ರೀನಿವಾಸಮೂರ್ತಿ
ಸುಧಾಕರ
ಕ್ಯಾತನಹಳ್ಳಿ ರಾಮಣ್ಣ
ಪರಮಶಿವ ನಡುಬೆಟ್ಟ
ಮಲೆಯೂರು ಗುರುಸ್ವಾಮಿ
ಲಿಂಗದೇವರು ಹಳೇಮನೆ

ಪರಿವಿಡಿ

ಪುಸ್ತಕ ವಿಭಾಗ

ಸಂಪುಟ : ೪೩ ಸಂಚಿಕೆ–೫

PUSTAKA PRAPANCHA : Monthly

Published and printed by Karnataka State Adult Eductaion Council, Mysore-4. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 004

ನೊಬೆಲ್ ಸಾಹಿತಿ ನಗೀಬ್ ಮಹ್‌ಫೌಜ್

ಎಚ್ಚೆಸ್ಕೆ

ಸ್ವೀಡಿಷ್ ಅಕಾಡೆಮಿ ಪ್ರತಿವರ್ಷವೂ ನೀಡುವ ನೊಬೆಲ್ ಬಹುಮಾನ ವಿಶ್ವದ ಪ್ರತಿಷ್ಠೆಯ ಪಾರಿತೋಷಿಕ. ಇದನ್ನು ಪಡೆಯುವುದು ಸಾಧನೆಯ ಪರಾಕಾಷ್ಠೆ, ಬದುಕಿನ ಪರಮ ಗುರಿ— ಎಂದೇ ಸಾಮಾನ್ಯ ಭಾವನೆ.

ಆದರೆ ನೊಬೆಲ್ ಬಹುಮಾನದ ಬಗ್ಗೆ ಬಹಳಷ್ಟು ಟೀಕೆಗಳೂ ಇಲ್ಲದಿಲ್ಲ. ಈ ಬಹುಮಾನದ ನೀಡಿಕೆಯ ಹಿಂದೆ ರಾಜಕೀಯ ಉದ್ದೇಶವೂ ಉಂಟು ಎಂಬುದು ಒಂದು ಟೀಕೆ. ಈ ಬಹುಮಾನ ಕ್ಕಾಗಿ ಬಹಳವಾಗಿ ಪ್ರಯತ್ನ ಪಡುವವರೂ ಅವರಿಂದ ಶಿಫಾರಸು ಮಾಡಿಸುವವರೂ ಇರುತ್ತಾರೆ. ಅನೇಕ ವೇಳೆ ಅರ್ಹರಿಗೆ ಇದು ದೊರಕುವುದಿಲ್ಲ. ನೊಬೆಲ್ ಬಹುಮಾನ ಪಡೆಯದೆಯೇ ಹೋಗುವ ಅನೇಕ ಮಂದಿ ಉತ್ಕೃಷ್ಟ ಸಾಹಿತಿಗಳು ಬೆರಳೆಣಿಕೆಗೆ ಸಿಗದಷ್ಟು ಮಂದಿ ಇದ್ದಾರೆ. ತೀರ್ಪುಗಾರರ ಕಣ್ಣು ಯೂರೋಪಿ ಯನ್ ಭಾಷೆಗಳಿಂದಾಚೆಗೆ ಹಾಯುವುದೇ ಇಲ್ಲ ಎಂಬ ಆಕ್ಷೇಪವೂ ಇದೆ. ಯೂರೋಪಿಯನ್ ಭಾಷೆಗಳನ್ನು ಬಿಟ್ಟು ಉಳಿದ ಭಾಷೆ ಗಳಲ್ಲಿ ವಿಶ್ವ ಸಾಹಿತ್ಯ ಸೃಷ್ಟಿಯಾಗುವುದೇ ಸಾಧ್ಯವಿಲ್ಲವೆಂಬ ಭ್ರಮೆಯೂ ಸುಪ್ತವಾಗಿ ಕೆಲಸಮಾಡುತ್ತಿದ್ದರೆ ಆಶ್ಚರ್ಯವಿಲ್ಲ. ಆ ಭಾಷೆಗಳಲ್ಲಿ ಸೃಷ್ಟಿಯಾದ ಸಾಹಿತ್ಯದ ಬೆಲೆ ಕಟ್ಟಬೇಕಾದರೆ ಅಕಾಡೆಮಿಯವರು ಅರ್ಥಮಾಡಿಕೊಳ್ಳಬಹುದಾದ ಒಂದು ಭಾಷೆಗೆ—ಮುಖ್ಯವಾಗಿ ಇಂಗ್ಲಿಷಿಗೆ—ಅದು ಅನುವಾದವಾಗ ಬೇಕು. ಒಳ್ಳೆಯ ಸಾಹಿತ್ಯವೆಲ್ಲ ಹೀಗೆ ಅನುವಾದವಾಗುವುದಿಲ್ಲ. ಅನುವಾದವಾದರೂ ಮೂಲದ ಸತ್ತ್ವ ಭಾಷಾಂತರದಲ್ಲೂ ಉಳಿಯುವುದೆಂಬ ಭರವಸೆಯಿಲ್ಲ.

ಈ ಎಲ್ಲ ಆಪಾದನೆಗಳಿಗೂ ಅಪವಾದವೋ ಎಂಬ ಹಾಗೆ ಈ ಬಾರಿ ಈಜಿಪ್ಟಿನ ಲೇಖಕರೊಬ್ಬರಿಗೆ ನೊಬೆಲ್ ಬಹುಮಾನ ಪ್ರಾಪ್ತಿ ಯಾಗಿದೆ. ಆ ಲೇಖಕರ ಹೆಸರು ನಗೀಬ್ ಮಹ್‌ಫೌಜ್. ಅವರ

ಭಾಷೆ ಅರಬ್ಬೀ. ಇಪ್ಪತ್ತೈದು ಲಕ್ಷ ಕ್ರೋನರುಗಳ (ಸುಮಾರು ಐವತ್ತೆಂಟು ಲಕ್ಷ ರೂಪಾಯಿ) ಈ ಬಹುಮಾನ ಪಡೆದಿರುವ ಪ್ರಥಮ ಅರಬ್ಬೀ ಭಾಷಾ ಲೇಖಕ ಮುಹ್‌ಫೌಜ್.

ಕೈರೋ ನಗರವಾಸಿ ಮುಹ್‌ಫೌಜ್ (ಜನನ ೧೯೧೧) ಸರ್ಕಾರಿ ನೌಕರರರೊಬ್ಬರ ಮಗ. ಅವರ ಬಾಲ್ಯ ಜೀವನದ ಬಗ್ಗೆ ತಿಳಿದಿರುವುದು ಬಲು ಅಲ್ಪ. ಆದರೆ ಆಧುನಿಕ ಈಜಿಪ್ಟಿನ ಪ್ರಕ್ಷುಬ್ಧಮಯ ದಿನಗಳ ತಳಮಳ–ಕಳವಳ, ಆಸೆ–ನಿರಾಸೆ, ನೋವು–ನಲಿವುಗಳನ್ನು ತೀವ್ರವಾಗಿ ಅನುಭವಿಸಿದವರು ನಗೀಬ್ ಮುಹ್‌ಫೌಜ್. ಅಂತೆಯೇ ಅವರ ಕಥೆ, ಕಾದಂಬರಿಗಳಲ್ಲಿ, ಈ ಅನುಭವ ಅತ್ಯಂತ ಉತ್ಕಟವಾಗಿ, ನಿಚ್ಚಳವಾಗಿ ಅಭಿವ್ಯಕ್ತಗೊಂಡಿದೆ. ಚಿಕ್ಕಂದಿನಲ್ಲೇ ವಿಜ್ಞಾನದಲ್ಲೂ, ಸಮಾಜವಾದದಲ್ಲೂ ಸಹಿಷ್ಣುತೆಯಲ್ಲೂ ನಂಬಿಕೆ ಬೆಳೆಸಿಕೊಂಡೆನೆಂದು ತಮ್ಮ ಬಗ್ಗೆ ಹೇಳಿಕೊಳ್ಳುವ ಮುಹ್‌ಫೌಜ್ ಈಜಿಪ್ಟ ಸರ್ಕಾರದ ಸಾಂಸ್ಕೃತಿಕ ಇಲಾಖೆಯಲ್ಲಿ ೧೯೩೪ ರಲ್ಲಿ ಕೆಲಸಕ್ಕೆ ಸೇರಿಕೊಂಡು ೧೯೭೧ ರಲ್ಲಿ ನಿವೃತ್ತರಾದರು.

ನಗೀಬ್ ಮುಹ್‌ಫೌಜ್ ಸಾಹಿತ್ಯ ಕ್ಷೇತ್ರದಲ್ಲಿ ಕಾಲಿರಿಸಿದ್ದು ೧೯೩೯ ರಲ್ಲಿ. ಅವರು ಅನೇಕ ನಾಟಕಗಳನ್ನೂ ಸುಮಾರು ಮೂವತ್ತು ಚಲನಚಿತ್ರ ಕಥೆಗಳನ್ನು ಬರೆದರು. ಸುಮಾರು ಏಳು ಸಾವಿರ ವರ್ಷಗಳಷ್ಟು ದೀರ್ಘ ಇತಿಹಾಸವುಳ್ಳ ಈಜಿಪ್ಟ ನಾಗರಿಕತೆಯನ್ನರಿತರು. ಉದ್ದಕ್ಕೂ ಸೃಷ್ಟಿಯಾದ ವಿಪುಲವೂ ವ್ಯಾಪಕವೂ ವೈವಿಧ್ಯಮಯವೂ ಆದ ಅದರ ಸಾಹಿತ್ಯವನ್ನಭ್ಯಾಸ ಮಾಡಿದರು. ಹಳೆತರಲ್ಲಿ ಹೊಸದರ ಎಳೆಯನ್ನು ಕಂಡು ಕೊಂಡರು. ಸಮಕಾಲೀನ ಸಾಹಿತ್ಯ ಸೃಷ್ಟಿಯನ್ನೂ ಅರಿತುಕೊಂಡರು. ಇವೆರಡರಿಂದಲೂ ಪ್ರಭಾವಿತರಾದರು. ಅವರ ಸಾಹಿತ್ಯದಲ್ಲಿ ಇವೆರಡರ ಸಮನ್ವಯವನ್ನು ಕಾಣಬಹುದು. ಸುಮಾರು ನಾಲ್ಕು ದಶಕಗಳ ಬರಹದ ಜೀವನದಲ್ಲಿ ಮುಹ್‌ಫೌಜ್ ಅವರು ಸಣ್ಣ ಕತೆಗಳಿಂದ, ಕಾದಂಬರಿಗಳಿಂದ, ನಾಟಕಗಳಿಂದ, ಚಿತ್ರಕಥೆಗಳಿಂದ ಅರಬ್ಬೀ ಸಾಹಿತ್ಯವನ್ನು ಅತ್ಯಂತ ಸಮೃದ್ಧವಾಗಿ ಮಾಡಿದ್ದಾರೆ. ಆದರೆ ಅವರಿಗೆ ಈ ಸಾಹಿತ್ಯ ಸಿದ್ಧಿಯ ಬಗ್ಗೆ ಸ್ವಲ್ಪವೂ ಅಹಂಕಾರವಿಲ್ಲ. 'ವಿಶ್ವ ಸಾಹಿತ್ಯದಲ್ಲಿ ನಿಮ್ಮ ಕೃತಿಗಳಿಗೆ ಯಾವ ಸ್ಥಾ ನೀಡುತ್ತೀರಿ?' ಎಂಬ ಪ್ರಶ್ನೆಗೆ ಅವರು, 'ಉಳಿದೆಲ್ಲ ಆಧುನಿಕ ಅರಬ್ಬೀ ಸಾಹಿತ್ ಕೃತಿಗಳಂತೆ ನನ್ನ ಕೃತಿಗಳಿಗೂ ನಾಲ್ಕನೆಯದೋ ಐದನೆಯದೋ ಸ್ಥಾನ' ಎಂದರಂತೆ

ನೊಬೆಲ್ ಬಹುಮಾನ ನೀಡಿದ ಸ್ವೀಡಿಷ್ ಅಕಾಡೆಮಿಯ ದೃಷ್ಟಿಯಲ್ಲಿ ಮುಹ್‌ಫೌಜ್ ಸಾಹಿತ್ಯ ಅತ್ಯಂತ ನವುರಾದ್ದು–ಒಮ್ಮೆ ವಾಸ್ತವತೆಯೆಡೆಗೂ ಇನ್ನೊಮ್ಮೆ ಧ್ವನಿಪೂರ್ಣತೆಯೆಡೆಗೂ ತೂಗಾಡುವಂಥದು, ಊಹಿಸಿದಂತೆಲ್ಲ ಹೊಸಹೊಸ ಅರ್ಥ ಮೂಡಿಸುವಂಥದು, ಕೊನೆಗೂ ಲೇಖಕರ ಮನೋಗತವೇನೆಂಬ ಬಗ್ಗೆ ವಿಸ್ಮಯ ಉಂಟು ಮಾಡುವ ಬಗೆಯದು. ಅರಬ್ಬೀ ಭಾಷೆ ಆಡುವವರ ಸಾಂಸ್ಕೃತಿಕ ವಲಯದ ಸಾಹಿತ್ಯ ಅಭಿವ್ಯಕ್ತಿಯಾಗಿ ಕಾದಂಬರಿಯನ್ನು ರೂಪಿಸುವ, ಅದನ್ನೊಂದು ಶಕ್ತ ಮಾಧ್ಯಮವಾಗಿ ಮಾಡುವ ಹವಣನ್ನು ಅವರ ಕೃತಿಗಳಲ್ಲಿ ಕಾಣಬಹುದು. ಅಕಾಡೆಮಿಯ ದೃಷ್ಟಿಯಲ್ಲಿ ಮುಹ್‌ಫೌಜ್ ಕೃತಿಗಳ ಹರಹು ಬಲು ದೊಡ್ಡದು. ಇಡೀ ವಿಶ್ವದ ಅನುಭವವನ್ನೇ ಅವರ ಕೃತಿಗಳು ಒಳಗೊಂಡಿವೆಯೆನ್ನಬಹುದು.

ಈಜಿಪ್ಟ್ ದೇಶ ಪ್ರಕ್ಷುಬ್ಧಮಯ ಘಟನೆಗಳನ್ನು ಹಾದು ಮುಂದೆ ಸಾಗುತ್ತಿದ್ದ ಕಾಲದಲ್ಲಿ ಬರವಣಿಗೆಯ ಬದುಕನ್ನಾರಂಭಿಸಿದ ಮಹ್‌ಫೌಜರು ರಾಜಕಾರಣವನ್ನು ತಮ್ಮ ಬರಹದಿಂದ ದೂರ ಇಟ್ಟವರಲ್ಲ. ರಾಜಕಾರಣವೆಂಬುದು ನಾವು ಉಸಿರಾಡುವ ಗಾಳಿಯಿದ್ದಹಾಗೆ. ಅದನ್ನು ನಾವು ಬಿಟ್ಟಿರುವುದು ಸಾಧ್ಯವೇ ಇಲ್ಲ—ಎಂದಿದ್ದಾರೆ ಮಹ್‌ಫೌಜ್. ೧೯೧೯ ರ ಕ್ರಾಂತಿ ಅವರ ಮೇಲೆ ಗಾಢವಾದ ಪ್ರಭಾವವನ್ನೇ ಉಂಟು ಮಾಡಿತು. 'ಕೊಲ್ಲು' ಎಂಬ ಮಾತನ್ನು ಅನೇಕರು ಕೇವಲ ಕತೆಗಳಲ್ಲಿ ಓದಿರಬಹುದು. ಆದರೆ ನನ್ನಮಟ್ಟಿಗೆ ಅದೊಂದು ವಾಸ್ತವ ಅನುಭವವಾಯಿತು—ಎಂದು ಅವರು ಹೇಳಿಕೊಂಡಿದ್ದಾರೆ. ಸಾಮಾನ್ಯ ಜನರ ಜೀವನದ ಮೇಲೆ ರಾಜಕೀಯ ಘಟನೆಗಳಿಂದ ಆಗುವ ಪರಿಣಾಮವನ್ನು ಅವರ ಕೃತಿಗಳಲ್ಲಿ ಕಾಣಬಹುದು. ಬದುಕೂ ರಾಜಕಾರಣವೂ ಅವುಗಳಲ್ಲಿ ಹಾಸುಹೊಕ್ಕು.

ಮಹ್‌ಫೌಜರು ಮೊದಮೊದಲು ಪ್ರಾಚೀನ ಈಜಿಪ್ಟಿನ ಘಟನೆಗಳನ್ನು ತಮ್ಮ ಕೃತಿಗಳಿಗೆ ವಸ್ತುಗಳಾಗಿ ಆಯ್ದುಕೊಂಡರು. ಅವರ ಮೊದಲ ಮೂರು ಕಾದಂಬರಿಗಳು ಇಂಥವೇ. ಆದರೆ ಅವು ಕೇವಲ ಐತಿಹಾಸಿಕ ಕಾದಂಬರಿಗಳಲ್ಲ. ಅವರ ಕಾಲದ ಈಜಿಪ್ಟ್ ಸಮಾಜದ ವಿಮರ್ಶೆಗಳು. ಮುಂದೆ ಸಂಭವಿಸಲಿದ್ದ ಘಟನೆಗಳನ್ನು ಕುರಿತ ಸೂಚನೆಗಳನ್ನೂ ಅವುಗಳಲ್ಲಿ ಕಾಣಬಹುದು. ಜನನಾಯಕನೊಬ್ಬನಿಗೆ ಅಧಿಕಾರ ಬಿಟ್ಟುಕೊಟ್ಟು ಸಿಂಹಾಸನದಿಂದ ಇಳಿಯಬೇಕಾಗಿ ಬಂದ ನಿರಂಕುಶ ರಾಜನೊಬ್ಬನ ಕಥೆಯೇ 'ಅದೃಷ್ಟದ ಆಟ'. ಇದನ್ನು ಮಹ್‌ಫೌಜ್ ಬರೆದದ್ದು ೧೯೩೯ರಲ್ಲಿ. 'ರಾಡೊಪಿಸ್' ಎಂಬುದೂ ಒಬ್ಬ ದೊರೆಯ ಕಥೆಯೇ. ಇದನ್ನು ರಚಿಸಿದ್ದು ೧೯೪೩ರಲ್ಲಿ. ಆ ದೊರೆ ಭೋಗಲಾಲಸೆಯಲ್ಲಿ ತೊಡಗಿ ಜನತೆಯ ಹಿತವನ್ನು ಕಡೆಗಣಿಸುತ್ತಾನೆ. ಕೋಪಗೊಂಡ ಜನತೆ ಅವನ ಅರಮನೆಯತ್ತ ಸಾಗಿಬಂದು ಅವನನ್ನು ಮುಗಿಸಿಬಿಡುತ್ತದೆ. 'ಥೀಬ್ಸ್‌ನ ಹೋರಾಟ' ಎಂಬುದೂ ಈ ಬಗೆಯದೇ : ಹಿಕ್ಸಾಸ್ ಜನಾಂಗದವರ ದಬ್ಬಾಳಿಕೆ ; ಸಂಘಟಿತ ಜನರಿಂದ ಅವರ ಉಚ್ಚಾಟನೆ.

ಇತಿಹಾಸದ ಪಾತ್ರಗಳ ಹಾಗೂ ಘಟನೆಗಳ ಮೂಲಕ ಪ್ರಚಲಿತ ಕಾಲದ ಘಟನೆಗಳ ಭಾಷ್ಯ ಬರೆಯುವುದನ್ನು ಬಿಟ್ಟು, ಮಹ್‌ಫೌಜರು ಮುಂದೆ ನೇರವಾಗಿಯೇ ಅಂದಿನ ಸಾಮಾಜಿಕ ಅನ್ಯಾಯಗಳನ್ನು ಅಭಿವ್ಯಕ್ತಿಸತೊಡಗಿದರು. ಅವರು ಬರೆದ ಅನಂತರದ ಕೃತಿಗಳಿಗೆ ಹೆಚ್ಚಿನ ವಾಸ್ತವತೆ ಪ್ರಾಪ್ತವಾಯಿತು. ೧೯೪೫ರಲ್ಲಿ ಹೊರಬಂದ 'ಹೊಸ ಕೈರೋ' ಕೃತಿ ಈ ಬಗೆಯದು. ಬಡತನದಲ್ಲಿ ಅದ್ದಿತೆಗೆದ ಜನಸಮೂಹ ಒಂದು ಕಡೆ. ಅವರ ಆ ಹೀನ ದೀನಸ್ಥಿತಿಗೆ ಕಾರಣರಾದ ಭ್ರಷ್ಟ ಸರ್ಕಾರದ ಅಧಿಕಾರಿಗಳು ಇನ್ನೊಂದು ಕಡೆ. ಸತ್ಯ ನಿಷ್ಠೆಯೇ ನಿಜವಾದ ಕಲೆ ಎಂದು ಹೇಳಿಕೊಂಡಿದ್ದಾರೆ ಮಹ್‌ಫೌಜ್.

೧೯೪೬ರಿಂದ ಮುಂದಿನ ಮೂರು ವರ್ಷಗಳಲ್ಲಿ ನಗೀಬ್ ಮಹ್‌ಫೌಜರು 'ಬಿಸಿಲು ಗುದುರೆ' ಮತ್ತು 'ಆದಿ ಅಂತ್ಯ' ಎಂಬ ಎರಡು ಕೃತಿಗಳನ್ನು ಪ್ರಕಟಿಸಿದರು. ಎರಡನೆಯ ಮಹಾಯುದ್ಧದ ಮತ್ತು ಅನಂತರದ ಕಾಲದ ಅನುಭವಗಳು ಈ ಕೃತಿಗಳಲ್ಲಿ ತುಂಬಿವೆ. ಯಾರಿಗೆ ಏನೇ ಆಗಲಿ, ದೇಶವೇ ಪ್ರಪಾತಕ್ಕೆ ಬಿದ್ದುಹೋಗಲಿ, ನಮಗೆ ಲಾಭ ಗಿಟ್ಟಿದರೆ

ಹೊಸದೇನೂ ಆ ಸ್ಥಾನಕ್ಕೆ ಬಾರದ ಬಿಕ್ಕಟ್ಟಿನ ಕಾಲವದು. ಹಳೆಯ ನಂಬಿಕೆಗಳೂ ಆಚರಣೆಗಳೂ ಕ್ಷೀಣಿಸಿ ಸಾಕು—ಎನ್ನುವ ಜನರ ಚಿತ್ರಣ ಇಲ್ಲಿದೆ.

ಭೂತ ವರ್ತಮಾನಗಳ ನಡುವಣ ಘರ್ಷಣೆಯನ್ನೂ, ಸಂಪ್ರದಾಯಕ್ಕೂ ಸಾಮಾಜಿಕ ರಾಜಕೀಯ ಬೌದ್ಧಿಕ ವಿಕಾಸ ಪ್ರಕ್ರಿಯೆಗಳಿಗೂ ನಡೆಯುತ್ತಿರುವ ಹೋರಾಟವನ್ನೂ ಚಿತ್ರಿಸುವ ಕಾದಂಬರೀತ್ರಯ ಬಂದದ್ದು ೧೯೪೯–೧೯೫೭ರ ಅವಧಿಯಲ್ಲಿ. 'ಬೇನಲ್ ಖಸ್ರೇನ್', 'ಖಸರ್ ಅಷ್–ಷುಖ್' ಮತ್ತು 'ಅಲ್–ಸುಕ್ಕಾರಿಯಾ' ಎಂದು ಈ ಮೂರು ಕಾದಂಬರಿಗಳ ಹೆಸರುಗಳು. ಇವು ವಾಸ್ತವವಾಗಿ ಕೈರೋ ನಗರದ ಮೂರು ಇಕ್ಕಟ್ಟಾದ ಜನನಿಬಿಡ ಬೀದಿಗಳ ಹೆಸರುಗಳು. ಇವುಗಳ ನೆರೆಯಲ್ಲಿರುವ ಸಯ್ಯಿದ್‌ನ ಅಲ್-ಹುಸೇನ್ ಮಸೀದಿಯಲ್ಲೇ ಮಹ್‌ಫ್‌ಜರು ತಮ್ಮ ಚಿಕ್ಕಂದಿನ ದಿನಗಳನ್ನು ಕಳೆದರಂತೆ. ಅಂತೆಯೇ ಈ ಕಾದಂಬರಿಗಳು ೧೯೧೯–೧೯೪೪ರ ಅವಧಿಯ ಈಜಿಪ್ಟಿನ ರಾಜಕೀಯ ಘಟನೆಗಳ ಕಲಾತ್ಮಕ ಒಕ್ಕಣೆಯಾಗಿರುವಂತೆಯೇ ಮಹ್‌ಫೌಜರ ಆತ್ಮಕತೆಯ ಅಂಶಗಳಿಂದಲೂ ಕೂಡಿವೆ. ಇವು ಈ ಲೇಖಕರ ಉದ್ಕೃಷ್ಟಕೃತಿಗಳೆನ್ನಬಹುದು. ಮಹ್‌ಫೌಜರ ಉದಾರದೃಷ್ಟಿ, ಪ್ರಗತಿಪರ ನಿಲುವು, ವಾಸ್ತವಿಕ ನೆಲಗಟ್ಟು—ಇವು ಈ ಕೃತಿಗಳಲ್ಲಿ ಧಾರಾಳವಾಗಿ ಅಭಿವ್ಯಕ್ತಗೊಂಡಿವೆ. ಬದುಕು ಹೇಗೆ ಮುನ್ನಡೆಯಬೇಕೆಂಬ ಬಗೆಗೂ ಅಲ್ಲಲ್ಲಿ ಹೊಳಹುಗಳಿವೆ.

ಕೈರೋ ಕಾದಂಬರೀತ್ರಯ ಎಂದೇ ಪ್ರಖ್ಯಾತವಾಗಿರುವ ಈ ಕಾದಂಬರಿಗಳಲ್ಲಿ ಈಜಿಪ್ಟಿನ ದೊರೆ ಫರೂಕರನ್ನು ಪದಚ್ಯುತರನ್ನಾಗಿ ಮಾಡಿದ ೧೯೫೨ರ ಸೇನಾ ಕ್ಷಿಪ್ರಾಕ್ರಮಣದ, ಅದಕ್ಕೆ ಹಿಂದಿನ ಮತ್ತು ಮುಂದಿನ ಕಾಲಗಳ—ಹೀಗೆ ಮೂರು ತಲೆಮಾರುಗಳ—ಕತೆಯಿದೆ. ೧೫೦೦ ಪುಟಗಳ ಈ ಸಾಹಿತ್ಯ ರಾಶಿಯ ನಿರ್ಮಾಣಕ್ಕೆ ಮುನ್ನ ಐದು ವರ್ಷಗಳ ಕಾಲ ಅವರು ಆಳವಾದ ಹಾಗೂ ವ್ಯಾಪಕವಾದ ಸಂಶೋಧ[ನೆ] ನಡಸಿದರಂತೆ. ಅರಬ್ಬೀ ಭಾಷೆಯಲ್ಲಿ ಇದಕ್ಕೆ ಮುಂಚೆ ಯಾರೂ ಇಂಥ ಮಹತ್ವದ ಕೃ[ತಿ] ಬರೆಯಲಿಲ್ಲ ಎಂಬುದು ವಿಮರ್ಶಕರ ಅಭಿಪ್ರಾಯ. ಪ್ರತಿಯೊಂದು ಕಾದಂಬರಿಯ[ೂ] ಪ್ರತ್ಯೇಕ ಎನಿಸಿದರೂ ಮೂರರ ನಡುವೆ ಒಂದು ಅದ್ಭುತ ಸಮನ್ವಯವಿದೆಯೆಂಬುದನ[್ನು] ಅವರು ಕಂಡಿದ್ದಾರೆ. ಜನಜೀವನ ಮಹಾಪ್ರವಾಹ ಅಖಂಡವಾದ್ದು, ಆದಿಯಾಗ[ಲಿ] ಅಂತ್ಯವಾಗಲಿ ಇಲ್ಲದ್ದು—ಎಂಬುದನ್ನು ಸಾರುತ್ತವೆ, ಈ ಕೃತಿಗಳು.

ಆಮೇಲೆ ಹಲವು ವರ್ಷ ಮಹ್‌ಫೌಜರು ಏನೂ ಬರೆಯಲಿಲ್ಲ. ಆದರೆ ಆ ವ[ರ್ಷ]ಗಳು ಬಂಜೆಯಲ್ಲ. ಮಹ್‌ಫೌಜರು ಗಾಢವಾದ ಚಿಂತನೆಯಲ್ಲಿ ತೊಡಗಿದ್ದರು. ಅ[ವರ] ಬರವಣಿಗೆಯ ಶೈಲಿ ಮಾರ್ಪಾಟು ಹೊಂದುತ್ತಿತ್ತು. ಪ್ರತಿಮೆ, ಪ್ರತೀಕ, ಸಂಕೇತಗಳ[ನ್ನು] ಹೆಣೆಯುವ ಶೈಲಿ ರೂಪುಗೊಳ್ಳುತ್ತಿತ್ತು. 'ನಮ್ಮ ಓಣಿಯ ಮಕ್ಕಳು' ಬಂದ[ದ್ದು] ಅನಂತರ. ವಾಸ್ತವತೆಯ ಮೊಗವಾಡದೊಳಗೆ ಮಾನವತೆಯ ಕಥೆಯ ನಿರೂಪಣೆ ಇಲ್ಲ[ಿದೆ.] ಮಾನವನ ಬುದ್ಧಿಯ ವಿಕಾಸ, ಅವನ ಅಸ್ತಿತ್ವದ ಹಿಂದಿನ ಉದ್ದೇಶ—ಇಂಥ ವಿಚ[ಾರ]ಗಳನ್ನು ಈ ಕಾದಂಬರಿ ಬಿದಕುತ್ತದೆ.

೧೯೬೧ರಲ್ಲಿ ಪ್ರಕಟವಾದ ಕಾದಂಬರಿ 'ಕಳ್ಳ ಮತ್ತು ನಾಯಿಗಳು.' ಇದ[ರಲ್ಲಿ] ಲೇಖಕರು ಮತ್ತೆ ಸಾಮಾಜಿಕ ಅನ್ಯಾಯದ ವಸ್ತುವನ್ನಾರಿಸಿಕೊಂಡಿದ್ದಾರೆ. ಸಾಮಾ

ಅನ್ಯಾಯದಿಂದ ಪ್ರಾಮಾಣಿಕನೂ ಕಳ್ಳನಾಗುತ್ತಾನೆ, ಅಪರಾಧಿಯಾಗುತ್ತಾನೆ ಎಂಬುದು ಇಲ್ಲಿಯ ಸಂದೇಶ. ತನ್ನ ತಾಯಿಯನ್ನುಳಿಸಲು ಅವನು ಮೊದಲು ಕದಿಯುತ್ತಾನೆ. ಅನಂತರ ಪರಿಸ್ಥಿತಿಯ ಒತ್ತಡದಿಂದಾಗಿ ಅವನು ಕಳ್ಳತನದ ವೃತ್ತಿಯನ್ನೇ ಅನುಸರಿಸುತ್ತಾನೆ. ಸಾಮಾಜಿಕ ಅನ್ಯಾಯ ಪರಂಪರೆಯೇ ಅವನನ್ನು ಹಾಳುಗೆಡಹುತ್ತದೆ. ತಪ್ಪಾಗಿ ತನ್ನನ್ನು ಜೈಲಿಗೆ ಕಳಿಸಲು ಕಾರಣರಾದವನ್ನು ಅವನು ಹುಡುಕುತ್ತಾನೆ. ತನ್ನ ಶತ್ರುಗಳನ್ನು ಪತ್ತೆ ಹಚ್ಚಿದಾಗ ಅವನು ಹಾರಿಸಿದ ಗುಂಡು ಅಲ್ಲಿ ನಿಂತಿದ್ದ ನಿರಪರಾಧಿಯೊಬ್ಬನ ಸಾವಿಗೆ ಕಾರಣವಾಗುತ್ತದೆ. ಖಬರಸ್ಥಾನವೊಂದರಲ್ಲಿ ಪೊಲೀಸರು ಅವನನ್ನು ಹಿಡಿಯುತ್ತಾರೆ.

ಈ ಕಾದಂಬರಿ ಬಂದಾಗ ಗಮಾಲ್ ಅಬ್ದುಲ್ ನಾಸೆರ್ ಈಜಿಪ್ಟಿನ ಅಧ್ಯಕ್ಷರಾಗಿದ್ದರು. ಕ್ರಾಂತಿಯ ಅನಂತರದ ಆ ದಿನಗಳಲ್ಲಿ ಆಡಳಿತ ಅಸಮರ್ಪಕವಾಗಿತ್ತೆಂಬುದನ್ನು ಈ ಕಾದಂಬರಿ ಸೂಚ್ಯವಾಗಿ ಹೇಳುತ್ತಿದೆಯೆಂಬ ಕಾರಣದಿಂದಾಗಿ ಆ ಸರ್ಕಾರ ಅವರಿಗೆ ಬಹಳಷ್ಟು ತೊಂದರೆ ಕೊಟ್ಟಿತು. ೧೯೬೬ರಲ್ಲಿ ಬಂದ ಮಿರಾಮರ್ ಎಂಬುದು ನಾಸೆರರ ಆಂತರಿಕ ಹಾಗೂ ವಿದೇಶಾಂಗ ನೀತಿಯ ನೇರ ಟೀಕೆಯೆನಿಸಿತು. ಅಲೆಗ್ಸಾಂಡ್ರಿಯದ ಹೋಟಲೊಂದರಲ್ಲಿ ಕತೆ ಸಾಗುತ್ತದೆ. ಅಲ್ಲಿ ಇಳಿದುಕೊಂಡವರು ಕ್ರಾಂತಿಯ ಆದರ್ಶಗಳನ್ನು ಬಾಯಿತುಂಬ ಕೊಂಡಾಡುತ್ತ ಒಳಗೊಳಗೇ ಅದರ ಬಗ್ಗೆ ತುಚ್ಛ ಭಾವನೆ ತಳೆದಿರುತ್ತಾರೆ. 'ಗಬೆಲಾವಿಯ ಮಕ್ಕಳು' (೧೯೫೯) ಎಂಬುದು ಮಾನವನ ಆಧ್ಯಾತ್ಮಿಕ ಮೌಲ್ಯಗಳ ನಿರಂತರ ಶೋಧದ ನಿರೂಪಣೆ. ಆಡಂ, ಈವ್, ಮೋಸಸ್, ಯೇಸು, ಮಹಮದ್ ಮುಂತಾದವರನ್ನಾಧರಿಸಿದ ಇಲ್ಲಿಯ ಪಾತ್ರಗಳ ಜೊತೆಗೆ ಆಧುನಿಕ ವಿಜ್ಞಾನಿಯೊಬ್ಬನ ಪಾತ್ರವೂ ಬರುತ್ತದೆ. ಮುಸ್ಲಿಂ ರಾಜ್ಯವಾದ ಈಜಿಪ್ಟಿನ ಸರ್ಕಾರ ಇದರ ಪ್ರಕಟಣೆಗೆ ಅನುಮತಿ ನೀಡಿರಲಿಲ್ಲ. ಈಜಿಪ್ಟಿನ ಮುಂದಿನ ಅಧ್ಯಕ್ಷ ಅನ್ವರ್ ಸಾದಾತರು ಇಸ್ರೇಲಿನೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡಾಗ ಮಹ್‌ಫೌಜ್ ಅದಕ್ಕೆ ಬೆಂಬಲ ನೀಡಿದರೆಂಬ ಕಾರಣದಿಂದಾಗಿ ಅನೇಕ ಅರಬ್ ದೇಶಗಳು ಅವರ ಕೃತಿಗಳಿಗೆ ನಿಷೇಧ ವಿಧಿಸಿದ್ದುವು. ಈಗ ಆ ನಿರ್ಬಂಧಗಳಿಲ್ಲ. ೧೯೬೬ರಲ್ಲಿ 'ನೈಲ್ ನದಿಯ ಮೇಲಣ ಗೃಹನೌಕೆ' ಪ್ರಕಟವಾಯಿತು ಇದು ಮಹ್‌ಫೌಜರ ಪ್ರಾತಿನಿಧಿಕ ಕೃತಿಯೆಂದು ಬಣ್ಣಿಸಲಾಗಿದೆ. 'ದೇವರ ಪ್ರಪಂಚ' ಎಂಬುದು ಅವರ ಸಣ್ಣ ಕತೆಗಳ ಸಂಕಲನ.

ನಗೀಬ್ ಮಹ್‌ಫೌಜ್ ಹೆಚ್ಚಾಗಿ ಪ್ರವಾಸ ಮಾಡಿದವರಲ್ಲ. ಯುಗೋಸ್ಲಾವಿಯದಿಂದಾಚೆಗೆ ಅವರು ಹೋದವರಲ್ಲ. ಕೈರೋದ ಮನೆಯೊಂದರ ಮೂರನೆಯ ಮಹಡಿಯಲ್ಲಿ ಅವರ ವಾಸ. ಅವರ ಜೊತೆಗೆ ಅವರ ಪತ್ನಿ, ಇಬ್ಬರು ಪುತ್ರಿಯರು ಮತ್ತು ಎರಡು ನಾಯಿಗಳು.

'ನಿಮ್ಮ ಕಾದಂಬರಿಗಳಲ್ಲಿ ಮತ್ತೆ ಮತ್ತೆ ಬರೆದದ್ದನ್ನೇ ಬರೆಯುತ್ತಿರುತ್ತೀರಲ್ಲ, ಏಕೆ?' ಎಂಬ ಪ್ರಶ್ನೆಗೆ ಅವರು ತಮ್ಮ ಕೊಟಡಿಯ ಕಿಟಕಿಯಾಚೆಗೆ ಗಂಭೀರವಾಗಿ ಹರಿಯುವ ನೈಲ್ ನದಿಯತ್ತ ಕೈ ತೋರುತ್ತಾರೆ. 'ಈ ಮಹಾ ನದಿಯನ್ನು ನೋಡಿ.

ಇದು ನಿರಂತರವಾಗಿ ಹರಿಯುತ್ತಲೇ ಇದೆ, ಉರುಳುತ್ತಲೇ ಇದೆ. ಇದು ನಮ್ಮ ಸಂಸ್ಕೃತಿ. ಒಂದೇ ವಸ್ತುವಿನ ವಿವಿಧ ಬಗೆಗಳನ್ನು, ಭಂಗಿಗಳನ್ನು ನಾವು ಪ್ರೀತಿಸುತ್ತೇವೆ.'

'ನಿಮ್ಮ ಬರಹದ ಹಿಂದಿನ ಕಲಾತ್ಮಕ ಪ್ರೇರಣೆಗಳು ಯಾವುವು?' ಎಂಬ ಪ್ರಶ್ನೆಗೆ ಥಟ್ಟನೆ ಅವರೊಮ್ಮೆ ಉತ್ತರಿಸಿದರಂತೆ: 'ನನಗಿಬ್ಬರು ಹೆಣ್ಣು ಮಕ್ಕಳಿದ್ದಾರೆ. ಅವರಿಗೆ ಎತ್ತರ ಹಿಮ್ಮಡಿಯ ಮೊಚ್ಚೆಗಳು ಬೇಕು. ಅದಕ್ಕಾಗಿ ನಾನು ಬರೆಯುತ್ತೇನೆ.'

ಆದರೆ ಅದು ಹಾಸ್ಯದ ಮಾತು. ಈಚೆಗೆ ಸಂದರ್ಶನವೊಂದರಲ್ಲಿ ಅವರು ಹೇಳಿದ ಮಾತು ಇದು: 'ಬರೆಯಬೇಕೆಂಬ ಪ್ರೇರಣೆಯನ್ನು ಎಂದಾದರೂ ನಾನು ಕಳೆದುಕೊಂಡೆನಾದರೆ ಆ ದಿನವೇ ನನಗೆ ಕೊನೆ.'

ನಿಜವಾದ ಬರಹಗಾರನ ಅಂತರಂಗದ ನುಡಿ ಇದು.

ಹಿಂದೂ ಧರ್ಮ ಗಂಗೆಯಂತೆ ಮೂಲದಲ್ಲಿ ಅದು ಪರಿಶುದ್ಧ ಮತ್ತು ಅಕಳಂಕಿತ. ಆದರೆ ಮುನ್ನಡೆಯುವಾಗ ತನ್ನ ದಾರಿಯಲ್ಲಿನ ಅಶುದ್ಧವನ್ನೆಲ್ಲಾ ತನ್ನೊಳಕ್ಕೆ ಎಳೆದುಕೊಳ್ಳುತ್ತದೆ. ಆದರೆ ಒಟ್ಟು ಪರಿಣಾಮದಲ್ಲಿ ಅದು ಗಂಗೆಯಂತೆಯೇ ಉಪಕಾರಿ.

ನಾಗರಿಕತೆ ಎಂದರೆ ತಾಳ್ಮೆ ಸಹಿಷ್ಣುತೆಗಳ ತವರು. ಹಿಂಸೆ, ಪ್ರತಿಹಿಂಸೆಗಳ ಸಮುದ್ರವಲ್ಲ.

ಗಾಂಧೀಜಿ

ಅರಿಸ್ಟಾಟಲ್

ಎಚ್. ಸಂಜೀವಯ್ಯ

ಅರಿಸ್ಟಾಟಲ್ ಗ್ರೀಸ್ ದೇಶದ ಶ್ರೇಷ್ಠ ದಾರ್ಶನಿಕ, ವಿಜ್ಞಾನಿ, ನೀತಿ ಬೋಧಕ, ತರ್ಕಶಾಸ್ತ್ರ ಪ್ರವರ್ತಕ, ರಾಜ್ಯ ಶಾಸ್ತ್ರ ಚಿಂತಕ ಮತ್ತು ಸಾಹಿತ್ಯ ವಿಮರ್ಶೆಯ ಸ್ಥಾಪಕ. ಇವೆಲ್ಲಾ ವಿಚಾರಗಳನ್ನು ಕುರಿತು ಆಲೋಚಿಸುವುದು ನಮ್ಮ ಉದ್ದಿಶ್ಯವಲ್ಲ. ಇಲ್ಲಿ ಭೌತ ವಿಜ್ಞಾನದ ಬೆಳವಣಿಗೆಗೆ ಸೀಮಿತಗೊಂಡಂತೆ ಅವನ ಜೀವನ ಚಿತ್ರವನ್ನು ಬಿಡಿಸುವುದು ನಮ್ಮ ಗುರಿ.

ಕ್ರಿ. ಪೂ. ೩೮೪ ರಲ್ಲಿ ಏಜಿಯನ್ ಸಮುದ್ರ ತೀರದ ರೇವುಪಟ್ಟಣ ಸ್ಟಗಿರಿಯಲ್ಲಿ ಅರಿಸ್ಟಾಟಲ್ ಜನಿಸಿದ. ಅವನ ತಂದೆ ನೈಕೋಮ್ಯಾಕಸ್ ಮ್ಯಾಸಿಡಾನಿನ ದೊರೆ ಎರಡನೆ ಅಮಿಂಟಾಸನ ಆಸ್ಥಾನದಲ್ಲಿ ವೈದ್ಯನಾಗಿದ್ದ. ಅರಿಸ್ಟಾಟಲ್ ಚಿಕ್ಕವನಾಗಿದ್ದಾಗಲೆ ಜಲಚರಗಳ ವರ್ಗೀಕರಣದಲ್ಲಿ ಆಸಕ್ತಿಯನ್ನು ಹೊಂದಿದ್ದ; ಅವನು ಸಮುದ್ರತೀರದಲ್ಲಿ ಅಡ್ಡಾಡುವಾಗ ಅವುಗಳ ಮಾದರಿಗಳನ್ನು ಕಲೆಹಾಕುತ್ತಿದ್ದ.

ಅರಿಸ್ಟಾಟಲನ ಬಾಲ್ಯದ ವ್ಯಾಸಂಗ ನಡೆದದ್ದು ಸ್ಟಗಿರಿಯಲ್ಲಿ. ಹದಿನೇಳನೆ ವರ್ಷದವನಿದ್ದಾಗ ಅವನು ಅಥೆನ್ಸ್ ನಗರಕ್ಕೆ ಬಂದು ಪ್ಲೇಟೊನ ಅಕಡೆಮಿಗೆ ಸೇರಿದ. ಅಲ್ಲಿ ಅವನು ೨೦ ವರ್ಷಗಳ ಕಾಲ ವ್ಯಾಸಂಗವನ್ನು ನಡೆಸಿದ. ಪ್ಲೇಟೊ ಪ್ರೀತಿಯಿಂದ ಅವನನ್ನು 'ಶಾಲೆಯ ಚೇತನ' ಎಂದು ಕರೆಯುತ್ತಿದ್ದ. ಗುರು ಶಿಷ್ಯರಲ್ಲಿ ಸಹಮತವೇನೂ ಇರಲಿಲ್ಲ. ಪ್ಲೇಟೊ ಆಸಕ್ತಿ ಇದ್ದದ್ದು ಗಣಿತದಲ್ಲಿ, ಅರಿಸ್ಟಾಟಲನ ಆಸಕ್ತಿ ಇದ್ದದ್ದು ಜೀವ ವಿಜ್ಞಾನದಲ್ಲಿ. ಆದರೆ ಸತ್ಯ ಮತ್ತು ಸೌಜನ್ಯದ ಅನ್ವೇಷಣೆಯಲ್ಲಿ ಇಬ್ಬರದೂ ಒಂದೆ ನಿಲುವಾಗಿತ್ತು.

ಪ್ಲೇಟೊ ನಿಧನವಾದ ಮೇಲೆ ಅವನ ಸೋದರನ ಮಗ ಸ್ಪಿಸಿಪಸ್ ಅಕಡೆಮಿಯ ಅಧಿಪತಿಯಾದ. ಅರಿಸ್ಟಾಟಲನಿಗೆ ಅಲ್ಲಿ ಹೆಚ್ಚು ಕಾಲ ಉಳಿಯುವುದು ಆಗಲಿಲ್ಲ. ಸ್ನೇಹಿತ ಜನೋಕ್ರಿಟೀಸನೊಂದಿಗೆ

ಅವನು ಅಕಡೆಮಿಯನ್ನು ಬಿಟ್ಟು ಆಸ್ಸಸ್ ಪಟ್ಟಣಕ್ಕೆ ಹೋದ. ಈ ಪಟ್ಟಣವನ್ನು ಅಕಡೆಮಿಯ ಸಹಪಾಠಿ ಹರ್ಮಿಯಸ್ ಅವನಿಗೆ ಬಹುಮಾನವಾಗಿ ಕೊಟ್ಟಿದ್ದ. ಅರಿಸ್ಟಾಟಲ್ ಅಲ್ಲಿ ಒಂದು ವಿದ್ಯಾಪೀಠವನ್ನು ಸ್ಥಾಪಿಸಿ ಅದನ್ನು ಮೂರು ವರ್ಷಗಳ ಕಾಲ ನಡೆಸಿದ. ಅವನು ಹರ್ಮಿಯನ ತಂಗಿ ಪಿಥಿಯಾಸಳನ್ನು ಮದುವೆಯಾದದ್ದು ಇದೇ ಕಾಲದಲ್ಲಿ. ಗಂಡಹೆಂಡತಿ ಮಧು ಚಂದ್ರಕ್ಕಾಗಿ ಲೆಸ್‌ಬಾಸ್ ದ್ವೀಪಕ್ಕೆ ಹೋಗಿ ಅಲ್ಲಿ ಎರಡು ವರ್ಷಗಳ ಕಾಲ ವಾಸವಾಗಿದ್ದರು. ವಿಹಾರದ ಸಮಯದಲ್ಲೂ ಅರಿಸ್ಟಾಟಲ್ ಜೀವ ವಿಜ್ಞಾನದಲ್ಲಿ ಆಸಕ್ತನಾಗಿದ್ದ. ಪಿಥಿಯಾಸಳು ತೀರಿಕೊಂಡಮೇಲೆ ಅವನು ಹರ್ಪಿದಿಥೀಸಳನ್ನು ಮದುವೆಯಾದ. ಅವಳಲ್ಲಿ ಹುಟ್ಟಿದ ಮಗನಿಗೆ ತನ್ನ ತಂದೆಯ ಹೆಸರಿಟ್ಟ. ಮಗನ ಹೆಸರಿನಲ್ಲಿ ಅವನು ಬರೆದ ನೀತಿ ಗ್ರಂಥದ ಹೆಸರು ಎಥಿಕಾ ನೈಕೊಮ್ಯಾಕಿಯ.

ದೊರೆ ಫಿಲಿಪ್ಪನ ಆಹ್ವಾನವನ್ನು ಸ್ವೀಕರಿಸಿ ಅರಿಸ್ಟಾಟಲ್ ಮ್ಯಾಸಿಡಾನಿನ ರಾಜಧಾನಿ ಪೆಲ್ಲ ನಗರಕ್ಕೆ ಹೋದ. ಅಲ್ಲಿ ಅವನು ಸುಮಾರು ೮ ವರ್ಷಗಳ ಕಾಲ ಅಲೆಕ್ಸಾಂಡರನ ವಿದ್ಯಾ ಗುರುವಾಗಿದ್ದ. ರಾಜಾಶ್ರಯ ದೊರೆತದ್ದರಿಂದ ಜೀವಿಗಳ ಮಾದರಿಗಳನ್ನು ಕಲೆಹಾಕುವ ಕೆಲಸ ಅವನಿಗೆ ಸುಲಭವಾಯಿತು. ದಂಡಯಾತ್ರೆಗಳ ಕಾಲದಲ್ಲೂ ಅಲೆಕ್ಸಾಂಡರ್ ಗುರುವಿನ ಆಸಕ್ತಿಯನ್ನು ಮರೆಯುತ್ತಿರಲಿಲ್ಲ; ಅವನಿಗೆ ಉಪಯುಕ್ತವಾದ ಬೇರೆ ಬೇರೆ ಜೀವಿಗಳ ಮಾದರಿಗಳನ್ನು ಕಳುಹಿಸಿಕೊಡುತ್ತಲೇ ಇದ್ದ. ಆದರೆ ಶಿಷ್ಯನ ಜಾಗವನ್ನು ಈ ಮಾದರಿಗಳು ತುಂಬಲಿಲ್ಲ. ಅರಿಸ್ಟಾಟಲ್ ಬೌದ್ಧಿಕ ಕೇಂದ್ರವಾದ ಅಥೆನ್ಸಿಗೆ ಹಿಂತಿರುಗಿದ. ಅವನು ಅಲ್ಲಿ ಲೂಸಿಯಂ ಎಂಬ ವಿದ್ಯಾಪೀಠವನ್ನು ಸ್ಥಾಪಿಸಿ ಹನ್ನೆರಡು ವರ್ಷಗಳ ಕಾಲ ಅದರ ಅಧಿಪತಿಯಾಗಿದ್ದ. ತೋಟದಲ್ಲಿ ಅವನು ಅತ್ತಿಂದಿತ್ತ ಅಡ್ಡಾಡುತ್ತ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಿದ್ದುದರಿಂದ ಅವನ ಈ ಶಾಲೆಗೆ ಪೆರಿಪ್ಯಾಟೆಟಿಕ್ ಶಾಲೆ ಎಂದು ಹೆಸರಾಗಿತ್ತು. ಅಧ್ಯಯನಕ್ಕೆ ಸಿಕ್ಕುವ ಸಮಸ್ತ ವಿಷಯಗಳನ್ನು ಈ ಶಾಲೆ ಒಳಗೊಂಡಿತ್ತು; ಅದಕ್ಕೆ ದೇಶ, ಜಾತಿ, ವರ್ಣಗಳ ಕಟ್ಟು ಇರಲಿಲ್ಲ.

ಅರಿಸ್ಟಾಟಲ್ ೪೦೦ ಪುಸ್ತಕಗಳನ್ನು ಬರೆದಿದ್ದ ಎಂದು ಹೇಳುತ್ತಾರೆ. ಆ ಪುಸ್ತಕಗಳೆಲ್ಲಾ ದೊರೆತಿಲ್ಲ. ಅವನು ಪಾಠ ಹೇಳಲು ಟಿಪ್ಪಣಿಗಳನ್ನು ಬರೆದಿಟ್ಟುಕೊಳ್ಳುತ್ತಿದ್ದ. ಈ ಟಿಪ್ಪಣಿಗಳು ಅವನ ಅಧ್ಯಯನ ಮತ್ತು ಆಲೋಚನೆಗಳ ಸಾರವಾಗಿದ್ದವು. ಭೌತ ವಿಜ್ಞಾನಕ್ಕೆ ಸಂಬಂಧಪಟ್ಟ ಟಿಪ್ಪಣಿಗಳು ಪುಸ್ತಕ ರೂಪದಲ್ಲಿ ಸಿಕ್ಕಿವೆ. ಈ ಪುಸ್ತಕದಲ್ಲಿ ಎಂಟು ಭಾಗಗಳಿವೆ. ಇವುಗಳಲ್ಲಿ ಭೌತ ವಸ್ತುವಿನ ಲಕ್ಷಣ ನಿರೂಪಣೆ ಮತ್ತು ಕಾಲ ದೇಶಗಳ ವಿವರಣೆ ಇವೆ. ಇದಲ್ಲದೆ ನಾವು ಅರಿಸ್ಟಾಟಲನ ವಿಶ್ವ ವಿಜ್ಞಾನದ ಕಡೆಗೂ ಗಮನ ಹರಿಸಬೇಕು. ಕಾರಣ ವಿಶ್ವ ವಿಜ್ಞಾನ ಮತ್ತು ಭೌತ ವಿಜ್ಞಾನ ಒಂದಕ್ಕೊಂದು ಪೂರಕವಾಗಿ ಬೆಳೆದಿವೆ.

ಅರಿಸ್ಟಾಟಲನ ವಿಶ್ವ ಪ್ಲೇಟೊ ವಿಶ್ವಕ್ಕಿಂತ ಭಿನ್ನವಾದುದಲ್ಲ. ವಿಶ್ವದ ಕೇಂದ್ರ ಭೂಮಿ. ಭೂಮಿಯ ಸುತ್ತ ಇರುವ ಜಾಗದಲ್ಲಿ ಗ್ರಹಗಳಿವೆ, ನಕ್ಷತ್ರಗಳಿವೆ. ನಕ್ಷತ್ರಗಳು ಚಲಿಸುವುದಿಲ್ಲ, ಗ್ರಹಗಳು ಚಲಿಸುತ್ತವೆ. ಈ ವಿದ್ಯಮಾನವನ್ನು ಅರ್ಥಮಾಡಿಕೊಳ್ಳಲು ವಿಶ್ವವನ್ನು ಒಂದು ಗುಂಡಾಗಿರುವ ದೊಡ್ಡ ಈರುಳ್ಳಿಗೆ ಹೋಲಿಸಬಹುದು. ಈರುಳ್ಳಿ

ಕೇಂದ್ರದಲ್ಲಿ ಸ್ಥಾಯಿಯಾಗಿರುವ ಭೂಮಿ ಇದೆ. ಅದನ್ನು ಬಳಸಿರುವ ಒಂದೊಂದು ಪದರದಲ್ಲೂ ಒಂದೊಂದು ಗ್ರಹ ಅಂಟಿಕೊಂಡಿದೆ. ಎಲ್ಲಾ ಪದರಗಳೂ ಪಾರದರ್ಶಕವಾಗಿದ್ದು ಭೂಮಿಯಮೇಲೆ ನಿಂತ ನಮಗೆ ಎಲ್ಲಾ ಗ್ರಹಗಳೂ ಕಾಣುತ್ತವೆ. ಕೊನೆಯ ಪದರದಲ್ಲಿ ನಕ್ಷತ್ರಗಳು ಅಂಟಿಕೊಂಡಿವೆ. ಒಂದು ಪದರಕ್ಕೂ ಇನ್ನೊಂದು ಪದರಕ್ಕೂ ಬಹಳ ಅಂತರವುಂಟು. ಇವು ಪೂರ್ವ ಪಶ್ಚಿಮವಾಗಿ ಭೂಮಿಯನ್ನು ಸುತ್ತುತ್ತವೆ. ಇದರಿಂದಲೆ ಬೆಳಗು ರಾತ್ರಿ ಆಗುವುದು. ಗ್ರಹಗಳು ಅಂಟಿಕೊಂಡಿರುವ ಗೋಳಗಳು ಬೇರೆ ಬೇರೆ ವೇಗದಿಂದ ತಿರುಗುತ್ತವೆ. ಆದುದರಿಂದಲೆ ಅವು ಆಕಾಶದಲ್ಲಿ ಚಲಿಸುವಂತೆ ಕಾಣುವುದು. ಗ್ರಹಗಳ ಚಲನೆಯನ್ನು ಸುಸಂಗತವಾಗಿ ವಿವರಿಸಲು ಅರಿಸ್ಟಾಟಲ್ ನಡೆಸಿದ ಸಂಸ್ಕರಣದಿಂದ ಪಾರದರ್ಶಕ ಗೋಳಗಳ ಸಂಖ್ಯೆ ೫೦ ನ್ನು ಮೀರಿತು.

ಗೋಳ ಪರಿಪೂರ್ಣವಾದ ಆಕೃತಿ, ಅಂತೆಯೆ ವೃತ್ತವೂ ಕೂಡ ಪರಿಪೂರ್ಣವಾದದ್ದು. ದೈವಾಂಶವುಳ್ಳಗ್ರಹಗಳು ಚಲಿಸುವ ಸಹಜಪಥ ವೃತ್ತ. ಬೇರೆ ಯಾವ ಪಥಾಕೃತಿಯೂ ಅವುಗಳ ಚಲನೆಗೆ ತಕ್ಕುದಲ್ಲ. ಗ್ರಹಗಳು ಶಾಶ್ವತ, ಅವು ಬದಲಾವಣೆಯಾಗುವುದಿಲ್ಲ. ಅವುಗಳ ಚಲನೆಗೆ ವೃತ್ತ ಪಥವಲ್ಲದೆ ಬೇರೆ ಪಥಗಳನ್ನು ಊಹಿಸಿಕೊಳ್ಳುವುದೂ ಅಪರಾಧ—ಇದು ಅರಿಸ್ಟಾಟಲನ ಮತ. ಮುಂದುವರಿದು ಅವನು ತಿಳಿಸಿದ ವಿಚಾರಗಳು ಹೀಗಿವೆ: ನಕ್ಷತ್ರಗಳು ಅಂಟಿಕೊಂಡಿರುವ ಗೋಳವೆ ವಿಶ್ವದ ಅಂಚು, ಅಲ್ಲಿಂದ ಮುಂದೆ ಏನೂ ಇಲ್ಲ. ನಕ್ಷತ್ರ ಗೋಳದ ಚೈತನ್ಯದಿಂದ ಉಳಿದ ಗೋಳಗಳು ತಿರುಗುತ್ತವೆ. ಈ ಎಲ್ಲ ಗೋಳಗಳಿಗೂ ಅರಿಸ್ಟಾಟಲನ ವ್ಯವಸ್ಥೆಯ ಲ್ಲಿ ಭೌತವಾಸ್ತವತೆಯುಂಟು. ಚಾಂದ್ರ ಗೋಳದಿಂದ ಒಳಗಿರುವ ವಸ್ತುಗಳು ಭೂಮಿ, ನೀರು, ಗಾಳಿ ಮತ್ತು ಬೆಂಕಿಯಿಂದ ಆಗಿವೆ. ಅಲ್ಲಿಂದ ಮುಂದೆ ನಕ್ಷತ್ರಗೋಳದವರೆಗಿನ ಪ್ರದೇಶದಲ್ಲಿರುವ ವಸ್ತುಗಳು ಬದಲಾವಣೆಯಾಗದ ಚೈತನ್ಯದಿಂದ ಆಗಿವೆ.

ಅರಿಸ್ಟಾಟಲನ ಭೌತವಿಜ್ಞಾನವನ್ನು ಕುರಿತು ವಿವೇಚಿಸುವಾಗ ನಾವು ಕಣಾದ ಋಷಿಯನ್ನು ಮರೆಯುವಂತಿಲ್ಲ. ಕಣಾದಋಷಿ ಪ್ರತಿಪಾದಿಸಿದ ಭೌತವಿಜ್ಞಾನಕ್ಕೂ ಅರಿಸ್ಟಾಟಲ್ ಪ್ರತಿಪಾದಿಸಿದ ಭೌತವಿಜ್ಞಾನಕ್ಕೂ. ಅನೇಕ ಸಾಮ್ಯಗಳಿವೆ. ಕಣಾದ ಋಷಿ ಅರಿಸ್ಟಾಟಲನಿಗಿಂತ ಹಿಂದೆ ಇದ್ದವನು. ಈ ಕಾರಣದಿಂದಾಗಿ ವೈಶೇಷಿಕ ಮತದ ಛಾಯೆಯನ್ನು ಅರಿಸ್ಟಾಟಲನ ಚಿಂತನೆಯಲ್ಲಿ ಕಾಣುವವರು ಇದ್ದಾರೆ. ಈ ಗೋಜಿಗೆ ನಾವು ಕೈ ಹಾಕುವಂತಿಲ್ಲ. ಜ್ಞಾನ ಬಹುಮುಖವಾಹಿನಿ; ಬ್ರಹ್ಮನ ನಾಲ್ಕು ಮುಖಗಳಿಂದ ವೇದಗಳು ಹುಟ್ಟಿಬರಲಿಲ್ಲವೆ.

ಭೌತವಿಜ್ಞಾನದ ಬೆಳವಣಿಗೆಯಲ್ಲಿ ಚಲನೆಯನ್ನು ಕುರಿತಾದ ಜಿಜ್ಞಾಸೆಗೆ ಪ್ರಮುಖ ಸ್ಥಾನವಿದೆ. ಅರಿಸ್ಟಾಟಲನ ಚಿಂತನೆ ನಡೆದದ್ದು ಹೀಗೆ: ಕುರ್ಚಿ, ಟೇಬಲ್ಲು, ಕಲ್ಲುಗುಂಡು ಇಂಥ ನಿರ್ಜೀವ ವಸ್ತುಗಳ ಚಲನೆಗೆ ಏನು ಕಾರಣ ಎಂದು ಅವನು ಪ್ರಶ್ನಿಸಿಕೊಂಡಿದ್ದ. ಒಂದು ಕುರ್ಚಿಯನ್ನು ದಬ್ಬಿದರೆ ಅಥವಾ ಎಳೆದರೆ ಅದು ಚಲಿಸುತ್ತದೆ. ದಬ್ಬುವುದು ಅಥವಾ ಎಳೆಯುವುದು ನಿಂತರೆ ಚಲನೆ ನಿಲ್ಲುತ್ತದೆ. ಕುರ್ಚಿ ಚಲಿಸುವಾಗ ಅದರ ಚಲನೆಗೆ ಕಾರಣವಾದ ಕರ್ತೃವಿಗೂ ಅದಕ್ಕೂ ಸಂಪರ್ಕವಿರುತ್ತದೆ. ಆ ಸಂಪರ್ಕ ಕಡಿದು ಹೋದರೆ ಚಲನೆ ನಿಲ್ಲುತ್ತದೆ. ಅಂದರೆ ಒಂದು ಕಾಯ ನಿರಂತರ ಚಲಿಸುತ್ತಿರಬೇಕಾದರೆ

ಅವರ ಮೇಲೆ ನಿರಂತರವಾಗಿ ಹೊರಗಿನ ಒತ್ತಡ ಆರೋಪವಾಗಿರಬೇಕು ಎಂದಾಯಿತು. ಇಂಥ ವಸ್ತುಗಳನ್ನು ಅರಿಸ್ಟಾಟಲ್ ಭೂಗೋಳ ವಸ್ತುಗಳು ಎಂದು ಕರೆದಿದ್ದ. ಇವು ಚಾಂದ್ರಗೋಳದ ಒಳಗಿನ ಪ್ರದೇಶದಲ್ಲಿವೆ. ಚಂದ್ರ, ಸೂರ್ಯ, ಅಂಗಾರಕ ಮುಂತಾದವು ಖಗೋಳ ವಸ್ತುಗಳು. ಅವುಗಳದು ಸಮಚಲನೆ. ಭೂಗೋಳ ವಸ್ತುಗಳಲ್ಲಿ ಇಂಥ ಸಾಂಗತ್ಯವಿಲ್ಲ.

ಭಾರವಾದ ಕಾಯಗಳು ಕೆಳಗೆ ಬೀಳುವುದಕ್ಕೆ ಮತ್ತು ಹಗುರವಾದ ವಸ್ತುಗಳು ಮೇಲಕ್ಕೆ ಹೋಗುವುದಕ್ಕೆ ಕಣಾದ ಋಷಿಯಂತೆ ಅರಿಸ್ಟಾಟಲನೂ ಅವುಗಳ ಸ್ವಭಾವ ವನ್ನೆ ಆಶ್ರಯಿಸಿ ವಿವರಣೆ ಕೊಟ್ಟಿದ್ದ. ಹೆಚ್ಚು ಭಾರವಾದ ಕಾಯಗಳು ಹೆಚ್ಚಿನ ವೇಗ ದಿಂದಲೂ ಕಡಿಮೆ ಭಾರವಾದ ಕಾಯಗಳು ಕಡಿಮೆ ವೇಗದಿಂದಲೂ ಭೂಮಿಯ ಕಡೆಗೆ ಬೀಳುತ್ತವೆ ಎಂದು ಅವನು ತಿಳಿಸಿದ್ದ, ಒಂದು ಕಾಯದ ವೇಗದಲ್ಲಿ ಉಂಟಾಗುವ ವ್ಯತ್ಯಾಸವನ್ನು ಕುರಿತು ಚಿಂತಿಸುವುದು ಅವನಿಗೆ ಸಾಧ್ಯವಾಗಿರಲಿಲ್ಲ. ಕ್ಷೇಪದ ಚಲನೆಯ ವಿಚಾರದಲ್ಲೂ ಅವನು ಗೊಂದಲಕ್ಕೆ ಸಿಕ್ಕಿಬಿದ್ದಿದ್ದ.

ಒಂದು ಕಲ್ಲನ್ನು ಎಸೆದರೆ, ಅದಕ್ಕೂ ಎಸೆದವನಿಗೂ ಸಂಪರ್ಕವಿಲ್ಲದಿದ್ದರೂ ಅದು ಚಲಿಸುವುದನ್ನು ನಾವು ನೋಡುತ್ತೇವೆ. ಅಂದರೆ ಚಲಿಸುವ ಕಾಯಕ್ಕೂ ಅದನ್ನು ಚಲಿಸುವಂತೆ ಮಾಡುವ ಕರ್ತೃವಿಗೂ ಸಂಪರ್ಕವಿಲ್ಲದಾಗಲೂ ಚಲನೆ ಸಾಧ್ಯವೆಂದಾ ಯಿತು. ಕರ್ತೃವಿನ ಕ್ರಿಯೆಯಿಂದ ಚಾಲನೆಗೊಂಡ ಗಾಳಿಯ ಅಣುಗಳು ಕಲ್ಲನ್ನು ದಬ್ಬು ತ್ತವೆ ಎಂದು ಪ್ಲೇಟೊ ಹೇಳಿದ್ದ. ಅರಿಸ್ಟಾಟಲ್ ಈ ವಾದವನ್ನು ಒಪ್ಪದೆ ಚಲನೆ ಒಂದು ಕಾಯದಿಂದ ಮತ್ತೊಂದಕ್ಕೆ ವರ್ಗಾವಣೆಯಾಗುತ್ತದೆ ಎಂದು ತಿಳಿಸಿದ. ಕರ್ತೃ ಕಲ್ಲನ್ನು ಎಸೆಯುವಾಗ ಸಂಪರ್ಕದಿಂದ ಚಲಿಸುವ ಗಾಳಿಯ ಅಣುಗಳು ಕಲ್ಲನ್ನು ದಬ್ಬಿಕೊಂಡು ಕೊನೆಯವರೆಗೂ ಹೋಗುವುದಿಲ್ಲ. ಅವು ತಮ್ಮ ಮುಂದಿರುವ ಅಣುಗಳನ್ನು ದಬ್ಬು ತ್ತವೆ. ಮುಂದಿನ ಅಣುಗಳು ತಮ್ಮ ಮುಂದಿರುವ ಅಣುಗಳನ್ನು ದಬ್ಬುತ್ತವೆ. ಹೀಗೆ ಚಲನೆ ಒಂದು ಕರ್ತೃವಿಂದ ಇನ್ನೊಂದು ಕರ್ತೃವಿಗೆ ವರ್ಗಾವಣೆ ಹೊಂದುತ್ತದೆ. ವರ್ಗಾವಣೆ ಕ್ರಿಯೆ ನಡೆಯುತ್ತಿರುವಂತೆ ದಬ್ಬುವ ಕರ್ತೃಗಳ ಶಕ್ತಿ ಕ್ರಮವಾಗಿ ತಗ್ಗುತ್ತ ಬರುತ್ತದೆ. ಆದುದರಿಂದ ಕಾಯದ ಚಲನೆ ನಿಲ್ಲುತ್ತದೆ. ಈ ಸಮಸ್ಯೆಗೆ ಸಮರ್ಪಕವಾದ ವಿವರಣೆಯನ್ನು ಕೊಟ್ಟವರು ಗೆಲಿಲಿಯೊ ಮತ್ತು ನ್ಯೂಟನ್.

ಅರಿಸ್ಟಾಟಲ್ ಯಾವುದೆ ಒಂದು ಅಭಿಪ್ರಾಯವನ್ನು ಒಪ್ಪಬೇಕಾದರೆ ಆ ಅಭಿಪ್ರಾಯದ ಸತ್ಯಾಸತ್ಯತೆಯ ಬಗ್ಗೆ ಪ್ರತ್ಯಕ್ಷ ಪುರಾವೆಗಳನ್ನು ಅಪೇಕ್ಷಿಸುತ್ತಿದ್ದ. ಆದರೆ ಅದು ಪ್ರಾಯೋಗಿಕ ಪ್ರಾತ್ಯಕ್ಷಿಕೆಯ ಒತ್ತಾಯವಾಗಿರಲಿಲ್ಲ; ತರ್ಕಸಮ್ಮತವಾದ ವಾದ ವಾಗಿದ್ದರೆ ಸಾಕಾಗಿತ್ತು. ನಿಯಂತ್ರಣಕ್ಕೆ ಒಳಪಟ್ಟ ಪ್ರಯೋಗಗಳ ಕಲ್ಪನೆ ಆಗ ಇರಲಿಲ್ಲ. ಪರಿಪೂರ್ಣವಾದ ವಿಶ್ವದ ವ್ಯಾಪಾರಗಳನ್ನು ಅಪೂರ್ಣವೂ, ಸಾಧಾರಣವೂ ಆದ ಪ್ರಯೋಗಗಳಿಂದ ಸಿದ್ಧಪಡಿಸುವುದು ದಾರ್ಶನಿಕರಿಗೆ ತಕ್ಕ ಕೆಲಸವಲ್ಲವೆಂಬ ಭಾವನೆಯೂ ಆಗ ಬೆಳೆದಿತ್ತು. ಜಗತ್ತು ಬದಲಾವಣೆಗೆ ಒಳಪಟ್ಟದ್ದೆಂದೂ, ಪ್ರನ್ಯದಿಂದಲೆ ಜೀವ ವಿಕಾಸಗೊಂಡಿದೆಯೆಂದೂ ಅರಿಸ್ಟಾಟಲ್ ನಂಬಿದ್ದ. ಶುದ್ಧ ತರ್ಕದಿಂದ ಸತ್ಯವನ್ನು ತಿಳಿಯಬಹುದೆಂದು ಅವನು ಪ್ರತಿಪಾದಿಸುತ್ತಿದ್ದ. ಇಂಥ ಭಾವನೆಗಳು ನಮ್ಮ ದಾರ್ಶನಿಕ ರಲ್ಲೂ ಇದ್ದದ್ದುಂಟು.

ಕಾಯಗಳ ಸಮಸ್ಥಿತಿಯ ಬಗೆಗೂ ಅರಿಸ್ಟಾಟಲನಿಗೆ ಸರಿಯಾದ ತಿಳಿವಳಿಕೆ ಇರಲಿಲ್ಲ. ಕಾಯಗಳಿಗೂ ಅವುಗಳು ಇರುವ ಸ್ಥಾನಗಳಿಗೂ ಸಂಬಂಧವನ್ನು ಕಲ್ಪಿಸಿ ಅವನು ಸಮಸ್ಥಿತಿಯನ್ನು ವಿವರಿಸುತ್ತಿದ್ದ. ಉದಾಹರಣೆಗೆ ಬೆಟ್ಟದ ತುದಿಯಲ್ಲಿರುವ ಒಂದು ಗುಂಡುಕಲ್ಲನ್ನು ಗಮನಿಸಬಹುದು. ಸ್ವಲ್ಪ ಅಲುಗಾಡಿಸಿದರೂ ಸಾಕು ಅದು ಉರುಳಿ ಕೆಳಗೆ ಬೀಳುತ್ತದೆ. ಬೆಟ್ಟದ ತುದಿಯಲ್ಲಿರುವ ಗುಂಡುಕಲ್ಲಿನದು ಅಸ್ಥಿರ ಸಮಸ್ಥಿತಿ. ಬೆಟ್ಟದ ಬುಡದಲ್ಲಿರುವ ಗುಂಡುಕಲ್ಲು ಸ್ಥಿರ ಸಮಸ್ಥಿತಿಯಲ್ಲಿರುತ್ತದೆ. ಸ್ವಲ್ಪ ಅಲುಗಾಡಿಸಿದರೆ ಅದು ಸ್ಥಳಾಂತರಗೊಳ್ಳುವುದಿಲ್ಲ. ಸ್ಥಿರ ಸಮಸ್ಥಿತಿಯಲ್ಲಿರುವ ಕಾಯ ಅದಕ್ಕೆ ಸಹಜವಾದ ಸ್ಥಳದಲ್ಲಿರುತ್ತದೆ ಎಂದು ಅರಿಸ್ಟಾಟಲ್ ತರ್ಕಿಸಿದ್ದ.

ಅರಿಸ್ಟಾಟಲನ ಕಾಲ ದೇಶಗಳ ಕಲ್ಪನೆ ವೈಶೇಷಿಕ ಮತದ ಕಲ್ಪನೆಯಂತೆ ಕಂಡರೂ ಅವುಗಳಿಗೆ ಭೂಮಿ, ನೀರು, ಗಾಳಿ ಮತ್ತು ಬೆಂಕಿಗಳಿಗಿರುವಂಥ ಸ್ವತಂತ್ರ ಸ್ಥಾನವಿಲ್ಲ. ಕಾಯಗಳು ಚಲಿಸುವುದರಿಂದ ಕಾಲದ ಅಳತೆ ಸಾಧ್ಯ, ಅವುಗಳು ಸ್ಥಳವನ್ನು ಆಕ್ರಮಿಸಿಕೊಳ್ಳುವುದರಿಂದ ದೇಶದ ಕಲ್ಪನೆ ಸಾಧ್ಯ ಎಂದು ಅವನು ನಂಬಿದ್ದ. ಚಲನೆಗೆ ಸಂಬಂಧಪಟ್ಟ ಚರ್ಚೆಗೇ ಅವನ ಭೌತ ವಿಜ್ಞಾನದಲ್ಲಿ ವಿಶೇಷ ಮಹತ್ವ. ಅವನ ವ್ಯವಸ್ಥೆಯಲ್ಲೂ ಪರಮಾಣುಗಳಿಗೆ ಆದಿ ಚಲನೆಯುಂಟು. ಬದಲಾವಣೆಯ ಅಡಿಯಲ್ಲಿರುವುದು ಈ ಚಲನೆಯೆ ಎಂದು ಅವನು ತರ್ಕಿಸಿದ್ದ.

ಅಲೆಕ್ಸಾಂಡರನು ಮೃತನಾದಮೇಲೆ ಅವನ ಶತ್ರುಗಳ ಕಾಕ ದೃಷ್ಟಿ ಅರಿಸ್ಟಾಟಲನ ಮೇಲೆ ಬಿದ್ದಿತು. ಇದರಿಂದ ಪಾರಾಗಲು ಅವನು ಕ್ರಿ.ಪೂ. ೩೨೩ರಲ್ಲಿ ಯುಬಾಬ ದ್ವೀಪದ ಕಾಲ್ಸಿಸ್ ನಗರಕ್ಕೆ ಹೋದ. ಅಲ್ಲಿ ಅವನು ಮರುವರ್ಷ ತೀರಿಕೊಂಡ.

ಮದ್ಯಪಾನ ಕಳ್ಳತನಕ್ಕಿಂತಲೂ ಹೇಯವಾದದ್ದು.

ಗಾಂಧೀಜಿ

ಬರ

ಶರಚ್ಚಂದ್ರ ಚಟರ್ಜಿ

ಆ ಹಳ್ಳಿಯ ಹೆಸರು ಕಾಶೀಪುರ. ಅದೊಂದು ಸಣ್ಣ ಹಳ್ಳಿ. ಹಳ್ಳಿಯ ಜಮೀಂದಾರರು ಇನ್ನೂ ಸಣ್ಣವರು. ಆದರೂ ಅವರ ಎದುರು ನಿಲ್ಲುವ ಶಕ್ತಿ ಅವರ ಗೇಣಿದಾರರಿಗಿರಲಿಲ್ಲ. ಅವರು ಅಷ್ಟು ಕ್ರೂರಿ.

ಅಂದು ಅವರ ಕೊನೆಯ ಮಗನ ಹುಟ್ಟಿದ ಹಬ್ಬ. ಮಧ್ಯಾಹ್ನ ಹನ್ನೆರಡು ಗಂಟೆಯಾಗಿತ್ತು. ಜಮೀಂದಾರರ ಮನೆಗೆ ಪೂಜೆ ಮಾಡಲು ಹೋಗಿದ್ದ ಪೂಜಾರಿ ತರ್ಕರತ್ನ ತನ್ನ ಮನೆ ಕಡೆಗೆ ಹೊರಟಿದ್ದ. ಮೇ ತಿಂಗಳ ಕೊನೆಯಾಗಿದ್ದರೂ ಆಕಾಶದಲ್ಲಿ ಒಂದು ತುಣುಕು ಮೋಡವೂ ಇರಲಿಲ್ಲ. ಮಳೆ ಇಲ್ಲದ ಆಕಾಶದಿಂದ ಬೆಂಕಿ ಸುರಿಯುತ್ತಿತ್ತು.

ರಸ್ತೆ ಬದಿಯ ಹೊಲದ ತುದಿಯಲ್ಲಿ ನೇಕಾರ ಗಫೂರನ ಮನೆ ಇತ್ತು. ಅದರ ಮಣ್ಣಿನ ಗೋಡೆಗಳು ಕುಸಿದು ಬಿದ್ದಿದ್ದರಿಂದ ಅಂಗಳ ಹೆದ್ದಾರಿಯ ತನಕ ಚಾಚಿಕೊಂಡಿತ್ತು. ದಾರಿಹೋಕರಿಗೆ ಒಳಗಿನದೆಲ್ಲ ಕಾಣುತ್ತಿತ್ತು.

"ಏ ಗಫೂರ್! ಯಾರೊಳಗೆ?" ರಸ್ತೆಬದಿಯ ಮರದ ನೆರಳಿನಲ್ಲಿ ನಿಂತು ತರ್ಕರತ್ನ ಕೂಗಿದ.

"ಏನು ಬೇಕು ನಿಮಗೆ? ಅಪ್ಪ ಜ್ವರದಿಂದ ಮಲಗಿಬಿಟ್ಟಿದ್ದಾರೆ" ಗಫೂರನ ಹತ್ತು ವರ್ಷದ ಮಗಳು ಬಾಗಿಲಿಗೆ ಬಂದು ಉತ್ತರಿಸಿದಳು.

"ಜ್ವರ! ಕರಿ ಆ ದಗಾಕೋರನ್ನ."

ಈ ಗಲಾಟೆ ಜ್ವರದಿಂದ ನಡುಗುತ್ತಿದ್ದ ಗಫೂರನನ್ನು ಹೊರಗೆ ತಂದಿತು. ಕುಸಿದಿದ್ದ ಗೋಡೆಯ ಪಕ್ಕದಲ್ಲಿದ್ದ ಹಳೆಯ ಅಕೇಶಿಯಾ ಮರಕ್ಕೆ ಒಂದು ಎತ್ತನ್ನು ಕಟ್ಟಿಹಾಕಲಾಗಿತ್ತು.

"ಏನದು?" ಎತ್ತಿನ ಕಡೆ ಕೈ ತೋರಿಸುತ್ತಾ ತರ್ಕರತ್ನ ಜೋರಾಗಿ ಕೇಳಿದ. "ಇದು ಹಿಂದು ಹಳ್ಳಿ ಎಂಬುದು, ಜಮೀಂದಾರರು

ಬ್ರಾಹ್ಮಣರು ಎಂಬುದು ತಿಳಿದಿದೆ ತಾನೇ?" ಕೋಪದಿಂದ ಮತ್ತು ಬಿಸಿಲಿನಿಂದ ಅವನ ಮುಖ ಕೆಂಪಾಗಿತ್ತು. ಅವನ ಮಾತುಗಳು ಕಟುವಾಗಿದ್ದುದು ಸಹಜವಾಗಿತ್ತು. ಗಫೂರ್‌ಗೆ ಏನೂ ಅರ್ಥವಾಗದೆ ಸುಮ್ಮನೆ ಅವನನ್ನೇ ನೋಡುತ್ತಾ ನಿಂತ.

"ಬೆಳಗ್ಗೆ ಅದನ್ನು ಕಟ್ಟಿಹಾಕಿದ್ದನ್ನು ನೋಡಿದ್ದೆ. ಈಗಲೂ ಅದು ಅಲ್ಲೇ ಇದೆ. ಅದೇನಾದರೂ ಸತ್ತುಹೋದರೆ ಯಜಮಾನರು ನಿನ್ನ ಚರ್ಮ ಸುಲಿಯುತ್ತಾರೆ. ಅವರು ಸಾಮಾನ್ಯ ಬ್ರಾಹ್ಮಣರಲ್ಲ."

"ನಾನೇನು ಮಾಡಲಿ ಸ್ವಾಮಿ? ನಾನು ಅಸಹಾಯಕನಾಗಿದ್ದೇನೆ. ಕೆಲವು ದಿನಗಳಿಂದ ಜ್ವರ ಇದೆ. ಮೇಯಿಸಲು ಅದನ್ನು ಕರೆದೊಯ್ಯುವುದಕ್ಕೆ ಸಾಧ್ಯವಾಗುತ್ತಿಲ್ಲ.

"ಅದರ ಪಾಡಿಗೆ ಅದನ್ನು ಮೇಯಲು ಬಿಡುವುದಕ್ಕೆ ನಿನಗೇನು?"

"ಎಲ್ಲಿ ಬಿಡಲಿ ಸ್ವಾಮಿ? ಜನ ಇನ್ನೂ ಬತ್ತವನ್ನು ಒಕ್ಕಿಲ್ಲ. ಗದ್ದೆಯಲ್ಲೇ ಇದೆ. ಹುಲ್ಲನ್ನು ಹೊರೆದಿಲ್ಲ. ಎಲ್ಲ ಸುಟ್ಟು ಕರಕಾಗಿದೆ. ಎಲ್ಲೂ ಹುಲ್ಲಿನ ಒಂದು ಎಸಳೂ ಇಲ್ಲ. ಅದನ್ನು ಹೇಗೆ ಬಿಡಲಿ ಸ್ವಾಮಿ? ಯಾರದೋ ಬತ್ತಕ್ಕೋ ಹುಲ್ಲಿಗೋ ಬಾಯಿ ಹಾಕಬಹುದು."

ತರ್ಕರತ್ನ ಸ್ವಲ್ಪ ಮೃದುವಾದ, "ಅದನ್ನು ನೆರಳಿನಲ್ಲಿ ಕಟ್ಟಿಹಾಕಿ ಒಂದೆರಡು ಕಂತೆ ಹುಲ್ಲನ್ನು ಕೊಡಬಹುದು. ನಿನ್ನ ಮಗಳು ಅನ್ನ ಮಾಡಿಲ್ಲವೇ? ಅದಕ್ಕೆ ಗಂಜಿ ಯಾಕೆ ಕೊಡಬಾರದು? ಅದನ್ನು ಕುಡಿಯಲಿ."

ಗಫೂರ್ ಉತ್ತರಿಸಲಿಲ್ಲ. ಅಸಹಾಯಕತೆಯಿಂದ ತರ್ಕರತ್ನನ ಕಡೆ ನೋಡುತ್ತ ನಿಟ್ಟುಸಿರು ಬಿಟ್ಟ.

"ಹಾಗೇನು? ಅಷ್ಟೂ ನಿನ್ನ ಬಳಿ ಇಲ್ಲವೇ? ನಿನ್ನ ಪಾಲಿಗೆ ಬಂದ ಹುಲ್ಲನ್ನು ಏನು ಮಾಡಿದೆ? ಹೊಟ್ಟೆ ತುಂಬಿಸಲು ಮಾರಿರಬೇಕು. ಎತ್ತಿಗಾಗಿ ಒಂದು ಕತೆಯನ್ನೂ ಉಳಿಸಲಿಲ್ಲವೇ? ಎಷ್ಟು ನಿರ್ದಯಿ ನೀನು!"

ಈ ಕ್ರೂರ ಆಪಾದನೆಯಿಂದಾಗಿ ಗಫೂರನಿಗೆ ಮಾತನಾಡುವ ಶಕ್ತಿ ಹೋದಂತಾಯಿತು. "ಈ ವರ್ಷ ನನ್ನ ಪಾಲಿಗೆ ಹುಲ್ಲು ಬರಬೇಕಾಗಿತ್ತು," ಒಂದು ಗಳಿಗೆ ಹಿಂಜರಿದು ಗಫೂರ್ ನಿಧಾನಕ್ಕೆ ಹೇಳಿದ, "ಆದರೆ ಅದನ್ನು ಯಜಮಾನರು ಹೋದ ವರ್ಷದ ಬಾಡಿಗೆಯ ಲೆಕ್ಕಕ್ಕೆಂದು ಇಟ್ಟುಕೊಂಡರು. ಸ್ವಾಮಿ, ನೀವೇ ನಮಗೆ ದೇವರು' ಎಂದು ಕಾಲಿಗೆ ಬಿದ್ದು ಬೇಡಿಕೊಂಡ. 'ನಿಮ್ಮ ಜಮೀನನ್ನು ಬಿಟ್ಟು ನಾನು ಎಲ್ಲಿ ಹೋಗಲಿ? ನನ್ನ ಬಳಿ ಹುಲ್ಲಿಲ್ಲ. ಇರುವ ಒಂದು ಗುಡಿಸಿಲಿನಲ್ಲಿ ನಾನು, ನನ್ನ ಮಗಳು ಇಬ್ಬರು ಇದ್ದೇವೆ. ಛಾವಣಿಗೆ ತಾಳೆಗರಿ ಹೊದಿಸಿ ಈ ಮಳೆಗಾಲವನ್ನು ಹೇಗೋ ಕಳೆಯುತ್ತೇವೆ. ತಿನ್ನಲು ಏನೂ ಇಲ್ಲದೆ ನಮ್ಮ ಮಹೇಶನ ಗತಿ ಏನು?'

"ಓಹೋ! ಎತ್ತನ್ನು ಮಹೇಶ ಎಂದು ಕರೆಯುವಷ್ಟು ಪ್ರೀತಿ ಏನು? ಒಳ್ಳೇ ತಮಾಷೆ!"

ಈ ವ್ಯಂಗ್ಯ ಗಫೂರ್‌ಗೆ ತಗುಲಲಿಲ್ಲ. "ಯಜಮಾನರಿಗೆ ನನ್ನ ಮೇಲಿನ ಕರುಣೆ ಬರಲಿಲ್ಲ." ಅವನು ಮುಂದುವರೆಸಿದ, "ಎರಡು ತಿಂಗಳಿಗಾಗುವಷ್ಟು ಮಾತ್ರ ಬತ್ತ

ವನ್ನು ಕೊಟ್ಟರು. ನನ್ನ ಪಾಲಿನ ಹುಲ್ಲನ್ನು ಅವರದಕ್ಕೆ ಸೇರಿಸಿಕೊಂಡರು. ಮಹೇಶ ನಿಗೆ ಒಂದು ಕಂತೆಯೂ ಸಿಗಲಿಲ್ಲ."

"ಅದು ಸರಿ, ಆದರೆ ನೀನು ಅವರಿಗೆ ದುಡ್ಡು ಕೊಡಬೇಕಾಗಿಲ್ಲವೇ?" ತರ್ಕರತ್ನ ವಿಚಲಿತನಾಗದೆ ಹೇಳಿದ. "ಅದನ್ನು ನೀನು ಕೊಡದಿರಲು ಸಾಧ್ಯವೇ? ಅವರು ನಿನ್ನನ್ನು ಸಾಕುತ್ತಾರೆ ಎಂದು ತಿಳಿದಿದ್ದೀಯಾ?"

"ಆದರೆ ನಾನು ಅವರಿಗೆ ಏನು ಕೊಡಲಿ? ಅವರಿಗಾಗಿ ನಾವು ನಾಲ್ಕು ಗುಂಟೆ ಜಮೀನು ಉಳುತ್ತೇವೆ. ಕಳೆದ ಎರಡು ವರ್ಷದ ಬರದಿಂದಾಗಿ ಬತ್ತ ಒಣಗಿಹೋಗಿದೆ. ನನಗೆ, ನನ್ನ ಮಗಳಿಗೆ ತಿನ್ನಲು ಸಾಕಾಗುವಷ್ಟಿಲ್ಲ. ಗುಡಿಸಲು ನೋಡಿ ಹೇಗಿದೆ! ಮಳೆ ಬಂದಾಗ ನನ್ನ ಮಗಳೊಡನೆ ಮೂಲೆಯಲ್ಲಿ ಮುದುಡಿಕೊಂಡು ರಾತ್ರಿಯನ್ನು ಕಳೆಯುತ್ತೇನೆ. ಕಾಲನ್ನೂ ಚಾಚುವಂತಿಲ್ಲ. ಮಹೇಶನನ್ನು ನೋಡಿ! ಅವನ ಎದೆಯ ಎಲಬುಗಳನ್ನು ಎಣಿಸಬಹುದು. ಒಂದೆರಡು ದಿನಕ್ಕಾಗುವಷ್ಟು ಹುಲ್ಲನ್ನು ದಯವಿಟ್ಟು ಕೊಡಿ." ಗಫೂರ್ ಬ್ರಾಹ್ಮಣನ ಕಾಲಿಗೆ ಬಿದ್ದ.

"ಹೋಗ್ಹೋಗು, ನಾನು ಮನೆಗೆ ಹೋಗಬೇಕು. ತಡವಾಗುತ್ತಿದೆ," ತರ್ಕರತ್ನ ಮುಗುಳ್ನಗುತ್ತಾ ಹೊರಟ. "ಅಯ್ಯೋ ದೇವರೇ! ಕೊಂಬನ್ನು ನನ್ನ ಕಡೆಗೆ ಬೀಸು ತ್ತಿದೆ. ನನ್ನನ್ನು ತಿವಿದರೆ?" ಭಯ, ಕೋಪಗಳಿಂದ ಕೂಗುತ್ತಾ ಕೂಡಲೇ ಹಿಂದಕ್ಕೆ ಹೆಜ್ಜೆ ಇಟ್ಟ.

ಗಫೂರ್ ತತ್ತರಿಸುತ್ತಾ ಎದ್ದುನಿಂತ. "ಅವನಿಗೆ ತಿನ್ನಲು ಸ್ವಲ್ಪ ಬೇಕು," ತರ್ಕರತ್ನನ ಕೈಯಲ್ಲಿದ್ದ ಅಕ್ಕಿ ಮತ್ತು ಹಣ್ಣನ್ನು ತೋರಿಸುತ್ತಾ ಹೇಳಿದ.

"ತಿನ್ನಲು ಬೇಕೆ? ನಿನ್ನಂತೆಯೇ ಈ ಎತ್ತು. ಒಂದು ಚೂರೂ ಹುಲ್ಲಿಲ್ಲ, ಅಕ್ಕಿ ಹಣ್ಣು ಬೇಕು! ಹೊಡೆದುಕೊಂಡು ಹೋಗಿ ಬೇರೆ ಕಡೆ ಎಲ್ಲಾದರೂ ಕಟ್ಟು. ಎಂಥಾ ಕೊಂಬುಗಳು! ಯಾರನ್ನಾದರೂ ತಿವಿದು ಸಾಯಿಸುತ್ತದೆ". ಪೂಜಾರಿ ಬೇಗ ಹೊರಟು ಹೋದ.

ಗಫೂರ್ ಮೌನವಾಗಿ ಮಹೇಶನನ್ನು ನೋಡಿದ. ಮಹೇಶನ ಆಳವಾದ, ಕಂದು ಬಣ್ಣದ ಕಣ್ಣುಗಳು ನೋವು, ಹಸಿವಿನಿಂದ ತುಂಬಿದ್ದವು. "ಒಂದು ಬೊಗಸೆಯಷ್ಟೂ ಕೊಡಲಿಲ್ಲ," ಗೊಣಗುತ್ತಾ ಎತ್ತಿನ ಕತ್ತು, ಬೆನ್ನನ್ನು ತಟ್ಟಿದ. "ಮಹೇಶ, ನೀನು ನನ್ನ ಮಗ," ಪಿಸುಗುಟ್ಟಿದ. "ನಮಗಾಗಿ ಎಂಟು ವರ್ಷ ದುಡಿದು ಮುದುಕನಾ ದ್ದೀಯ. ತಿನ್ನಲು ನಿನಗೆ ಸಾಕಷ್ಟು ಕೊಡಲು ನನಗಾಗುತ್ತಿಲ್ಲ. ಆದರೆ ನಾನು ನಿನ್ನನ್ನು ಎಷ್ಟು ಪ್ರೀತಿಸುತ್ತೇನೆಂಬುದು ಗೊತ್ತು ತಾನೇ?"

ಮಹೇಶ ತನ್ನ ಕತ್ತನ್ನು ಚಾಚಿ ಕಣ್ಣುಗಳನ್ನು ಸಂತೋಷದಿಂದ ಮುಚ್ಚಿದ.

"ಈ ಕೆಟ್ಟ ಕಾಲದಲ್ಲಿ ನಿನ್ನನ್ನು ಹೇಗೆ ಉಳಿಸಲಿ?" ಗಫೂರ್ ಮುಂದುವರಿಸಿದ. "ನಿನ್ನನ್ನು ಹೊರಗೆ ಬಿಟ್ಟರೆ, ನೀನು ಯಾರದ್ದೋ ಬತ್ತವನ್ನೋ ಬಾಳೆ ಎಲೆಯನ್ನೋ ತಿನ್ನುತ್ತೀಯ. ನಾನೇನು ಮಾಡಲಿ? ನನ್ನಲ್ಲಿ ಇನ್ನು ಶಕ್ತಿ ಉಳಿದಿಲ್ಲ. ಯಾರಿಗೂ ನೀನು ಬೇಡ. ದನಗಳ ಸಂತೆಯಲ್ಲಿ ಮಾರುವಂತೆ ಎಲ್ಲರೂ ಹೇಳುತ್ತಾರೆ...." ವಿಚಾರ ನೆನಪಾದೊಡನೆಯೇ ಅವನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಒಂ

ಯಿಂದ ಕಣ್ಣೀರನ್ನು ಒರೆಸುತ್ತಾ, ಆ ಕಡೆ ಈ ಕಡೆ ನೋಡುತ್ತಾ, ಗುಡಿಸಿಲಿನ ಹಿಂಭಾಗದಿಂದ ಬಣ್ಣ ಕಳೆದುಕೊಂಡಿದ್ದ ಒಂದು ಚಿಕ್ಕ ಒಣಹುಲ್ಲಿನ ಕಂತೆಯನ್ನು ತೆಗೆದುಕೊಂಡು ಬಂದ. "ಬೇಗ ತಿನ್ನು ಮಗು, ಇಲ್ಲದಿದ್ದರೆ....," ಮಹೇಶನ ಮುಂದೆ ಇಡುತ್ತಾ ಮೃದುವಾಗಿ ಹೇಳಿದ.

"ಅಪ್ಪ...."

"ಏನು ?"

"ಊಟಕ್ಕೆ ಬಾ," ಬಾಗಿಲಿನಿಂದ ಆಚೆ ನೋಡುತ್ತಾ ಗಫೂರನ ಮಗಳು ಉತ್ತರಿಸಿದಳು. ಛಾವಣಿಯ ಹುಲ್ಲನ್ನು ಮಹೇಶನಿಗೆ ಪುನಃ ಕೊಟ್ಟೆಯಾ ?"

ಆ ಬಗ್ಗೆ ಅವನಿಗೆ ಭಯ ಇತ್ತು. "ಹಳೇ ಹುಲ್ಲು. ಕೊಳೆತುಹೋಗುತ್ತಿತ್ತು," ನಾಚಿಕೆಯಿಂದ ಉತ್ತರಿಸಿದ.

"ನೀನು ಕೆಳಗೆ ಎಳೆಯುತ್ತಿದ್ದದ್ದು ಕೇಳಿಸಿತು, ಅಪ್ಪ."

"ಇಲ್ಲ ಮಗಳೇ, ನಿಜವಾಗಿ...."

"ನಿನಗೆ ಗೊತ್ತು ಅಪ್ಪ, ಗೋಡೆ ಬಿದ್ದುಹೋಗುತ್ತದೆ...."

ಗಫೂರ್ ಸುಮ್ಮನಾದ. ಗುಡಿಸಲು ಬಿಟ್ಟು ಅವನ ಬಳಿ ಬೇರೇನೂ ಇರಲಿಲ್ಲ. ಅದರ ಬಗ್ಗೆ ಎಚ್ಚರವಾಗಿರದಿದ್ದರೆ ಇನ್ನೊಂದು ಮಳೆಗಾಲವನ್ನು ಕಳೆಯುವುದು ಕಷ್ಟವಾಗುತ್ತದೆ ಎಂದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಆದರೂ ಅದರ ಪ್ರಯೋಜನವೇನು ?

"ಕೈ ತೊಳೆದುಕೊಂಡು ಬಾ. ಬಡಿಸಿದ್ದೇನೆ" ಎಂದಳು.

"ಗಂಜಿ ಕೊಡು, ಅವನಿಗೆ ಕುಡಿಸುತ್ತೇನೆ."

"ಗಂಜಿ ಇಲ್ಲ, ಅಪ್ಪ. ಮಡಕೆಯಲ್ಲಿಟ್ಟಿದ್ದು ಒಣಗಿಹೋಗಿದೆ."

* * *

ಒಂದು ವಾರ ಕಳೆಯಿತು. ಗಫೂರ್ ಸುಸ್ತಾಗಿ, ಕಾತುರದಿಂದ ಅಂಗಳದಲ್ಲಿ ಕೂತಿದ್ದ. ಎರಡು ದಿನಗಳಿಂದ ಮಹೇಶ ವಾಪಸ್ಸು ಬಂದಿರಲಿಲ್ಲ.

ಅವನು ಅಸಹಾಯಕನಾಗಿದ್ದ. ಎತ್ತಿಗಾಗಿ ಅಮೀನ ಬೆಳಗಿನ ಜಾವದಿಂದ ಹುಡುಕುತ್ತಿದ್ದಳು. ಅವಳು ವಾಪಸ್ಸು ಬಂದಾಗ ಸಂಜೆಯ ನೆರಳುಗಳು ಬಿದ್ದಿದ್ದವು.

"ಗೊತ್ತಾಯ್ತಾ, ಅಪ್ಪ? ಮಾಣಿಕ್ ಘೋಷ್ ಮಹೇಶನ ದೊಡ್ಡಿಗೆ ದೂಡಿದ್ದಾರೆ."

"ಅಸಂಬದ್ಧ."

"ಹೌದಪ್ಪ, ನಿಜವಾಗಿ. ಅವರ ಜವಾನ ಹೇಳಿದ 'ಎತ್ತನ್ನು ದರಿಯಾಪುರದಲ್ಲಿ ಹುಡುಕಲು ನಿಮ್ಮಪ್ಪನಿಗೆ ಹೇಳು' ಅಂತ."

"ಅವನೇನು ಮಾಡಿದ ?"

"ಅವರ ತೋಟಕ್ಕೆ ನುಗ್ಗಿದ್ದನಂತೆ."

ಗಫೂರ್ ಏನೂ ಹೇಳಲಿಲ್ಲ.

"ಮೂರು ದಿನಗಳಾದ ಮೇಲೆ ಪೋಲೀಸರು ಅವನನ್ನು ದನಗಳ ಸಂತೆಯಲ್ಲಿ ಮಾರುತ್ತಾರಂತೆ."

"ಮಾರಲಿ ಬಿಡು," ಉತ್ತರಿಸಿದ ಗಫೂರ್.

ಅಮೀನಳಿಗೆ 'ದನಗಳ ಸಂತೆ' ಅಂದರೆ ಏನೆಂದು ಗೊತ್ತಿರಲಿಲ್ಲ. ಮಹೇಶನ ವಿಚಾರದಲ್ಲಿ ಅದನ್ನು ಹೇಳಿದಾಗಲೆಲ್ಲ ಅಪ್ಪ ತಳಮಳಗೊಳ್ಳುವುದನ್ನು ಅವಳು ಗಮನಿಸಿದ್ದಳು. ಆದರೆ ಇವತ್ತು ಅವನು ಏನೂ ಹೇಳದೆ ಹೊರಗೆ ಹೋದ.

ಕತ್ತಲೆಯ ಮುಸುಕಿನಲ್ಲಿ ಗಫೂರ್ ಗುಟ್ಟಾಗಿ ಬನ್ಶಿಗೆ ಅಂಗಡಿಗೆ ಬಂದ.

"ಒಂದು ರೂಪಾಯಿ ಕೊಡು" ಎನ್ನುತ್ತಾ ಹಿತ್ತಾಳೆಯ ತಟ್ಟೆಯೊಂದನ್ನು ಕೆಳಗಿಟ್ಟ. ಬನ್ಶಿಗೆ ಅದರ ಪರಿಚಯ ಚೆನ್ನಾಗಿತ್ತು. ಅದರ ಆಧಾರದ ಮೇಲೆ ಕಳೆದ ಎರಡು ವರ್ಷಗಳಲ್ಲಿ ಐದು ಸಲ ಒಂದೊಂದು ರೂಪಾಯಿ ಕೊಟ್ಟಿದ್ದ. ಈ ಸಲವೂ ಅವನು ಏನೂ ಆಕ್ಷೇಪಣೆ ಎತ್ತಲಿಲ್ಲ.

* * *

ಮಾರನೆಯ ಬೆಳಗ್ಗೆ ಮಹೇಶ ತನ್ನ ಮಾಮೂಲು ಜಾಗದಲ್ಲಿದ್ದ. ವಯಸ್ಸಾದ ಮುಸಲ್ಮಾನನೊಬ್ಬ ಅವನನ್ನು ತೀಕ್ಷ್ಣವಾದ ಕಣ್ಣುಗಳಿಂದ ಪರೀಕ್ಷಿಸುತ್ತಿದ್ದ. ಹತ್ತಿರದಲ್ಲೇ ಒಂದು ಕಡೆ ಗಫೂರ್ ಬೆನ್ನು ಬಗ್ಗಿಸಿಕೊಂಡು ನೆಲದ ಮೇಲೆ ಕೂತಿದ್ದ. ಪರೀಕ್ಷೆಯಾದ ಮೇಲೆ ಆ ಮುದುಕ ತನ್ನ ಶಾಲಿನ ಮೂಲೆಯಿಂದ ಹತ್ತು ರೂಪಾಯಿಗಳ ನೋಟೊಂದನ್ನು ಬಿಚ್ಚಿ, ಅದನ್ನೇ ಪದೇ ಪದೇ ಸವರುತ್ತಾ ಹೇಳಿದ: "ತೊಗೊ. ನಾನು ಏನನ್ನೂ ಮುರಿದುಕೊಳ್ಳುವುದಿಲ್ಲ. ಪೂರ್ತಿ ಬೆಲೆಯನ್ನು ಕೊಡುತ್ತಿದ್ದೇನೆ."

ಗಫೂರ್ ಕೈಚಾಚಿ ಹಣವನ್ನು ತೆಗೆದುಕೊಂಡ. ಏನೂ ಮಾತನಾಡಲಿಲ್ಲ. ಮುದುಕನ ಜೊತೆ ಬಂದಿದ್ದ ಇಬ್ಬರು ಎತ್ತಿನ ಕತ್ತಿಗೆ ಕಟ್ಟಿದ್ದ ಹಗ್ಗವನ್ನು ಇನ್ನೇನು ತೆಗೆದುಕೊಳ್ಳಬೇಕೆಂದಾಗ ಗಫೂರ್ ಇದ್ದಕ್ಕಿದ್ದಂತೆ ಎದ್ದು ನಿಂತ. "ಹಗ್ಗವನ್ನು ಮುಟ್ಟಬೇಡಿ, ಹುಷಾರ್ !" ಎಂದು ಕೂಗಿದ.

ಅವರು ಆಶ್ಚರ್ಯಚಕಿತರಾದರು. "ಯಾಕೆ?" ಮುದುಕ ಅಚ್ಚರಿಯಿಂದ ಕೇಳಿದ.

"ಯಾಕೆ ಎಂದು ಕೇಳಬೇಡಿ. ಅವನು ನನ್ನ ಆಸ್ತಿ. ಅವನನ್ನು ನಾನು ಮಾರುವುದಿಲ್ಲ. ನನ್ನ ಖುಷಿ" ಮೊದಲಿನ ಧಾಟಿಯಲ್ಲೇ ಉತ್ತರಿಸಿ, ನೋಟನ್ನು ಎಸೆದ.

"ನಿನ್ನೆ ನೀನು ಮುಂಗಡ ಹಣವನ್ನು ತೆಗೆದುಕೊಂಡಿದ್ದೆ" ಮೂವರೂ ಒಟ್ಟಾಗಿ ಹೇಳಿದರು.

"ತೊಗೊಳ್ಳಿ ವಾಪಸ್ಸು" ಎಂದು ಎರಡು ರೂಪಾಯಿಯನ್ನು ಅವರತ್ತ ಎಸೆಯುತ್ತಾ ಹೇಳಿದ.

ನೆರೆಹೊರೆಯವರನ್ನು ಬೇಡಿ ಗಂಜಿಯನ್ನು ತಂದು ಮಹೇಶನಿಗೆ ಕುಡಿಸಿದ. ಅವನ ತಲೆಕೊಂಬುಗಳನ್ನು ತಟ್ಟುತ್ತಾ ಪ್ರೀತಿಯ ಶಬ್ದಗಳನ್ನು ಪಿಸುಗುಟ್ಟಿದ.

* * *

ಅದು ಜೂನ್ ತಿಂಗಳ ಮಧ್ಯದ ಕಾಲ. ಭಾರತದ ಬೇಸಿಗೆಯ ಆಕಾಶ ನೋಡದವರಿಗೆ ಆ ಬಿಸಿಲು ಎಷ್ಟು ಭಯಂಕರ, ಎಷ್ಟು ನಿರ್ದಯಿ ಎಂಬುದು ತಿಳಿಯಲಾರದು. ದಯೆಯ ಕುರುಹು ಎಲ್ಲೂ ಇರಲಿಲ್ಲ. ಎಂದಾದರೊಂದು ದಿನ ಆಕಾಶ ಬದಲಾಗಿ ಮಳೆ ತರುವ ಮೋಡಗಳಿಂದ ತುಂಬಬಹುದೆಂಬ ಯೋಚನೆಯೂ ಅಸಾಧ್ಯವಾಗಿತ್ತು. ಇಡೀ ಆಕಾಶ ದಿನದಿನವೂ ನಿರಂತರವಾಗಿ ಉರಿಯುತ್ತಾ ಹೋಗುವಂತೆ ಕಾಣಿಸುತ್ತಿತ್ತು.

ನಡುಹಗಲಿನ ಹೊತ್ತಿಗೆ ಗಫೂರ್ ಮನೆಗೆ ಬಂದ, ಕೂಲಿ ಕೆಲಸ ಮಾಡಿ ಅವನಿಗೆ ಅಭ್ಯಾಸವಿರಲಿಲ್ಲ. ಜೊತೆಗೆ ಜ್ವರ ಇಳಿದು ಕೇವಲ ನಾಲ್ಕೈದು ದಿನಗಳಷ್ಟೇ ಆಗಿದ್ದವು. ದೇಹ ದುರ್ಬಲವಾಗಿತ್ತು, ಸುಸ್ತಾಗಿದ್ದ.

ಅವನು ಕೆಲಸ ಹುಡುಕಲು ಹೋಗಿದ್ದು ನಿಷ್ಪ್ರಯೋಜಕವಾಗಿತ್ತು. ಹಸಿವು, ಬಾಯಾರಿಕೆ, ಸುಸ್ತುಗಳಿಂದಾಗಿ ಎಲ್ಲವೂ ಅವನಿಗೆ ಕಪ್ಪಾಗಿ ಕಾಣಿಸುತ್ತಿತ್ತು.

"ಅಡಿಗೆ ಆಯಿತಾ, ಅಮೀನಾ ?" ಅಂಗಳದಿಂದ ಕೂಗಿದ.

ಉತ್ತರಿಸದೆ ಅವಳು ಹೊರ ಬಂದು ಬಾಗಿಲಿಗೆ ಒರಗಿ ನಿಂತಳು.

"ಅಡಿಗೆ ಆಯಿತಾ ?" ಗಫೂರ್ ಪುನಃ ಕೇಳಿದ. "ಏನು ಹೇಳುತ್ತಿದ್ದೀಯಾ ? ಆಗಿಲ್ಲವಾ ? ಯಾಕೆ ?"

"ಅಕ್ಕಿ ಇಲ್ಲ, ಅಪ್ಪ."

"ಅಕ್ಕಿ ಇಲ್ಲ ? ಬೆಳಗ್ಗೆಯೇ ಏಕೆ ಹೇಳಲಿಲ್ಲ ?"

"ನಿನ್ನೆ ರಾತ್ರಿಯೇ ಹೇಳಿದೆನಲ್ಲಾ."

"ನಿನ್ನೆ ರಾತ್ರಿಯೇ ಹೇಳಿದೆನಲ್ಲಾ !" ಅಣಕಿಸಿದ ಗಫೂರ್. "ನಿನ್ನೆ ರಾತ್ರಿ ಹೇಳಿದ್ದನ್ನು ಹೇಗೆ ನೆನಪಿಟ್ಟುಕೊಳ್ಳಲಿ ?" ಅವನ ಧ್ವನಿಯ ಶಬ್ದದಿಂದಲೇ ಅವನ ಕೋಪ ಉಗ್ರವಾಯಿತು "ಹೌದು, ಅಕ್ಕಿ ಇಲ್ಲ" ಅವನು ಗುರುಗುಟ್ಟಿದ. ಅವನ ಮುಖ ಎಂದಿಗಿಂತ ವಿಕಾರವಾಯಿತು. "ನಿನ್ನ ಅಪ್ಪ ಊಟ ಮಾಡುತ್ತಾನೋ ಇಲ್ಲವೋ ನಿನಗೇನು ಲಕ್ಷ್ಯ ? ಆದರೆ ನೀನು ಮಾತ್ರ ದಿನಕ್ಕೆ ಮೂರು ಸಲ ಊಟ ಮಾಡಲೇ ಬೇಕು ! ಇನ್ನು ಮುಂದೆ ನಾನು ಅಕ್ಕಿಗೆ ಬೀಗ ಹಾಕಿ ಹೊರಗೆ ಹೋಗುತ್ತೇನೆ. ಕುಡಿಯಲು ನೀರು ಕೊಡು. ಬಾಯಾರಿಕೆಯಿಂದ ಸಾಯುತ್ತಿದ್ದೇನೆ. ನೀರೂ ಇಲ್ಲ ತಾನೇ ?"

ಮುಂಚಿನಂತೆಯೇ ಅಮೀನ ತಲೆ ಬಗ್ಗಿಸಿ ನಿಂತಿದ್ದಳು. ಮನೆಯಲ್ಲಿ ಒಂದು ತೊಟ್ಟೂ ನೀರಿಲ್ಲವೆಂದು ತಿಳಿದು ಅವನಿಗೆ ತನ್ನ ಮೇಲೆ ಹಿಡಿತ ತಪ್ಪಿಹೋಯಿತು. ಅವಳ ಕಡೆ ನುಗ್ಗಿ ಮುಖಕ್ಕೆ ಜೋರಾಗಿ ಬಾರಿಸಿದ. "ದರಿದ್ರದ ಹುಡುಗಿ ! ದಿನವಿಡೀ ಏನು ಮಾಡುತ್ತಿರುತ್ತೀಯ ? ಎಷ್ಟೋ ಜನ ಸಾಯುತ್ತಾರೆ. ನೀನು ಯಾಕೆ ಸಾಯುವುದಿಲ್ಲ ?"

ಅವಳು ಒಂದು ಮಾತೂ ಆಡಲಿಲ್ಲ. ಖಾಲಿ ಮಡಕೆಯನ್ನು ಎತ್ತಿಕೊಂಡು, ಮಧ್ಯಾಹ್ನದ ಬಿಸಿಲಿನಲ್ಲಿ ಕಣ್ಣೀರನ್ನು ಮೌನವಾಗಿ ಒರೆಸುತ್ತಾ ಹೋದಳು.

ಅವಳು ಹೊರಗೆ ಹೋದ ಕೂಡಲೇ ಅವನಿಗೆ ತೀವ್ರ ಪಶ್ಚಾತ್ತಾಪ ಉಂಟಾಯಿತು. ತಾಯಿಲ್ಲದ ಹುಡುಗಿಯನ್ನು ಹೇಗೆ ಬೆಳೆಸಿದೆನೆಂಬುದು ಅವನಿಗೆ ಮಾತ್ರ ಗೊತ್ತಿತ್ತು. ತಪ್ಪು ತನ್ನ ಪ್ರೀತಿಯ, ನಮ್ರ, ಸೌಮ್ಯಸ್ವಭಾವದ ಮಗಳದ್ದಲ್ಲವೆಂದು ಅವನಿಗೆ

ತಿಳಿದಿತ್ತು. ಅವನ ಹತ್ತಿರ ಅಕ್ಕಿಯ ಪುಟ್ಟ ದಾಸ್ತಾನು ಇದ್ದಾಗಲೂ ತಿನ್ನಲು ಸಾಕಷ್ಟು ಇರುತ್ತಿರಲಿಲ್ಲ. ದಿನಕ್ಕೆ ಮೂರು ಸಲ ತಿನ್ನುವುದು ಸಾಧ್ಯವಿರಲಿಲ್ಲ. ಮನೆಯಲ್ಲಿ ನೀರು ಇಲ್ಲದಿರುವುದಕ್ಕೆ ಕಾರಣ ಅವನಿಗೆ ಗೊತ್ತಿಲ್ಲದೆ ಇರಲಿಲ್ಲ. ಹಳ್ಳಿಯಲ್ಲಿದ್ದ ಎರಡು ಮೂರು ಕೆರೆಗಳು ಬತ್ತಿಹೋಗಿದ್ದವು. ಶಿಬುಬಾಬು ಅವರ ಖಾಸಗಿ ಕೆರೆಯಲ್ಲಿದ್ದ ನೀರು ಸಾರ್ವಜನಿಕರಿಗೆ ಲಭ್ಯವಿರಲಿಲ್ಲ. ಉಳಿದ ಕೆರೆಗಳ ತಳದಲ್ಲಿ ಕೆಲವು ಹಳ್ಳಗಳನ್ನು ತೋಡಿದ್ದರು. ಸ್ವಲ್ಪ ನೀರಿಗಾಗಿ ಎಷ್ಟು ಗಲಾಟೆ ತಳ್ಳಾಟಗಳು ಇದ್ದವೆಂದರೆ ಈ ಪುಟ್ಟ ಹುಡುಗಿಗೆ ಆ ಹಳ್ಳಗಳ ಹತ್ತಿರ ಹೋಗುವುದೂ ಸಾಧ್ಯವಿರಲಿಲ್ಲ. ಗಂಟೆಗಟ್ಟಲೆ ನಿಂತು, ಸಾಕಷ್ಟು ಬೇಡಿದ ಮೇಲೆ ಯಾರಾದರೂ ಕರುಣೆ ತೋರಿದರೆ ಮಾತ್ರ ಸ್ವಲ್ಪ ನೀರಿನೊಡನೆ ಮನೆಗೆ ಬರುತ್ತಿದ್ದಳು. ಇವೆಲ್ಲವೂ ಅವನಿಗೆ ಗೊತ್ತಿತ್ತು. ಪ್ರಾಯಶಃ ಇಂದು ನೀರು ಇರಲಿಲ್ಲ ಅಥವಾ ಯಾರಿಗೂ ಇವಳ ಮೇಲೆ ಕರುಣೆ ಹುಟ್ಟಲಿಲ್ಲ. ಇಂಥದ್ದು ಏನೋ ಆಗಿರಬೇಕು ಅಂದುಕೊಂಡ. ಅವನ ಕಣ್ಣುಗಳಲ್ಲೂ ನೀರು ತುಂಬಿಕೊಂಡಿತು.

"ಗಫೂರ್, ಇದ್ದೀಯಾ ?" ಅಂಗಳದಿಂದ ಯಾರೋ ಕೂಗಿದರು. ಜಮೀಂದಾರರ ದೂತ ಬಂದಿದ್ದ.

"ಇದ್ದೇನೆ, ಯಾಕೆ ?" ಗಫೂರ್ ಕಟುವಾಗಿ ಉತ್ತರಿಸಿದ.

"ಯಜಮಾನರು ಹೇಳಿಕಳಿಸಿದ್ದಾರೆ, ಬಾ."

"ನಾನಿನ್ನೂ ಊಟ ಮಾಡಿಲ್ಲ. ಆಮೇಲೆ ಬರುತ್ತೇನೆ" ಗಫೂರ್ ಹೇಳಿದ.

ಇಂತಹ ಸೊಕ್ಕನ್ನು ಸಹಿಸುವುದು ದೂತನಿಗೆ ಅಸಾಧ್ಯವಾಯಿತು. "ನಿನ್ನನ್ನು ಎಳೆದುಕೊಂಡು ಬಂದು ಸರಿಯಾಗಿ ಬಡಿಯಲು ಯಜಮಾನರ ಅಪ್ಪಣೆಯಾಗಿದೆ" ಕೂಗುತ್ತಾ ಅವನು ಕೆಟ್ಟದಾಗಿ ಬೈದ.

ಗಫೂರ್‌ಗೆ ಎರಡನೆಯ ಬಾರಿಗೆ ತನ್ನ ಮೇಲೆ ಹಿಡಿತ ತಪ್ಪಿ ಹೋಯಿತು. "ನಾವು ಯಾರ ಗುಲಾಮರೂ ಅಲ್ಲ," ಅಷ್ಟೇ ಕೆಟ್ಟದಾಗಿ ಬೈಯುತ್ತಾ ಉತ್ತರಿಸಿದ. "ಇಲ್ಲಿ ಇರುವುದಕ್ಕೆ ನಾವು ಬಾಡಿಗೆ ಕೊಡುತ್ತೇವೆ. ಹೋಗು, ನಾನು ಬರುವುದಿಲ್ಲ."

ಬಡವರು ಉಳ್ಳವರನ್ನು ಬೇಡಿಕೊಳ್ಳುವುದು ಈ ಪ್ರಪಂಚದಲ್ಲಿ ನಿಷ್ಪ್ರಯೋಜಕವಷ್ಟೇ ಅಲ್ಲ ಅಪಾಯಕಾರಿಯೂ ಹೌದು. ಅದೃಷ್ಟವಶಾತ್ ಸಣ್ಣ ದನಿಗಳು ದೊಡ್ಡವರ ಕಿವಿಗಳನ್ನು ತಲುಪುವುದಿಲ್ಲ. ಇಲ್ಲದಿದ್ದರೆ ಏನಾದೀತೋ ಯಾರು ಬಲ್ಲರು? ಜಮೀಂದಾರರ ಮನೆಯಿಂದ ವಾಪಸ್ಸು ಬಂದು ಸುಮ್ಮನೆ ಮಲಗಿಕೊಂಡಿದ್ದಾಗ ಅವನ ಮುಖ, ಕಣ್ಣುಗಳು ಊದಿಕೊಂಡಿದ್ದವು. ಇಷ್ಟೊಂದು ನೋವಿಗೆ ಮುಖ್ಯ ಕಾರಣ ಮಹೇಶ. ಬೆಳಗ್ಗೆ ಗಫೂರ್ ಮನೆ ಬಿಟ್ಟ ಮೇಲೆ, ಮಹೇಶ ತನ್ನ ಗೂಟವನ್ನು ಕಿತ್ತುಕೊಂಡು, ಜಮೀಂದಾರರ ಹೊಲಕ್ಕೆ ನುಗ್ಗಿ, ಹೂಗಳನ್ನು ತಿಂದು, ಒಣಗಲು ಬಿಸಿಲಿನಲ್ಲಿ ಹರಡಿದ್ದ ಧಾನ್ಯವನ್ನು ಚೆಲ್ಲಾಪಿಲ್ಲಿ ಮಾಡಿದ್ದ. ಜನರು ಅವನನ್ನು ಹಿಡಿಯಲು ಪ್ರಯತ್ನಿಸಿದಾಗ, ಜಮೀಂದಾರರ ಕಿರಿಯ ಮಗಳನ್ನು ಗಾಯಗೊಳಿಸಿ ಪರಾರಿಯಾಗಿದ್ದ. ಈ ರೀತಿಯಾಗಿದ್ದು ಇದೇ ಮೊದಲ ಸಲವಲ್ಲ. ಬಡವನೆಂದು ಗಫೂರ್‌ನನ್ನು ಹಿಂದೆ ಕ್ಷಮಿಸಲಾಗಿತ್ತು. ಹಿಂದಿನಂತೆ ತಪ್ಪೊಪ್ಪಿಕೊಂಡು, ಜಮೀಂದಾರರ ಕ್ಷಮೆಯನ್ನು ಬೇಡಿದ್ದರೆ ಪ್ರಾಯಶಃ ಈ ಸಲವು ಕ್ಷಮಿಸಲಾಗುತ್ತಿತ್ತು. ಆದರೆ ತಾನು ಬಾಡಿಗೆ ಕೊಡು

ತ್ರಿದ್ವೇನೆಂದೂ ತಾನು ಯಾರ ಗುಲಾಮನೂ ಅಲ್ಲವೆಂದೂ ಅವನು ಸಾಧಿಸಿದ್ದ. ಇದು ಜಮೀಂದಾರ ಶಿಬುಬಾಬುಗೆ ಸಹಿಸಲು ಅಸಾಧ್ಯವಾಗಿತ್ತು. ಹೊಡೆತ, ಹಿಂಸೆಯನ್ನು ಗಫೂರ್ ಪ್ರತಿಭಟಿಸದೆ ಸಹಿಸಿಕೊಂಡಿದ್ದ. ಮನೆಯಲ್ಲೂ ಒಂದೂ ಮಾತನಾಡದೆ ಬಿದ್ದು ಕೊಂಡಿದ್ದ. ಹಸಿವು, ಬಾಯಾರಿಕೆಗಳನ್ನು ಅವನು ಮರೆತಿದ್ದ. ಆದರೆ ಹೊರಗಿನ ಸೂರ್ಯ ನಂತೆ ಅವನ ಮನಸ್ಸು ಉರಿಯುತ್ತಿತ್ತು. ಹೀಗೆ ಎಷ್ಟು ಸಮಯ ಸರಿಯಿತೆಂಬ ಪರಿವೆ ಅವನಿಗೆ ಇರಲಿಲ್ಲ.

ಹುಡುಗಿಯ ಚೀತ್ಕಾರ ಅವನನ್ನು ಜಡತ್ವದಿಂದ ಒಮ್ಮೆಗೆ ಎಬ್ಬಿಸಿತು. ಅವಳು ನೆಲದ ಮೇಲೆ ಬಿದ್ದಿದ್ದಳು. ಅವಳು ಹೊತ್ತಿದ್ದ ಮಡಕೆ ಉರುಳಿ ಬಿದ್ದಿತ್ತು. ನೆಲದ ಮೇಲೆ ಹರಿಯುತ್ತಿದ್ದ ನೀರನ್ನು ಮಹೀಶ ಹೀರುತ್ತಿದ್ದ. ಗಫೂರ್‌ಗೆ ಮನಸ್ಸು ಪೂರ್ತಿ ಕೆಟ್ಟುಹೋಯಿತು. ಒಂದು ಗಳಿಗೆಯೂ ತಡಮಾಡದೆ ರಿಪೇರಿ ಮಾಡಬೇಕೆಂದು ಹಿಂದಿನ ದಿನ ಎತ್ತಿಟ್ಟಿದ್ದ ನೇಗಿಲನ್ನು ಎರಡೂ ಕೈಗಳಿಂದ ಎತ್ತಿ ಮಹೀಶನ ಬಾಗಿದ ತಲೆಗೆ ಬಲವಾಗಿ ಹೊಡೆದ. ಮಹೀಶ ತನ್ನ ತಲೆಯನ್ನು ಎತ್ತಲು ಒಮ್ಮೆ ಪ್ರಯತ್ನಿಸಿದ. ಆದರೆ ಅವನ ಹೊಟ್ಟೆಗಿಲ್ಲದ ಬಡಕಲು ದೇಹ ಕೂಡಲೇ ಕುಸಿಯಿತು. ಕಿವಿಯಿಂದ ಕೆಲವು ತೊಟ್ಟು ರಕ್ತ ಹರಿಯಿತು. ಇಡೀ ದೇಹ ಒಂದೆರಡು ಸಲ ಅದುರಿತು. ತನ್ನ ಮುಂಗಾಲು ಹಿಂಗಾಲುಗಳನ್ನು ಆದಷ್ಟೂ ಹಿಗ್ಗಿಸಿ ಮಹೀಶ ಸತ್ತುಬಿದ್ದ.

"ಅಪ್ಪ, ಏನು ಮಾಡಿದೆ? ನಮ್ಮ ಮಹೀಶ ಸತ್ತುಹೋದ" ಅಮೀನ ಅಳುತ್ತಾ ಹೇಳಿದಳು.

ಗಫೂರ್ ಏಳಲೂ ಇಲ್ಲ ಉತ್ತರಿಸಲೂ ಇಲ್ಲ. ನಿಶ್ಚಲವಾದ, ನೀರು ತುಂಬಿದ ಎರಡು ಕಪ್ಪು ಕಣ್ಣುಗಳನ್ನು ಕಣ್ಣು ಮಿಟುಕಿಸದೆ ದಿಟ್ಟಿಸುತ್ತಿದ್ದ.

ಎರಡು ಗಂಟೆಗಳ ನಂತರ ಹಳ್ಳಿಯ ಹೊರಗೆ ವಾಸ ಮಾಡುವ ಚರ್ಮ ಸುಲಿಯು ವವರು ಗುಂಪಾಗಿ ಬಂದು ಮಹೀಶನನ್ನು ಬೊಂಬಿನ ಮೇಲೆ ಎತ್ತಿಕೊಂಡು ಹೋದರು. ಅವರ ಕೈಯಲಿದ್ದ ಹೊಳೆಯುವ ಚಾಕುಗಳನ್ನು ನೋಡಿ ನಡುಗಿದ ಗಫೂರ್ ಕಣ್ಣು ಮುಚ್ಚಿಕೊಂಡ. ಏನೂ ಹೇಳಲಿಲ್ಲ.

ಜಮೀಂದಾರರು ಸಲಹೆಗಾಗಿ ತರ್ಕರತ್ನನನ್ನು ಕರೆಸಿದ್ದಾರೆಂದು ನೆರೆಹೊರೆಯವರು ಗಫೂರ್‌ಗೆ ಹೇಳಿದರು. ಪವಿತ್ರವಾದ ಪ್ರಾಣಿಯೊಂದನ್ನು ಸಾಯಿಸಿದ್ದಕ್ಕಾಗಿ ಗಫೂರ್ ಪ್ರಾಯಶ್ಚಿತ್ತವನ್ನು ಹೇಗೆ ಮಾಡಿಯಾನು?

ಈ ಮಾತುಗಳಿಗೆ ಗಫೂರ್ ಏನೂ ಪ್ರತಿ ಹೇಳದೆ ತನ್ನ ಗಲ್ಲವನ್ನು ಮಂಡಿಯ ಮೇಲಿಟ್ಟುಕೊಂಡು ಕೂತಿದ್ದ.

* * *

"ಅಮೀನಾ, ಬಾ ಹೋಗೋಣ." ಮಧ್ಯರಾತ್ರಿಯಲ್ಲಿ ಗಫೂರ್ ಮಗಳನ್ನು ಎಬ್ಬಿಸಿದ.

ಅವಳು ಅಂಗಳದಲ್ಲಿ ಮಲಗಿದ್ದಳು. "ಎಲ್ಲಿಗೆ, ಅಪ್ಪ?" ಕಣ್ಣು ಉಜ್ಜುತ್ತಾ ಕೇಳಿದಳು.

"ಫುಲ್‌ಬೆರಿಯ ಸೆಣಬಿನ ಕಾರ್ಖಾನೆಯಲ್ಲಿ ಕೆಲಸ ಮಾಡಲು."

ನಂಬಲಾಗದೆ ಅವಿನಾನಾ ಅವನನ್ನು ನೋಡಿದಳು. ಕಷ್ಟಕಾಲದ ಉದ್ದಕ್ಕೂ ಅವನು ಅಲ್ಲಿಗೆ ಹೋಗಲು ಒಪ್ಪಿರಲಿಲ್ಲ. "ಅಲ್ಲಿ ಧರ್ಮವಿಲ್ಲ, ಮರ್ಯಾದೆ ಇಲ್ಲ, ಹೆಂಗಸರಿಗೆ ಏಕಾಂತವಿಲ್ಲ"—ಹೀಗೆ ಅವನು ಅನೇಕ ಸಲ ಹೇಳಿದ್ದನ್ನು ಅವಳು ಕೇಳಿದ್ದಳು.

"ಬೇಗ ಮಗು, ನಾವು ದೂರ ಹೋಗಬೇಕು" ಗಫೂರ್ ಹೇಳಿದ.

ತಂದೆಯು ಕುಡಿಯುವ ಬಟ್ಟಲು, ಹಿತ್ತಾಳೆಯ ತಟ್ಟೆಯನ್ನು ತರಲು ಅವಿನಾನಾ ಎದ್ದಳು. "ಅವನ್ನು ಅಲ್ಲೇ ಬಿಡು, ಅವಿನಾನಾ. ಮಹೇಶನನ್ನು ಸಾಯಿಸಿದ್ದರ ಪ್ರಾಯಶ್ಚಿತ್ತಕ್ಕಾಗಿ ಅವುಗಳಿರಲಿ" ಅಂದ ಗಫೂರ್.

ಮಧ್ಯರಾತ್ರಿಯಲ್ಲಿ ಮಗಳ ಕೈ ಹಿಡಿದುಕೊಂಡು ಗಫೂರ್ ಹೊರಟ. ತನ್ನವರು ಎಂಬುವರು ಆ ಹಳ್ಳಿಯಲ್ಲಿ ಯಾರೂ ಇರಲಿಲ್ಲ. ಯಾರಿಗೂ ಏನೂ ಹೇಳಬೇಕಾಗಿರಲಿಲ್ಲ. ಅಂಗಳವನ್ನು ದಾಟಿ ಮರದ ಬಳಿ ಬಂದಾಗ ನಿಶ್ಚಲನಾಗಿ ನಿಂತು ಗಟ್ಟಿಯಾಗಿ ಅತ್ತು ಬಿಟ್ಟ. "ಅಲ್ಲಾ", ನಕ್ಷತ್ರ ತುಂಬಿದ್ದ ಕಪ್ಪು ಆಕಾಶದತ್ತ ಮುಖ ಎತ್ತಿ ಹೇಳಿದ, "ನಿನಗಿಷ್ಟ ಬಂದಷ್ಟು ಶಿಕ್ಷೆಯನ್ನು ನನಗೆ ಕೊಡು. ಬಾಯಾರಿಕೆಯನ್ನು ಆರಿಸಿಕೊಳ್ಳದೆ ಮಹೇಶ ಸತ್ತ. ಅವನು ಮೇಯಲು ಯಾರೂ ಒಂದು ಚೂರೂ ನೆಲವನ್ನು ಕೊಡಲಿಲ್ಲ. ನೀನು ಕೊಟ್ಟ ಹುಲ್ಲು, ನೀರನ್ನು ಅವನಿಗೆ ಕೊಡದ ಜಮೀಂದಾರನ ಪಾಪವನ್ನು ದಯವಿಟ್ಟು ಕ್ಷಮಿಸಬೇಡ." ಅವರು ಸೆಣಬಿನ ಕಾರ್ಖಾನೆಯ ಕಡೆಗೆ ಹೊರಟರು.

ಅನು : ಎ. ಆರ್. ನಾಗಭೂಷಣ

ಕುರಿಯು ತೋಳವನ್ನು ನಂಬುವುದಕ್ಕಿಂತ, ತೋಳದ ಹತ್ತಿರ ಹೋಗದಂತೆ ಎಚ್ಚರವಾಗಿರುವುದೇ ಲೇಸು.

ಗಾಂಧೀಜಿ

ಕಲ್ಕತ್ತದ ದಯಾಳು: ಮಿಲ್ಟನ್ ಮೆಕನ್

ಕನ್ನಡಕ್ಕೆ : ಕೃಷ್ಣಹಾಸನ

ಮೂರು ವರ್ಷಗಳ ಹಿಂದೆ ತ್ರಿಪುರದ ಮನೋಜ್‌ದಾಸ್ ಎಂಬ ಹುಡುಗ ತನ್ನ ಸಹೋದರನೊಡನೆ ಜಗಳವಾಡಿಕೊಂಡು ಮನೆಯನ್ನು ತೊರೆದ. ಅನೇಕ ದಿನಗಳ ಕಾಲ ಅಲ್ಲಿ ಇಲ್ಲಿ ಅಲೆದು ಅನಂತರ ಹೌರಾ ಸ್ಟೇಷನ್ ತಲುಪಿದ. ಆಯಾಸ ಮತ್ತು ಹಸಿವಿನ ಬಾಧೆ ತಾಳಲಾರದೆ ಸ್ವಲ್ಪ ತರಕಾರಿ ಕದಿಯಲು ಪ್ರಯತ್ನಿಸಿ ಪೋಲಿಸರ ಕೈಗೆ ಸಿಕ್ಕಿಬಿದ್ದ. ಬಾಲಾಪರಾಧದ ಮೇರೆಗೆ ಆತನನ್ನು ಜೈಲಿಗೆ ಹಾಕಲಾಯಿತು.

ಐದು ತಿಂಗಳ ಅನಂತರ, ಕಲ್ಕತ್ತದ ಶಿಶುಕಲ್ಯಾಣ ಸಂಸ್ಥೆಯೊಂದರ ನೆರವಿನಿಂದ ಮನೋಜ್ ಬಿಡುಗಡೆ ಹೊಂದಿದ. ಹದಿನೈದು ವರ್ಷ ವಯಸ್ಸಿನ ಮನೋಜ್, ಸೆರೆಮನೆಗೆ ಹೋಗಿ ಬಂದ ಮಕ್ಕಳ ಕ್ಷೇಮಾಭ್ಯುದಯಕ್ಕಾಗಿ ಇರುವ ಪುನರ್‌ವಸತಿ ಶಾಲೆಯಲ್ಲಿ ಈಗ ಇದ್ದಾನೆ. ಆತ ಎಂಟನೆಯ ತರಗತಿಯಲ್ಲಿ ಓದುತ್ತಿದ್ದು, ಹಾರ್ಮೋನಿಯಂ ನುಡಿಸುವುದರಲ್ಲಿ ನಿಪುಣನಾಗಿದ್ದಾನೆ. "ನಾನಿಲ್ಲಿ ಸುಖವಾಗಿದ್ದೇನೆ; ನಾನು ಮನೆಗೆ ವಾಪಸು ಹೋಗುವುದಿಲ್ಲ" ಎಂದು ಆತ ಹೇಳುತ್ತಾನೆ.

ಕಲ್ಕತ್ತದ ಕೊಳೆಗೇರಿಯೊಂದರ ನಿವಾಸಿ ನಿಧುರಾಣಿ ಮಂಡಲ್ ತಾನು ನರ್ಸ್ ಆಗಬೇಕೆಂದು ಹಂಬಲಿಸುತ್ತಿದ್ದವಳು. ಆದರೆ ತನ್ನ ಆಸೆ ಕೈಗೂಡುವ ಬಗ್ಗೆ ಅವಳಿಗೇ ನಂಬಿಕೆಯಿರಲಿಲ್ಲ. ೧೯೭೮ರಲ್ಲಿ ಇದೇ ಶಿಶು ಕಲ್ಯಾಣ ಸಂಸ್ಥೆ ನಿಧುರಾಣಿ ವಾಸವಾಗಿದ್ದ ಬಸ್ತಿಯಲ್ಲಿ (ಕೊಂಪೆ) ಶಾಲೆಯನ್ನು ತೆರೆಯಿತು. ನಿಧುರಾಣಿ ಅಲ್ಲಿ ಓದಿ ಹತ್ತನೆಯ ತರಗತಿಯನ್ನು ಪಾಸು ಮಾಡಿ, ಅನಂತರ ನರ್ಸ್ ಆಗಲು ಅರ್ಹತೆಯನ್ನು ಪಡೆದುಕೊಂಡಳು. ಈಗವಳು ತನ್ನ ಕುಟುಂಬದ ಐವರಿಗೆ ಆಶ್ರಯ ನೀಡಿದ್ದಾಳೆ.

೧೯೮೦ ರ ಜೂನ್ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ "ದಿ ಗುಡ್ ಸಮರಿಟನ್ ಆಫ್ ಕಲ್ಕಟ" ಎಂಬ ಲೇಖನದ ಅನುವಾದ.

ಹೀಗೆ ಜೀವನವನ್ನು ರೂಪಿಸಿಕೊಂಡ ಸಾವಿರಾರು ಅನಾಥ ಮಕ್ಕಳಲ್ಲಿ ಮನೋಜ್ ಮತ್ತು ನಿಧು ಕೇವಲ ಎರಡು ಉದಾಹರಣೆಗಳಷ್ಟೆ. ಇಂಥ ಪರಿವರ್ತನೆ ಸಾಧ್ಯವಾದದ್ದು ಬಂಗಾಳ ಸೇವಾ ಸಂಸ್ಥೆಯ (ಬಿಎಸ್ಎಸ್) ಸ್ಥಾಪಕರೂ ಅಧ್ಯಕ್ಷರೂ ಸ್ವಿಸ್ ಮೂಲದ ಸೇವಾ ಸಂಸ್ಥೆಯೊಂದರ (ಟೆರ್ ಡೆಸ್ ಹೋಮ್ಸ್–ಇಂಡಿಯಾ) ಕಾರ್ಯದರ್ಶಿಯೂ ಆದ ಐವತ್ತಾರು ವಯಸ್ಸಿನ ವಿಲ್ಸನ್ ಮೆಕನ್ ಎಂಬುವವರಿಂದ. ಬಂಗಾಳ ಸೇವಾ ಸಂಸ್ಥೆ ಹಾಗೂ ಸ್ವಿಸ್ ಮೂಲದ ಸೇವಾ ಸಂಸ್ಥೆಯ ನೆರವಿನಿಂದ ನಡೆಯುತ್ತಿರುವ ಹದಿನೈದು ಶಾಲೆಗಳಲ್ಲಿ ಹತ್ತು ಸಾವಿರ ಮಕ್ಕಳಿಗೆ ಊಟ ವಸತಿ ಮತ್ತು ಶಿಕ್ಷಣದ ಸೌಕರ್ಯ ಕಲ್ಪಿಸಿಕೊಡಲಾಗಿದೆ. ೧೪೦ ಲಕ್ಷ ರೂಪಾಯಿ ಆಯವ್ಯಯವಿರುವ, ೮೦೦ ಮಂದಿ ನೌಕರರನ್ನೊಳಗೊಂಡ ಈ ಎರಡೂ ಸಂಸ್ಥೆಗಳ ಮೇಲ್ವಿಚಾರಣೆಯನ್ನು ಮೆಕನ್ ನೋಡಿಕೊಳ್ಳುತ್ತಾರೆ. ಇವುಗಳ ಜೊತೆಗೆ ಮೆಕನ್ ಅವರು ಮೂರು ಶಿಶುವಿಹಾರಗಳು, ಒಂಬತ್ತು ಔಷಧಾಲಯಗಳು, ಒಂದು ಆಸ್ಪತ್ರೆ, ಒಂದು ದತ್ತುಸ್ವೀಕಾರ ಕೇಂದ್ರದ ಮೇಲ್ವಿಚಾರಣೆಯನ್ನೂ ನೋಡಿಕೊಳ್ಳುವರು. ಇಷ್ಟೇ ಅಲ್ಲದೆ ಜೈಲಿನಿಂದ ಮಕ್ಕಳನ್ನು ಬಿಡುಗಡೆಗೊಳಿಸುವ, ಅವರಿಗೆ ಪುನರ್‌ವಸತಿ ವ್ಯವಸ್ಥೆ ಕಲ್ಪಿಸುವ ಅಪರೂಪದ ವಿಶಿಷ್ಟ ಹೊಣೆಗಾರಿಕೆಯನ್ನೂ ಮೆಕನ್ ಅವರು ಹೊತ್ತಿದ್ದಾರೆ. ಭಾರತದಲ್ಲಿ ಈ ಬಗೆಯಲ್ಲಿ ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ಏಕೈಕ ಸಂಸ್ಥೆ ಇದೊಂದೆ, ಇಂಥ ಸಂಸ್ಥೆ ಇನ್ನೊಂದಿಲ್ಲ.

ಮೆಕನ್ ಅವರ ದಿನನಿತ್ಯದ ಅವಿಶ್ರಾಂತ ದುಡಿಮೆ ಅವರಿಗಿಂತ ಅರ್ಧ ವಯಸ್ಸಿನಷ್ಟು ಕಿರಿಯರನ್ನೂ ಆಯಾಸಗೊಳಿಸಬಿಡಬಹುದು. ಬೆಳಗಿನ ೪ ಗಂಟೆಗೆ ಎದ್ದು, ಕಲ್ಕತ್ತದ ಮಧ್ಯಭಾಗದಲ್ಲಿ ಪಾರ್ಕ್ ಸರ್ಕಸ್ ಮೈದಾನದಲ್ಲಿರುವ ಚಿಕ್ಕ ಕಚೇರಿಗೆ ಹೋದರೆ, ಅಲ್ಲಿ ಅನೇಕ ನಗರಗಳಿಂದ ಬಂದು, ಇವರ ಸಹಾಯಕ್ಕಾಗಿ ಕಾದುನಿಂತಿರುವ ಕೊಳೆಗೇರಿ ನಿವಾಸಿಗಳು ಇವರನ್ನು ಮುತ್ತಿಬಿಡುತ್ತಾರೆ.

ಉದಾಹರಣೆಗೆ ಹೇಳುವುದಾದರೆ, ಇಸ್ಮಾಯಿಲ್ ಒಬ್ಬ ನಿರುದ್ಯೋಗಿ ಯುವಕ. ಮೆಕನ್ ಅವರ ಬಳಿ ಆತನಿಗೆ ನೀಡಬಹುದಾದ ಯಾವುದೇ ಕೆಲಸವಿಲ್ಲ. ಆತನ ವಾರದ ಖರ್ಚಿಗಾಗಿ ಮೆಕನ್ ಅವರು ಅವನಿಗೆ ೩೦ ರೂಪಾಯಿ ಕೊಡುತ್ತಾರೆ. ಇಸ್ಮಾಯಿಲ್‌ಗೆ ಯಾವುದಾದರೂ ಕೆಲಸ ಸಿಗುವವರೆಗೆ ಇದೇ ರೀತಿಯಲ್ಲಿ ಸಹಾಯ ನೀಡುತ್ತ ಹೋಗುವುದು ಮೆಕನ್ ಅವರ ಉದ್ದೇಶ.

ಅಬ್ದುಲ್ ರಹೀಮ್‌ಗೆ ಕೂಡ ಕೆಲಸವಿಲ್ಲ. ಮೆಕನ್ ಅವರು ಇವನನ್ನು ಶಾಲೆಯೊಂದರಲ್ಲಿ ಸಹಾಯಕನಾಗಿ ಸೇರಿಸಿಕೊಂಡಿದ್ದಾರೆ. ಆತ ಟೀ–ಸ್ಟಾಲ್ ಇಟ್ಟರೆ ಮುಂದೆ ಆತನಿಗೆ ಸಹಾಯಮಾಡುವ ಯೋಚನೆ ಮೆಕನ್ ಅವರಿಗಿದೆ.

"ನಾನು ಪರಿಹರಿಸಲಾಗದಂತಹ ಅನೇಕ ಸಮಸ್ಯೆಗಳಿವೆ. ಆದರೆ ನಾನು ಎಲ್ಲ ಸಮಸ್ಯೆಗಳನ್ನು ಕೇಳುತ್ತೇನೆ, ಅವರನ್ನು ಪ್ರೋತ್ಸಾಹಿಸುತ್ತೇನೆ, ಅವರಲ್ಲಿ ಆಶಾಭಾವನೆಯನ್ನು ಮೂಡಿಸುತ್ತೇನೆ" ಎಂದು ಮೆಕನ್ ಅಭಿಪ್ರಾಯಪಡುತ್ತಾರೆ.

ಮೆಕನ್ ಅವರು ಬೆಳಗಿನ ೬.೩೦ಕ್ಕೆ ಕೇಂದ್ರ ಕಚೇರಿಯಲ್ಲಿರುತ್ತಾರೆ. ಇತರ ಕೆಲಸಗಳ ಮೇಲ್ವಿಚಾರಣೆಗೆ ಹೋಗುವ ಮುನ್ನ ಕಚೇರಿಯಲ್ಲಿ ೫ ಗಂಟೆಗಳ ಕಾಲ ಕೆಲಸಮಾಡುತ್ತಾರೆ. ಸಂಜೆ ೫ ಗಂಟೆಯ ಅನಂತರ ಮನೆಗೆ ಹಿಂದಿರುಗುತ್ತಾರೆ. ರಾತ್ರಿಯ

ಊಟವನ್ನು ಬೇಗ ಮುಗಿಸಿ ಕಚೇರಿ ಫೈಲುಗಳನ್ನು ನೋಡಲು ತೊಡಗುತ್ತಾರೆ. ಮೆಕನ್ ಅವರಿಗೆ ಮಲಗುವ ಮುನ್ನ ಇರುವ ಒಂದೇ ಒಂದು ಪ್ರಿಯವಾದ ಹವ್ಯಾಸವೆಂದರೆ ಸಂಗೀತ ಕೇಳುವುದು. ಎಲ್ವಿಸ್ ಪ್ರೀಸ್ಲಿ ಮತ್ತು ನ್ಯಾಟ್ ಕಿಂಗ್ ಕೋಲ್ ಅವರ ಹಾಡುಗಳೆಂದರೆ, ಸಂಗೀತವೆಂದರೆ ಇವರಿಗೆ ತುಂಬ ಇಷ್ಟ. ರಾತ್ರಿ ೧೧ ಗಂಟೆಗೆ ಮೆಕನ್ ಅವರ ದಿನಚರಿ ಕೊನೆಗೊಳ್ಳುತ್ತದೆ.

ಮೆಕನ್ ಅವರು ಕಪ್ಪುವರ್ಣದ, ಕುಳ್ಳಗಿನ ಆಕಾರದ ವ್ಯಕ್ತಿ; ಬ್ರಹ್ಮಚಾರಿ. ಸದಾ ಬಿಳಿಯ ಉಡುಗೆ ತೊಡುತ್ತಾರೆ. ಇವರು ೨೯ ಸೆಪ್ಟಂಬರ್ ೧೯೩೧ ರಂದು ರಂಗೂನ್‌ನಲ್ಲಿ ಜನಿಸಿದರು. ಇವರ ತಂದೆ ಕಾರ್ ಅಪಘಾತವೊಂದರಲ್ಲಿ ೧೯೪೫ ರಲ್ಲಿ ದುರ್ಮರಣ ಹೊಂದುವವರೆಗೆ ಮೆಕನ್ ಮೇಲು ಮಧ್ಯಮವರ್ಗದ ನೆಮ್ಮದಿಯ ಜೀವನ ಸಾಗಿಸಿದರು. ಅನಂತರ ಮನೆಯ ಆರ್ಥಿಕ ಪರಿಸ್ಥಿತಿ ಬಿಗಡಾಯಿಸಿತು. ಮೆಕನ್ ಅವರ ತಾಯಿ ತನ್ನ ನಾಲ್ಕು ಮಕ್ಕಳನ್ನು ಕರೆದುಕೊಂಡು ಕಲ್ಕತ್ತಕ್ಕೆ ಬಂದರು. ಕಲ್ಕತ್ತದಲ್ಲಿ ಸಂಬಂಧಿಕರಿದ್ದರು. ಆದರೆ ಆರಂಭದ ಕಲ್ಕತ್ತದ ದಿನಗಳು ಬಹಳ ಕಠಿಣವಾಗಿದ್ದವು. "ಒಂದೊಂದು ದಿನ ಕಳೆಯುವುದೂ ದುಸ್ತರವಾಗಿತ್ತು" ಎಂದು ಮೆಕನ್ ಅವರು ಆ ದಿನಗಳನ್ನು ನೆನಪುಮಾಡಿಕೊಳ್ಳುತ್ತಾರೆ.

ಮೆಕನ್ ಅವರು ಡಾಕ್ಟರ್ ಆಗಬೇಕೆಂದು ಕನಸುಕಂಡಿದ್ದರು. ಆದರೆ ಮನೆಯ ಕಠಿಣ ಆರ್ಥಿಕ ಸ್ಥಿತಿಯಿಂದಾಗಿ ಅದು ಕನಸಾಗಿಯೇ ಉಳಿಯಿತು. ಅನಂತರ ಜೆಸ್ಸೋಪ್ಸ್ ಎಂಜಿನಿಯರಿಂಗ್ ಸಂಸ್ಥೆಯಲ್ಲಿ ಸಹಾಯಕ ಲೆಕ್ಕಿಗರಾಗಿ ಸೇರಿದರು. ತಮಗೆ ಉತ್ತಮ ಕೆಲಸವಿದ್ದರೂ ಅವರು ತಮ್ಮ ಸುತ್ತಣ ಬಡತನ ಹಾಗೂ ಕಷ್ಟಕಾರ್ಪಣ್ಯಗಳಿಗೆ ಕುರುಡಾಗಲಿಲ್ಲ. ಬಡವರಿಗೆ, ಅದರಲ್ಲಿಯೂ ಬಡಮಕ್ಕಳಿಗೆ ಯಾವುದಾದರೂ ಬಗೆಯಲ್ಲಿ ನೆರವಾಗಬೇಕೆಂದು ಹಂಬಲಿಸುತ್ತಿದ್ದರು. "ಹೊಟ್ಟೆತುಂಬ ಅನ್ನ, ಕೊಂಚ ಶಿಕ್ಷಣ ಸಿಕ್ಕರೆ ಈ ಮಕ್ಕಳು ಬಡತನದಿಂದ ಪಾರಾಗಬಹುದು" ಎಂದು ಮೆಕನ್ ಯೋಚಿಸಿದರು. ಹಿಂದೆ ಇವರ ಸಹೋದ್ಯೋಗಿಯಾಗಿದ್ದ ಶಿಶಿರ್‌ದಾಸ್‌ಗುಪ್ತ ಎಂಬುವವರು ಮೆಕನ್ ಅವರ ಆಲೋಚನೆಯನ್ನು ಅರ್ಥಮಾಡಿಕೊಂಡು ನೆರವಾಗಬಯಸಿದರು. ಕಡೆಗೆ ಇಬ್ಬರೂ ಸೇರಿ ಕೊಳೆಗೇರಿಯಲ್ಲಿ ಶಾಲೆಯೊಂದನ್ನು ತೆರೆಯಲು ನಿರ್ಧರಿಸಿದರು.

ಹಲವಾರು ಪ್ರದೇಶಗಳಿಗೆ ಭೇಟಿಕೊಟ್ಟು ಕಡೆಗೆ ಆಗ್ನೇಯ ಕಲ್ಕತ್ತದ ಸಪ್ಗಾಚಿ ಎಂಬ ಬಸ್ತಿಯಲ್ಲಿ ಶಾಲೆಯನ್ನು ಆರಂಭಿಸುವುದೆಂದು ತೀರ್ಮಾನಿಸಿದರು. "ನಾವು ಈ ಪ್ರದೇಶವನ್ನೇ ಆಯ್ಕೆಮಾಡಿಕೊಳ್ಳಲು ಕಾರಣವಿದೆ. ಇಡೀ ಕಲ್ಕತ್ತದಲ್ಲಿಯೇ ಅತ್ಯಂತ ಕೊಳಚೆ ಪ್ರದೇಶವಿದು. ಜವುಗು ನೆಲದಮೇಲೆ ನಿರ್ಮಿಸಿದ ಮುರುಕು ಗುಡಿಸಲುಗಳಲ್ಲಿ ಸುಮಾರು ೧೦ ಸಾವಿರ ನಿವಾಸಿಗಳು ವಾಸಮಾಡುತ್ತಿದ್ದರು" ಎಂದು ಮೆಕನ್ ನೆನಪುಮಾಡಿಕೊಳ್ಳುತ್ತಾರೆ.

ಸಪ್ಗಾಚಿಯಲ್ಲಿ ರಸ್ತೆ, ವಿದ್ಯುದ್ದೀಪ, ಒಳಚರಂಡಿಯ ವ್ಯವಸ್ಥೆಗಳಿರಲಿಲ್ಲ. ತೆರೆದ ಮೋರಿಗಳು ಸದಾ ಹೊಲಸು ತುಂಬಿ ಹರಿಯುತ್ತಿದ್ದವು. ಮಳೆಗಾಲದಲ್ಲಿ ಕೊಳಚೆ ನೀರು ಇಡೀ ಪ್ರದೇಶವನ್ನು ತುಂಬಿಕೊಳ್ಳುತ್ತಿತ್ತು. ಸಾಮಾನ್ಯವಾಗಿ ಸದಾ ಸ್ಕೂಟರ್‌ನಲ್ಲಿ ಪ್ರಯಾಣ ಮಾಡುವ ಮೆಕನ್ ಅವರು ಹೊಲಸು ನಾರುವ ಆ ಕೊಳಚೆ ನೀರಿನಲ್ಲಿ ಸ್ಕೂಟರ್ ತಳ್ಳಿಕೊಂಡು ಓಡಿಯಾಡುತ್ತಿದ್ದರು.

ಪರಿಸರಕ್ಕೆ ತಕ್ಕಂತೆ ಅಲ್ಲಿನ ನಿವಾಸಿಗಳು ಆರಂಭದಲ್ಲಿ ಪ್ರತಿಕೂಲವಾಗಿದ್ದರು. ಶಾಲೆಯನ್ನು ಆರಂಭಿಸುವುದಾಗಿ ಆ ಜನರೊಡನೆ ಮೆಕನ್ ಪ್ರಸ್ತಾಪಿಸಿದಾಗ ಅವರು ಅಪಹಾಸ್ಯ ಮಾಡಿದ್ದರು. ಇತರೆಡೆಯ ಕೊಳಗೇರಿ ನಿವಾಸಿಗಳು ಮೆಕನ್ ಅವರನ್ನು ಅಲ್ಲಿಂದ ಓಡಿಸುವುದಾಗಿ ಬೆದರಿಸಿದ್ದರು. "ನಾನೊಬ್ಬ ಕ್ರೈಸ್ತ ಮಿಶನರಿ, ಮತಾಂತರ ಮಾಡಲು ಬಂದಿರುವವನು ಎಂಬ ಭಾವನೆ ಅವರದಾಗಿತ್ತು" ಎಂದು ಮೆಕನ್ ಹೇಳುತ್ತಾರೆ.

ಸ್ಥಳೀಯ ಜನರ ಮನವೊಲಿಸುವುದು ಕಷ್ಟವೇ ಆಯಿತು; ತುಂಬ ದಿನಗಳೇ ಬೇಕಾದವು. ಆದರೂ ಮೆಕನ್ ಅವರು ತಾಳ್ಮೆಯಿಂದಲೇ ವರ್ತಿಸಿದರು. ಕೊಳೆಗೇರಿಯ ಮಕ್ಕಳೊಡನೆ ಆಟವಾಡುತ್ತ, ಆ ಮಕ್ಕಳ ತಂದೆತಾಯಿಗಳನ್ನು ಕುರಿತು "ಇವರ ಭವಿಷ್ಯ ಉತ್ತಮವಾಗಲಿ ಎಂದು ನೀವು ಬಯಸುವುದಿಲ್ಲವೇನು? ಶಾಲೆಯಿಂದ ಮಕ್ಕಳು ವಿದ್ಯೆ ಕಲಿಯುತ್ತಾರೆ, ವಿದ್ಯೆ ಕಲಿತರೆ ಕೆಲಸ ದೊರೆಯುತ್ತದೆ, ಕೆಲಸದಿಂದ ನೆಮ್ಮದಿ ಜೀವನ ದೊರೆಯುತ್ತದೆ" ಎಂದು ಮೆಕನ್ ಹೇಳುತ್ತಿದ್ದರು. ನಿಧಾನವಾಗಿ ಆ ಜನರ ವಿಶ್ವಾಸ ಗಳಿಸಿಕೊಳ್ಳುವಲ್ಲಿ ಮೆಕನ್ ಜಯಶೀಲರಾದರು.

ಮೊಹಮ್ಮದ್ ಜಾನ್, ಹುಸೇನ್ ಅಲಿ, ಸರಫುದ್ದೀನ್ ಅಹಮದ್—ಈ ಮೂವರು ಆ ಕೊಳೆಗೇರಿಯ ಹಿರಿಯರು. ಇವರು ಮೆಕನ್ ಅವರಿಗೆ ನೆರವಾಗಲು ಒಪ್ಪಿದರು. ಗ್ಯಾರೆಜ್ ಮಾಲೀಕನಾದ ಜಾನ್ ಶಾಲೆಗಾಗಿ ಒಂದು ಕೋಣೆಯನ್ನು ಬಿಟ್ಟು ಕೊಟ್ಟ. ಮೆಕನ್ ಅವರು ಪಠ್ಯಪುಸ್ತಕ, ಸ್ಲೇಟ್, ಬಳಪ ಇತ್ಯಾದಿಗಳನ್ನು ಕೊಂಡು ತಂದರು. ಸುಮಾರು ೪೦ ಮಂದಿ ವಿದ್ಯಾರ್ಥಿಗಳೊಂದಿಗೆ ೧೫ ಆಗಸ್ಟ್ ೧೯೬೪ರಂದು ಶಾಲೆಯನ್ನು ಆರಂಭಿಸಿದರು. ಸಹೋದ್ಯೋಗಿ ಮಿತ್ರರಾಗಿದ್ದ ಶಿಶಿರ್ ಶಾಲೆಯ ಆಡಳಿತದ ಕೆಲಸಗಳನ್ನು ಒಪ್ಪಿಕೊಂಡರು. ಬೋಧನೆಯ ಸಂಪೂರ್ಣ ಜವಾಬ್ದಾರಿಯನ್ನು ಮೆಕನ್ ವಹಿಸಿಕೊಂಡರು. ಪ್ರತಿದಿನ ಬೆಳಿಗ್ಗೆ ೭ ರಿಂದ ೯ ಗಂಟೆಯವರೆಗೆ ಶಾಲೆಯಲ್ಲಿ ಪಾಠಮಾಡಿ ಮೆಕನ್ ಅವರು ಅನಂತರ ಕೆಲಸಕ್ಕೆ ಹೋಗುತ್ತಿದ್ದರು. ಸುಮಾರು ಸಂಜೆ ೬ ಗಂಟೆಗೆ ವಾಪಸು ಸಪ್ನಾಚಿಗೆ ಬಂದು ಕೊಳೆಗೇರಿ ಮಕ್ಕಳೊಡನೆ ಆಟವಾಡುವುದು ಅಥವಾ ಆ ಮಕ್ಕಳ ತಂದೆತಾಯಿಗಳೊಡನೆ ಲೋಕಾಭಿರಾಮವಾಗಿ ಮಾತನಾಡುತ್ತ ಕಾಲ ಕಳೆಯುತ್ತಿದ್ದರು.

ಕೆಲವೇ ದಿನಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿತು. ಆಗ ಮೆಕನ್ ಇನ್ನೊಂದು ಕೊಠಡಿಯನ್ನು ಬಾಡಿಗೆಗೆ ಪಡೆದುಕೊಂಡರು. ಕೆಲವು ಮಂದಿ ಉಪಾಧ್ಯಾಯರನ್ನು ಕೆಲಸಕ್ಕೆ ತೆಗೆದುಕೊಂಡರು. ಸರಫುದ್ದೀನ್ ತನ್ನ ಸ್ವಾಧೀನದ ಕೊಂಚ ಜಾಗವನ್ನು ಕೊಡುಗೆಯಾಗಿ ಬಿಟ್ಟುಕೊಟ್ಟ. ಮೆಕನ್ ಅವರ ಕೆಲವರು ಗೆಳೆಯರು ಸ್ವಲ್ಪ ಹಣವನ್ನು ಕೊಡುಗೆಯಾಗಿ ನೀಡಿದರು. ಈ ಎಲ್ಲರ ನೆರವಿನಿಂದ ಒಂದು ಶೆಡ್ ನಿರ್ಮಾಣವಾಗಿ ಶಾಲೆಯ ಅಗತ್ಯವನ್ನು ಪೂರೈಸಿತು. ಶಾಲೆ ಸ್ಥಾಪನೆಯಾದ ಮೇಲೆ ಕೂಡ ಅಲ್ಲಿನ ಕೆಲವರು ಅಪಹಾಸ್ಯ ಮಾಡುವುದನ್ನು ಬಿಡಲಿಲ್ಲ. ಒಂದು ಮಧ್ಯಾಹ್ನ ಮೆಕನ್ ಅವರು ಸಪ್ನಾಚಿಗೆ ಬರುತ್ತಿರುವ ಹೊತ್ತಿನಲ್ಲಿ ಎಲ್ಲಿಂದಲೋ ಇಟ್ಟಿಗೆಯ ಚೂರೊಂದು ಇವರ ತಲೆಯ ಕಡೆ ಗುರಿಯಿಟ್ಟು ಬೀಸಿ ಬಂತು. ಸಮಯಕ್ಕೆ ಸರಿಯಾಗಿ ಬಗ್ಗಿದ್ದರಿಂದ ಮೆಕನ್

ಅಸಾಯದಿಂದ ಪಾರಾದರು ; ಇಟ್ಟಿಗೆಯ ಚೂರನ್ನು ಇವರತ್ತ ಬೀಸಿದ ವ್ಯಕ್ತಿಯನ್ನು ಗಮನಿಸುವಲ್ಲಿ ಯಶಸ್ವಿಯಾದರು. ಕೆಲವು ದಿನಗಳ ಅನಂತರ ಅದೇ ವ್ಯಕ್ತಿಯನ್ನು ಮತ್ತೆ ಕಂಡರು; ಕಂಡು ಆತನನ್ನು ಟೀ ಕುಡಿಯಲು ಆಹ್ವಾನಿಸಿದರು. ಇಬ್ಬರೂ ಸುಮಾರು ಒಂದು ಗಂಟೆಕಾಲ ಮಾತನಾಡಿದರು. ಸಪ್ನಾಗಚಿಯಲ್ಲಿ ತಾವು ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ಮೆಕನ್ ಆ ವ್ಯಕ್ತಿಗೆ ವಿವರಿಸಿದರು. ಮೆಕನ್ ಅವರ ಶ್ರದ್ಧೆ ಮತ್ತು ಪ್ರಾಮಾಣಿಕತೆಗಳ ಅರಿವಾಗಿ ಆ ಪುಂಡ ಯುವಕ ಹೊರಟು ಹೋದ.

ಸಪ್ನಾಗಚಿಯಲ್ಲಿ ವಿದ್ಯುತ್ ದೀಪದ ವ್ಯವಸ್ಥೆಯಾದಾಗ ಹೊಸ ಸಮಸ್ಯೆಗಳು ಉದ್ಭವಿಸಿದವು. ಗಾಳಿಯ ಹೊಡೆತಕ್ಕೆ ಕಿತ್ತುಬಿದ್ದು ನೇತಾಡಿದ ತಂತಿಗಳು ಕೆಳಗೆ ವಾಸವಾಗಿದ್ದ ಜನರನ್ನು ತಲ್ಲಣಗೊಳಿಸಿದವು. ಒಂದು ಸಂದರ್ಭದಲ್ಲಂತೂ ತಮ್ಮಿಂದ ಕೆಲವೇ ಮೀಟರ್ ಅಂತರದಲ್ಲಿದ್ದ ಮೂರು ಎಮ್ಮೆಗಳು ವಿದ್ಯುದಾಘಾತಕ್ಕೆ ಬಲಿಯಾಗಿ ಸತ್ತ ಸಂಗತಿಯನ್ನು ಮೆಕನ್ ಅವರು ಈಗಲೂ ನೆನಪಿಸಿಕೊಂಡು ದಿಗಿಲುಗೊಳ್ಳುತ್ತಾರೆ. ದಿನೇ ದಿನೇ ವಿದ್ಯಾರ್ಥಿಗಳ ಸಂಖ್ಯೆ ಬೆಳೆದಂತೆ ಒಂದು ಸುವ್ಯವಸ್ಥಿತ ಶಾಲಾ ಕಟ್ಟಡವನ್ನು ನಿರ್ಮಾಣಮಾಡಬೇಕೆಂದು ಮೆಕನ್ ಯೋಚಿಸಿದರು. ಅಗತ್ಯ ಹಣವನ್ನು ಕೂಡಿಸಲು ಸಾಕಷ್ಟು ಪ್ರಚಾರಕಾರ್ಯದ ಅಗತ್ಯವಿತ್ತು. ಕೆಲವರು ಪತ್ರಿಕಾ ಪ್ರತಿನಿಧಿಗಳನ್ನೂ ಕಲ್ಕತ್ತದ ಕೆಲವರು ಪ್ರತಿಷ್ಠಿತ ನಾಗರಿಕರನ್ನೂ ಸಪ್ನಾಗಚಿಗೆ ಆಹ್ವಾನಿಸಿ, ಸಭೆ ಸೇರಿಸಿ ಮೆಕನ್ ಅವರು ತಮ್ಮ ಕಾರ್ಯಯೋಜನೆಯನ್ನು ಅವರ ಮುಂದೆ ನಿವೇದಿಸಿಕೊಂಡರು. ಮೆಕನ್ ಅವರ ಕಾರ್ಯಯೋಜನೆಗೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗತೊಡಗಿದವು. ಆದರೆ ನಿರೀಕ್ಷಿಸಿದಷ್ಟು ಸಂಗ್ರಹವಾಗಲಿಲ್ಲ. ನಿರಾಶೆಯಲ್ಲಿಯೇ ಮೆಕನ್ ಅವರು ದೆಹಲಿಯ ಕೆಲವು ರಾಯಭಾರಿ ಕಚೇರಿಗಳಿಗೆ ಧನಸಹಾಯಕ್ಕಾಗಿ ಪತ್ರ ಬರೆದರು. ಕೆನಡದ ಹೈಕಮಿಷನರ್ ಅವರು ನಿವೇಶನದ ಹಾಗೂ ನೆಲಹಂತದ ಕಟ್ಟಡ ನಿರ್ಮಾಣದ ವೆಚ್ಚವನುಸಿಕೊಳ್ಳಲು ಒಪ್ಪಿಕೊಂಡರು. ಟಾಟಾ, ಬಿರ್ಲಾ ಟ್ರಸ್ಟ್‌ಗಳಿಂದಲೂ ನೆರವು ದೊರೆಯಿತು.

"ಇದು ನಮ್ಮ ಮೊದಲ ದೊಡ್ಡ ಯಶಸ್ಸು. ಕೆಲವು ದಿನಗಳ ಅನಂತರ ನನಗೆ ಚಿತ್ರನಟ ದೇವಾನಂದ್ ಅವರ ಪರಿಚಯವಾಯಿತು. ನಮಗಾಗಿ ಸಹಾಯಾರ್ಥ ಪ್ರದರ್ಶನ (ಚಾರಿಟಿ ಷೋ) ನಡೆಸಿಕೊಡಲು ಕೋರಿದೆ. ಆಶ್ಚರ್ಯವೆಂದರೆ ಅವರು ಒಪ್ಪಿಕೊಂಡರು" ಎಂದು ಮೆಕನ್ ಅವರು ನೆನಪಿಸಿಕೊಳ್ಳುತ್ತಾರೆ. ಸಹಾಯಾರ್ಥ ಪ್ರದರ್ಶನದಿಂದ ಸುಮಾರು ೫೦,೦೦೦ ರೂಪಾಯಿಗಳು ಸಂಗ್ರಹವಾಯಿತು. ೧೯೭೭ ರ ವೇಳೆಗೆ ಮೂರು ಅಂತಸ್ತಿನ ಸಪ್ನಾಗಚಿ ಶಾಲೆ ನಿರ್ಮಾಣಗೊಂಡಿತು. ಈಗ ಈ ಶಾಲೆಯಲ್ಲಿ ೧೨೦೦ ಮಕ್ಕಳು ಕಲಿಯುತ್ತಿದ್ದಾರೆ. ಸ್ವಿಸ್ ಸಂಸ್ಥೆಯ ನೆರವಿನಿಂದ ಅವರಿಗೆಲ್ಲ ಪ್ರತಿನಿತ್ಯದ ಊಟ ತಿಂಡಿಯ ವ್ಯವಸ್ಥೆಯಾಗುತ್ತದೆ. "ಊಟದ ವ್ಯವಸ್ಥೆಯಿರುವುದರಿಂದಾಗಿ ಯಾರೂ ಶಾಲೆಗೆ ತಪ್ಪಿಸಿಕೊಳ್ಳುವುದಿಲ್ಲ. ಊಟವನ್ನು ತಪ್ಪಿಸಿಕೊಳ್ಳಲು ಯಾರೂ ಇಷ್ಟಪಡುವುದಿಲ್ಲ" ಎಂದು ಶಾಲೆಯ ಹಾಜರಾತಿಯ ಬಗ್ಗೆ ಮೆಕನ್ ಅವರು ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ.

ಬಂಗಾಳ ಸೇವಾಸಂಸ್ಥೆ (ಬಿಎಸ್ಎಸ್) ೧೯೭೫ ರಲ್ಲಿ ಸಪ್ಗಾಚಿಯಲ್ಲಿ ಹತ್ತು ಹಾಸಿಗೆಗಳ (ಈಗ ೫೦ ಹಾಸಿಗೆಗೆ ವಿಸ್ತರಿಸಲಾಗಿದೆ) ಸುಸಜ್ಜಿತ ಆಸ್ಪತ್ರೆಯೊಂದನ್ನು ಕಟ್ಟಿತು. ಈ ಆಸ್ಪತ್ರೆಯ ಸಂಕೀರ್ಣದಲ್ಲಿಯೇ ಕೊಳೆಗೇರಿ ಮಹಿಳೆಯರಿಗೆ ಹೊಲಿಗೆ, ಗೃಹ ವಿಜ್ಞಾನ, ಪ್ರಥಮ ಚಿಕಿತ್ಸೆ, ಕುಶಲಕಲೆಗಳಲ್ಲಿ ತರಬೇತಿ ನೀಡುವ ವ್ಯವಸ್ಥೆಯನ್ನೂ ಮಾಡಲಾಗಿದೆ. ಈ ಸಂಕೀರ್ಣಕ್ಕೆ ಸಮೀಪದಲ್ಲಿ ಒಂದು ವರ್ಕ್‌ಷಾಪ್ ಇದ್ದು ಇದರಲ್ಲಿ ಬಸ್ತಿಯ ೨೦ ಜನ ಯುವಕರಿಗೆ ಕೆಲಸದ ಅವಕಾಶ ಕಲ್ಪಿಸಲಾಗಿದೆ. ಬಂಗಾಳ ಸೇವಾ ಸಂಸ್ಥೆಗೆ ಅನೇಕ ವರ್ಷಗಳಿಂದ ನೆರವು ನೀಡುತ್ತ ಬಂದಿರುವ ಟಿಐಎಲ್ ಲಿಮಿಟೆಡ್‌ನ ಅಧ್ಯಕ್ಷರೂ ಕಾರ್ಯನಿರ್ವಾಹಕ ನಿರ್ದೇಶಕರೂ ಆದ ಎ. ಮಜುಂದಾರ್ ಅವರು "ಸಪ್ಗಾಚಿ ಕೊಳೆಗೇರಿಯಲ್ಲಿ ಮೆಕನ್ ಅವರ ಸೇವೆ ಜಾತ್ಯಾತೀತವಾದದ್ದು, ಅತ್ಯುತ್ತಮ ವಾದದ್ದು" ಎಂದು ಅಭಿಪ್ರಾಯಪಡುತ್ತಾರೆ. ಬಹುದೊಡ್ಡ ಹಿಂದೂ ಸಮಾಜದಲ್ಲಿ ಮುಸ್ಲಿಮರೇ ಅಧಿಕವಾಗಿರುವ ಪ್ರದೇಶವೊಂದರಲ್ಲಿ ಕ್ರೈಸ್ತ ವ್ಯಕ್ತಿಯೊಬ್ಬ ಸೇವಾಸಂಸ್ಥೆಯನ್ನು ನಡೆಸುತ್ತಿದ್ದಾರೆ.

ಕಲ್ಕತ್ತದಲ್ಲಿ ನೆಲೆಯಾಗಿರುವ ಈ ಯೋಜನೆಗಳನ್ನು ನಡೆಸುತ್ತಿದ್ದರೂ ಮೆಕನ್ ಅವರಿಗೆ ಗ್ರಾಮಾಂತರ ಪ್ರದೇಶದ ಮಕ್ಕಳಿಗೂ ಸಹಾಯ ದೊರಕಿಸಿಕೊಡಬೇಕೆಂಬ ಹಂಬಲವಿದೆ. ೧೯೭೭ ರಲ್ಲಿ ಕುರ್ತ್ ಮತ್ತು ಈಡಲ್‌ಟ್ರಡ್ ಬರ್ಕಿ ಎಂಬ ಸ್ವಿಸ್ ದಂಪತಿಗಳು ಭಾರತೀಯ ಶಿಶುವೊಂದನ್ನು ದತ್ತು ತೆಗೆದುಕೊಂಡರು. ಆ ಸಂದರ್ಭದಲ್ಲಿ ತಾವು ಯಾವ ಬಗೆಯಲ್ಲಿ ನೆರವಾಗಬಹುದು ಎಂದು ಮೆಕನ್ ಅವರನ್ನು ಕೇಳಿದರು. ಕಲ್ಕತ್ತಕ್ಕೆ ಸುಮಾರು ೪೦ ಕಿಮೀ ದೂರದಲ್ಲಿರುವ ಉಸ್ತಿ ಎಂಬ ಚಿಕ್ಕ ಹಳ್ಳಿಯಲ್ಲಿ ಶಾಲೆಯೊಂದನ್ನು ತೆರೆಯಲು ಆ ದಂಪತಿಗಳಿಗೆ ಮೆಕನ್ ಸೂಚಿಸಿದರು. ಈಗ ಈ ಶಾಲೆಯಲ್ಲಿ ಸುಮಾರು ೪೦೦ ಮಂದಿ ಮಕ್ಕಳು ಕಲಿಯುತ್ತಿದ್ದಾರೆ. ಈ ಉಸ್ತಿ ಯೋಜನೆ ಕುಡಿವ ನೀರಿನ ಬಾವಿ, ಒಂದು ಆರೋಗ್ಯ ಕೇಂದ್ರ, ಅನೇಕ ಬಗೆಯ ವಾಣಿಜ್ಯ ಮತ್ತು ಕುಶಲ ಕಲೆಗಳ ಬಗ್ಗೆ ಬೇಸಿಗೆ ತರಬೇತಿ ನೀಡುವ ವ್ಯವಸ್ಥೆ ಇತ್ಯಾದಿಗಳನ್ನು ಒಳಗೊಂಡು ಬೆಳೆದಿದೆ. ಉಸ್ತಿಯ ಮೇಲ್ವಿಚಾರಣೆಯ ಜೊತೆಗೆ ಉದಾರಹೈತ್ ಎಂಬಲ್ಲಿ ಬುರ್ಕಿಸ್‌ಗಳಿಗಾಗಿರುವ ಒಂದು ಕೇಂದ್ರದ ಮೇಲ್ವಿಚಾರಣೆ, ಹೀಗೆ ಮೆಕನ್ ಅವರು ವಿದೇಶಿ ನೆರವಿನಿಂದ ನಡೆಯುತ್ತಿರುವ ಇದೇ ಬಗೆಯ ಸುಮಾರು ಐದು ಗ್ರಾಮೀಣ ಯೋಜನೆಗಳನ್ನು ನೋಡಿಕೊಳ್ಳುತ್ತಿದ್ದಾರೆ.

೧೯೭೦ ರ ದಶಕದ ಅಂತ್ಯದ ವೇಳೆಗೆ ಬಂಗಾಳ ಸೇವಾ ಸಂಸ್ಥೆಯ ಚಟುವಟಿಕೆಗಳು ಎಷ್ಟರಮಟ್ಟಿಗೆ ಇಮ್ಮಡಿಗೊಳ್ಳುತ್ತ ಹೋದವೆಂದರೆ ಆ ವೇಳೆಗೆ ಪರ್ಚೇಸ್ ಮ್ಯಾನೇಜರ್ ಆಗಿ ಬಡ್ತಿ ಹೊಂದಿದ್ದ ಮೆಕನ್ ಅವರಿಗೆ ಜೆಸ್ಸೋಪ್ಸ್ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುವುದೇ ಕಠಿಣವಾಗತೊಡಗಿತು. ಹಾಗಾಗಿ ೧೯೭೮ ರಲ್ಲಿ ಆ ಹುದ್ದೆಗೆ ರಾಜೀನಾಮೆ ನೀಡಿ, ತಮ್ಮ ಸೇವೆಯನ್ನು ಸಂಪೂರ್ಣವಾಗಿ ತಾವು ಹಮ್ಮಿಕೊಂಡ ಯೋಜನೆಗಳಿಗೆ ಮುಡಿಪಾಗಿರಿಸಿದರು.

ಮೆಕನ್ ಖಂಡಿತವಾದಿಗಳು; ಹಿಡಿದ ಕೆಲಸವನ್ನು ಸಾಧಿಸುವವರೆಗೂ ಬಿಡದವರು. ಯಾವುದೇ ಕೆಲಸದಲ್ಲಿ ಕೊಂಚ ನ್ಯೂನತೆಯಿದ್ದರೂ ಅದು ಸರಿಯಾಗುವವರೆಗೆ ಬಿಡುವವ

ರಲ್ಲ. ಯಾವುದೇ ಸಂಗತಿ ಅವರ ಕಣ್ಣು ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲದ ಮಾತು. ಒಂದು ಚಿತ್ರವನ್ನು ಸರಿಯಾಗಿ ತೂಗುಹಾಕಿರದಿದ್ದರೆ, ಆ ಕೆಲಸ ಆ ಕೂಡಲೇ ಆಗಬೇಕು. ಒಮ್ಮೆ ತರಗತಿಯೊಂದಕ್ಕೆ ಭೇಟಿಕೊಟ್ಟಾಗ ಕೋಣೆಯ ಕಸವನ್ನು ಸರಿಯಾಗಿ ಗುಡಿಸದಿರುವ ಸಂಗತಿ ಮೆಕನ್ ಅವರ ಗಮನಕ್ಕೆ ಬಂತು. ಕೂಡಲೇ ಮೆಕನ್ ಅವರೇ ಸ್ವತಃ ಕಸಪೊರಕೆ ಹಿಡಿದು ಕೋಣೆಯ ಕಸಗುಡಿಸಿ ಎಲ್ಲರೂ ಬೆರಗಾಗುವಂತೆ ಮಾಡಿದರು.

ಮೆಕನ್ ಮೇಲುನೋಟಕ್ಕೆ ನಿಷ್ಠುರವಾದಿಯಂತೆ ತೋರಿದರೂ ಅಂತಃಕರಣವುಳ್ಳ ವ್ಯಕ್ತಿ. ಇತ್ತೀಚೆಗೆ ನಾನು ಅವರೊಡನೆ ಶಾಲೆಗಳಿಗೆ ಭೇಟಿ ಕೊಟ್ಟಾಗ ನಾವು ತರಗತಿಗಳಿಗೆ ಕಾಲಿಟ್ಟ ಕೂಡಲೇ ಮಕ್ಕಳು ಅವರನ್ನು ಮುತ್ತುತ್ತಿದ್ದರು. ಮೆಕನ್ ಆ ಮಕ್ಕಳೊಡನೆ ತಮಾಷೆಮಾಡಿದರು; ಅವರಿಗೆ ಕಥೆ ಹೇಳಿದರು. ಕಡೆಗೆ ಅವರೊಡನೆ ವಾಲಿಬಾಲ್ ಆಟವಾಡಿದರು. ರಾಜಾಸ್ಥಾನಿ ಜನಪದ ನೃತ್ಯದ ಅಭ್ಯಾಸ ನಡೆಸಿದ್ದ ಹೆಣ್ಣುಮಕ್ಕಳ ತರಗತಿಯೊಂದಕ್ಕೆ ಭೇಟಿಕೊಟ್ಟಾಗ, ಮೆಕನ್ ಅವರು ನಿಂತು ಕಣ್ತುಂಬ ನೋಡಿ ಸಂತೋಷಪಟ್ಟು, ನೃತ್ಯದ ಅಭ್ಯಾಸ ಮುಗಿದ ಅನಂತರ ಆ ಮಕ್ಕಳನ್ನು ಅಭಿನಂದಿಸಿದರು. ನಾವು ಅಲ್ಲಿಂದ ಹೊರಡುವಾಗ "ಈ ಮಕ್ಕಳಿಗೆ ಕೆಲವು ಜೊತೆ ಗಂಗುರೂಗಳನ್ನು ಕೊಂಡುಕೊಡಿ" ಎಂದು ಉಪಾಧ್ಯಾಯರಿಗೆ ಸೂಚಿಸಿದರು.

ರಾಜ್ಯ ಕಾರಾಗೃಹಗಳಲ್ಲಿ ಅತ್ಯಂತ ಹೀನಸ್ಥಿತಿಯಲ್ಲಿ ಮಕ್ಕಳು ಬಂಧನದಲ್ಲಿರುವ ಬಗ್ಗೆ ೧೯೮೦ರ ಸುಮಾರಿಗೆ ಮೆಕನ್ ಅವರು ಪತ್ರಿಕಾ ಲೇಖನವೊಂದನ್ನು ಓದಿದರು. ಓದಿ ಮನನೊಂದುಕೊಂಡ ಅವರು ಕೆಲವು ಜೈಲುಗಳಿಗೆ ಭೇಟಿಕೊಟ್ಟರು. "ನಾನು ಕಂಡ ನೋಟ ಭಯಾನಕವಾಗಿತ್ತು" ಎಂದು ಮೆಕನ್ ನೆನಪಿಸಿಕೊಳ್ಳುತ್ತಾರೆ. ಆರುವರ್ಷಕ್ಕೂ ಮೇಲ್ಪಟ್ಟ ವಯಸ್ಸಿನ ಮಕ್ಕಳನ್ನು ಪಕ್ಕಾಖೈದಿಗಳ ಜೊತೆಯಲ್ಲಿಯೇ ಲಾಕಪ್‌ನಲ್ಲಿ ಕೂಡಿಹಾಕಲಾಗಿತ್ತು; ಆ ಬಾಲಾಪರಾಧಿಗಳು ತಣ್ಣಗೆ ಕೊರೆವ ನೆಲದಮೇಲೆ ಮಲಗುತ್ತಿದ್ದರು; ಅವರಿಗೆ ಹುಳುಬಿದ್ದ ಅನ್ನವನ್ನು ನೀಡಲಾಗುತ್ತಿತ್ತು; ಅವರ ತಲೆಯಲ್ಲಿ ಹೇನುಗಳು ಪಿತಿಗುಡುತ್ತಿದ್ದವು; ಇಸುಬಿನಂಥ ಚರ್ಮರೋಗಕ್ಕೆ ತುತ್ತಾಗಿ ಆ ಮಕ್ಕಳು ಬಳಲುತ್ತಿದ್ದರು. "ಈ ಕ್ಷಣವೇ ಈ ಮಕ್ಕಳನ್ನು ಇಲ್ಲಿಂದ ಪಾರುಮಾಡಬೇಕು" ಎಂದು ಮೆಕನ್ ಅವರು ಮನಸ್ಸಿನಲ್ಲಿಯೇ ನಿಶ್ಚಯಿಸಿಕೊಂಡರು.

ಜೈಲಿನಲ್ಲಿದ್ದ ಬಹುಪಾಲು ಮಕ್ಕಳು ಬಡಕುಟುಂಬದಿಂದ ಬಂದವರು; ಅನಾದರಣೆ ಮತ್ತು ಬಡತನದಿಂದಾಗಿ ಬೀದಿಪಾಲಾದವರು. ೬ ವರ್ಷ ವಯಸ್ಸಿನ ಸಾಥಿಕ್ ತನ್ನ ಮಲತಾಯಿಯಿಂದ ಹೌರಾ ರೈಲ್ವೆ ನಿಲ್ದಾಣದಲ್ಲಿ ತೊರೆಯಲ್ಪಟ್ಟು, ರೈಲ್ವೆ ಪೋಲಿಸರಿಗೆ ಪತ್ತೆಯಾದ. ತನ್ನ ಊರುಮನೆಯ ನೆನಪಿರದ ಆ ಹುಡಗನನ್ನು ಅಂತಿಮವಾಗಿ ಪ್ರೆಸಿಡೆನ್ಸಿ ಜೈಲಿಗೆ ಹಾಕುವ ಮುನ್ನ ಒಂದು ಅನಾಥಾಲಯದಿಂದ ಇನ್ನೊಂದು ಅನಾಥಾಲಯಕ್ಕೆ ಅಲೆಸಲಾಯಿತು. ಪುರುಲಿಯ ಎಂಬ ಸ್ಥಳದವನಾದ ೧೫ ವಯಸ್ಸಿನ ಬಾಬುಲ್ ಘೋಷ್ ಆಗಾಗ ಮರೆವು ರೋಗದಿಂದ ನರಳುತ್ತಿದ್ದವನು. ಅಂಥ ಒಂದು ಸಂದರ್ಭದಲ್ಲಿ ರೋಗ ಮರುಕಳಿಸಿ ಬೀದಿಬೀದಿ ಅಲೆಯುತ್ತಿದ್ದವನು ಪೋಲಿಸರ ಕಣ್ಣಿಗೆ ಬಿದ್ದ. ಪೋಲಿಸರ ಯಾವುದೇ ಪ್ರಶ್ನೆಗಳಿಗೆ ಆತ ಉತ್ತರಿಸದಿದ್ದಾಗ ಅವನನ್ನು ಜೈಲಿಗೆ ಕಳುಹಿಸಲಾಯಿತು. ಇಂಥ ಪ್ರಕರಣಗಳನ್ನು ಕೇಳಿ ಮನನೊಂದ ಮೆಕನ್ ಅವರು ಸ್ವಿಸ್ ಸಂಸ್ಥೆಯ ನೆರವಿ

ನಿಂದ ಬಾಲಾಪರಾಧಿಗಳನ್ನು ಬಿಡುಗಡೆಗೊಳಿಸುವ, ಅವರಿಗೆ ಪುನರ್‌ವಸತಿ ಕಲ್ಪಿಸುವ
ಬಗ್ಗೆ ಯೋಜನೆಯೊಂದನ್ನು ಸಿದ್ಧಗೊಳಿಸಿದರು. ರಾಜ್ಯ ಸರ್ಕಾರ ಮೆಕನ್ ಅವರ
ಯೋಜನೆಯನ್ನು ಒಪ್ಪಿಕೊಂಡಿತು. ಇದುವರೆಗೆ ೬ ರಿಂದ ೧೬ ವಯಸ್ಸಿನ ಅಲೆಮಾರಿ
ಇಲ್ಲವೆ ಸಣ್ಣಪುಟ್ಟ ಅಪರಾಧಮಾಡಿ ಸೆರೆಸಿಕ್ಕ ಸುಮಾರು ೯೨ ಮಕ್ಕಳನ್ನು ಬಂಧಮುಕ್ತ
ಗೊಳಿಸಲಾಗಿದೆ. ಇವರಲ್ಲಿ ೧೭ ಮಂದಿ ತಮ್ಮ ಮನೆಗಳಿಗೆ ವಾಪಸಾಗಿದ್ದಾರೆ. ಇನ್ನುಳಿದ
ವರು (ಸಾಧಿಕ್ ಮತ್ತು ಬಾಬುಲ್ ಅವರನ್ನೂ ಒಳಗೊಂಡು) ಕಲ್ಕತ್ತದಿಂದ ೫೦ಕಿ.ಮೀ
ದೂರದಲ್ಲಿರುವ ರಂಗೀಲಬಾದ್‌ನ "ಶಿಶು ಉದ್ಯಾನ್ ರೆಸಿಡೆನ್‌ಷಲ್ ಶಾಲೆ"ಯಲ್ಲಿ ಸುಖ
ವಾಗಿ ಬದುಕುತ್ತಿದ್ದಾರೆ.

ಮೆಕನ್ ಅವರೊಡನೆ ನಾನು ಶಿಶು ಉದ್ಯಾನಕ್ಕೆ ಭೇಟಿಕೊಟ್ಟಾಗ ಚಟುವಟಿಕೆ
ಯಿಂದಿರುವ, ಹರಳುಹುರಿದಂತೆ ಮಾತನಾಡುವ ಮಕ್ಕಳು ನಮ್ಮನ್ನು ಮುತ್ತಿಕೊಂಡರು
೧೪ ವಯಸ್ಸಿನ ತರುಣ್ ಮಲಿಕ್ ಎಂಬ ಹುಡುಗ ಮೆಕನ್ ಅವರನ್ನು ಪಕ್ಕಕ್ಕೆ ಕರೆದ
ನಮಗೆಲ್ಲ ರೇಡಿಯೋ ಬೇಕೆಂದು ಹೇಳಿದ. "ಈಗ ಕ್ರಿಕೆಟ್ ಸೀಸನ್ ಆರಂಭವಾಗಿದೆ
ನಾವು ಕ್ರಿಕೆಟ್ ಕಾಮೆಂಟರಿ ಕೇಳಬೇಕು" ಎಂದು ತಿಳಿಸಿದ. ಮೆಕನ್ ನಕ್ಕು, ಅವನ
ಹೆಗಲ ಮೇಲೆ ಕೈಹಾಕಿ "ನೀನು ಎಂಜಿನಿಯರ್ ಆಗಬೇಕು ಅಂತಿದ್ದೀಯಾ, ಅಲ್ವೇನು
ನೀನೇ ರೇಡಿಯೋ ತಯಾರಿಸು! ನಾನು ನಿನಗೆ ಬಿಡಿಭಾಗಗಳನ್ನು ತಂದುಕೊಡುತ್ತೇನೆ
ಎಂದರು. ಅನಂತರ ನನ್ನ ಕಡೆ ತಿರುಗಿ, ಪಕ್ಷಿಗೃಹವೊಂದನ್ನು ತೋರಿಸುತ್ತ "ಅದನ
ನನ್ನ ಮಕ್ಕಳೇ ಸ್ವತಃ ಕಟ್ಟಿದ್ದು" ಎಂದು ಹೆಮ್ಮೆಯಿಂದ ಹೇಳಿದರು.

ಹೀಗೆ ನಾವು ಸುತ್ತುತ್ತಿರಬೇಕಾದರೆ ಮೆಕನ್ ಅವರು ಆಗಾಗ ತಮ್ಮ ಬಾಯಿ
ಮಾತ್ರೆಗಳನ್ನು ಹಾಕಿಕೊಳ್ಳುತ್ತಿರುವುದನ್ನು ಗಮನಿಸಿದೆ. "ನನಗೆ ಕಣ್ಣಿನ ತೊಂದ
ಅಧಿಕ ಕೊಲಾಸ್ಟರಲ್, ಮತ್ತಿತರ ಸಣ್ಣಪುಟ್ಟ ಕಾಯಿಲೆಗಳಿವೆ" ಎಂದು ಅನಂತ
ಅವರೇ ಕಚೇರಿಯಲ್ಲಿ ಹೇಳಿಕೊಂಡರು. "ಈ ಸ್ಥಿತಿಯಲ್ಲಿ ನೀವೇ ಡ್ರೈವ್ ಮಾಡುವು
ಉಚಿತವೇನು" ಎಂದು ನಾನು ಕೇಳಿದೆ. ಅವರು ನಕ್ಕು, ಮಕ್ಕಳ ಚಿತ್ರಗಳೇ ತುಂಬಿ
ತಮ್ಮ ಕೋಣೆಯ ಸುತ್ತ ಒಮ್ಮೆ ನೋಡಿ ಹೇಳಿದರು "ಈ ಮಕ್ಕಳೇ ನನ್ನ ಜೀವ. ನಾನ
ಈ ಮಕ್ಕಳಿಗೆ ನನ್ನೆಲ್ಲ ಪ್ರೀತಿಯನ್ನು ಧಾರೆ ಎರೆದಿದ್ದೇನೆ. ಪ್ರತಿಯಾಗಿ ಈ ಮಕ್ಕ
ನಾನು ಊಹಿಸಿರಲಾರದಷ್ಟು ಪ್ರೀತಿಯನ್ನು ನನ್ನ ಮೇಲೆ ಸುರಿಸಿವೆ. ಯಾರಿಗೇ ಆಗ
ಇದಕ್ಕಿಂತ ಇನ್ನೇನು ಬೇಕು."

ಔಷಧಿ ದುರುಪಯೋಗದ ದುಷ್ಪರಿಣಾಮಗಳು

ಡಾ|| ಪಿ. ಆರ್. ಅನಂತರಾವ್

ದೇಹಕ್ಕೆ ಖಾಯಿಲೆ ಬಂದಾಗ ಔಷಧಿ ಸೇವಿಸುವುದು ಅಗತ್ಯ. ಆದರೆ ಯಾವ ಔಷಧಿಯನ್ನು ಯಾವಾಗ ಎಷ್ಟು ಸೇವಿಸಬೇಕು ಎಂಬ ವಿವರಗಳನ್ನು ತಜ್ಞ ವೈದ್ಯ ಮಾತ್ರ ಯುಕ್ತವಾಗಿ ನಿರ್ಧರಿಸಬಲ್ಲ. ಖಾಯಿಲೆಯ ಮೂಲ ತಿಳಿದು ಅದಕ್ಕೆ ಹೊಂದುವ ಯೋಗ್ಯ ಔಷಧಿಯನ್ನು ಕೊಟ್ಟು ವ್ಯಕ್ತಿಗೆ ಆರೋಗ್ಯವನ್ನು ಮರುಗೊಳಿಸಿ ಕೊಡಬಲ್ಲ ಜ್ಞಾನ, ವಿಜ್ಞಾನ ಮತ್ತು ಅನುಭವ ವೈದ್ಯನಿಗೆ ಮಾತ್ರ ಇರುವುವು. ಅಲ್ಲಿಯೂ ಕಠಿಣ ರೋಗಗಳಿಗೆ ತೀವ್ರ ಔಷಧಿಯನ್ನು ವಿಧಿಸುವಾಗಲಂತೂ ಅವುಗಳ ಉಪ ಪರಿಣಾಮಗಳ ಬಗ್ಗೆ ವಿಶೇಷ ಗಮನ ಹರಿಸಬೇಕಾಗುತ್ತದೆ. ಇಲ್ಲವಾದರೆ ರೋಗಕ್ಕಿಂತ ಔಷಧಿಯೇ ಅಧಿಕ ಮಾರಕವಾಗುವ ಅಪಾಯ ಉಂಟು. ಈ ಸೂಕ್ಷ್ಮ ಸಂಗತಿಗಳು ವೈದ್ಯೇತರರಿಗೆ ಗೊತ್ತೇ ಇರುವುದಿಲ್ಲ. ಅಥವಾ ಒಂದು ಪಕ್ಷ ಗೊತ್ತಿದ್ದರೂ ಆರೋಗ್ಯ ಗಳಿಕೆಯ ಮೇಲಣ ಪ್ರೇಮಕ್ಕಿಂತಲೂ ಧನಗಳಿಕೆಯ ಮೇಲಣ ಮೋಹ ಇವರಲ್ಲಿ ಜಾಸ್ತಿ ಇರುವುದರಿಂದ ಇವರು ಔಷಧಿಯ ಉಪಪರಿಣಾಮಗಳನ್ನು ಪೂರ್ತಿ ನಿರ್ಲಕ್ಷಿಸುತ್ತಾರೆ.

ತಜ್ಞ ವೈದ್ಯನ ಈ ಸ್ಪಷ್ಟ ಹೊಣೆಯನ್ನು ವ್ಯಕ್ತಿ ತಾನೇ ವಹಿಸಿಕೊಂಡಾಗ, ನಕಲೀ ವೈದ್ಯನಿಗೆ ವಹಿಸಿಕೊಟ್ಟಾಗ ಇಲ್ಲವೇ ವೈದ್ಯಕೀಯದ ಅರೆಬರೆ ಜ್ಞಾನವಿರುವಂಥ ವಂಚಕರಿಗೆ ನೀಡಿದಾಗ ಪರಿಸ್ಥಿತಿ ಗಂಭೀರವಾಗುತ್ತದೆ. ಅರ್ಧಜ್ಞಾನ, ಔಷಧಿ ತಯಾರಿಕರಿಂದ ಪ್ರಚಾರ, ಡಿಢೀರ್ ಆರೋಗ್ಯ ಸಂಪಾದನೆಯ ಲಾಲಸೆ, ಸದ್ಯದ ಪೀಡೆಯನ್ನು ಹೇಗಾದರೂ ಮಾಡಿ ತೊಲಗಿಸುವ ಉತ್ಕಟತೆ, ಸ್ವಯಮೌಷಧೀಕರಣದ ಚಟ ಎಲ್ಲವೂ ಸೇರಿಕೊಂಡು ಔಷಧಿಯ ವ್ಯಾಪಕ ದುರುಪಯೋಗಕ್ಕೆ ವೇದಿಕೆ ಸಿದ್ಧವಾಗುತ್ತದೆ. ದುಷ್ಪರಿಣಾಮಗಳು ಇದರ ಬೆನ್ನಿಗೆ ಬಂದು ವ್ಯಕ್ತಿಯನ್ನು ಬಡಿಯುತ್ತದೆ. ಇವುಗಳ ನಿವಾರಣೆಗೆ ಮತ್ತೆ ಹಿಂದಿನ ದಾರಿಯನ್ನೇ ಆತ

ಅನುಸರಿಸುತ್ತಾನೆ. ಹೀಗೆ ಔಷಧಿಯ ದುರುಪಯೋಗ ಆತನನ್ನು ವಿಷವರ್ತುಲವೊಂದಕ್ಕೆ ಕೆಡೆದುಬಿಡುತ್ತದೆ. ಹೀಗೇಕಾಗುತ್ತದೆ? ಇದಕ್ಕೆ ನಾಲ್ಕು ಮುಖ್ಯ ಕಾರಣಗಳನ್ನು ಕೊಡಬಹುದು.

೧. ಅತಿಯಾದ ಆತ್ಮಪ್ರತಿಷ್ಠೆ, ವ್ಯಕ್ತಿಯಲ್ಲಿಯ ಜಂಜಾಟಗಳು, ಸಾಮಾಜಿಕ ಪರಿಸರ, ಕೌಟುಂಬಿಕ ಸನ್ನಿವೇಶ ಮುಂತಾದವುಗಳ ಕಾರಣವಾಗಿ ವ್ಯಕ್ತಿ ಸದಾ ಉದ್ರಿಕ್ತ ಮನಃಸ್ಥಿತಿಯಲ್ಲಿರುವುದುಂಟು. ಇದರ ಶಮನಕ್ಕಾಗಿ ಆತ ಮಾರುಕಟ್ಟೆಯಲ್ಲಿ ಸುಲಭವಾಗಿ ದೊರೆಯುವ ರಾಸಾಯನಿಕ ಶಾಮಕಗಳನ್ನು ಆಶ್ರಯಿಸುತ್ತಾನೆ.

೨. ವೈದ್ಯರ ಲಿಖಿತ ಆದೇಶವಾಗಲೀ ಅಧಿಕೃತ ಮದ್ದಿನ ಚೀಟಿಯಾಗಲೀ ಇಲ್ಲದೇ ಯಾವ ಔಷಧಿಯನ್ನೂ ಜನರಿಗೆ ಮಾರತಕ್ಕದಲ್ಲವೆಂಬ ನಿಯಮ ನಮ್ಮ ದೇಶದಲ್ಲಿ ಚಲಾವಣೆಗೇ ಬಂದಿಲ್ಲ. ಔಷಧಿಗಳನ್ನು ಮಾರುವ ಮಳಿಗೆಗಳಲ್ಲಿ ಸಾಧಾರಣವಾಗಿ ಎಲ್ಲ ಔಷಧಿಗಳೂ ಯಾರಿಗೆ ಬೇಕಾದರೂ ಸುಲಭವಾಗಿ ದೊರೆಯುತ್ತವೆ. ಔಷಧಿಗಳ ಈ ಹೊಣೆಗೇಡಿ ಸುಲಭಲಭ್ಯತೆ ಒಂದು ದೊಡ್ಡ ಶಾಪ.

೩. ಔಷಧಿಗಳಿಗೆ ಉಪಪರಿಣಾಮಗಳು ಇದ್ದು ಅವು ಹಾನಿಕಾರಕಗಳಾಗುವ ಸಾಧ್ಯತೆ ಇದೆ. ಅಲ್ಲದೇ ವೃಥಾ ಔಷಧಿ ಸೇವನೆಯಿಂದ ಔಷಧಿಜನ್ಯ ವ್ಯಾಧಿಯೂ ತಲೆದೋರಬಹುದು. ಇಂಥ ವಿಚಾರಗಳಲ್ಲಿ ಜನರಿಗೆ ತಿಳಿವಳಿಕೆ ನೀಡಲು ವ್ಯಾಪಕ ಪ್ರಚಾರ ಅಗತ್ಯ. ಆದರೆ ಈ ರಂಗದಲ್ಲಿ ದಿವ್ಯ ನಿರ್ಲಕ್ಷ್ಯ ಅಥವಾ ಪೂರ್ತಿ ಅಜ್ಞಾನ ನಮ್ಮ ಸೊತ್ತಾಗಿವೆ.

೪. ಯುವಕ ಯುವತಿಯರಿಗೆ ಇಂದು ಸೇವಾವಕಾಶಗಳು ಸಮೃದ್ಧವಾಗಿವೆ. ಇತ್ತ ಸಂಚಾರ ಸೌಕರ್ಯಗಳೂ ವಿಪುಳವಾಗಿವೆ. ಹೀಗಾಗಿ ದೇಶಾದ್ಯಂತ ಇವರ ಪ್ರಯಾಣ ಚಟುವಟಿಕೆಗಳು ಹಿಂದೆಂದಿಗಿಂತಲೂ ಜಾಸ್ತಿಯಾಗಿವೆ. ಇವರು ತಮ್ಮ ಆರೋಗ್ಯದಲ್ಲಿ ಅಥವಾ ಉತ್ಸಾಹದಲ್ಲಿ ಕಿಂಚಿತ್ತು ಹಿಂಜರಿಕೆ ಕಂಡು ಬಂದರೂ ಒಡನೆ ಗುಳಿಗೆಗಳನ್ನು ನುಂಗುತ್ತಾರೆ. ನಾಳೆಯ ಬಗ್ಗೆ ಚಿಂತೆ ಏಕೆ, ಇಂದನ್ನು ಕಳೆದರಾಯಿತು ಎಂಬುದು ಇವರ ನಿಲವು.

ಔಷಧಿಗಳ ಪೈಕಿ ವ್ಯಾಪಕ ದುರುಪಯೋಗಕ್ಕೆ ಒಳಗಾಗುವಂಥವು ಯಾವುವು? ಇವು ಮುಖ್ಯವಾಗಿ ಮೂರು: ಶಾಮಕಗಳು, ಉತ್ತೇಜಕಗಳು ಮತ್ತು ಆನಂದಕಾರಕಗಳು. ಶಮನ ಎನ್ನಿ, ಉತ್ತೇಜನ ಎನ್ನಿ, ಆನಂದ ಎನ್ನಿ ಇವು ದೇಹದ ಸಹಜ ಸ್ಥಿತಿಗತಿಗಳಿಂದ ಇಲ್ಲವೇ ವ್ಯಾಧಿ ನಿವಾರಣೆಗಾಗಿ ತಜ್ಞವೈದ್ಯ ಕೊಟ್ಟ ಯೋಗ್ಯ ಔಷಧಿಗಳಿಂದ ಒದಗುವ ಅನುಭವಗಳಲ್ಲ, ಬದಲು ದೈಹಿಕ ಮತ್ತು ಮಾನಸಿಕಾರೋಗ್ಯಕ್ಕೆ ಖಂಡಿತವಾಗಿಯೂ ಮಾರಕವಾಗಬಲ್ಲ ವಿವಿಧ ರಾಸಾಯನಿಕಗಳ ಸೇವನೆ ಕೃತಕವಾಗಿ ಉಂಟುಮಾಡುವ ಭಾವಗಳು. ನ್ಯೂನತೆ, ಖಿನ್ನತೆ, ವೇದನೆ, ನಿರ್ನಿದ್ರೆ ಮುಂತಾದ ಪೀಡಕಗಳ ಮೂಲವನ್ನು ನಿವಾರಿಸದೆ ಮನಸ್ಸಿನಲ್ಲಿ ಸಂತೋಷ, ಉತ್ಸಾಹ ಹಾಗೂ ಉಲ್ಲಾಸಗಳ ಮೇಲ್ಪದರದ ಭಾವವನ್ನು ಪ್ರಚೋದಿಸುವ ಈ ಔಷಧಗಳಿಂದ ಶಾಶ್ವತ ಹಾನಿ ಉಂಟು.

ಶಾಮಕಗಳ ಪೈಕಿ ಅಗ್ರಸ್ಥಾನದಲ್ಲಿದ್ದು ಇಂದು ವ್ಯಾಪಕ ದುರುಪಯೋಗಕ್ಕೆ ಪಕ್ಕಾಗಿರುವಂಥವು ಪೆನ್‌ಸಿಲಿನ್ ಹಾಗೂ ಪ್ರತಿಜೈವಿಕಗಳು. ಕಾಯಿಲೆ ಯಾವುದೇ

ಇರಲಿ ಪೆನ್‌ಸಿಲಿನ್ ಚುಚ್ಚು ಅಥವಾ ಪ್ರತಿಜೈವಿಕ ನುಂಗು ಎಂಬ ದಿಢೀರ್ ಸೂತ್ರದ ಪ್ರಯೋಗ ಮಾಡಿರುವಷ್ಟು ಹಾನಿ ಪ್ರಾಯಶಃ ಪಿಡುಗುಗಳೂ ಮಾಡಿರುವುದಿಲ್ಲ. ಏಕೆಂದರೆ ಪಿಡುಗುಗಳ ದುಷ್ಪರಿಣಾಮ ಆಗಲೇ ಪ್ರಕಟವಾಗುತ್ತದೆ. ಔಷಧಿಗಳ ದುಷ್ಪರಿಣಾಮಗಳಾದರೋ ದೀರ್ಘಕಾಲಿಕ ಅಸ್ವಾಸ್ಥ್ಯವಾಗಿ ಪ್ರಕಟಗೊಳ್ಳುತ್ತದೆ. ಸ್ಟೀರಾಯ್ಡುಗಳ ಅನಿಯಂತ್ರಿತ ಬಳಕೆ, ವೇದನನಿವಾರಕಗಳ ವಿವೇಚನರಹಿತ ಉಪಯೋಗ, ಜೀವಸತ್ವ ಎ ಮತ್ತು ಡಿ ಇವೆಯೆನ್ನುವ ವಿವಿಧ ಮಾರುಕಟ್ಟೆ ಮದ್ದುಗಳ ವೃಥಾಸೇವನೆ, ಹಾರ್ಮೋನ್‌ಗಳನ್ನು ಹಾಗೂ ಪ್ರತ್ಯಾಮ್ಲಗಳನ್ನು ಆಹಾರದ ಅಂಗವಾಗಿ ಸೇವಿಸುವುದು ಇಂಥ ನೂರಾರು ನಿದರ್ಶನಗಳು ನಿಸರ್ಗದ ವರವಾದ ದೇಹಕ್ಕೆ ಅಂಟಿರುವ ಶಾಶ್ವತ ಬಂದಿಳಿಕೆಗಳು. ಇವು ಶಾಮಕಗಳಲ್ಲ; ಮಾರಕಗಳು.

ಉತ್ತೇಜಕಗಳು ಮತ್ತು ಆನಂದಕಾರಕಗಳು ಕೇಂದ್ರೀಯ ನರಮಂಡಲವನ್ನು ಪ್ರಚೋದಿಸಿ, ಉದ್ರೇಕಿಸಿ ಇಲ್ಲವೇ ಪಟುಗೊಳಿಸಿ ಮಿಥ್ಯಾ ಭರವಸೆ ಮತ್ತು ತೃಪ್ತಿಗಳಿಗೆ ಕಾರಣವಾಗುತ್ತವೆ. ಉತ್ತೇಜಕಗಳ ಸಾಲಿಗೆ ಹೊಗೆಸೊಪ್ಪಿನ ವಿವಿಧ ರೂಪಗಳು, ಕಾಫಿ, ಚಹಾ ಮುಂತಾದ ಪಾನೀಯಗಳು ಹಾಗೂ ಆಲ್ಕೊಹಾಲ್ ಬೆರೆತ ಮಾರಕ ಪದಾರ್ಥಗಳು ಸೇರುತ್ತವೆ. ಹೊಗೆಸೊಪ್ಪಿನ ಪ್ರಮುಖ ಘಟಕ ನಿಕೋಟಿನ್ ಎಂಬ ತೀವ್ರ ನಂಜುಕಾರಕ ರಾಸಾಯನಿಕ. ಕಾಫಿ ಚಹಾಗಳ ಪ್ರಮುಖ ಘಟಕ ಕೆಫೀನ್ ಎಂಬ ರಾಸಾಯನಿಕ. ಇವೆಲ್ಲವುಗಳಿಗಿಂತ ಅಧಿಕ ಅಪಾಯಕಾರಿಯಾದ ಉತ್ತೇಜಕವೆಂದರೆ ಆಲ್ಕೊಹಾಲ್. ಇದರ ಚಟಕ್ಕೆ ಬಲಿಯಾದ ವ್ಯಕ್ತಿ ಸರ್ವಸ್ವವನ್ನೂ ಕಳೆದುಕೊಂಡು ಬೀದಿಪಾಲಾಗುವುದು ನಿತ್ಯ ಘಟನೆ. ಔಷಧಿಯ ಹೆಸರಿನಲ್ಲಿ ವ್ಯಾಪಕ ದುರುಪಯೋಗವಾಗುತ್ತಿರುವುದು ಆಲ್ಕೊಹಾಲ್. ಎಂದೇ ಇದರ ದುಷ್ಪರಿಣಾಮಗಳು ಅತ್ಯಧಿಕ.

ಆನಂದಕಾರಕಗಳು ನಿಜವಾಗಿಯೂ ಭ್ರಾಂತಿಜನಕಗಳು, ವ್ಯಕ್ತಿತ್ವದ ಮೂಲಕ್ಕೆ ಕೊಡಲಿ ಏಟು ಹೊಡೆಯುವ ಮಹಾ ಮಾರಕಗಳು, ಅಫೀಮಿನ ವಿವಿಧ ರೂಪಗಳು, ಮಾರಿಜೋನ, ಇತೆಸಾಲ್, ಬಾರ್ಬಿಚ್ಯುರೇಟುಗಳು, ಎಲ್‌ಎಸ್‌ಡಿ, ನಿದ್ರಾಜನಕ ಮಾತ್ರೆಗಳು, ಆತಂಕಹಾರಿ ಗುಳಿಗೆಗಳು ಮುಂತಾದವು ವ್ಯಕ್ತಿಗೂ ಕುಟುಂಬಕ್ಕೂ ಸಮಾಜಕ್ಕೂ ಸ್ಪಷ್ಟವಾಗಿ ಅಂಟಿರುವ ಭೀಕರ ಪಿಡುಗುಗಳು. ಇವುಗಳಿಗೆ ಬಲಿಯಾದ ವ್ಯಕ್ತಿ ಅಪಘಾತದಲ್ಲಿ ಮಡಿಯುವುದು, ಆತ್ಮಹತ್ಯೆಗೆ ತುತ್ತಾಗುವುದು, ಮನೋರೋಗಿಯಾಗಿ ನರಳುವುದು, ಬುದ್ಧಿಮಾಂದ್ಯಕ್ಕೆ ಈಡಾಗುವುದು ಮುಂತಾದವು ಅಪರೂಪವೇನಲ್ಲ. ದೇಹದ ಸಮಸ್ತ ಐಚ್ಛಿಕ ಹಾಗೂ ನಿರಿಚ್ಛಾ ಚಟುವಟಿಕೆಗಳನ್ನು ನಿಯಂತ್ರಿಸುವ ಕೇಂದ್ರೀಯ ನರಮಂಡಲವನ್ನೇ ಆನಂದಕಾರಕಗಳೆಂಬ ಹೆಸರಿನ ಈ ಔಷಧಿಗಳು ಘಾತಿಸುತ್ತವೆ.

ಈಗ ಕೆಲವು ವಿಶಿಷ್ಟ ಉದಾಹರಣೆಗಳನ್ನು ಪರಿಶೀಲಿಸೋಣ :

ಕೆಲವರಿಗೆ ಹೊಟ್ಟೆಯೊಳಗೆ ಉರಿತ ಪದೇ ಪದೇ ಕಾಣಿಸಿಕೊಳ್ಳುವುದುಂಟು. ಆಮ್ಲದ ಉತ್ಪಾದನೆ ಅಧಿಕವಾದುದರಿಂದ ಈ ಉರಿತ ಬಂದಿರಬೇಕು ಎಂದು ತಪ್ಪಾಗಿ ತರ್ಕಿಸಿ ಇವರು ಇದರ ನಿವಾರಣೆಗೆ ಪ್ರತ್ಯಾಮ್ಲಗಳನ್ನು ಎಡೆಬಿಡದೆ ನುಂಗುತ್ತಾರೆ.

ಪರಿಣಾಮಗಳು ಏನು ಗೊತ್ತೆ? ಕರುಳಿನ ರೋಗ, ದೇಹಾರೋಗ್ಯಕ್ಕೆ ಅಗತ್ಯ ಖನಿಜ ಲವಣಗಳಾದ ಫಾಸ್ಫೇಟ್‌ಗಳ ಹೀರಿಕೆಯಲ್ಲಿ ಏರುಪೇರು, ಮಿದು ಎಲುಬುಗಳ ರೋಗ ಇತ್ಯಾದಿ. ಅಲ್ಯೂಮಿನಿಯಮ್ ಹೈಡ್ರಾಕ್ಸೈಡಿನಂಥ ಪ್ರತ್ಯಾಮ್ಲಗಳ ಸೇವನೆ ಖಂಡಿತ ವಾಗಿಯೂ ಹಾನಿಕರ.

ಒಮ್ಮೊಮ್ಮೆ ಮಲವಿಸರ್ಜನೆ ಕ್ಲುಪ್ತವಾಗಿ ಆಗದಿರುವುದುಂಟು. ಇದರಿಂದ ಆರೋಗ್ಯಕ್ಕೆ ಏನೂ ಬಾಧಕವಿಲ್ಲ. ಆದರೂ ವ್ಯಕ್ತಿ ಈ ಸಣ್ಣ ವಿಷಯವನ್ನೇ ದೊಡ್ಡದಾಗಿ ಪರಿಗಣಿಸಿ ವಿರೇಚಕಗಳ ನಿರಂತರ ಸೇವನೆಗೆ ಬಲಿಯಾಗುವುದುಂಟು. ಲಿಕ್ವಿಡ್ ಪ್ಯಾರಾಫಿನ್ನಿನಂಥ ಮದ್ದಿನ ವ್ಯಾಪಕ ದುರುಪಯೋಗ ಅಸಂಖ್ಯ ಇತರ ರೋಗಗಳಿಗೆ ಕಾರಣವಾಗುತ್ತದೆ. ಹೊಟ್ಟೆಯ ಸಮಸ್ಯೆ ಏನೇ ಇರಲಿ, ಅದನ್ನು ಯುಕ್ತ ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಸರಿಯಾದ ಔಷಧಿಯನ್ನು ಸೇವಿಸುವುದೊಂದೇ ಹಾದಿ, ಅಗ್ಗದ ಜಾಹೀರಾತುಗಳಿಗೆ ಬಲಿಯಾಗಿ ಶಾಶ್ವತ ರೋಗಿ ಆಗುವುದಲ್ಲ.

ವಾಂತಿಯಾಯಿತು. ನಿಲ್ಲಿಸಬೇಕು. ಹೇಗೆ? ಕ್ಲೋರ್‌ಪ್ರೊಮಜೀನ್ ಮತ್ತು ಪ್ರೊಕ್ಲೋರೊಪೆರಜೀನ್ ಸೇವಿಸಬೇಕು. ಇಂಥ ದಿಢೀರ್ ಪ್ರಯೋಗವನ್ನು ದೇಹ ಖಂಡಿತ ಸಹಿಸದು. ದುಷ್ಪರಿಣಾಮವೇನು ಗೊತ್ತೇ? ಮುಖ, ಕಣ್ಣು, ಕೈಕಾಲುಗಳ ಅನಿಯಂತ್ರಿತ ಚಲನವಲನಗಳು.

ನೆಗಡಿ ಯಾರಿಗಿಲ್ಲ? ಮೂಗಿದ್ದವರ ಆಜನ್ಮ ಸೊತ್ತು ಇದು; ಇದರ ದಿಢೀರ್ ಶಮನಕ್ಕೆ ಎಫೆಡ್ರೀನಿನಂಥ ಸಿಂಪೆಥೋಮೈಮಿಜಿಕ್‌ಗಳನ್ನು ಒಳಗೊಂಡ ಔಷಧಿಯ ಸೇವನೆ ತಾತ್ಕಾಲಿಕ ವಿಮೋಚನೆ ನೀಡಬಹುದು. ಆ ಪರಿಣಾಮವಾಗಿ ಆ ವ್ಯಕ್ತಿ ಅತಿ ಉದ್ರಿಕ್ತ ಸ್ಥಿತಿಯಿಂದ ನರಳುತ್ತಾನೆ.

ಔಷಧಿಯ ಹೆಸರು ಏನೇ ಇರಲಿ ಅದರ ವಿವೇಕರಹಿತ ಉಪಯೋಗ ವ್ಯಕ್ತಿಗೆ ಮಾರಕವಾಗಿಯೇ ಆಗುತ್ತದೆ. ದೇಹ ಮತ್ತು ಮನಸ್ಸು ಸೇರಿ ವ್ಯಕ್ತಿ. ಇವೆರಡರಲ್ಲಿ ಯಾವುದೇ ಒಂದರಲ್ಲಿ ಅಸಮತೋಲ ಉಂಟಾದರೂ ಇನ್ನೊಂದರ ಮೇಲೆ ಮತ್ತು ಸಮಗ್ರವಾಗಿ ಆ ವ್ಯಕ್ತಿಯ ಮೇಲೆ ಪರಿಣಾಮ ಆಗಿಯೇ ಆಗುತ್ತದೆ. ಅಸ್ವಾಸ್ಥ್ಯ ಅಸ್ವಾಸ್ಥ್ಯವೇ, ಅದು ಲಘು, ಇದು ಗುರು ಎಂದು ವ್ಯತ್ಯಾಸವಾಗುವಂತಿಲ್ಲ. ಅದರ ಮೂಲವನ್ನು ಶೋಧಿಸಿ ನಿವಾರಿಸುವುದು ಔಷಧಿಯ ಗುರಿಯಾಗಬೇಕು. ಹೀಗಲ್ಲದೇ ಮೇಲೆ ಮೇಲೆ ತಿಪ್ಪೆ ಸಾರಿಸಿದಂತೆ ಹದವರಿಯದೆ ಔಷಧಿಯನ್ನು ಬಳಸಿದ್ದಾದರೆ ಸದ್ಯದ ತೊಂದರೆ ನಿವಾರಣೆ ಆಗಬಹುದು. ಆದರೆ ಔಷಧಿಜನ್ಯವ್ಯಾಧಿ ಎಂಬ ಇನ್ನೊಂದು ಉಲ್ಬಣತರ ಖಾಯಿಲೆ ತಲೆದೋರಬಹುದು. ನಿಜಕ್ಕೂ ಔಷಧಿಯ ದುರುಪಯೋಗದ ದುಷ್ಪರಿಣಾಮವಿದು. ಇದು ಅನಿವಾರ್ಯವಲ್ಲ. ಹೇಗೆ? ತಜ್ಞ ವೈದ್ಯನ ಸಲಹೆ ಕೇಳಿ ಅದರಂತೆ ವರ್ತಿಸುವುದೊಂದೇ ಸರಿಯಾದ ಕ್ರಮ.

ನಿಮ್ಮ ಶೀಘ್ರ ಕಲಿಕೆಗೆ ನೆರವಾಗುವ ಆರು ಸುಲಭೋಪಾಯಗಳು

ಪೆಟ್ರೀಷಿಯಾ ಸ್ಕಾಲ್ಕಾ

ನಿಮ್ಮ ನೆನಪಿನ ಶಕ್ತಿ ಸೋರಿಹೋಗುತ್ತಿದೆಯೇ ?
ನಿಮ್ಮ ಮನಸ್ಸು ಹಾದಿ ತಪ್ಪುತ್ತಿದೆಯೇ ?
ಹಾಗಿದ್ದರೆ ನಿರಾಶರಾಗದಿರಿ, ಇಲ್ಲಿವೆ....

ನನ್ನ ಸ್ನೇಹಿತೆಯೊಬ್ಬಳು ಒಂದು ಭೋಜನ ಕೂಟಕ್ಕೆ ತೆರಳಿದ್ದಾಗ, ಅಲ್ಲಿ ಅವಳು ಬಲ್ಲ ಇಬ್ಬರು ಗೆಳೆಯರು ಅಮೆರಿಕಾದ ಮೊದಲ ಮಾನವಸಹಿತ ಅಂತರಿಕ್ಷಯಾನ ಕಾರ್ಯಕ್ರಮವನ್ನು ಕುರಿತಂತೆ ಪ್ರಕಟವಾಗಿದ್ದ ಪುಸ್ತಕದ ಬಗ್ಗೆ ಚರ್ಚೆಯಲ್ಲಿ ತೊಡಗಿದ್ದರು. ಅದರಲ್ಲೊಬ್ಬನಾದ ಟೆಡ್ ಈ ಬಗ್ಗೆ ಸಾಕಷ್ಟು ತಾಂತ್ರಿಕ ವಿಚಾರ ಗಳನ್ನು ತಾನು ಓದಿದ್ದ ಪುಸ್ತಕದ ಆಧಾರದಿಂದಾಯ್ದು ಹೇಳು ತ್ತಿದ್ದರೆ, ಮತ್ತೊಬ್ಬ ಡ್ಯಾನ್‌ಗೆ ಆ ಬಗ್ಗೆ ತಾಂತ್ರಿಕವಲ್ಲದ ಕೆಲವೇ ಮಾತುಗಳನ್ನು ಹೇಳಲು ಸಾಧ್ಯವಾಯಿತು. ಅನಂತರ, ಡ್ಯಾನ್ ನನ್ನ ಸ್ನೇಹಿತೆಯ ಬಳಿ, "ನಾನು ಓದಿ ತಿಳಿದಿರುವುದಕ್ಕಿಂತ ಟೆಡ್ಡನೇ ಹೆಚ್ಚು ಓದಿ ತಿಳಿದಿದ್ದಾನೆ" ಅವನು ನನಗಿಂತ ಹೆಚ್ಚು ಬುದ್ಧಿವಂತ ನೆನಿಸುತ್ತದೆಯೇ" ಎಂದು ಕೇಳಿದನಂತೆ.

ಉಪಾಧ್ಯಾಯಿನಿಯಾದ ನನ್ನ ಸ್ನೇಹಿತೆಗೆ ಆಶ್ಚರ್ಯವಾಯಿತಂತೆ. ಇಬ್ಬರನ್ನೂ ಚೆನ್ನಾಗಿ ಬಲ್ಲ ಆಕೆಗೆ, ಅವರಿಬ್ಬರೂ ಒಂದೇ ರೀತಿಯ ಶೈಕ್ಷಣಿಕ ಪರಿಸರದಿಂದ ಬಂದ ಸಮಾನ ಬುದ್ಧಿ ಶಕ್ತಿಯುಳ್ಳವರೆಂದು ತಿಳಿದಿತ್ತು. ಈ ಬಗ್ಗೆ ಇಬ್ಬರ ಜೊತೆ ಚರ್ಚೆ ಮಾಡಿದ ನಂತರ ಇದಕ್ಕೆ ಕಾರಣಗಳು ಆಕೆಗೆ ತಿಳಿದುಬಂದವು. ಟೆಡ್‌ನಿಗೆ ಡಾನ್‌ಗಿಂತ ಹೆಚ್ಚು ಉತ್ತಮವಾಗಿ ಹೇಗೆ ಕಲಿಯಬಹುದೆಂಬುದು ತಿಳಿದಿತ್ತು.

೧೯೮೫ರ ಜುಲೈ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಪೆಟ್ರೀಷಿಯಾ ಸ್ಕಾಲ್ಕಾ ಅವರ "ಸಿಕ್ಸ್ ಕೀ ಟು ಕ್ವಿಕ್ಕರ್ ಲರ್ನಿಂಗ್" ಲೇಖನದ ಅನುವಾದ.

ಕೆಲವು ಸರಳವಾದ ಕೌಶಲ್ಯಗಳ ಮುಖಾಂತರ ಟೆಡ್ ತನ್ನ ಬುದ್ಧಿಶಕ್ತಿಯನ್ನು ಚುರುಕುಗೊಳಿಸಿಕೊಂಡಿದ್ದ.

ವ್ಯಕ್ತಿಯೊಬ್ಬನ ಕಲಿಕೆಯ ಶಕ್ತಿ ನಿರ್ದಿಷ್ಟಸಾಮರ್ಥ್ಯದ್ದು ಎಂದು ಅನೇಕ ವರ್ಷಗಳ ಕಾಲ ತಜ್ಞರು ಭಾವಿಸಿದ್ದರು. ಆದರೆ ಈಗ, ಪ್ರಸಿದ್ಧ ಮನಶಾಸ್ತ್ರಜ್ಞರು ಮತ್ತು ಶಿಕ್ಷಣ ತಜ್ಞರು ಈ ಬಗ್ಗೆ ಬೇರೆ ರೀತಿಯಲ್ಲಿ ಯೋಚಿಸಲಾರಂಭಿಸಿದ್ದಾರೆ. "ಮಾನವನ ಬುದ್ಧಿಶಕ್ತಿ ವಿಕಾಸಶೀಲವಾದದ್ದೆಂಬುದಕ್ಕೆ ದೊರಕುತ್ತಿರುವ ಆಧಾರಗಳು ಹೆಚ್ಚುತ್ತಿವೆ" ಎಂದು ಜಾಕ್‌ಲಾಕ್ ಹೆಡ್ (ಅಮೆರಿಕವ ಮೆಸಚುಸೆಟ್ಸ್ ವಿಶ್ವವಿದ್ಯಾನಿಲಯದ ಜ್ಞಾನವಿಕಾಸ ಯೋಜನಾ ಕೇಂದ್ರದ ನಿರ್ದೇಶಕರು) ಹೇಳಿದ್ದಾರೆ. ಅಲ್ಲದೆ ಸಮಂಜಸವಾದ ಕೌಶಲ್ಯಗಳ ಮೂಲಕ ಜನ ತಮ್ಮ ಕಲಿಕೆಯ ಶಕ್ತಿಯನ್ನು ಉತ್ತಮಪಡಿಸಿಕೊಳ್ಳಬಹುದೆಂಬ ತೀರ್ಮಾನಕ್ಕೆ ನಾವು ಬಂದಿದ್ದೇವೆ ಎಂದಿದ್ದಾರೆ.

ಅದೂ ಅಲ್ಲದೆ ಈ ಕೌಶಲ್ಯಗಳು ಮೂಲಭೂತವಾಗಿದ್ದು ಪ್ರತಿಯೊಬ್ಬರೂ ಸತತ ಅಭ್ಯಾಸದಿಂದ ಅವುಗಳ ಮೇಲೆ ಪರಿಣತಿ ಪಡೆಯಬಹುದಾಗಿದೆ. ನಮ್ಮ ಕಲಿಕೆಯ ಸಾಮರ್ಥ್ಯವನ್ನು ಹೆಚ್ಚಿಸುವಂತಹ ತಜ್ಞರ ಅಭಿಪ್ರಾಯಗಳಿಂದ ಆಯ್ದ ಆರು ಸುಲಭೋಪಾಯಗಳನ್ನು ಇಲ್ಲಿ ಕೊಡಲಾಗಿದೆ.

೧. ಮೊದಲು ಚಿತ್ರವನ್ನು ಗಮನಿಸಿ : ಹೊಸದಾದ ಮತ್ತು ಅಪರಿಚಿತ ವಿಷಯವನ್ನು ಓದಬೇಕಾದಾಗ ನೇರವಾಗಿ ಓದಿನಲ್ಲಿ ತೊಡಗಬೇಡಿ. ಬದಲಿಗೆ, ಮೊದಲು ವಿಷಯವನ್ನು ಪರಿಶೀಲನೆ ಮಾಡುವುದರಿಂದ ನಮ್ಮ ಗ್ರಹಣಶಕ್ತಿ, ಧಾರಣ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು. ಉಪಶೀರ್ಷಿಕೆ, ಚಿತ್ರಗಳ ತಲೆಬರಹ ಅಥವಾ ಉಪಲಬ್ಧವಿರುವ ಇತರ ಯಾವುದೇ ಸಂಕ್ಷಿಪ್ತ ಬರಹಗಳನ್ನು, ಅವುಗಳ ಸಾರವನ್ನು ಮೊದಲು ಗಮನಿಸಬೇಕು. ವರದಿ ಅಥವಾ ಲೇಖನಗಳನ್ನು ಓದುವಾಗ ಮೊದಲು ಪ್ರತಿಯೊಂದು ಪ್ಯಾರಾದ ಮೊದಲ ಸಾಲನ್ನು ಓದಬೇಕು. ಪುಸ್ತಕಗಳನ್ನು ಓದುವಾಗ ವಿಷಯಸೂಚಿ, ಪ್ರಸ್ತಾವನೆಯನ್ನು ಮೊದಲು ಗಮನಿಸಬೇಕು. ಈ ಎಲ್ಲ ಮುನ್ನೋಟಗಳು ಮುಂದಿನ ಗ್ರಹಿಕೆಯು ಮನದಲ್ಲಿ ಸ್ಥಿರವಾಗಿ ಮೂಡಲು ಸಹಾಯ ಮಾಡುತ್ತವೆ.

೨. ಸಾವಕಾಶವಾದ ಓದು ಮತ್ತು ಸ್ವಗತವಾಚನ : ಸರಳವಾದ ವಿಷಯದ ಗ್ರಹಿಕೆಗೆ, ವೇಗ—ಓದುವಿಕೆ ಸೂಕ್ತವಾಗಿರುತ್ತದೆ. ಆದರೆ ಕ್ಲಿಷ್ಟವಾದ ಸವಾಲೊಡ್ಡುವಂತಹ ವಿಷಯದ ಗ್ರಹಿಕೆಗೆ ನಿಧಾನ ಓದುವಿಕೆ ಹೆಚ್ಚು ಪರಿಣಾಮಕಾರಿಯಾದುದು. ಕಾಲೇಜಿನ ಕೈಪಿಡಿಯೊಂದು ಉತ್ತಮ ಮತ್ತು ಅನುತ್ತಮ ಅಭ್ಯಾಸಿಗಳ ಅಧ್ಯಯನದ ನಡುವೆ ಇರುವ ಮೂರು ಮುಖ್ಯ ವ್ಯತ್ಯಾಸಗಳನ್ನು ಹೀಗೆ ವಿವರಿಸಿದೆ. ಉತ್ತಮ ಅಭ್ಯಾಸಿಗಳು ಮೆತ್ತಗೆ ಅಥವಾ ಜೋರಾಗಿ ವಾಚಿಸುತ್ತಾರೆ. ಸಾವಕಾಶವಾಗಿ ಓದುತ್ತಾ ತಾವು ಓದುವ ಪ್ರತಿಯೊಂದು ಪದವನ್ನು ಕೇಳಿಸಿಕೊಳ್ಳುತ್ತಾರೆ.

ಉತ್ತಮ ಅಭ್ಯಾಸಿಗಳು ತಾವು ಓದಿದ್ದು ಅರ್ಥವಾಗದಿದ್ದಲ್ಲಿ ಮತ್ತೊಮ್ಮೆ ವಿಷಯ ಅರ್ಥವಾಗುವವರೆಗೂ ಓದನ್ನು ಮುಂದುವರಿಸುತ್ತಾರೆ. ಆದರೆ ಹಿಂದುಳಿದ ಅಭ್ಯಾಸಿಗಳು

ತಮಗೆ ಅರ್ಥವಾಗದಿದ್ದರೂ ಓದನ್ನು ಹಾಗೇ ಮುಂದುವರೆಸಿಕೊಂಡು ಹೋಗುತ್ತಾರೆ ವಿನಃ ಪುನಃ ಓದುವುದಿಲ್ಲ.

ಉತ್ತಮ ಅಭ್ಯಾಸಿಗಳು ಹೊಸ ವಿಷಯವನ್ನು ತಿಳಿಯುವಾಗ ಕ್ರಿಯಾತ್ಮಕವಾದ ಆಸಕ್ತಿಯನ್ನು ತಮ್ಮ ಓದಿನಲ್ಲಿ ತೋರಿಸುತ್ತಾರೆ. ತಾವು ಓದಿದ್ದನ್ನು ವಿಚಾರ ಮಂಥನಕ್ಕೆ ಒಳಪಡಿಸಿ ಅನಂತರ ಅದನ್ನು ತಮ್ಮದಾಗಿಸಿಕೊಳ್ಳುತ್ತಾರೆ.

೩. ಪುನಶ್ಚೇತನ ತಂತ್ರಗಳ ಮುಖಾಂತರ ಪುನಸ್ಮರಣೆ ಮಾಡುವುದು : ಉದಾ : ಒಬ್ಬ ವ್ಯಕ್ತಿ ಬೇಕಾದರೆ 'ಜಿಮ್' ಎಂದಿಟ್ಟುಕೊಳ್ಳುವ, ಜಿಮ್ ಎಂಟು ವರ್ಷದವನಿದ್ದಾಗ 'ಅರಿತ್‌ಮೆಟಿಕ್' (Arithmatic) ಎಂಬುದಾಗಿ ಉಚ್ಚರಿಸಲು ಬರುತ್ತಿರಲಿಲ್ಲವಂತೆ. ಅವರ ಟೀಚರ್ ಅದಕ್ಕೆ ಎಷ್ಟು ಸೊಗಸಾದ ಉದಾಹರಣೆಯೊಂದಿಗೆ ಹೇಳಿಕೊಟ್ಟರೆಂದರೆ, ಕೊನೆಯವರೆಗೂ ಅದು ಅವರ ನೆನಪಿನಲ್ಲಿ ಉಳಿಯಿತಂತೆ. ಆ ಉದಾಹರಣೆ ಹೀಗಿದೆ (A Rat in Tom's house may eat Tom's ice cream)—ಈ ವಾಕ್ಯದಲ್ಲಿನ ಪ್ರತಿಯೊಂದು ಪದದ ಮೊದಲ ಅಕ್ಷರಗಳನ್ನು ಕೂಡಿಸಿದಾಗ (Arithmatic) ಎಂದಾಗುತ್ತಿತ್ತು. ಕಲಿತದ್ದನ್ನು ನೆನಪಿನಲ್ಲಿಡಲು ಬಳಸುವಂತಹಾ ತಂತ್ರಗಳಿಗೆ ಇದೊಂದು ಸೊಗಸಾದ ಉದಾಹರಣೆ. (ಛಂಧಸ್ಸಿನಲ್ಲಿ ಗಣಗಳ ಬಗೆಗೆ ಕಲಿಯುವಾಗ ನಾವು ಪ್ರತಿಯೊಂದು ಗಣದ ಮೊದಲಕ್ಷರಗಳನ್ನು ಸೇರಿಸಿ ಅವುಗಳ ಲಕ್ಷಣಗಳನ್ನು ತಿಳಿಯಲು 'ಯಮಾತಾರಾಜಭಾನಸಲಗಂ' ಎಂದು ಕಲಿಯುವುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು) ಈ ರೀತಿಯ ನೆನಪನ್ನು ಉತ್ತಮಗೊಳಿಸುವ ಕೌಶಲ್ಯಗಳು 'ಸ್ಮೃತಿ–ವರ್ಧಕ' (mnemonics) ತಂತ್ರಗಳೆಂದು ಕರೆಯಲ್ಪಡುತ್ತವೆ. ಈ ತಂತ್ರಗಳಿಂದಾಗಿ ಕಲಿತ ಹೊಸ ವಿಚಾರಗಳು ಬಹಳ ಸುಲಭವಾಗಿ ನೆನಪಿಗೆ ದಕ್ಕುತ್ತವೆ. ಮತ್ತೊಂದು ಉದಾ : ನಾವು ಒಂದು ಕ್ರಮದಲ್ಲಿ ಕಲಿತು ಸ್ಮರಣೆಗೆ ಸುಲಭವಾಗಿ ದಕ್ಕುವ ವಾರ, ತಿಂಗಳು, ರಾಶಿಗಳ ಹೆಸರುಗಳು ಇತ್ಯಾದಿ.

ಸ್ಮೃತಿ–ವರ್ಧಕ (mnemonics) ತಂತ್ರಗಳು ಪ್ರತಿಮೆ–ಸಂಕೇತಗಳ ಮೂಲಕವೂ, ಕಾರ್ಯನಿರ್ವಹಿಸುತ್ತವೆ. ಹಿಂದೆ ಸಂಶೋಧನಕಾರರಿಂದ ಕೇವಲ 'ಗಿಮಿಕ್'ಗಳೆಂದು ತ್ಯಜಿಸಲ್ಪಟ್ಟದ್ದು ಈ ಸ್ಮೃತಿವರ್ಧಕ ತಂತ್ರಗಳು ಇಂದು ಅತ್ಯಂತ ಪ್ರಭಾವಶಾಲಿಯಾದ ಸ್ಮೃತಿವರ್ಧಕಗಳೆನಿಸಿವೆ. ಹೊಸ ವಿಚಾರಗಳನ್ನು ಅರಿಯುವಲ್ಲಿ ಈ ತಂತ್ರಗಳಿಂದಾಗಿ ಎರಡುಪಟ್ಟು ಕೆಲವೊಮ್ಮೆ ಮೂರುಪಟ್ಟು ಹೆಚ್ಚಿನ ಪರಿಣಾಮ ಕಂಡುಬಂದಿದೆ. "ಉತ್ತಮ ಸ್ಮೃತಿಶಕ್ತಿ ಜ್ಞಾನವೃದ್ಧಿಯ ಮೂಲ ಕೀಲಿ ಕೈ ಆಗಿದೆ" —ಎಂದ ವಿಲಿಯಮ್ ಜೇಸ್ (ಪಿಟ್ಸ್‌ಬರ್ಗ್ ಪೆನ್ಸಿಲ್ವೇನಿಯಾ ಕಾಲ್‌ನಿಗೀ—ಮೆಲಾನ್ ವಿಶ್ವವಿದ್ಯಾನಿಲಯದ ಮನೋವಿಜ್ಞಾನ ವಿಭಾಗದ ಮುಖ್ಯಸ್ಥರು)ರವರು "ಸಾಮಾನ್ಯದ್ದಾಗಿರುವ ಈ ಕೌಶಲ್ಯಗಳನ್ನು ಎಲ್ಲರೂ ಅಭ್ಯಾಸದ ಮೂಲಕ ತಮ್ಮದನ್ನಾಗಿಸಿಕೊಳ್ಳಬಹುದಾಗಿದೆ" ಎಂದಿದ್ದಾರೆ.

ಜ್ಞಾನವಿಕಾಸ ಸಂಶೋಧನೆಗಳು ನಮಗೆ ಎರಡು ರೀತಿಯ ಸ್ಮೃತಿಗಳು ಇರುವುದನ್ನು ತೋರಿಸಿಕೊಟ್ಟಿವೆ. ೧. ಅಲ್ಪಾವಧಿಯ ಸ್ಮೃತಿ (Short term memory)

ಮತ್ತು ೨. 'ದೀರ್ಘಾವಧಿ ಸ್ಮೃತಿ' (Long term memory) 'ಅಲ್ಪಾವಧಿಯ ಸ್ಮೃತಿ' ೩೦ ರಿಂದ ೬೦ ಸೆಕೆಂಡುಗಳವರೆಗಿನದಾಗಿರುತ್ತದೆ. (ಉದಾ : ನಾವು ದೂರವಾಣಿ ಯನ್ನು ಸಂಪರ್ಕಿಸಿ ಫೋನ್ ಮಾಡಬೇಕಾದಾಗ ಡಯಲ್ ಮಾಡುವವರೆಗೂ ನೆನಪಿರುವ ಫೋನ್ ಸಂಖ್ಯೆ ಡಯಲ್ ಮಾಡಿದ ನಂತರ ಮರೆತು ಹೋಗುವ ಹಾಗೆ) 'ದೀರ್ಘಾವಧಿ ಸ್ಮೃತಿ' ಜೀವನ ಪರ್ಯಂತ ಇರಬಹುದು. 'ಇಂಪ್ರೂವ್ ಯುವರ್ ಮೆಮೊರಿ ಸ್ಕಿಲ್ಸ್' (ನಿಮ್ಮ ಸ್ಮೃತಿ ಕೌಶಲ್ಯಗಳನ್ನು ಸುಧಾರಿಸಿಕೊಳ್ಳಿ) ಈ ಪುಸ್ತಕದ ಲೇಖಕರಾದ ಫ್ರಾನ್ಸಿಸ್ ಬೆಲೇಜಾರವರು "ಕೆಲವು ಮುಖ್ಯ ವಿಷಯಗಳನ್ನು ಅಲ್ಪಾವಧಿ ಸ್ಮೃತಿಯಿಂದ ದೀರ್ಘಾವಧಿ ಸ್ಮೃತಿಯನ್ನಾಗಿ ವರ್ಗಾಯಿಸಿಕೊಂಡಾಗ ಮತ್ತು ಅಗತ್ಯ ಬಿದ್ದಾಗ ಆ ವಿಷಯವನ್ನು ಪುನಸ್ಮರಿಸಲು ಶಕ್ತರಾದಾಗ ಮಾತ್ರ ಉತ್ತಮ ಸ್ಮೃತಿ ಶಕ್ತಿಯನ್ನು ಬೆಳೆಸಿಕೊಳ್ಳಲು ಇರುವ ರಹಸ್ಯವನ್ನರಿತವರಾಗುತ್ತೇವೆ" ಎನ್ನುತ್ತಾರೆ.

ಸ್ಮೃತಿವರ್ಧಕ ತಂತ್ರಗಳು ಕೆಲವು ಮುಖ್ಯ ವಿಷಯಗಳು ದೀರ್ಘಾವಧಿ ಸ್ಮೃತಿ ಯಾಗಿ ವರ್ಗಾವಣೆಯಾಗಲು ಮತ್ತು ಬೇಕೆಂದಾಗ ಪುನಸ್ಮರಿಸಿಕೊಳ್ಳಲು ಸಹಾಯಕ ವಾಗುತ್ತವೆ. ಮನಸ್ಸೆಂಬುದೂ ಕೂಡ ಮಾಂಸಖಂಡಗಳಿದ್ದ ಹಾಗೆ ಬೆಳೆಸಿದಷ್ಟು ಅದು ಹೆಚ್ಚು ಬಲಿಷ್ಟವಾಗುತ್ತದೆಂಬುದನ್ನು ನೆನಪಿನಲ್ಲಿಡಬೇಕಾಗಿದೆ.

೪. ಘಟನೆಗಳನ್ನು ಕ್ರಮವಾಗಿ ಸಂಯೋಜಿಸಿಕೊಳ್ಳುವಿಕೆ : ಕ್ಯಾಲಿಫೋರ್ನಿಯಾದಲ್ಲಿನ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯದ ಒಂದು ಅಧ್ಯಯನದಲ್ಲಿ ವಿದ್ಯಾರ್ಥಿಗಳಿಗೆ ೧೧೨ ಪದಗಳನ್ನು ನೆನಪಿಗೆ ತಂದುಕೊಳ್ಳಲು ಹೇಳಲಾಯಿತು. ಈ ಪದಗಳಲ್ಲಿ ಪ್ರಾಣಿಗಳ, ಬಟ್ಟೆಗಳ, ಸಾಗಾಣಿಕೆಯ ವಿಧಗಳ, ಉದ್ಯೋಗಗಳಿಗೆ ಸಂಬಂಧಿಸಿದ ಪದಗಳು ಒಳಗೊಂಡಿದ್ದವು. ಒಂದು ಗುಂಪಿಗೆ, ಪದಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸುವಂತೆ ಹೇಳಲಾಯಿತು. ಇನ್ನೊಂದು ಗುಂಪಿಗೆ ಯಾವ ವಿಭಾಗ ಕ್ರಮವನ್ನು ಸೂಚಿಸದೆ ಯಾದೃಚ್ಛಿಕವಾಗಿ (ರ‍್ಯಾಂಡಮ್) ಸ್ಮರಣೆಗೆ ತಂದುಕೊಳ್ಳಲು ಹೇಳಲಾಯಿತು. ವಿಷಯವನ್ನು ವ್ಯವಸ್ಥಿತ ಕ್ರಮದಲ್ಲಿ ಅಧ್ಯಯನ ನಡೆಸಿದ ಮೊದಲ ಗುಂಪಿನವರು, ಎರಡನೆ ಗುಂಪಿಗಿಂತ ಹೆಚ್ಚಿನ ಕಾರ್ಯಕ್ಷಮತೆಯನ್ನು ತೋರಿ ಎರಡರಿಂದ ಮೂರುಪಟ್ಟು ಹೆಚ್ಚಿನ ಪದಗಳನ್ನು ಪುನಸ್ಮರಣೆಗೆ ತಂದುಕೊಳ್ಳಲು ಶಕ್ತರಾದರು.

'ಒಂದೇ ಬಾರಿಗೆ ದೊಡ್ಡ ಮೊತ್ತದಲ್ಲಿ ಹೊಸ ವಿಷಯಗಳನ್ನು ಅರಿವಿಗೆ ದಕ್ಕಿಸಿ ಕೊಳ್ಳುವುದು ಕಷ್ಟ ಸಾಧ್ಯವಾದದ್ದು' ಎಂದು ಚಿಕಾಗೋ ವಿಶ್ವವಿದ್ಯಾನಿಲಯದ ಶಿಕ್ಷಣ ಮತ್ತು ವರ್ತನಾ ವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಥಾಮಸ್ ಟ್ರಬಾಸ್ಸೋ ನುಡಿದಿದ್ದಾರೆ. ಹೊಸ ವಿಷಯಗಳನ್ನು ವಿಶ್ಲೇಷಿಸುವುದರ ಮೂಲಕ ಮತ್ತು ಅರ್ಥಪೂರ್ಣ ವಿಭಾಗ ಕ್ರಮಗಳಲ್ಲಿ ಅಧ್ಯಯನ ಮಾಡಿದಾಗ ನಮ್ಮ ಕಲಿಕೆ ಸುಲಭವಾಗುತ್ತದೆ ಎಂಬುದು ಅವರ ಅಭಿಪ್ರಾಯವಾಗಿರುತ್ತದೆ.

೫. ಗಮನವನ್ನು ಕೇಂದ್ರೀಕೃತಗೊಳಿಸುವಿಕೆ : ಹೊಸ ವಿಷಯಲ್ಲಿ ಪರಿಣತಿ ಯನ್ನು ಪಡೆಯಬೇಕಾಗಿ ಬಂದು ಅದನ್ನೆದುರಿಸುವ ಮುಂಚೆ ನಮಗೆ ಸಾವೇ ಕೆಲವು

ಪ್ರಶ್ನೆಗಳನ್ನು ಈ ರೀತಿ ಕೇಳಿಕೊಳ್ಳಬೇಕು. ೧. ಈ ಓದಿನಿಂದ ನಾವು ಕಲಿಯಲು ಇಚ್ಛಿಸಿರುವುದೇನು? ಆ ರೀತಿ ಪಡೆದ ಜ್ಞಾನದಿಂದ ನಾವು ಹೇಗೆ ಪ್ರಯೋಜನ ಪಡೆಯಬಹುದು? "ಈ ರೀತಿ ನಮಗೆ ನಾವೇ ಕಲಿಕೆಯಿಂದ ನಮಗುಂಟಾಗುವ ಪ್ರಯೋಜನಗಳೇನೆಂದು ಕೇಳಿಕೊಳ್ಳುವುದರ ಮುಖಾಂತರ ನಮ್ಮ ಕಲಿಕೆಯ ಪ್ರತಿರೋಧ ಶಕ್ತಿಯನ್ನು ಕಡಿಮೆ ಮಾಡಿಕೊಂಡು ಉತ್ತಮ ಅಭ್ಯಾಸಿಗಳಾಗಲು ಸಾಧ್ಯವಾಗುತ್ತದೆ" ಎನ್ನುತ್ತಾರೆ ಮನಶಾಸ್ತ್ರಜ್ಞರಾದ ರಸೆಲ್ ಸ್ಕ್ಯಾಲ್‌ಫೋನ್.

ಇದರ ಜೊತೆಗೆ ರಸೆಲ್ ಸ್ಕ್ಯಾಲ್‌ಫೋನ್‌ರವರೇ ನಮ್ಮ ಏಕಾಗ್ರತೆಯನ್ನು ಉತ್ತಮಗೊಳಿಸುವಂತಹ ನಾಲ್ಕು ಅಂಶಗಳನ್ನು ಶಿಫಾರಸು ಮಾಡಿದ್ದಾರೆ. ಅವುಗಳು ೧) ಅಧ್ಯಯನ ಮಾಡಲು ಸೂಕ್ತವಾದ ಜಾಗ ಹಾಗೂ ಸಮಯವನ್ನು ಆರಿಸಿಕೊಳ್ಳುವುದು. ಕರೆಗಂಟೆ, ದೂರವಾಣಿಗಳ ಸಂಪರ್ಕವನ್ನು ಸ್ತಬ್ಧಗೊಳಿಸಿ ಬಾಗಿಲನ್ನು ಮುಚ್ಚಿ ಅಡೆತಡೆಗಳನ್ನು ನಿವಾರಿಸಿಕೊಳ್ಳುವುದು. ಹೀಗೆ ನಮ್ಮ ವಾತಾವರಣವನ್ನು ನಿಯಂತ್ರಿಸಿಕೊಂಡ ನಂತರ ನಾವು ಓದಲು ಇಚ್ಛಿಸಿದ ವಿಷಯ ನಮ್ಮ ಅರಿವಿಗೆ ದಕ್ಕುತ್ತದೆ. ೨) ಮನಸ್ಸಿನ ಸಹಜ ಸ್ಥಿತಿಗೆ ಧಕ್ಕೆಯುಂಟು ಮಾಡುವಂತಹ ಅಂಶಗಳ ಬಗೆಗೆ ಜಾಗರೂಕರಾಗಿರಬೇಕು. "ದಯವಿಟ್ಟು ಅಡ್ಡಿಪಡಿಸಬೇಡಿ" ಎಂಬ ಬೋರ್ಡ್‌ನ್ನು ಬಾಗಿಲಿಗೆ ಹಾಕಲು ನಾಚಿಕೊಳ್ಳಬಾರದು. ೩) ವೈವಿಧ್ಯಮಯ ಕಲಿಕೆಯ ವಿಧಾನಗಳನ್ನು ಪ್ರಯತ್ನಿಸಿ ನೋಡಬೇಕು. ರೇಖಾಚಿತ್ರಗಳನ್ನು ಬರೆದುಕೊಳ್ಳುವುದು, ಟಿಪ್ಪಣಿ ತೆಗೆದುಕೊಳ್ಳುವುದು, ಮುಖ್ಯಾಂಶಗಳನ್ನು ಗುರುತಿಸಿಕೊಳ್ಳುವುದು. ಸಾಧ್ಯವಾದರೆ ಟೇಪ್ ರೆಕಾರ್ಡ್‌ರನ್ನು ಕೂಡಾ ನಮ್ಮ ಕಲಿಕೆಗೆ ಬಳಸಿಕೊಳ್ಳಬಹುದು. ಇದರಿಂದ ನಮ್ಮ ಏಕಾಗ್ರತೆಯ ಮಟ್ಟ ಹೆಚ್ಚಲು ಸಹಾಯವಾಗುತ್ತದೆ. ಜೊತೆಗೆ ನಮಗೆ ಸರಿಕಂಡ ಕಲಿಕೆಯ ಕೌಶಲ್ಯಗಳನ್ನು ಬಳಸಿ ರಚನಾತ್ಮಕತೆಯನ್ನು ಸಾಧಿಸಬಹುದಾಗಿದೆ. ಕ್ರಿಯಾಶೀಲತೆ ಜೀವಂತಿಕೆಯ ಲಕ್ಷಣ. ೪) ಆಗಾಗ ನಮ್ಮ ಕಲಿಕೆಯನ್ನು ನಿಲ್ಲಿಸಿ ನಮ್ಮನ್ನು ನಾವೇ 'ನನ್ನ ಕಲಿಕೆಯು, ಉದ್ದೇಶಿತ ಗುರಿಯನ್ನು ತಲಪಲು ಸೂಕ್ತ ಕೊಡುಗೆಯನ್ನೇನಾದರೂ ನೀಡಿದೆಯೇ' ಎಂಬುದಾಗಿ ಕೇಳಿಕೊಂಡಾಗ, ಉತ್ತರ 'ಹೌದು' ಎಂದಾದಲ್ಲಿ ಕೆಲಸದಲ್ಲಿ ಮಗ್ನರಾಗಿ ಉತ್ತರ 'ಇಲ್ಲ' ಎಂದಾದಲ್ಲಿ ಅದಕ್ಕೆ ಕಾರಣವನ್ನು ಹುಡುಕಿಕೊಳ್ಳಬೇಕು. ಆತಂಕ ದಣಿವಿನಿಂದಾಗಿ ಅಭಿವೃದ್ಧಿ ಕುಂಠಿತವಾಗಿದ್ದರೆ ವಿಶ್ರಾಂತಿ ತೆಗೆದುಕೊಳ್ಳಲು ಹಿಂದೆಗೆಯಬಾರದು.

೬. ನಮ್ಮದೇ ಆದ ಅಭ್ಯಾಸ ಶೈಲಿಯನ್ನು ರೂಢಿಸಿಕೊಳ್ಳುವುದು : ಈ ಬಗ್ಗೆ ವಿವರಣೆ ನೀಡುವಂತಹ ಉದಾಹರಣೆಯೊಂದನ್ನು ಶಿಕ್ಷಣ ತಜ್ಞರಾದ ರೀಟಾ ಮತ್ತು ಕೆನಡನ್ ಹೇಳಿದ್ದಾರೆ. ಇದು ಕ್ರಿಸ್‌ಮಸ್ ಹಬ್ಬಕ್ಕೆ ಸೈಕಲನ್ನು ಕೊಡುಗೆಯಾಗಿ ಪಡೆದ ಮೂರು ಮಕ್ಕಳಿಗೆ ಸಂಬಂಧಿಸಿದ್ದು. ಈ ಮೂರು ಮಕ್ಕಳ ತಾಯಿತಂದೆಯವರು ಸಂಪೂರ್ಣ ಜೋಡಿಸಿದ ಸೈಕಲ್ಲುಗಳನ್ನು ತೆಗೆದುಕೊಳ್ಳದೆ ಅದರ ಬಿಡಿಭಾಗಗಳನ್ನು ಮನೆಗೆ ತಂದರು. 'ಟಮ್'ನ ತಂದೆ ಈ ಭಾಗಗಳನ್ನು ಜೋಡಿಸುವ ಮುಂಚೆ ಸೂಚನೆಗಳನ್ನು ಜಾಗರೂಕತೆಯಿಂದ ಓದಿ ಕೆಲಸಕ್ಕೆ ತೊಡಗಿದ. 'ಮೇರಿ'ಯ ತಂದೆ ಬಿಡಿ

ಭಾಗಗಳನ್ನು ಹರಡಿಕೊಂಡು ಸೂಚನೆಗಳನ್ನು ಓದಲು, ಮೇರಿಯು ತಾಯಿಗೆ ತಿಳಿಸಿ ಒಂದೊಂದೇ ಭಾಗಗಳನ್ನು ಜೋಡಿಸಿದ. 'ಜಾರ್ಜ'ನ ತಾಯಿ ಸ್ವಯಂಸ್ಫೂರ್ತಿಯಿಂದ ಬಿಡಿಭಾಗಗಳನ್ನು ಜೋಡಿಸಲು ತೊಡಗಿದಳು. ತೊಂದರೆಯೊದಗಿದಾಗ ಮಾತ್ರ ಸೂಚನೆಗಳ ಕಡೆ ಕಣ್ಣು ಹಾಯಿಸುತ್ತಿದ್ದಳು. ಅಂತೂ ಆ ದಿನದ ಕೊನೆಯ ಹೊತ್ತಿಗೆ ಮೂರು ಸೈಕಲ್ಲುಗಳ ಜೋಡಿಸಲ್ಪಟ್ಟಿದ್ದವು. ಆದರೆ ಜೋಡಿಸಲ್ಪಟ್ಟ ಕ್ರಮ ಮಾತ್ರ ಅವರವರ ಶೈಲಿಗನುಗುಣವಾಗಿ. ಹೀಗೆ ಪ್ರತಿಯೊಬ್ಬರೂ ಅವರ ಅಭ್ಯಾಸ ಶೈಲಿಗನುಗುಣವಾಗಿ ಕೆಲಸ ಮಾಡಿದ್ದನ್ನು ಸೇಂಟ್ ಜಾನ್ ವಿಶ್ವವಿದ್ಯಾನಿಲಯದ ಶಿಕ್ಷಣತಜ್ಞರಾದ ರೀಟಾ ಮತ್ತು ಕೆನಡನ್‌ರವರು ಸೂಚಿಸಿದ್ದಾರೆ.

"ನಾವು ಅದ್ವಿತೀಯರಾಗಿದ್ದು ವಿಶೇಷರೆನಿಸಿದ್ದರೂ ಅಪರಿಚಿತವಾದ ವಿಷಯಗಳ ಬಗೆಗಿನ ನಮ್ಮ ಅಭಿಪ್ರಾಯ ಮಂಡನೆಗೆ ಪುನಸ್ಮರಣೆ ಮತ್ತು ನಮ್ಮದೇ ಆದ ರೂಢಿಗತ ಶೈಲಿ ನಮಗೆ ಸಹಾಯಕವಾಗುತ್ತದೆ" ಎಂದು ನ್ಯೂಯಾರ್ಕ್ ನಗರದ ಕ್ವೀನ್ಸ್ ಕಾಲೇಜಿನ ಶಿಕ್ಷಣ ತಜ್ಞ ಪ್ರೊ|| ಕೆನಡನ್‌ರವರು ವಿವರಿಸಿದ್ದಾರೆ.

ನಮ್ಮದೇ ಸ್ವಂತ ಶೈಲಿ ಎಂದರೇನು? ಈ ಬಗ್ಗೆ ನಮಗೆ ನಾವೇ ವಿಶ್ಲೇಷಣೆ ಮಾಡಿಕೊಳ್ಳಬೇಕು. ಉದಾ: ನಮ್ಮ ಅಭ್ಯಾಸ ಕ್ರಮ ಎಳೆ ಎಳೆಯಾಗಿ ವಿಶ್ಲೇಷಣೆಗೊಳಪಡಿಸುವಂತಹುದೇ? ಅಥವಾ ಬಿಡಿ ಬಿಡಿಯಾಗಿರುವುದನ್ನು ಒಟ್ಟುಗೂಡಿಸುವಂತಹುದೇ? ನಮ್ಮ ಏಕಾಗ್ರತಾ ಶಕ್ತಿ ಬೆಳಗಿನ ಹೊತ್ತು ಹೆಚ್ಚಿರುತ್ತದೆಯೋ? ಅಥವಾ ಸಾಯಂಕಾಲವೋ? ಗಲಭೆಯ ವಾತಾವರಣದಲ್ಲಿಯೋ ಅಥವಾ ನಿಶ್ಯಬ್ಧ ವಾತಾವರಣದಲ್ಲೋ? ಈ ರೀತಿ ಒಂದು 'ಹೌದು', 'ಇಲ್ಲ'ಗಳ ಪಟ್ಟಿಯನ್ನೇ ತಯಾರಿಸಿಕೊಂಡಾಗ ನಮ್ಮನ್ನು ನಾವು ತಿಳಿಯಲು ಸಹಾಯವಾಗುತ್ತದೆ. ನಂತರ ಯಾವ ರೀತಿಯ ಅಭ್ಯಾಸದ ವಾತಾವರಣ ನಮಗೆ ಸೂಕ್ತವಾಗುತ್ತದೆಂಬುದನ್ನು ಈ ಪಟ್ಟಿಯ ಸಹಾಯದಿಂದ ನಿರ್ಧರಿಸಿಕೊಳ್ಳಬೇಕು.

ನಮ್ಮ ಅಭ್ಯಾಸ ಶೈಲಿ ಯಾವುದೇ ಆಗಿರಲಿ, ಮುಖ್ಯ ವಿಷಯವೆಂದರೆ ಅದರಿಂದ ನಮ್ಮ ಕಲಿಕೆಯ ಸಾಮರ್ಥ್ಯ ಹೆಚ್ಚಿನದಾಗುವುದು. ಜೊತೆಗೆ, ಅದು ನಮ್ಮ ಜೀವನವನ್ನು ಹೆಚ್ಚು ಫಲದಾಯಕವಾಗಿಸುತ್ತದೆ.

ಅನು: ಪ್ರಭಾ ಎಸ್.

ಅನಕ್ಷರತೆ ಮತ್ತು ಬಡತನ

ನಾಗರಾಜೇಗೌಡ

ಭಾರತದಲ್ಲಿ ೧೫-೩೫ ವಯೋಮಾನದ ಅನಕ್ಷರಸ್ಥರ ಸಂಖ್ಯೆ ೧೯೫೧ರ ಜನಗಣತಿಯನ್ವಯ ೯೧ ಮಿಲಿಯನ್ ಇದ್ದದ್ದು ೧೯೮೧ರ ಹೊತ್ತಿಗೆ ೧೧೦ ಮಿಲಿಯನ್‌ಗೆ ಏರಿತು. ಪ್ರಸಕ್ತ ಪರಿಸ್ಥಿತಿಯ ವಿಶ್ಲೇಷಣೆ ಆಧಾರದಂತೆ ೧೯೯೧ರ ಹೊತ್ತಿಗೆ ಇವರ ಸಂಖ್ಯೆ ೧೬೬ ಮಿಲಿಯನ್‌ಗೆ ಏರುವ ಸಾಧ್ಯತೆ ಹೆಚ್ಚು. ಈ ನಡುವೆ ವಯಸ್ಕರ ಶಿಕ್ಷಣ ಕಾರ್ಯಕ್ರಮ ಚುರುಕುಗೊಳಿಸುವ ಸಾಧ್ಯತೆಗಳಿದ್ದು, ೨೦೦೧ರ ಹೊತ್ತಿಗೆ ಅನಕ್ಷರಸ್ಥರ ಸಂಖ್ಯೆ ೧೧೦ ಮಿಲಿಯನ್‌ಗೆ ಇಳಿಯುವ ಸಾಧ್ಯತೆ ಇದೆ ಎಂದು ರಾಷ್ಟ್ರೀಯ ಸಾಕ್ಷರತಾ ಮಿಷನ್‌ನಲ್ಲಿ ನಮೂದಿಸಲಾಗಿದೆ.

ಭಾರತದ ಜನಸಂಖ್ಯೆ ಪ್ರತಿ ವರ್ಷ ಸುಮಾರು ಶೇ. ೨.೩ರಂತೆ ಏರುತ್ತಿದೆ. ಪ್ರತಿವರ್ಷ ಇಲ್ಲಿ ಒಂದು ಆಸ್ಟ್ರೇಲಿಯಾ ಸೃಷ್ಟಿಯಾಗುತ್ತಿದೆ. ಜನಸಂಖ್ಯಾ ಹೆಚ್ಚಳ ಪ್ರತಿವರ್ಷ ೧೩ ಮಿಲಿಯನ್, ದಿನದಲ್ಲಿ ೫೭,೦೦೦ ಮಕ್ಕಳು ಹುಟ್ಟುತ್ತಿವೆ. ಈ ಮಕ್ಕಳ ತಂದೆ ತಾಯಿಯರಲ್ಲಿ ಹೆಚ್ಚಿನ ಸಂಖ್ಯೆ ಬಡವರು ಹಾಗೂ ಗ್ರಾಮೀಣ ಪ್ರದೇಶದವರೇ ಆಗಿದ್ದಾರೆ. ಅವರಲ್ಲಿ ಅನಕ್ಷರತೆ ಮತ್ತು ಬಡತನ ಮನೆ ಮಾಡಿಕೊಂಡಿದೆ. ಬಡಜನತೆ ಹಾಗೂ ಗ್ರಾಮೀಣರ ಮೇಲೆ 'ಕುಟುಂಬ ಕಲ್ಯಾಣ ಯೋಜನೆ' ಹೆಚ್ಚು ಪರಿಣಾಮ ಬೀರಿಲ್ಲ. 'ಮಕ್ಕಳು ದೇವರ ಕೊಟ್ಟ ವರ' ಎಂಬುದು ಅವರ ನಂಬಿಕೆ. 'ಅಪುತ್ರಸ್ಯಗತಿರ್ನಾಸ್ತಿ' ಎಂಬುದು ಮಧ್ಯಮವರ್ಗದವರ ವಾದ. ಗಂಡು ಮಗ ತಂದೆತಾಯಿಯರನ್ನು ಸ್ವರ್ಗಕ್ಕೆ ರವಾನಿಸುವ ರಹದಾರಿ ಇದ್ದಂತೆ ಎಂಬುದರ ಬಗ್ಗೆ ಬಲವಾದ ನಂಬಿಕೆ. ಇದರಿಂದಾಗಿ ಕುಟುಂಬ ಕಲ್ಯಾಣ ಯೋಜನೆ ನಿರೀಕ್ಷಿತ ಫಲ ನೀಡಿಲ್ಲ. ಇದಕ್ಕೆ ಮೂಲಭೂತ ಕಾರಣಗಳೆಂದರೆ ಅನಕ್ಷರತೆ, ಅಜ್ಞಾನ ಹಾಗೂ ಬಡತನ. ಇವುಗಳ ನಿವಾರಣೆಗೆ ಸಾಕ್ಷರತೆ ಮದ್ದು.

ಸಾಕ್ಷರತಾ ಸಾಧನೆ ಎರಡು ಮುಖವಾಗಿ ಸಾಗುತ್ತಿದೆ. ಒಂದು ಕಡ್ಡಾಯ ಪ್ರಾಥಮಿಕ ಶಿಕ್ಷಣ ಹಾಗೂ ಎರಡನೆಯದು ವಯಸ್ಕರ ಶಿಕ್ಷಣದ ಮೂಲಕ. ನಮ್ಮ ದೇಶದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ೧೯೬೧ ರಿಂದಲೇ ಜಾರಿಗೆ ಬಂತು. ಅದರಂತೆ ೩೦೦ ಪ್ರಜಾ ಸಂಖ್ಯೆಯುಳ್ಳ ಪ್ರತಿಯೊಂದು ಗ್ರಾಮಕ್ಕೂ ಒಂದು ಪ್ರಾಥಮಿಕ ಶಾಲೆ ನೀಡುವುದು ಸರ್ಕಾರದ ನೀತಿ. ಈ ಗುರಿಯನ್ನು ೧೯೯೦ರ ಹೊತ್ತಿಗೆ ಸಾಧಿಸುವ ಯೋಜನೆ ರೂಪಿತವಾಗಿದೆ.

ಶಾಲೆಗೆ ಹೋಗುವ ಮಕ್ಕಳೆಲ್ಲರೂ ೭ ವರ್ಷಗಳ ಕಡ್ಡಾಯ ಪ್ರಾಥಮಿಕ ಶಿಕ್ಷಣ ಪೂರೈಸುತ್ತಿರುವರೇ? ಇಲ್ಲ. ಇತ್ತೀಚಿನ ಲೆಕ್ಕಾಚಾರದ ಪ್ರಕಾರ ಶಾಲೆಗೆ ಸೇರುವ ೧೦೦ ಮಕ್ಕಳ ಪೈಕಿ ೨೫ ಮಕ್ಕಳು ಮಾತ್ರ ೮ನೇ ತರಗತಿಯನ್ನು ತಲುಪುತ್ತಾರೆ. ಇದು ಪ್ರಾಥಮಿಕ ಶಿಕ್ಷಣದ ಒಂದು ಮುಖವಾದರೆ ವಯಸ್ಕರ ಶಿಕ್ಷಣದ ಮಂದಗತಿಯ ಪ್ರಗತಿ ಇನ್ನೊಂದು ಮುಖ.

ಸ್ವಾತಂತ್ರ್ಯಾವಧಿಯಲ್ಲಿ ಭಾರತದ ಸಾಕ್ಷರತೆ ಶೇ. ೧೪. ೧೯೪೭ ರಿಂದ ೧೯೮೧ ರವರೆಗೆ ಆಗಿರುವ ಸಾಕ್ಷರತೆಯ ಹೆಚ್ಚಳ ಸುಮಾರು ಎರಡು ಪಟ್ಟು. ಸ್ವಾತಂತ್ರ್ಯ ಬಂದ ೩೪ ವರ್ಷಗಳಲ್ಲಿ ಇದೊಂದು ಹೆಚ್ಚಿನ ಸಾಧನೆ. ಆದರೂ ನಿರಕ್ಷರತಾ ನಿವಾರಣೆ ಇನ್ನೂ ಬೃಹತ್ ಸಮಸ್ಯೆಯಾಗಿಯೇ ಉಳಿದಿದೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಹಾಗೂ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳೆರಡರಲ್ಲೂ ಸಾಕಷ್ಟು ಪ್ರಯತ್ನಗಳಾಗಿದ್ದು, ಇದರ ಫಲವಾಗಿ ಶೇಕಡವಾರು ಸಾಕ್ಷರತೆಯಲ್ಲಿ ಪ್ರಗತಿ ಕಂಡರೂ ಅನಕ್ಷರಸ್ಥರ ಸಂಖ್ಯೆ ಬೆಳೆಯುತ್ತಲೇ ಇದೆ.

ಅನಕ್ಷರಸ್ಥರು ಯಾರು? ಜನ ಸಾಕ್ಷರರಾಗಲು ಏಕೆ ಇಚ್ಛಿಸುತ್ತಾರೆ? ಸಾಕ್ಷರತೆ ಬಡತನವನ್ನು ಹತೋಟಿಯಲ್ಲಿಡಬಲ್ಲದೆ? ಮುಂತಾದ ಪ್ರಶ್ನೆಗಳು ದೇಶದ ವಯಸ್ಕರ ಶಿಕ್ಷಣ ಕಾರ್ಯಕರ್ತರ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ನಿರತರಾಗಿರುವವರ ಮನದಲ್ಲಿ ಆಗಾಗ್ಗೆ ಉದ್ಭವಿಸುತ್ತವೆ. ಆದರೆ ಈ ಪ್ರಶ್ನೆಗಳಿಗೆ ಖಚಿತವಾಗಿ ಉತ್ತರಿಸುವುದು ಕಷ್ಟದ ಕೆಲಸ. ಉತ್ತರಿಸಬೇಕಾದಾಗ ಪ್ರಶ್ನೆ ಯಾವ ಪ್ರದೇಶಕ್ಕೆ ಸಂಬಂಧಿಸಿದ್ದು ಹಾಗೂ ಅಲ್ಲಿಯ ವಾಸ್ತವಿಕ ಪರಿಸ್ಥಿತಿ ಏನು? ಎಂಬುದು ಅರಿಯಬೇಕಾಗುತ್ತದೆ.

ಆಂಗ್ಲ ಪತ್ರಿಕೆ 'ಡೆವಲಪ್‌ಮೆಂಟ್ ಅಂಡ್ ಕೋ ಅಪರೇಷನ್' ಈ ಪ್ರಶ್ನೆಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದ್ದು, ಕೆಲವು ಸಾಮಾನ್ಯ ನಿಷ್ಕರ್ಷೆಗಳನ್ನು ಹೊರತರುವಲ್ಲಿ ಯಶ ಸಾಧಿಸಿದೆ.

ಅನಕ್ಷರಸ್ಥರು, ಬಡತನ, ಅಜ್ಞಾನ ಹಾಗೂ ಶೋಷಣೆಯಿಂದ ಮುಕ್ತರಾಗಬೇಕಾಗಿದೆ. ಇವರು ವಿಕಸಿತ ಮನೋಭಾವವುಳ್ಳರಾಗಿರುತ್ತಾರೆ. ಅಂತೆಯೇ ಸಾಕ್ಷರತೆ ಬಡತನ, ಅಜ್ಞಾನ ಹಾಗೂ ಶೋಷಣೆಯ ಮೇಲೆ ತನ್ನ ಹತೋಟಿಯನ್ನು ಇಟ್ಟುಕೊಂಡಿರುವುದು ಮನವರಿಕೆಯಾಗುತ್ತದೆ.

ಹೆಚ್ಚು ಜನ ಬಡವರು ಅನಕ್ಷರಸ್ಥರಾಗಿರಲು ಕಾರಣ ಎಲ್ಲಾ ಸವಲತ್ತುಗಳ ಆಗರವಾಗಿರುವ ಶ್ರೀಮಂತವರ್ಗ. ಇವರು ಬಡವರಿಗೆ ಯಾವ ಶಕ್ತಿಯನ್ನೂ ಕೊಟ್ಟಿಲ್ಲ. ಇಲ್ಲಿ ಸಾಕ್ಷರತೆಯೇ ಶಕ್ತಿ. ಸಾಕ್ಷರತೆಯ ಅರ್ಥ ಬಡವರಿಗೆ ಶಕ್ತಿಯನ್ನು ನೀಡುವುದು.

ಇಲ್ಲಿ ಸಾಮಾಜಿಕ ಕ್ರಾಂತಿಗಳು, ಹಿಂದುಳಿದ ವರ್ಗದವರನ್ನು ಅಕ್ಷರಸ್ಥರನ್ನಾಗಿ ಮಾಡುವ ಉದ್ದೇಶಕ್ಕೆ ಹೆಚ್ಚು ಒತ್ತು ಕೊಡಬೇಕಾಗಿರುವುದು ಇಂದಿನ ಪರಿಸ್ಥಿತಿಯಲ್ಲಿ ಅನಿವಾರ್ಯ ವಾಗಿದೆ.

ಜನ ಸಾಕ್ಷರರಾಗಲು ಸಾಧಾರಣವಾಗಿ ವ್ಯವಹಾರಿಕ ಕಾರಣಗಳೇ ಹೆಚ್ಚು. ಕೆನ್ಯಾದಲ್ಲಿ ಟೀಸೊಪ್ಪು ಆರಿಸುವ ಮಹಿಳೆಯರು ಸಂಘ ಸ್ಥಾಪಿಸಲು ಇಚ್ಛೆಪಟ್ಟರು. ಕಾರಣ ಪುರುಷ ಸಂಘ ಮುಖಂಡ ಮಹಿಳೆಯರಿಗೆ ಸಂಘದ ಸದಸ್ಯರಾಗಲು ಅವಕಾಶ ಕೊಡಲಿಲ್ಲ. ಮಹಿಳೆಯರು ಸಂಘ ಸ್ಥಾಪಿಸಲು ಸಾಕ್ಷರತೆಯ ಅನಿವಾರ್ಯತೆ ಬಹಳವಾಯಿತು.

"ಅಂತರರಾಷ್ಟ್ರೀಯ ವಯಸ್ಕರ ಶಿಕ್ಷಣ ಪರಿಷತ್ತಿ"ನಲ್ಲಿ ಕಾರ್ಯನಿರ್ವಹಿಸಿ ಅನುಭವವಿರುವ ಯುಸುಫ್ ಕಾಸ್ಮ್ಸ್‌ರವರು ತಮ್ಮ ಟಾಂಜೇನಿಯಾ ದೇಶದಲ್ಲಿ ವಯಸ್ಕರ ಶಿಕ್ಷಣದ ಮೂಲಕ ಅನಕ್ಷರಸ್ಥರಾದವರ ಸರ್ವೇಕ್ಷಣೆ ನಡೆಸಿದರು. ಸಾಕ್ಷರರ ಹೇಳಿಕೆ ಸತ್ಯವೆನಿಸುತ್ತವೆ. ಅವರು ಸಾಕ್ಷರತೆಯ ಪ್ರಯೋಜನದ ಬಗ್ಗೆ ಹೀಗೆ ಹೇಳುತ್ತಾರೆ. ಪತ್ರ ಓದುವುದು ಮತ್ತು ಬರೆಯುವುದು, ಸಂಚಾರ ನಿಯಮ ಸಂಕೇತಗಳನ್ನು ಗುರ್ತಿಸುವುದು, ಕುಟುಂಬ ನಿರ್ವಹಣೆಯ ಲೆಕ್ಕ ಇಡುವುದು, ಪೋಷಣೆಯಲ್ಲಿ ಸುಧಾರಣೆ, ಸಮಾಚಾರ ಪತ್ರ ಮತ್ತು ಪುಸ್ತಕಗಳನ್ನು ಓದುವುದು, ಇದಕ್ಕಾಗಿ ಸಾಕ್ಷರತೆ ಸಹಕಾರಿಯಾಗಿದೆ. ಸಾಮಾನ್ಯವಾಗಿ ಹೇಳಬೇಕೆಂದರೆ, ಸಾಕ್ಷರತೆಯ ಪ್ರಯೋಜನ ನೋಡಿ ಕಲಿಯಲು ಮತ್ತು ತನ್ನನ್ನು ತಾನು ಬಂಧ ಮುಕ್ತನನ್ನಾಗಿಸಿ ಕೊಳ್ಳಲು ಇದು ಸಹಕಾರಿ.

ಸರ್ವೇಕ್ಷಣೆಯ ಅವಧಿಯಲ್ಲಿ ಒಬ್ಬನ ಹೇಳಿಕೆ ಹೀಗಿದೆ. 'ಇವತ್ತಿಗಿಂತ ಮೊದಲು ನಾನು ಕೈ ಕೊಳ ಹಾಕಿದ ಕೈದಿಯ ಸಮಾನನಾಗಿದ್ದೆ', ಮತ್ತೊಬ್ಬ ನಾನು ಮೊದಲಿಗೆ, ಜನ ನನ್ನನ್ನು ಉಪೇಕ್ಷೆಯಿಂದ ಕಾಣುತ್ತಾರೆ ಎಂದು ಭಾವಿಸಿದ್ದೆ. ಏಕೆಂದರೆ ಆಗ ನನಗೆ ಓದು ಬರಹ ಬರುತ್ತಿರಲಿಲ್ಲ. ಆದರೆ ಇದು ನಿಜವಲ್ಲ. ನಾನು ತಾಳಿದ್ದ ತಪ್ಪು ಧೋರಣೆ ಯಿಂದಾಗಿ ಈಗ ನನ್ನ ಬಗ್ಗೆ ನನಗೇ ತಿರಸ್ಕಾರ ಮನೋಭಾವ ಮೂಡುತ್ತದೆ. ಅನಕ್ಷರತೆ ಹಾಗೂ ಅಜ್ಞಾನದ ಪ್ರತಿಫಲವಾಗಿ ನಮ್ಮನ್ನು ನಾವೇ ಕೀಳೆಂದು ಭಾವಿಸುತ್ತೇವೆ, ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ.

ನಾವು ಸಾಕ್ಷರತಾ ಕಾರ್ಯಕ್ರಮಗಳಿಂದ ಹೆಚ್ಚು ಅಪೇಕ್ಷೆ ಪಡುತ್ತಿದ್ದೇವೆ. ಬಡತನ ನಿರ್ಮೂಲನ ಮತ್ತು ರೋಗ ನಿರೋಧಕದ ಮೇಲೆ ಹತೋಟಿಯನ್ನಿಡಲು, ಸಮೃದ್ಧಿ ಸ್ವಯಂ ನಿರ್ಣಯ ಶಕ್ತಿಯನ್ನು ಹೊಂದಲು ಇವರನ್ನೇ ಅವಲಂಬಿಸಿದ್ದೇವೆ. ಆದರೆ ಆರಂಭದಲ್ಲಿ ಇದಕ್ಕಿಂತ ಎಷ್ಟೋ ಸಮಸ್ಯೆಗಳು ಪ್ರಮುಖವಾಗಿಲ್ಲವೆ? ಅಭಿವೃದ್ಧಿ ವಿಧಾನ ಗಳಿಗೆ ಹೊಸರೂಪ ಕೊಡುವುದು, ಸಂಪನ್ಮೂಲಗಳ ವ್ಯವಸ್ಥಿತ ವಿತರಣೆ ಮೊದಲಾದುವು ಗಳಿಂದ ಬಡಜನತೆಗೆ ಸಹಾಯ ಮತ್ತು ಶಕ್ತಿಯ ರೂಪದಲ್ಲಿ ಪರಿವರ್ತನೆ ಅಗತ್ಯವಿಲ್ಲವೆ?

ನಮ್ಮ ಮುಂದೆ ಬರುವ ಮತ್ತೊಂದು ಪ್ರಶ್ನೆಯೆಂದರೆ, ಪ್ರಸಕ್ತ ಸನ್ನಿವೇಶದಲ್ಲಿ ಸಾಕ್ಷರತೆ ಯಾವ ಭೂಮಿಕೆಯನ್ನು ನಿರ್ವಹಿಸುತ್ತದೆ? ಎಂಬುದು. ಇದು ನಿರ್ಧರಿಸು ವವನಿಗಿಂತ ಹೆಚ್ಚು ಪ್ರಗತಿಯುತ ಪ್ರೇರಕ ತತ್ವವಾಗಿ ಕಾಣುತ್ತದೆ ಅನಕ್ಷರಸ್ಥ ವ್ಯಕ್ತಿಗೆ

ಯಾವ ವಿಷಯ ಹೆಚ್ಚು ದುಃಖವನ್ನುಂಟು ಮಾಡುತ್ತದೆ ಅವನ ಹೊಟ್ಟೆಯ ಹಸಿವೆ? ಅಥವಾ ಸಾಕ್ಷರತೆಯ ಹಸಿವೆ? ಇಲ್ಲಿ ಬದುಕುವುದೇ ಚಿಂತೆಯಾಗಿರುವಾಗ ಓದು–ಬರಹ–ಲೆಕ್ಕದ ಮೌಲ್ಯ ಈ ಸನ್ನಿವೇಶದಲ್ಲಿ ಏನು ಮಾಡಬಲ್ಲದು. ನಿಜವಾಗಿ ವಿಶಿಷ್ಟ ಗುಂಪಿಗೆ ಕಲಿಸಲು ಯಾವ ಸಾಮಗ್ರಿಯೂ ಇಲ್ಲ. ಆದ್ದರಿಂದ ಇವರಿಗೆ ಮೂಲ ಅವಶ್ಯಕತೆಗಳನ್ನು ಒದಗಿಸಬಲ್ಲ ಎಲ್ಲಾ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಹಾಗೆ ಮಾಡಿದಲ್ಲಿ ಅನೌಪಚಾರಿಕ ಕ್ಷೇತ್ರ, ನಿರ್ವಹಣೆ ಅರ್ಥ ವ್ಯವಸ್ಥೆಯಲ್ಲಿ ಸುಧಾರಣೆಯಾಗುತ್ತದೆ.

ಸಾಕ್ಷರತೆಯ ಆಧಾರದ ಮೇಲೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಎರಡು ರೀತಿಯ ಜನರನ್ನು ಕಾಣಬಹುದು. ಒಂದು ಯಾರು ಓದು–ಬರಹ ಬಲ್ಲರೋ ಅವರು ನಿಶ್ಚಯವಾಗಿಯೂ ಲಾಭದ ಹಾದಿಯಲ್ಲಿದ್ದಾರೆ. ಎರಡು, ಯಾರು ಓದು–ಬರಹ ತಿಳಿದಿಲ್ಲವೋ ಅವರು ಹಿಂದುಳಿಯುವಿಕೆಯ ಕೂಪಕ್ಕೆ ಬಿದ್ದಿದ್ದಾರೆ.

ಭಾರತದಲ್ಲಿ ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ಬರಬೇಕು. ಈ ಗುರಿಯನ್ನು ಸಾಧಿಸಲು ಮಕ್ಕಳು ಮನಸ್ಸು, ಶರೀರ ಮತ್ತು ಆತ್ಮಶಕ್ತಿಗಳನ್ನು ಬೆಳಸಿಕೊಳ್ಳಲು ಸಾಧ್ಯವಾಗುವ, ಉಪಯುಕ್ತ ಉದ್ಯೋಗವನ್ನು ಅವರಿಗೆ ಕಲಿಸಬೇಕು.

ಪರಭಾಷೆಯ ಶಿಕ್ಷಣ ಮಾಧ್ಯಮ ನಮ್ಮ ಮಕ್ಕಳನ್ನು ಅವರದೇ ಆದ ಭೂಮಿಯಲ್ಲಿ ಪರದೇಶಿಗಳನ್ನಾಗಿ ಮಾಡಿದೆ.
ಸತ್ಯವೇ ದೇವರು ದೇವರೇ ಸತ್ಯ

ಗಾಂಧೀಜಿ

ಜಾನಪದ ಕ್ಷೇತ್ರ: ಆಂಧ್ರ ಪ್ರದೇಶದಲ್ಲಿ ಕೃಷಿ

ಡಾ|| ಆರ್ವಿಯೆಸ್ ಸುಂದರಂ

ಆಂಧ್ರ ಪ್ರದೇಶದ ಜಾನಪದ ಸಮೃದ್ಧವಾದುದು, ವೈವಿಧ್ಯಮಯ ವಾದುದು ಮತ್ತು ಪುರಾತನವಾದುದಾದರೂ ಅದರ ಸಂಗ್ರಹ ಕಾರ್ಯ ಮತ್ತು ಅಧ್ಯಯನ ಈ ಶತಮಾನದಲ್ಲೇ ನಡೆದುವು. ಹತ್ತೊಂಬತ್ತನೆಯ ಶತಮಾನದಲ್ಲಿ ಪಾಶ್ಚಿಮಾತ್ಯ ವಿದ್ವಾಂಸರು ತೋರಿದ ಆಸಕ್ತಿಯನ್ನೂ ಈ ಸಂದರ್ಭದಲ್ಲಿ ಸ್ಮರಿಸಬೇಕು. ಆಂಧ್ರ ಪ್ರದೇಶದ ಜಾನಪದಕ್ಕೆ ಸಂಬಂಧಿಸಿದಂತೆ ಮೊದಲು ನೆನೆಯ ಬೇಕಾದವರು ಕರ್ನಲ್ ಕಾಲಿನ್ ಮೆಕಂಜಿ (೧೭೫೪–೧೮೨೧). ಮದರಾಸಿನಲ್ಲಿ ಸರ್ವೆಯರ್ ಜನರಲ್ ಆದಮೇಲೆ ಮೆಕಂಜಿ ದಕ್ಷಿಣ ಭಾರತದ ಹಲವು ಹಳ್ಳಿಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಿದ ಸಮಾಚಾರ ಅತ್ಯಮೂಲ್ಯವಾದುದು. ಹಳ್ಳಿಯ ಜೀವನ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಈ ಸಮಾಚಾರದಿಂದ ಆಂಧ್ರ ಪ್ರದೇಶದ ಜಾನಪದದ ಕೆಲವು ಮುಖಗಳು ತಿಳಿದುಬರುತ್ತವೆ.

ತೆಲುಗು ಸಾಹಿತ್ಯಕ್ಕೆ ಚಿರಸ್ಮರಣೀಯ ಸೇವೆ ಮಾಡಿದ ಸಿ. ಪಿ. ಬ್ರೌನ್ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ತೆಲುಗು ಜಾನಪದ ಸಂಗ್ರಹ ಕಾರ್ಯಕ್ಕೆ ತೊಡಗಿದ. ಪಲ್ನಾಟಿ ವೀರ ಚರಿತ್ರ, ಬೊಬ್ಬಿಲಿ ಕಥ, ಕುಮಾರ ರಾಮುನಿ ಕಥ ಮುಂತಾದ ಕಥನಗೀತೆಗಳನ್ನು ಬ್ರೌನ್ ಸಂಗ್ರಹಿಸಿದ. ಆಂಧ್ರ ಪ್ರದೇಶದ ಜಾನಪದಕ್ಕೆ ಸಂಬಂಧಿಸಿದಂತೆ ಹೆಸರಿಸಬೇಕಾದ ಇನ್ನೊಬ್ಬ ಪಾಶ್ಚಾತ್ಯ ವಿದ್ವಾಂಸ ಜೆ. ಎ. ಬೋಯಲ್. ಈತ ಒಂದು ಐತಿಹಾಸಿಕ ಲಾವಣಿಯನ್ನೂ ಕೆಲವು ಶೃಂಗಾರಗೀತೆ ಗಳನ್ನೂ ಇಂಡಿಯನ್ ಆಂಟಿಕ್ವರಿಯಲ್ಲಿ ಪ್ರಕಟಿಸಿದ. 'ತೆಲುಗು ಬ್ಯಾಲಡ್ ಪೊಯಟ್ರಿ' ಎಂಬ ಲೇಖನವನ್ನು ೧೮೭೪ರಲ್ಲಿ ಪ್ರಕಟಿಸಿದ.

ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಕೆಲವು ಜನಪದ ಕಾವ್ಯಗಳು ಮಾತ್ರ ಪ್ರಕಟವಾಗಿವೆ. ೧೯೦೦ರಲ್ಲಿ ಹಾಗೂ

೧೯೦೩ರಲ್ಲಿ ನಂದಿರಾಜು ಚಲಪತಿರಾವ್ ಎಂಬವರು ಪ್ರಕಟಿಸಿದ ಎರಡು ಸಂಕಲನಗಳು ಗಮನಾರ್ಹವಾದುವು. ತುಂಬ ವೈವಿಧ್ಯದಿಂದ ಕೂಡಿದ ಗರತಿಯ ಹಾಡುಗಳನ್ನು ಚಲಪತಿರಾವ್ ಪ್ರಕಟಿಸಿದರು. ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಪ್ರಕಟವಾದ ಸಂಕಲನಗಳಲ್ಲಿ 'ಕೂಸನ್ನು ಒಪ್ಪಿಸುವ ಹಾಡುಗಳು', 'ಕೋಲಾಟ ಕೀರ್ತನೆಗಳು', 'ಶ್ರಾವಣ ಮಂಗಳವಾರದ ಹಾಡುಗಳು', 'ಕನ್ಯಕಾಮ್ಮನವರ ಹಾಡುಗಳು' ಮುಂತಾದವು ಸೇರಿವೆ. ೧೯೨೪ರಲ್ಲಿ ಟೇಕುಮಳ್ಳ ಅಚ್ಯುತರಾವ್ 'ಆಂಧ್ರ ಪದಮುಲು—ಪಾಟಲು' ಎಂಬ ಪುಸ್ತಕವನ್ನು ಪ್ರಕಟಿಸಿದರು.

ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಜಾನಪದ ಸಂಗ್ರಹಕಾರ್ಯ ಮಾತ್ರವಲ್ಲದೆ ಅಧ್ಯಯನ ಕಾರ್ಯವೂ ಪ್ರಾರಂಭವಾಯಿತು. ಪಂಚಾಗ್ನುಲ ಆದಿನಾರಾಯಣ ಶಾಸ್ತ್ರಿ, ವೇಟೂರಿ ಪ್ರಭಾಕರಶಾಸ್ತ್ರಿ, ಚಿಲುಕೂರಿ ನಾರಾಯಣರಾವ್, ಮಲ್ಲಂಪಲ್ಲಿ ಸೋಮಶೇಖರ ಶರ್ಮ, ಅಕ್ಕಿರಾಜು ಉಮಾಕಾನ್ತಂ ಮುಂತಾದ ಪ್ರಮುಖ ವಿದ್ವಾಂಸರು ಜಾನಪದ ಕ್ಷೇತ್ರದ ಕಡೆಗೂ ತಮ್ಮ ಗಮನವನ್ನು ಹರಿಸಿ ಉಪಯುಕ್ತ ಲೇಖನಗಳನ್ನು ಬರೆದರು. ಸುರವರಂ ಪ್ರತಾಪರೆಡ್ಡಿ ಬರೆದ 'ಆಂಧ್ರುಲ ಸಾಂಘಿಕ ಚರಿತ್ರ' ಖಂಡವಲ್ಲಿ ಲಕ್ಷ್ಮೀರಂಜನಂ ಅವರ 'ಆಂಧ್ರುಲ ಚರಿತ್ರ-ಸಂಸ್ಕೃತಿ' ತೆಲುಗು ಜಾನಪದವನ್ನು ಕುರಿತ ಅನೇಕ ಮಾಹಿತಿಗಳನ್ನು ನೀಡುತ್ತವೆ.

ಜಾನಪದ ಕ್ಷೇತ್ರಕ್ಕೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಸೇವೆ ಮಾಡಿದ ವಿದ್ವಾಂಸರೆಂದರೆ ನೇದುನೂರಿ ಗಂಗಾಧರಂ. ಇವರ 'ಮಿನ್ನೇರು', 'ಮುನ್ನೀರು' ಮತ್ತು 'ಸೆಲಯೇರು' ಎಂಬ ಕಾವ್ಯಸಂಕಲನಗಳು ಆಂಧ್ರದ ವಿವಿಧ ಪ್ರದೇಶಗಳಿಗೆ ಸಂಬಂಧಿಸಿದ ಉತ್ತಮ ಗೀತೆ ಮತ್ತು ಕಥನ ಗೀತೆಗಳನ್ನು ನೀಡಿವೆ. ಗಾದೆ, ಕಥೆ, ಆಟಗಳು, ಹಬ್ಬಗಳು ಮುಂತಾದ ಹಲವು ಪ್ರಕಾರಗಳನ್ನು ಸಂಗ್ರಹಿಸಿ ಗಂಗಾಧರಂ ಪ್ರಕಟಿಸಿದ್ದಾರೆ. ಜನಪದ ಕಾವ್ಯಪ್ರಕಾರಗಳಿಗೆ ಸಂಬಂಧಿಸಿದ ಉತ್ತಮ ವಿಮರ್ಶಾ ಗ್ರಂಥವನ್ನೂ ಗಂಗಾಧರಂ ಪ್ರಕಟಿಸಿದ್ದಾರೆ. 'ಕೃಷ್ಣಶ್ರೀ' ಅವರು ಪ್ರಕಟಿಸಿದ 'ಪಲ್ಲಿ ಪದಾಲು', 'ಸ್ತ್ರೀಲ ಪೌರಾಣಿಕಪು ಪಾಟಲು', 'ಸ್ತ್ರೀಲ ರಾಮಾಯಣಪು ಪಾಟಲು' ತೆಲುಗಿನಲ್ಲಿ ಪ್ರಕಟವಾದ ಅತ್ಯುತ್ತಮ ಗೀತಸಂಕಲನಗಳ ಸಾಲಿಗೆ ಸೇರಿದಂಥವು. ವಿವಿಧ ರೀತಿಯ ಜನಪದ ಗೀತೆಗಳಲ್ಲದೆ ರಾಮಾಯಣ, ಮಹಾಭಾರತ, ಭಾಗವತ ಇತರ ಪುರಾಣಗಳಿಗೆ ಸೇರಿದ ಹಲವು ಕಥನ ಗೀತೆಗಳು 'ಕೃಷ್ಣಶ್ರೀ' ಅವರ ಸಂಕಲನಗಳಲ್ಲಿ ಸೇರಿವೆ. ಜನಪದ ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದಂತೆ ಹೆಸರಿಸಬೇಕಾದ ಮೊದಲ ಪುಸ್ತಕ ಶ್ರೀಹರಿ ಆದಿಶೇಷುವು ಅವರ 'ಜಾನಪದ ಗೇಯ ವಾಙ್ಮಯ ಪರಿಚಯಮು.' ೧೯೫೪ರಲ್ಲಿ ಪ್ರಕಟವಾದ ಈ ಗ್ರಂಥಕ್ಕೆ ತೆಲುಗು ಭಾಷಾ ಸಮಿತಿಯ ಬಹುಮಾನವೂ ಸಂದಿದೆ.

ಆಂಧ್ರದ ಜಾನಪದ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿದವರಲ್ಲಿ ಡಾ|| ಬಿ. ರಾಮರಾಜು ಪ್ರಮುಖರು. ಆಂಧ್ರ ಪ್ರದೇಶದ ತೆಲಂಗಾಣ ಪ್ರಾಂತ್ಯದ ಸಾವಿರಾರು ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದು ಮಾತ್ರವಲ್ಲದೆ, ಜಾನಪದವನ್ನು ಕುರಿತಂತೆ ತೆಲುಗಿನಲ್ಲೂ ಇಂಗ್ಲಿಷಿನಲ್ಲೂ ರಾಮರಾಜು ಪುಸ್ತಕಗಳನ್ನೂ ಲೇಖನಗಳನ್ನೂ ಪ್ರಕಟಿಸಿದ್ದಾರೆ.

'ತೆಲುಗು ಜಾನಪದ ಗೇಯ ಸಾಹಿತ್ಯಮು' ಎಂಬ ಮಹಾಪ್ರಬಂಧಕ್ಕೆ ೧೯೫೬ರಲ್ಲಿ ಇವರು ಪಿ. ಎಚ್. ಡಿ. ಪದವಿ ಪಡೆದರು. 'ಫೋಕ್‌ಲೋರ್ ಆಫ್ ಆಂಧ್ರ ಪ್ರದೇಶ್' ಮತ್ತು 'ಫೋಕ್ ಟೇಲ್ಸ್ ಆಫ್ ಆಂಧ್ರ ಪ್ರದೇಶ್' ಎಂಬ ಇಂಗ್ಲಿಷ್ ಪುಸ್ತಕಗಳನ್ನೂ ಡಾ॥ ರಾಮರಾಜು ಪ್ರಕಟಿಸಿದ್ದಾರೆ. ಡಾ॥ ಯಸ್ವಿ ಜೋಗಾರಾವ್ ಅವರು 'ಆಂಧ್ರ ಯಕ್ಷಗಾನ ವಾಙ್ಮಯ ಚರಿತ್ರ' ಎಂಬ ಮಹಾಪ್ರಬಂಧಕ್ಕೆ ೧೯೫೭ರಲ್ಲಿ ಪಿ. ಹೆಚ್. ಡಿ. ಪದವಿ ಪಡೆವರು. ಯಕ್ಷಗಾನದ ಉಗಮ ವಿಕಾಸ ಮತ್ತು ವೈವಿಧ್ಯಗಳಿಗೆ ಸಂಬಂಧಿಸಿದಂತೆ ಅಮೂಲ್ಯವಾದ ಸಮಾಚಾರವನ್ನು ಈ ಗ್ರಂಥ ಒದಗಿಸುತ್ತದೆ. ಜನಪದ ಕಥಾ ಕಾವ್ಯವನ್ನು ಮಾನವ ಶಾಸ್ತ್ರದ ದೃಷ್ಟಿಯಿಂದ ಪರಿಶೀಲಿಸಿದ ಡಾ॥ ನಾಯನಿ ಕೃಷ್ಣ ಕುಮಾರಿ, ತೆಲುಗಿನ ವೀರಕಾವ್ಯಗಳನ್ನು ಸಮಗ್ರವಾಗಿ ಪರಿಶೀಲಿಸಿದ ಡಾ॥ ಟಿ. ಪಿ. ಸುಬ್ಬರಾವ್ ಮುಂತಾದವರು ಆಂಧ್ರ ಪ್ರದೇಶದ ಜಾನಪದದ ವಿವಿಧ ಮುಖಗಳನ್ನು ಆಳವಾಗಿ ವಿಶ್ಲೇಷಿಸಿದ್ದಾರೆ. ಸಂಶೋಧನ ಕ್ಷೇತ್ರದಲ್ಲಿ ಜಾನಪದಕ್ಕೆ ಗೌರವಾನ್ವಿತ ಸ್ಥಾನ ಸಿಕ್ಕಿದೆ ಎಂಬುದನ್ನು ಗಮನಿಸಬೇಕು. ಜಾನಪದವನ್ನು ಸಂಶೋಧನ ವಿಷಯವನ್ನಾಗಿ ಸ್ವೀಕರಿಸಿ ಪದವಿಗಳನ್ನು ಪಡೆದ ಕೆಲವು ವಿದ್ವಾಂಸರನ್ನು, ಅವರ ಸಂಶೋಧನ ವಿಷಯಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

ಅ) ಡಿಲಿಟ್ ಪದವಿ (ಮೈಸೂರು ವಿಶ್ವವಿದ್ಯಾನಿಲಯ)

ಆರ್. ವಿ. ಎಸ್. ಸುಂದರಂ— ಆಂಧ್ರುಲ ಜಾನಪದ ವಿಜ್ಞಾನಂ (ಆಂಧ್ರರ ಜಾನಪದ) ೧೯೮೭

ಆ) ಪಿ.ಎಚ್. ಡಿ. ಪದವಿ

೧. ಕೃಷ್ಣಕುಮಾರಿ, ನಾಯನಿ— ತೆಲುಗು ಜನಪದ ಕಾವ್ಯ ಕಥೆಗಳು ೧೯೭೦

೨. ಕೋಟೇಶ್ವರಿ, ನಾಯನಿ— ಮುದ್ರಿತ ಜನಪದ ಗೀತೆಗಳಲ್ಲಿ.... ೧೯೭೮ ಸಿಫೂಟುಗಳಿಗೆ ಸೇರದ ಪದಗಳು

೩. ಗೋಪಾಲಕೃಷ್ಣರಾವ್ ತೆಲುಗು–ಕನ್ನಡ ಜನಪದ ಕಾವ್ಯದಲ್ಲಿ ರಾಮಾಯಣ ೧೯೮೨

೪. ಜೋಗಾರಾವ್, ಯಸ್ವೀ— ಆಂಧ್ರ ಯಕ್ಷಗಾನ ಸಾಹಿತ್ಯ.... ೧೯೫೭

೫. ನಿರ್ಮಲ, ಡಿ— ತೆಲುಗು–ತಮಿಳ್ ಜನಪದ ಸಾಹಿತ್ಯ....

೬. ಪೆದ್ದಿರೆಡ್ಡಿ, ಸಿ— ಅನಂತಪುರ ಜಿಲ್ಲೆಯ ಜನಪದ ಕಥೆಗಳು ೧೯೮೮

೭. ಪ್ರೇಮಲತ, ರಾವಿ— ತೆಲುಗು ಜನಪದ ಪುರಾಣಗಳು.... ೧೯೮೦

೮. ಭಾನುಮೂರ್ತಿ, ವಿ. ವಿ.— ಕಾಟಮರಾಜು ಕಥೆಗಳ ಸಾಂಸ್ಕೃತಿಕ ಅಧ್ಯಯನ ೧೯೮೮

೯. ಮೋಹನ್, ಜಿ. ಎಸ್.— ಅನಂತಪುರ ಜಿಲ್ಲೆಯ ಗರತಿಯ ಹಾಡು ೧೯೭೯

೧೦. ರಘುನಾರೆಡ್ಡಿ, ವೈ— ತೆಲುಗು ಹಳ್ಳಿಯ ಹಾಡುಗಳಲ್ಲಿ ಜನ ಜೀವನ ೧೯೭೪

೧೧. ರಾಮರಾಜು, ಬಿ— ತೆಲುಗು ಜನಪದ ಗೀತ ಸಾಹಿತ್ಯ ೧೯೫೬

೧೨. ರೂಫಯಿರ್— ದಿ ಎಪಿಕ್ ಆಫ್ ಪಲ್ನಾಡು (ವಿಸ್ಕಾನ್ಸಿನ್ ವಿಶ್ವವಿದ್ಯಾಲಯ)

೧೩. ಲಕ್ಷ್ಮೀನಾರಾಯಣಶರ್ಮ— ತೆಲುಗು ಜನಪದ ಗೀತೆಯ ಭಾಷಾ ಶಾಸ್ತ್ರೀಯ ವಿಶ್ಲೇಷಣೆ ೧೯೮೩

೧೪. ಲಿಂಗಾರೆಡ್ಡಿ, ಜಿ— ತೆಲಂಗಾಣ ಕೆಲಸದ ಹಾಡುಗಳು ೧೯೮೦

೧೫. ವಸುಂಧರ, ಡಿ— ತೆಲುಗು ಜನಪದ ಸಾಹಿತ್ಯದಲ್ಲಿ ಸಂಪ್ರದಾಯ ೧೯೮೧

೧೬. ವಿಜಯಲಕ್ಷ್ಮಿ, ಉ— ಜಾನಪದದಲ್ಲಿ ಸ್ತ್ರೀ ೧೯೮೨

೧೭. ವೆಂಕಟರೆಡ್ಡಿ, ಕೆ.— ತೆಲುಗು ಒಗಟುಗಳು ೧೯೮೨

೧೮. ವೆಂಕಟಸುಬ್ಬಾರಾವ್, ಟಿ.— ತೆಲುಗು ವೀರಗಾಥೆಗಳು ೧೯೬೯

೧೯. ವೆಂಕಟೇಶ್ವರ್ಲು, ಬಿ.— ಪಲನಾಡಿನ ಕೋಲಾಟ ೧೯೮೧

೨೦. ಶಿವರಾಮಕೃಷ್ಣಮೂರ್ತಿ— ತೆಲುಗು ಗಿರಿಜನ ಗೀತೆಗಳು ೧೯೮೨

೨೧. ಶ್ರೀಲಕ್ಷ್ಮಿ, ಕೆ.— ರಾಮಾಯಣದ ಹಾಡುಗಳು ಮನೋ ವಿಶ್ಲೇಷಣೆ ೧೯೮೫

೨೨. ಸರಸ್ವತಿ, ಪಿ.— ತೆಲುಗು ಜನಪದ ಸಾಹಿತ್ಯ ಮಕ್ಕಳ ಹಾಡು ೧೯೮೦

೨೩. ಸುಂದರಂ, ಆರ್ವಿಯಸ್— ತೆಲುಗು, ಕನ್ನಡ ಜನಪದ ಗೀತೆಗಳ ತೌಲನಿಕ ಅಧ್ಯಯನ.... ೧೯೭೩

೨೪. ಸುಮತಿ, ಕೆ.— ತೆಲುಗು ಜನಪದ ಕಥೆಗಳು ೧೯೭೯

ಎಂ. ಫಿಲ್. ಪದವಿ

೧. ಅಂಡಮ್ಮ— ನಲ್ಲಗೊಂಡ ಜಿಲ್ಲೆಯ ಗ್ರಾಮ ದೇವತೆಗಳು ... ೧೯೮೩

೨. ಕೃಷ್ಣಾರೆಡ್ಡಿ, ಸಿ. ಧರ್ಮವರಂ ತಾಲ್ಲೂಕಿನ ಜನಪದ ಗೀತೆ ೧೯೮೩

೩. ಛಾಯ, ಬಿ.— ತೆಲುಗು ಗಾದೆಗಳಲ್ಲಿ ಸ್ತ್ರೀ ೧೯೮೦

೪. ಜ್ಯೋತಿರ್ಮಯಿ— ತೆಲುಗು ತತ್ತ್ವದ ಪದಗಳು ೧೯೭೭

೫. ದಾಮೋದರರಾವ್ — ತೆಲುಗು ಗಾದೆಗಳು ೧೯೭೮

೬. ನರಸಿಂಹುಲು— ಶ್ರೀಕಾಕುಳ ಜಿಲ್ಲೆಯ ರಾಮಾಯಣ ಜನಪದ ಗೀತೆ ೧೯೭೯

೭. ರಮಣಯ್ಯ—	ಕಡಪ ಜಿಲ್ಲೆಯ ಜನಪದ ಗೀತೆ	೧೯೮೦
೮. ಲಕ್ಷ್ಮೀನರಸಮ್ಮ, ಕೆ.—	ಮದುವೆಯ ಹಾಡುಗಳು ಆಚಾರ, ಸಂಪ್ರದಾಯ	೧೯೮೩
೯. ವೆಂಕಟೇಶುಲು—	ಬಯಲಾಟಗಳು	೧೯೮೦
೧೦. ವೇದವತಿ, ಎಂ.—	ತೆಲುಗು–ಕನ್ನಡ ಕುಮಾರ ರಾಮನ ಕಥೆ	೧೯೭೯
೧೧. ಶ್ರೀಲಕ್ಷ್ಮಿ, ಕೆ.—	ರಾಮಾಯಣದ ಹಾಡುಗಳಲ್ಲಿ ಸ್ತ್ರೀ ಪಾತ್ರಗಳು	೧೯೮೧
೧೨. ಸಂಧ್ಯ—	ತಣುಕು ತಾಲ್ಲೂಕಿನ ಗ್ರಾಮ ದೇವತೆಗಳು	೧೯೮೧

ಇತ್ತೀಚಿಗೆ ಪದವಿ ಪಡೆದ ಕೆಲವು ಮಹಾಪ್ರಬಂಧಗಳನ್ನೂ ಸೇರಿಸಿದರೆ ತೆಲುಗಿನಲ್ಲಿ ಇಂಕ್ನೂ ಮೇಲ್ಪಟ್ಟ ವಿಷಯಗಳನ್ನು ಕುರಿತ ಸಂಶೋಧನೆ ನಡೆದಿದೆ ಎಂದು ತಿಳಿದು ಬರುತ್ತದೆ.

ಆಂಧ್ರಪ್ರದೇಶದ ಹೊರಗೆ ತೆಲುಗು ಜಾನಪದವನ್ನು ಕುರಿತ ಅಧ್ಯಯನ ನಡೆದಿರುವುದನ್ನೂ ಇಲ್ಲಿ ನೆನೆಯಬಹುದು. ಮದರಾಸ್ ವಿಶ್ವವಿದ್ಯಾಲಯದಿಂದ ವಿಂಜಮೂರಿ ಸೀತಾದೇವಿ ಜನಪದ ಸಂಗೀತದಲ್ಲಿ ಎಂ. ಲಿಟ್ ಪದವಿ ಪಡೆದರು. ಬೆಂಗಳೂರು ವಿಶ್ವವಿದ್ಯಾಲಯದ ಡಾ|| ಪಿ. ವಿ. ಸುಬ್ಬಾರಾವ್ ಪ್ರಮುಖ ಜಾನಪದ ವಿದ್ವಾಂಸರು. ಡಾ|| ಜಿ. ಎಸ್. ಮೋಹನ್ ಈ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಡಾ|| ಆರ್ವಿಯಸ್ ಸುಂದರಂ ಪಿ.ಎಚ್.ಡಿ. ಮತ್ತು ಡಿ.ಲಿಟ್. ಪದವಿಗಳನ್ನು ಪಡೆದದ್ದು ಮಾತ್ರವಲ್ಲದೆ ತೆಲುಗು, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಹಲವು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಜಾನಪದದಲ್ಲಿ ಕೆಲವರು ಪಿ.ಎಚ್.ಡಿ.ಯನ್ನು ಪಡೆದಿದ್ದಾರೆ. ತೆಲುಗು ಜಾನಪದ ಅಧ್ಯಯನಕ್ಕೆ ಕೊಡುಗೆ ನೀಡಿದ್ದಾರೆ.

ಜಾನಪದ ಕ್ಷೇತ್ರಕ್ಕೆ ಕೆಲವು ಸಂಸ್ಥೆಗಳು ಮಾಡಿದ ಸೇವೆಯನ್ನೂ ಇಲ್ಲಿ ನೆನೆಯಬಹುದು. ಎಸ್. ವಿ. ಗೋಪಾಲ್ ಅಂಡ್ ಕೋ ಅವರು ವಿವಿಧ ಕಾವ್ಯ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಆಂಧ್ರಪ್ರದೇಶ್ ಸಂಗೀತ ನಾಟಕ ಅಕಾಡೆಮಿ, ಸಾಹಿತ್ಯ ಅಕಾಡೆಮಿ, ತೆಲುಗು ವಿಶ್ವವಿದ್ಯಾಲಯ ಮುಂತಾದ ಸಂಸ್ಥೆಗಳು ಹಲವು ರೀತಿಯ ಪುಸ್ತಕಗಳನ್ನು ಪ್ರಕಟಿಸಿ ಈ ಕ್ಷೇತ್ರದಲ್ಲಿ ಕೆಲಸ ಮಾಡಿವೆ. ಇತ್ತೀಚಿಗೆ ತೆಲುಗು ವಿಶ್ವವಿದ್ಯಾಲಯ ಜಾನಪದ ವಿಭಾಗವನ್ನು ತೆರೆದು ಗಣನೀಯವಾದ ಕೆಲಸವನ್ನು ಮಾಡುತ್ತಿದೆ. ಕಲೆಗಳ ವಿಭಾಗದಲ್ಲಿ ವಿವಿಧ ಶಿಕ್ಷಣ ತರಗತಿಗಳನ್ನು ನಡೆಸುತ್ತಿದೆ. ಈಗ ಜಾನಪದ ಸಂಗ್ರಹ ಮತ್ತು ಅಧ್ಯಯನ ಕಾರ್ಯಗಳಿಗೆ ವಿಶ್ವವಿದ್ಯಾಲಯಗಳೂ ತಕ್ಕ ಪ್ರೋತ್ಸಾಹ ನೀಡುತ್ತಿವೆ. ಜಾನಪದಕ್ಕೆ ಗೌರವದ ಸ್ಥಾನ ಸಿಕ್ಕುವ ಭರವಸೆ ಕಂಡುಬರುತ್ತಿದೆ.

ತೆಲುಗು ಜನಪದ ಸಾಹಿತ್ಯದ ಕೆಲವು ಮುಖಗಳು

ಡಾ|| ಆರ್ವಿಯೆಸ್. ಸುಂದರಂ

ತೆಲುಗು ನಾಡಿನ ಜನಪದ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಪರಂಪರೆ ಇದೆ. ತೆಲುಗು ಸಂಸ್ಕೃತಿಯ ಸಮಗ್ರ ಪರಿಶೀಲನೆ ಮಾಡುವಾಗ ಜಾನಪದವೇ ಮುಖ್ಯ ಆಕರವಾಗುತ್ತದೆ. ಜಾನಪದವನ್ನು ಸೃಷ್ಟಿಸುವ ಜಾನಪದರಿಗೆ ಪ್ರತ್ಯೇಕ ಸಂಸ್ಕೃತಿ, ಸಂಪ್ರದಾಯ ಇರುತ್ತವೆ. ಆಂಧ್ರಪ್ರದೇಶದಲ್ಲಿ ಶೇಕಡಾ ಎಂಬತ್ತರಷ್ಟು ಜನ ಹಳ್ಳಿಗಳಲ್ಲಿ ವಾಸ ಮಾಡುತ್ತಾರೆ. ಪುರಾತನ ಕಾಲದಿಂದ ತಮ್ಮ ಸಂಪ್ರದಾಯಗಳನ್ನು ಕಾಪಾಡಿಕೊಂಡು ಬಂದಿರುವ ಬುಡಕಟ್ಟಿನವರು ಆಂಧ್ರಪ್ರದೇಶದಲ್ಲಿ ಸುಮಾರು ಹದಿನೇಳು ಲಕ್ಷಕ್ಕಿಂತ ಹೆಚ್ಚು ಜನರಿದ್ದಾರೆ. ಆಂಧ್ರದ ವೃತ್ತಿಗಾಯಕರು ಆಂಧ್ರಪ್ರದೇಶದ ಹೊರಗೂ ಪ್ರಸಿದ್ಧರಾಗಿ ಕೋಟಿಗಟ್ಟಲೆ ಜನರ ಮನ ಸೆಳೆದಿದ್ದಾರೆ. ಪಿಚ್ಚುಕುಂಟ್ಲು (ಹೆಳವರು), ದಾಸರು, ಬಣಜಿಗರು ಇಂಥವರು. ಇವರಲ್ಲದೆ ವೀರವಿದ್ಯಾವಂತರು, ಶಾರದಕಾಂಡ್ರು, ಬವನೀಲು, ಕೊಮ್ಮುಲವಾರು ಮುಂತಾದವರು ತೆಲುಗಿನ ಕಥನಕಾವ್ಯಗಳನ್ನು ಹಾಡುತ್ತಾರೆ.

ತೆಲುಗು ಜನಪದ ಸಾಹಿತ್ಯದಲ್ಲಿ ವೈವಿಧ್ಯವಿದೆ, ಸೊಗಸಿದೆ, ಸಾಂಸ್ಕೃತಿಕ ಮಹತ್ತ್ವವಿದೆ. ಕೇವಲ ಸೌಂದರ್ಯದೃಷ್ಟಿಯಿಂದ ಮಾತ್ರವಲ್ಲದೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಮನೋವೈಜ್ಞಾನಿಕವಾಗಿ ಪರಿಶೀಲಿಸಿದಾಗ ಜನಪದ ಸಾಹಿತ್ಯದ ನಿಜವಾದ ಹಿರಿಮೆ ಗೋಚರವಾಗುತ್ತದೆ.

ಕಾವ್ಯ

ತೆಲುಗು ಜನಪದ ಗೀತೆಗಳಲ್ಲಿ ಕೆಲಸದ ಹಾಡುಗಳಿಗೆ ಪ್ರಥಮಸ್ಥಾನ. ಅದರಲ್ಲೂ ಕೃಷಿಕರ ಹಾಡುಗಳಿಗೆ ಮೊದಲ ಆದ್ಯತೆ ಸಲ್ಲುತ್ತದೆ. ಇವುಗಳಲ್ಲಿ ಏತದ ಹಾಡುಗಳು, ಕಳೆ ಕೀಳುವ ಹಾಡು, ಕುಯ್ಲು ಹಾಡು, ಹಂತಿಹಾಡು ಮುಂತಾದವು ಸೇರಿರುತ್ತವೆ. ಕಪಿಲ ಪಾಟಲು (ಕಪಿಲೆ ಹಾಡುಗಳು) ಅಲ್ಪಾಕ್ಷರಗಳಲ್ಲಿ ಅನಲ್ಪ ಅರ್ಥವನ್ನು ನೀಡುತ್ತವೆ.

"ಮರಮರವು ಹೂ ಬಿಟ್ಟಿತು ಮರದ ಕೆಳಗೆ ರಾಶಿ ಹಾಕಿತು
ಇಪ್ಪೆಮರವು ಹೂ ಬಿಟ್ಟಿತು ಈಗ ಮನಸ್ಸು ಮುರಿದುಹೋಯಿತು"

ಪ್ರಕೃತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಕವಿ ಮಾತ್ರ ಇಂಥ ಕವನವನ್ನು ಬರೆಯಬಲ್ಲ. 'ಮರಮರವು ಹೂ ಬಿಟ್ಟಿತು' ಎಂದಾಗ ವಸಂತಕಾಲದ ಹೂಗಳ ಸಮೃದ್ಧಿ ನೆನಪಿಗೆ ಬರುತ್ತದೆ. ಇಪ್ಪೆಮರ ವಸಂತಕಾಲದ ಅಂತ್ಯದಲ್ಲಿ ಹೂ ಬಿಡುತ್ತದೆ. ಅಲ್ಲಿಯ ತನಕ ಪ್ರಿಯನ ನಿರೀಕ್ಷೆಯಲ್ಲಿದ್ದ ಪ್ರಿಯೆ ತನ್ನ ಮನಸ್ಸು ಮುರಿದುಹೋಯಿತೆಂದು ಹೇಳುವುದರಲ್ಲಿ ಔಚಿತ್ಯವಿದೆ.

"ಈಚಲು ಮರ ಮನೆಯಲ್ಲ ತಾಳೆಮರ ತಾವಲ್ಲ
ನೋಡಿದವನೆಲ್ಲ ಗಂಡನಲ್ಲ ತಗಡು ಬಂಗಾರವಲ್ಲ"

ಜೀವನದ ಅನುಭವಗಳನ್ನು ಸರಳ ಉಪಮೆಗಳಿಂದ ಚಿತ್ರೀಕರಿಸುವ ಮಧುರಗೀತೆಗಳು ಈ ಕಪಿಲೆ ಹಾಡುಗಳು.

ಕೆಲಸದ ಹಾಡುಗಳು ಕೆಲಸದ ಕಷ್ಟ ಮರೆಯುವಂತೆ ಮಾಡುತ್ತವೆ. ಆಡುತ್ತಾ ಹಾಡುತ್ತಾ ಕೆಲಸ ಮಾಡಿದರೆ ಕಷ್ಟ ತಿಳಿಯದೆಂಬ ಅರಿವು ಜಾನಪದರಿಗಿದೆ. ಒಂದು ಒನಕೆಯ ಹಾಡು ಹೀಗಿದೆ:

"ಕುಟ್ಟು ಕುಟ್ಟೆಂದರೆ ಅದೆಂಥ ಕುಟ್ಟು
ಧಾನ್ಯರಾಶಿಯ ಮೇಲೆ ಕೈಹಾಕಿದಂತೆ
ಅಡುಗೆ ಅಡುಗೆ ಎಂದರೆ ಅದೆಂಥ ಅಡುಗೆ
ಅತ್ತಿಗೆಯೊಂದಿಗೆ ನಾದಿನಿ ವಾದಿಸಿದಂತೆ"

ಗರತಿಯ ಹಾಡುಗಳಲ್ಲಿ ಗರತಿಯ ಅನುಭವ, ಆಸೆ, ಆಕಾಂಕ್ಷೆ ವ್ಯಕ್ತವಾಗುತ್ತವೆ. ತವರು ಮನೆಯ ಬಗ್ಗೆ ಜನಪದ ಹೆಣ್ಣಿಗೆ ಇರುವ ಪವಿತ್ರಭಾವನೆ ಅನೇಕ ಗೀತೆಗಳಲ್ಲಿ ವ್ಯಕ್ತವಾಗಿದೆ. ತವರಿಗೆ ಹೋಗಬೇಕೆಂದುಕೊಂಡವಳಿಗೆ ಕಾಲು ರಥವಾಗಿ ಓಡುವುವು, ಕೈ ಉಯ್ಯಾಲೆ ಹಗ್ಗಗಳಾಗಿ ನೇತಾಡುವುವು.

"ಕಾಶಿಗೆ ಹೋಗೋಣವೆಂದರೆ ಕದಲದು ಕಾಲು
ಡೆಲ್ಲಿಗೆ ಹೋಗೋಣವೆಂದರೆ ತಿರುಗದು ಮನಸು
ನನ್ನ ರಾಜ ತವರಿಗೆ ಹೋಗೋಣವೆಂದರೆ
ನನ್ನ ಕಾಲು ಸಜ್ಜು ಮಾಡಿದ ರಥವಾಗಿ ನಡೆಯುವುವು
ನನ್ನ ಕೈ ಉಯ್ಯಾಲೆಯ ಹಗ್ಗವಾಗಿ ತೂಗಾಡುವುವು"

ಉಯ್ಯಾಲೆಯ ಹಗ್ಗದಂತೆ ಕೈ ತೂಗಾಡುವುದೆಂದು ಹೇಳುವ ಉಪಮೆ ತಾಯಿಯಾದವಳು ಮಾತ್ರ ಹೇಳುವಂಥದು. ಇದೊಂದು ಅಪರೂಪದ ಮನೋಹರ ಉಪಮೆ.

ಭಾರತೀಯ ಸಮಾಜದಲ್ಲಿ ಸ್ತ್ರೀ ಅನುಭವಿಸುವ ಹಲವು ರೀತಿಯ ಸಂಕಷ್ಟಗಳನ್ನು ಜನಪದ ಗೀತೆಗಳಲ್ಲಿ ಬಗೆಬಗೆಯಾಗಿ ನಿರೂಪಿಸಲಾಗಿದೆ. ಒಂದು ಗೀತೆಯಲ್ಲಿ ತನ್ನ ಕಷ್ಟ ಪರಂಪರೆಗೆ ಅಂತ್ಯ ಕಾಣಬೇಕೆಂಬ ಬಯಕೆಯನ್ನು ಜನಪದ ಗರತಿ ವ್ಯಕ್ತಪಡಿಸಿದ ರೀತಿ:

"ಮರವಾದ್ರೂ ಆಗಿದ್ರೆ ಮಂಚಿಗೆ ಹಾಕ್ತಿದ್ರು
ಎಲೆಯಾದ್ರೂ ಆಗಿದ್ರೆ ಮೇಕೆ ತಿಂತಿತ್ತು
ಕಾಯಾದ್ರೂ ಆಗಿದ್ರೆ ಕಾಗೆ ತಿಂತಿತ್ತು
ಹಣ್ಣಾದ್ರೂ ಆಗಿದ್ರೆ ಹಕ್ಕಿ ತಿಂತಿತ್ತು
ಬಲಶಾಲಿ ನಮ್ಮಪ್ಪ ಹಾಲು ಕರೆಯಲು
ಬಂಗಾರದ ಚೆಂಬಲ್ಲಿ ಧಾರೆಯಾಗಬೇಕಿತ್ತು
ಸಿರಿದೇವಿ ನಮ್ಮವ್ವ ಮೊಸರು ಕಡೆಯಲು
ಕಡೆಗೋಲಾದ್ರೂ ಆಗಬೇಕಿತ್ತು."

ವೇದನೆಯಿಂದ ಉಂಟಾದ ವೈರಾಗ್ಯವನ್ನು ಇದಕ್ಕಿಂತ ಚೆನ್ನಾಗಿ ವ್ಯಕ್ತಮಾಡುವುದು ಕಷ್ಟ.

ತೆಲುಗು ಕಥನ ಗೀತೆಗಳಲ್ಲಿ ವಿಷಯ ವೈವಿಧ್ಯವಿದೆ. ಪುರಾಣ ಸಂಬಂಧ ಗೀತೆಗಳು, ಚಾರಿತ್ರಿಕ ಗೀತೆಗಳು ಮತ್ತು ಸಾಮಾಜಿಕ ಗೀತೆಗಳು ವೃತ್ತಿಗಾಯಕರ ಹಾಡುಗಾರಿಕೆಯಿಂದ ಆಂಧ್ರದ ಜನಮನಗಳನ್ನು ಗೆದ್ದುಕೊಂಡಿವೆ. ರಾಮಾಯಣದ ಹಾಡುಗಳು ಆಂಧ್ರದ ಅತ್ಯಂತ ಜನಪ್ರಿಯ ಗೀತೆಗಳಾಗಿವೆ. ಊರ್ಮಿಳಾದೇವಿಯ ನಿದ್ರೆ, ಲಕ್ಷ್ಮಣ ದೇವರ ನಗೆ ಮುಂತಾದ ವಿಶೇಷ ರೂಪದ ಕಥೆಗಳು ತೆಲುಗಿನಲ್ಲಿ ಪ್ರಚಾರದಲ್ಲಿವೆ. ಹದಿನಾಲ್ಕು ವರ್ಷಗಳ ತರುವಾಯ ಊರ್ಮಿಳೆಯನ್ನು ನಿದ್ದೆಯಿಂದ ಎಚ್ಚರಗೊಳಿಸಲು ಹೋದ ಲಕ್ಷ್ಮಣ. ಆದರೆ ಅವಳು ತನ್ನ ಪತಿಯನ್ನೇ ಗುರುತಿಸಲಾಗದೆ "ಅಯ್ಯ ನೀವು ಯಾರು? ಯಾಕೆ ಇಂಥ ತಪ್ಪು ಮಾಡಲು ಬಂದಿರಿ?" ಎಂದಾಗ ಊರ್ಮಿಳೆಯ ಸ್ಥಿತಿ ಎಷ್ಟು ದಯನೀಯವಾದುದಾಗಿತ್ತು ಎಂಬುದು ತಿಳಿಯುತ್ತದೆ. ಲಕ್ಷ್ಮಣದೇವರ ನಗೆ ಬಂದು ಅಪರೂಪದ ಕಲ್ಪನೆ. ಶ್ರೀರಾಮಪಟ್ಟಾಭಿಷೇಕ ಸಮಯದಲ್ಲಿ ಲಕ್ಷ್ಮಣ ಗಹಗಹನೆ ನಗತೊಡಗಿದ. ಎಲ್ಲರೂ ತಮ್ಮನ್ನೇ ನೋಡಿ ಲಕ್ಷ್ಮಣ ನಗುತ್ತಿದ್ದಾನೆ ಎಂದು ಕೊಂಡರು.

ಕಲಕಲ ನಕ್ಕ ಲಕ್ಷ್ಮಣನಾಗ
ಖೇದವಾಯಿತು ಕಪಿಗಳಿಗೆ
ಕಿಲಕಿಲ ನಕ್ಕ ಲಕ್ಷ್ಮಣನಾಗ
ಖಿನ್ನನಾದನು ಅರಸನು ಕೂತ

ರಾಮನಿಗೆ ಆಗ ಎಷ್ಟು ಕೋಪ ಬಂದಿತೆಂದರೆ ಲಕ್ಷ್ಮಣನನ್ನು ಕೊಲ್ಲಲು ಒರೆಯಿಂದ ಕತ್ತಿ ಎಳೆದ. ಲಕ್ಷ್ಮಣ ತನ್ನ ನಗೆಗೆ ಕಾರಣ ಹೇಳಿದ. ಕಾಡಿನಲ್ಲಿರುವಾಗ ಲಕ್ಷ್ಮಣ ತನ್ನ ನಿದ್ರೆಯನ್ನು ಊರ್ಮಿಳೆಗೆ ಕೊಟ್ಟಿದ್ದ. ಶ್ರೀರಾಮನ ಸೇವೆಯಲ್ಲೇ ನಿರತನಾಗಿದ್ದ. ಈಗ ವನವಾಸ ಪೂರ್ತಿಯಾದ ಕೂಡಲೇ ನಿದ್ದೆ ತುಂಬಿ ಬರುತ್ತಿದೆ. ಪಟ್ಟಾಭಿಷೇಕ ಸಮಯದಲ್ಲೂ ತನಗೆ ನಿದ್ದೆ ಬರುವುದನ್ನು ನೋಡಿ ಲಕ್ಷ್ಮಣನಿಗೆ ನಗೆ ಬಂತು. ಈ ಕಾರಣ ಕೇಳಿ ಲಕ್ಷ್ಮಣನ ತ್ಯಾಗಬುದ್ಧಿಯ ಅರಿವಾಗಿ ರಾಮನಿಗೆ ನಾಚಿಕೆಯಾಯಿತು. ಲಕ್ಷ್ಮಣನನ್ನು ಕೊಲೆಮಾಡಬೇಕೆಂದುಕೊಂಡನು ತಾನೇ ಆತ್ಮಹತ್ಯೆ ಮಾಡಿಕೊಳ್ಳಲು ಸಿದ್ಧನಾದ.

ಭಾರತ, ಭಾಗವತ ಮುಂತಾದವುಗಳಿಗೆ ಸಂಬಂಧಿಸಿದ ಗೀತೆಗಳಲ್ಲಿ ಜಾನಪದರ ಅಪರೂಪದ ಕಲ್ಪನೆಗಳನ್ನು ನೋಡುತ್ತೇವೆ. 'ಧರ್ಮರಾಜನ ಜೂಜು' ಎಂಬ ಹಾಡಿನಲ್ಲಿ ದ್ರೌಪದಿ ದುರ್ಯೋಧನನೊಂದಿಗೆ ನೆತ್ತ ಆಡುವಳು.

"ರಾರಾಜ (ದುರ್ಯೋಧನ) ಕೈಯಿಂದ ಹಾಕಿದ ದಾಳ
ಪಾಂಚಾಲಿ ಕಾಲಿಂದ ತಳ್ಳಿದಳು ದಾಳ"

ದಾಳವನ್ನು ಕಾಲಿನಿಂದ ತಳ್ಳುತ್ತಿರುವ ಪಾಂಚಾಲಿಯ ನಾಟಕೀಯ ಚಿತ್ರಣ ಜಾನಪದರ ಅದ್ಭುತ ಕಲ್ಪನಾ ಸಾಮರ್ಥ್ಯಕ್ಕೆ ನಿದರ್ಶನ.

ತೆಲುಗಿನ ಪಲ್ನಾಟಿವೀರ ಚರಿತ್ರ ಮತ್ತು ಕಾಟಮರಾಜು ಕಥ ಜಗತ್ತಿನ ಜನಪದ ಮಹಾಕಾವ್ಯಗಳ ಸಾಲಿನಲ್ಲಿ ಪ್ರಥಮ ಸ್ಥಾನದಲ್ಲಿ ನಿಲ್ಲುತ್ತವೆ. ಇವೆರಡನ್ನೂ ಪೂರ್ತಿ ಹಾಡಬೇಕಾದರೆ ಒಂದು ತಿಂಗಳಾದರೂ ಬೇಕು. ಸುಮಾರು ೫೦,೦೦೦ ಸಾಲುಗಳಿರುವ ಈ ಕಾವ್ಯಗಳನ್ನು ಸಂಸ್ಕೃತ ಮಹಾಭಾರತಕ್ಕೆ ಹೋಲಿಸಬಹುದು.

ಬೊಬ್ಬಿಲಿಕಥ, ದೇಸಿಂಗು ರಾಜುಕಥ, ಚಿನ್ನಪರೆಡ್ಡಿ, ಸದಾಶಿವರೆಡ್ಡಿ, ಕುಮಾರ ರಾಮ ಮುಂತಾದವು ತೆಲುಗಿನ ಜನಪ್ರಿಯ ವೀರಕಾವ್ಯಗಳು. ಧರ್ಮಾಂಗದ ಚರಿತ್ರ, ಸಾರಂಗಧರ, ಬಾಲನಾಗಮ್ಮ, ಎಲ್ಲಮ್ಮಕಥ ಮುಂತಾದವು ಜನಪ್ರಿಯ ಕಥನಗೀತೆಗಳು.

ಗದ್ಯಕಥನ

ಆಂಧ್ರದ ಪುರಾಣ, ಐತಿಹ್ಯ ಮತ್ತು ಕಥೆಗಳಿಂದ ತೆಲುಗರ ನಂಬಿಕೆ, ಸಂಪ್ರದಾಯ, ಸಂಸ್ಕೃತಿ ತಿಳಿದುಬರುತ್ತವೆ. ದಕ್ಷಿಣಭಾರತದ ಬೇರೆ ಭಾಷೆಗಳಲ್ಲೂ ಈ ಗದ್ಯಕಥನಗಳನ್ನು ಹೋಲುವಂಥವು ಕಂಡುಬರುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಕೆರೆಗೆ ಹಾರವನ್ನು ಹೋಲುವ ಐತಿಹ್ಯಗಳು ಆಂಧ್ರದಲ್ಲೂ ಪ್ರಸಿದ್ಧವಾಗಿವೆ. ಅನಂತಪುರದ ಕೆರೆಯನ್ನು ಕುರಿತ ಐತಿಹ್ಯವೊಂದು ಹೀಗಿದೆ:

"ಅನಂತಪುರದ ಕೆರೆಗೆ ಎಷ್ಟು ಸಲ ಕಟ್ಟೆಕಟ್ಟಿದರೂ ಕಿತ್ತುಹೋಗುತ್ತಿತ್ತು ಗಂಗಾಭವಾನಿ ಒಬ್ಬಳ ಮೈಮೇಲೆ ಬಂದು ಗರ್ಭಿಣಿಯನ್ನು ಕಟ್ಟೆಯೊಳಗೆ ಇಟ್ಟು ಕಟ್ಟಿದರೆ ಅದು ನಿಲ್ಲುತ್ತದೆ ಎಂದು ಹೇಳಿದಳು. ಬುಕ್ಕರಾಯ ಸಮುದ್ರದ ಬಸಿರೆಡ್ಡಿ ಎಂಬವನ ಚಿಕ್ಕಸೊಸೆ ಮುಸಲಮ್ಮ ತುಂಬು ಗರ್ಭಿಣಿ. ಆಕೆ ತಾನೇ ಮುಂದಾಗಿ ಬಂದು ಆತ್ಮಾಹುತಿ ಮಾಡಿಕೊಂಡಳು. ಆಗ ಕಟ್ಟೆ ಶಾಶ್ವತವಾಗಿ ನಿಂತಿತು. ಈಗಲೂ ಮುಸಲಮ್ಮನಿಗೆ ಪೂಜೆಗಳು ಸಲ್ಲುತ್ತಿವೆ."

ಮುಂದೆ ಕೊಟ್ಟಿರುವ ಸಣ್ಣಕಥೆ ಒಂದು ಹಾಸ್ಯಕಥೆಯಂತೆ ಕಾಣುತ್ತದೆ. ಆದರೆ ಅದರಲ್ಲಿ ಇಬ್ಬಂದಿ ಪ್ರವೃತ್ತಿಯ ಒಬ್ಬ ವ್ಯಕ್ತಿ ಎಂಥ ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳುತ್ತಾನೆ ಎಂಬುದು ಚಿತ್ರಿತವಾಗಿದೆ. ವಿವೇಕವಿಲ್ಲದವನು ತಾನು ಬಯಸಿದ್ದನ್ನು ಪಡೆದರೂ ಅದನ್ನು ಅನುಭವಿಸಲಾರನೆಂಬ ಆಶೆಯ ಇದರಲ್ಲಿ ವ್ಯಕ್ತವಾಗಿದೆ.

"ಒಬ್ಬ ಬ್ರಾಹ್ಮಣ ಸ್ನಾನ ಮಾಡಲು ಹೋಗಿ ಸೂರ್ಯನಿಗೆ ನಮಸ್ಕಾರ ಮಾಡಿದಾಗ ಸೂರ್ಯ ಪ್ರತ್ಯಕ್ಷನಾದ. 'ನಿನಗೇನು ಬೇಕು ಬೇಡು' ಎಂದ. ಆ ಬ್ರಾಹ್ಮಣ

'ತನ್ನ ಹೆಂಡತಿಯನ್ನು ಕೇಳಿ ಹೇಳ್ತೀನಿ' ಅಂದ. ಮನೆಗೆ ಬಂದು ತನ್ನ ಹೆಂಡತಿಯನ್ನು 'ಸೂರ್ಯ ವರ ಬೇಡಿಕೊ ಅಂದ. ಏನನ್ನ ಕೇಳಲಿ ಹೇಳು' ಎಂದು ಕೇಳಿದ. ಆಗ ಅವನ ಹೆಂಡತಿ 'ಒಂದು ನೆನೆದರೆ ಎರಡಾಗಬೇಕು' ಎಂದು ವರ ಬೇಡು ಎಂದು ಸಲಹೆ ಯಿತ್ತಳು. ಸೂರ್ಯನನ್ನು ಬೇಡಿ ಅಂಥ ವರವನ್ನೇ ಪಡೆದ ಬ್ರಾಹ್ಮಣ.

ಮನೆಗೆ ಬಂದ ಬ್ರಾಹ್ಮಣ ಹಣ ತೆಗೆದುಕೊಂಡು ಬೇಳೆ, ಉಪ್ಪು ಇತ್ಯಾದಿ ಕೊಂಡು, ಮೂಟೆ ಕಟ್ಟಿ ಹೆಗಲ ಮೇಲೆ ಹಾಕಿಕೊಂಡ. ಆ ಮೂಟೆ ಎರಡಾಯಿತು. ಮತ್ತೆ ಹೆಗಲಿಗೆ ಹಾಕಿಕೊಂಡರೆ ನಾಲ್ಕಾಯಿತು. ಹೀಗೇ ಆಗುತ್ತಾ ಹೋಗಿ ಅವನ ಹೆಗಲು ಮುರಿದು ಹೋಯಿತು. ಮನೆಗೆ ಬಂದು ನೀರು ಕೇಳಿದ. ಹೆಂಡತಿ ನೀರು ಕೊಟ್ಟಳು. ಅದೂ ಎರಡಾಯಿತು. ಒಟ್ಟು ಒಂಬತ್ತು ಲೋಟ ನೀರು ಕುಡಿದ. ಕೊನೆಗೆ ಹೊಟ್ಟೆ ಬಿರಿದು ಸತ್ತ. ತನ್ನಿಂದಲೇ ಇಷ್ಟು ಕಷ್ಟ ಬಂತು ಎಂದು ಆಗ ಹೆಂಡತಿಗೆ ಅರಿವಾಗಿ ತುಂಬ ಖೇದವಾಯಿತು. ನಾಲ್ಕು ಜನ ಬಂದು ಹೆಣವನ್ನು ಮಸಣಕ್ಕೊಯ್ದು ಸುಟ್ಟರು. ಅವರು ಮನೆಗೆ ಬರುವ ಹೊತ್ತಿಗೆ ಇನ್ನೊಂದು ಹೆಣ ಇತ್ತು. ಅದನ್ನು ತೆಗೆದುಕೊಂಡುಹೋಗಿ ಕೆರೆಗೆ ಎಸೆದರು. ಮತ್ತೆ ಇನ್ನೊಂದು ಸಿದ್ಧವಾಗಿತ್ತು. 'ಎಷ್ಟು ಜನರನ್ನು ತೋರಿಸ್ತೀಯಾ ತಾಯಿ' ಎಂದರು. ಆಕೆ 'ನನಗೆ ಒಬ್ಬನೇ ಗಂಡ' ಎಂದಳು. ಮತ್ತೆ ಹೆಣವನ್ನು ತೆಗೆದುಕೊಂಡುಹೋಗಿ ಆಳವಾಗಿ ಗುಂಡಿ ತೋಡಿ ಹೂತರು. ಪುನಃ ಹಿಂತಿರುಗುವಷ್ಟರಲ್ಲಿ ಇನ್ನೊಂದು ಹೆಣ! ಅವರಿಗೆ ಬೇಸರವಾಗಿ 'ನಿನ್ನ ಹೆಣವನ್ನು ನೀನೇ ಇಟ್ಟುಕೋ' ಎಂದು ಹೇಳಿ ಹೊರಟು ಹೋದರು."

ಕೊನೆಗೂ ಈ ಸಮಸ್ಯೆ ಪರಿಹಾರವಾಗಲೇ ಇಲ್ಲ. ಎಂದರೆ ಆಸೆ ಅನಂತ, ಅದರಿಂದ ಆಗುವ ಅನಾಹುತಗಳೂ ಅನಂತ ಎಂದು ಈ ಕಥೆಯಲ್ಲಿ ಸೂಚಿತವಾಗಿದೆ.

ಗಾದೆ

ಇತರೆಡೆಗಳಲ್ಲಿರುವಂತೆ ಆಂಧ್ರದಲ್ಲೂ ಅಪಾರ ಗಾದೆಗಳಿವೆ. ದಕ್ಷಿಣ ಭಾರತದ ಭಾಷೆಗಳಲ್ಲಿ ಸಮಾನವಾಗಿರುವ ಗಾದೆಗಳ ಸಂಕಲನಗಳು ಪ್ರಕಟವಾಗಿವೆ. ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಸಾವಿರಾರು ಸಮಾನ ಗಾದೆಗಳಿವೆ. ಇವಲ್ಲದೆ ಆಂಧ್ರದ ಸಂಸ್ಕೃತಿಯನ್ನು ತಿಳಿಸುವಂಥ ಹಾಗೂ ಸ್ಥಳೀಯ ಪ್ರಾಧಾನ್ಯವಿರುವ ಗಾದೆಗಳು ಕೂಡ ಅಸಂಖ್ಯಾತವಾಗಿವೆ.

ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಸಮಾನವಾಗಿರುವ ಕೆಲವು ಗಾದೆಗಳು :

೧. ಹುಟ್ಟುಗುಣ ಸುಟ್ಟರೂ ಹೋಗಲ್ಲ
ಪುಟ್ಟುಕತೋ ವಚ್ಚಿನ ಗುಣಂ ಪುಡಕಲತೋಗಾನಿ ಪೋದು
೨. ನರಿಯ ಹೊಟ್ಟೆಯಲ್ಲಿ ಸಿಂಹದ ಮರಿ ಹುಟ್ಟೀತೇ ?
ನಕ್ಕ ಕಡಪುನ ಸಿಂಗಂ ಪುಟ್ಟುನಾ ?
೩. ನಿಂದೆ ಇಲ್ಲದೆ ಬೊಂದಿ ಹೋಗದು
ನಿಂದ ಲೇನಿದಿ ಬೊಂದಿ ಪೋದು

೪. ಶರಣರ ಗುಣ ಮರಣದಲ್ಲಿ ನೋಡು
ಮಂಚಿವಾಡಿಕಿ ಮರಣಮೇ ಸಾಕ್ಷಿ
೫. ಊರು ಹೋಗು ಅನ್ನುತ್ತೆ ಕಾಡು ಬಾ ಅನ್ನುತ್ತೆ
ಊರು ಪೊಮ್ಮಂಟುಂದಿ ಕಾಡು ರಮ್ಮಂಟುಂದಿ
೬. ಆನೆ ಇದ್ದರೂ ಸಾವಿರ ಸತ್ತರೂ ಸಾವಿರ
ಏನುಗು ಬತಿಕಿನಾ ವೆಯ್ಯಿ ಚಚ್ಚಿನಾ ವೆಯ್ಯಿ
೭. ಕುರುಡ ಕಣ್ಣು ಮುಚ್ಚಿದರೂ ಒಂದೇ ಬಿಟ್ಟರೂ ಒಂದೇ
ಗುಡ್ಡಿ ಕನ್ನು ಮೂಸಿನಾ ಒಕಟೇ ತೆರಚಿನಾ ಒಕಟೇ
೮. ಮೂಗಿರೋ ತನಕ ನೆಗಡಿ ತಪ್ಪದು
ಮುಕ್ಕುಂಡೇವರಕು ಪಡಿಸೆಮುಂಟುಂದಿ
೯. ಬಾಯಿ ಒಳ್ಳೇದಾದರೆ ಊರೂ ಒಳ್ಳೇದು
ನೋರು ಮಂಚಿದಯಿತೇ ಊರು ಮಂಚಿ
೧೦. ಹಾಡಿದ್ದೇ ಹಾಡೋ ಕಿಸಬಾಯಿ ದಾಸ
ಪಾಡಿಂದೇ ಪಾಡರಾ ಪಾಚಿಪಳ್ಳ ದಾಸರಿ

ಸಮಾನ ಅರ್ಥವಿರುವ ಗಾದೆಗಳು ಒಂದೊಂದು ಸಲ ಸ್ಥಳೀಯ ಪ್ರಾಧಾನ್ಯದಿಂದ ಹಾಗೂ ಪ್ರಾದೇಶಿಕತೆಯಿಂದ ಬೇರೆಯಾಗುವುದುಂಟು. ಉದಾಹರಣೆಗೆ 'ಮೇಲುಕೋಟಿ ಜಾತ್ರೇಲಿ ಬೋಳು ದಾಸಯ್ಯನ ಕಂಡ್ಯಾ ಅಂದನಂತೆ' ಎಂದು ಕನ್ನಡದಲ್ಲಿದ್ದರೆ 'ತಿರುಪತಿಲೋ ಬೋಡಿಗುಂಡುನು ವೆತಿಕಿನಟ್ಲು' (ತಿರುಪತಿಯಲ್ಲಿ ಬೋಳು ತಲೆ ಹುಡುಕಿದಂತೆ) ಎಂದು ತೆಲುಗಿನಲ್ಲಿದೆ. ಹಾಗೆಯೇ 'ತಿರುಪತಿ ಕ್ಷೌರ' ಎಂಬುದು ತಿರುಪತಿಯಲ್ಲಿ ನಡೆಯುವ ಮೋಸಕ್ಕೆ ಪ್ರತಿಕ್ರಿಯೆ. 'ಪೆನುಗೊಂಡಕು ಪಿಲ್ಲನಿವ್ವರಾದು ರೊದ್ದಾನಿಕಿ ಎದ್ದುನಿವ್ವರಾದು' (ಪೆನುಗೊಂಡಕ್ಕೆ ಹೆಣ್ಣು ಕೊಡಬಾರದು ರೊದ್ದಕ್ಕೆ ಎತ್ತು ಕೊಡಬಾರದು), 'ಎಲಮರ್ರುಕು ಎದ್ದು ನಿವ್ವರಾದು ಪಾಮರ್ರುಕು ಪಿಲ್ಲನಿವ್ವರಾದು' ಇತ್ಯಾದಿ ಗಾದೆಗಳಲ್ಲಿ ಸ್ಥಳೀಯತೆ ಕಂಡು ಬರುತ್ತದೆ. ಈ ಗಾದೆಯಂಥದು ಕನ್ನಡದಲ್ಲಿ ಹೀಗಿದೆ: "ಹೊಳೆಯಿಂದಾಚೆಯ ಹೆಣ್ಣು ಬೇಡ. ತೊರೆದಂಡೆ ಹೊಲ ಬೇಡ."

ಒಗಟು

ತೆಲುಗಿನಲ್ಲಿ ಒಗಟುಗಳನ್ನು 'ಪೊಡಪುಕಥ' ಎನ್ನುವರು. ಕೆಲವು ಕಡೆ 'ಶಾಸ್ತ್ರ' ಎಂದೂ ಹೇಳುತ್ತಾರೆ. ತೆಲುಗು ಸಾಹಿತ್ಯ ಅನೇಕ ಕೃತಿಗಳಲ್ಲೂ ಒಗಟುಗಳು ಸ್ಥಾನ ಪಡೆದಿವೆ. ಒಗಟುಗಳಲ್ಲಿ ಶಬ್ದದಿಂದ ತಿಳಿಯುವಂಥವು, ಅರ್ಥದಿಂದ ತಿಳಿಯುವಂಥವು, ಯೋಚಿಸಿ ಹೇಳಬೇಕಾದಂಥವು, ವಿವೇಕದಿಂದ ವಿಶ್ಲೇಷಿಸಬೇಕಾದಂಥವು ಇರುತ್ತವೆ.

ಶಬ್ದ ಚಮತ್ಕಾರದ ಒಗಟು:

ವಂಕರಟಿಂಕರ ಶೊ (ಶೊಂಠಿ)
ವಾನಿ ತಮ್ಮುಡು ಅ (ಅಲ್ಲಂ)

ನಲ್ಲಗುಡ್ಲ ವಿ (ವಿರಿಯಂ)
ನಾಲುಗು ಕಾಳ್ಳ ಮೇ (ಮೇಕೆ)
ಅಂಕುಡೊಂಕು ಶೊ (ಒಣ ಶುಂಠಿ)
ಅವನ ತಮ್ಮ ಅ (ಹಸಿಶುಂಠಿ)
ಕಪ್ಪು ಕಣ್ಣುಗುಡ್ಡೆ ವಿ (ಮೆಣಸು)
ನಾಲ್ಕು ಕಾಲಿನ ಮೇ (ಮೇಕೆ)

ಕೆಲವು ಒಗಟುಗಳಲ್ಲಿ ಶಬ್ದಗಳು, ಅವುಗಳ ಹೊಂದಾಣಿಕೆ, ಅವುಗಳ ವಾಚ್ಯಾರ್ಥ ಕೂಡ ರಮಣೀಯವಾಗಿರುತ್ತವೆ.

'ಗುಡಿ ತುಂಬ ಮುತ್ತುಗಳು ಗುಡಿಗೆ ಬೀಗ'

ದಾಳಿಂಬೆಯನ್ನು ಸೂಚಿಸುವ ಈ ಒಗಟು ಮನೋಹರವಾದದ್ದು. ಗುಡಿ ತುಂಬ ಮುತ್ತು ತುಂಬಿ ಬೀಗ ಹಾಕುವುದು ಗುಡಿಯ ಪಾವಿತ್ರ್ಯವನ್ನು ಸೂಚಿಸುತ್ತದೆ. ಕೆಲವು ಒಗಟುಗಳು ವರ್ಣನಾತ್ಮಕವಾಗಿರುತ್ತವೆ.

ಬಾವಿಯೊಳಗಿನ ಹಾವು, ನುಣ್ಣನೆಯ ಹಾವು
ಪಟ್ಟೆಪಟ್ಟೆ ಹಾವು, ಉದ್ದುದ್ದನೆ ಹಾವು
ಕೇರಿಕೇರಿಗೆ ಹಾವು, ವಾಲಾಡುವ ಹಾವು
ಸಾಲುಸಾಲಿನ ಹಾವು, ಒಳ್ಳೊಳ್ಳೆಯ ಹಾವು
ಹಾವನ್ನು ಹಿಡಿದು ಪಲ್ಯ ಮಾಡಿದರೆ
ಹಲ್ಲಿಗೂ ಸಿಗೋದಿಲ್ಲ (ಪಡವಲಕಾಯಿ)

ಕೆಲವು ಸುಂದರವಾದ ಒಗಟುಗಳು :

೧. ಅಂಗೈಯ ಪಟ್ಟಣಕ್ಕೆ ಅರುವತ್ತು ಬಾಗಿಲು —ಬಾಚಣಿಗೆ
೨. ಕಪ್ಪು ಕೆರೆಯಲ್ಲಿ ಕೆಂಪು ತಾವರೆ —ದೀಪ
೩. ಖಂಡುಗ ರಾಗಿಗೆ ಒಂದೇ ಕಲ್ಲು —ಚಂದ್ರ
೪. ಸೀತಮ್ಮ ಬಾವೀಲಿ ಮುಳುಗಿ ಮುಳುಗಿ ಎದ್ದಳು —ಬೆಣ್ಣೆ
೫. ಅವ್ವ ಸಾಕಿದೆ, ಸಲುಹಿದೆ, ನೀನಿಟ್ಟುಕೊಂಡರೂ ಸರಿ, ಬೇರೆಯವರಿಗೆ ಕೊಟ್ಟರೂ ಸರಿ, ಬೆಳಗಾದರೆ ಕೆಲಸಕ್ಕೆ ಬರೋದಿಲ್ಲ —ಮಲ್ಲಿಗೆ ಹೂವು
೬. ಒಂಟಿ ಕಂಬದ ಮಾಡಿ ಮೇಲೆ ಒಪ್ಪಾದ ಚಪ್ಪರ ತೇಪು ನೀರಿನ ಮಡಕೆಯೊಳಗೆ ಸವಿಯಾದ ಕೆನೆ —ಕೊಬ್ಬರಿ

ತೆಲುಗು ಜನಪದ ಸಾಹಿತ್ಯದ ಕೆಲವು ಸುಂದರವಾದ ಅಂಶಗಳನ್ನು ಮೇಲಿನ ಉದಾಹರಣೆಗಳು ತೋರಿಸಿಕೊಡುತ್ತವೆ. ಜನಪದ ಸಾಹಿತ್ಯ ಜನಜೀವನದಲ್ಲಿ ಮಹತ್ವದ ಪಾತ್ರ ವಹಿಸುತ್ತದೆಂಬುದಕ್ಕೆ ಇವು ಸಾಕ್ಷಿಯಾಗಿವೆ.

ಶ್ರೀಸಾಮಾನ್ಯ ಉವಾಚ—ಸಂಜೆಗಣ್ಣಿನ ಹಿನ್ನೋಟ

ಪ್ರೊ|| ಎ. ಎನ್. ಮೂರ್ತಿರಾವ್

ಮುಂದುವರಿದುದು

ವಿರೋಧಶೀಲತೆಯಿಂದ ವಿಚಾರಶೀಲತೆಯೆಡೆಗೆ

ನನ್ನ 'ಹಿಂಡೋಳಲೀಲೆ'—ಮಾನಸಿಕ ಉಯ್ಯಾಲೆ—ಉಯ್ಯಾಲೆಗೆ ಸಹಜವಾದ ಪ್ರಕೃತಿನಿಯಮವನ್ನು ಹೇಗೋ ಮುರಿದು ನನ್ನನ್ನು ಪಶ್ಚಿಮದ ಕಡೆಗೇ ಹೆಚ್ಚಾಗಿ ತೂಗಿಸುತ್ತಿತ್ತು ಎಂದು ಹಿಂದೆ ಸೂಚಿಸಿದ್ದೇನೆ. ಬಹುಶಃ ಅದು ನಾನು ಭಾವಿಸಿದ್ದಕ್ಕಿಂತ ಹೆಚ್ಚು ಸತ್ಯ. ಆದಕ್ಕೆ ಒಂದು ಕಾರಣ: ಪಾಶ್ಚಾತ್ಯ ಸಂಸ್ಕೃತಿ ನಮಗೆ—ಅಂದರೆ ವ್ಯಕ್ತಿಗಳಿಗೆ, ರಾಜ್ಯಕ್ಕಲ್ಲ—ಹೆಚ್ಚು ಸ್ವಾತಂತ್ರ್ಯ ಕೊಡುತ್ತದೆ ಎಂಬ ಭಾವನೆ. ನಮ್ಮಲ್ಲಿರುವಂತೆ ಅವರಲ್ಲೂ ಒಂದಲ್ಲ ಒಂದು ಬಗೆಯ 'ರಿಚ್ಯುಯಲ್'—ಸಾಂಪ್ರದಾಯಿಕವಾಗಿ ಬಂದ ಆಚರಣೆ, ವಿಧಿ ನಿಷೇಧಗಳು—ಇದ್ದೇ ಇರಬೇಕು ಎಂಬುದು ನನಗೆ ತೋರಲಿಲ್ಲ. ಸಂಪ್ರದಾಯವನ್ನು ವಿರೋಧಿಸಿ ನನಗೆ ನಾನೇ ಬೇಕಾದಷ್ಟು ಪ್ರಶ್ನೆ ಹಾಕಿಕೊಂಡೆ ಎಂದು ಹೇಳಿದೆನಷ್ಟೆ. ಆದರಿಂದ ನಾನು ಆಗಲೇ ಬಹಳ ವಿಚಾರಪರನಾಗಿಬಿಟ್ಟಿದ್ದೆ ಎಂಬ ಭಾವನೆ ಬರಬಹುದು. ವಾಸ್ತವವಾಗಿ ಅಲ್ಪಸ್ವಲ್ಪ ವಿಚಾರಪರತೆ ಇದ್ದಿರಬಹುದಾದರೂ ನನ್ನ ಪ್ರಶ್ನೆಗಳಲ್ಲಿ ಬಹುಭಾಗ ಬಂದದ್ದು ಸುಖಾಭಿಲಾಷೆಯಿಂದ; ಯಾವ ತಡೆಯನ್ನೂ ಯಾವ ಕಷ್ಟವನ್ನೂ ಸಹಿಸದ ಮನೋವೃತ್ತಿಯಿಂದ. ಬೆಳೆಯುತ್ತಿರುವ ಹಕ್ಕಿಗೆ ಗೂಡನ್ನು ಬಿಟ್ಟು ಹಾರಿಹೋಗುವ ಆತುರವಿರುತ್ತದೆ ನನಗೆ ಸಂಪ್ರದಾಯದ ಗೂಡನ್ನು ಬಿಟ್ಟು ಹಾರಿಹೋಗುವ ಆತುರ. ಹದಿ ವಯಸ್ಸಿನ ಪಡ್ಡೆ ಹುಡುಗರಿಗೆ ದಂಗೆಯೇಳುವ ಪ್ರವೃತ್ತಿ ಸಹಜವಾದದ್ದು ತಾನೆ! ನನ್ನ ದಂಗೆಗೆ ಆಲೋಚನಾಪರತೆಗಿಂತ ಏತಿ ಎಂದರೆ ಪ್ರೇತಿ ಎನ್ನುವ ಪ್ರವೃತ್ತಿಯೇ ಕಾರಣ ಎನ್ನಿಸುತ್ತದೆ. ಒಂದು ಸಾರಿ ಅನೇಕ

ದಲ್ಲಿ ನನ್ನ ಸೋದರ ಸೊಸೆ ಗಿರಿಜಳ ಮನೆಯಲ್ಲಿದ್ದಾಗ ಅವಳು ತನ್ನ ಆರೇಳು ವರ್ಷದ ಮಗನಿಗೆ "ಆ ಪುಸ್ತಕ ಎತ್ತಿ ಮೇಜಿನ ಮೇಲಿಡು" ಎಂದು ಹೇಳಿದಳು. ಆ ಹುಡುಗ "I don't have to do it" ಎಂದ! ಅದೇನೂ ಕಷ್ಟದ ಕೆಲಸವಲ್ಲ. ಅವನಿಗೇ ತೋರಿದ್ದರೆ ಎತ್ತಿ ಇಡುತ್ತಿದ್ದನೇನೊ. ಆದರೆ ತಾಯಿಯ ಆಜ್ಞೆ ಬಂದಾಗ "ಹಾಗೇಕೆ ಮಾಡಬೇಕು ಎನ್ನಿಸಿತು." ಆಜ್ಞೆಯನ್ನು ಪಾಲಿಸದೆ ಇರುವ ಹಕ್ಕು ತನಗಿದೆ ಎಂಬುದನ್ನು ಸ್ಪಷ್ಟಪಡಿಸಬೇಕು ಎನ್ನಿಸಿತು.

ನನ್ನಲ್ಲೂ ಇಂಥ ಪ್ರವೃತ್ತಿ ಇದ್ದಿರಬೇಕು. ಹಿಂದಿನವರು ವಿಧಿಸಿದ ಆಚಾರಗಳು ನಮ್ಮ ಹುಡುಗತನದ ಆಟಗಳಿಗೆ ತಡೆಹಾಕುವಂಥವು. ಬೆಳಗ್ಗೆ ಎದ್ದೊಡನೆ ಏನಾದರೂ ತಿಂಡಿ ತಿಂದು ಹೊಳೆಗೆ ಹೋಗಿ ಈಜಬೇಕು ಎಂಬ ಆತುರವಿರುವಾಗ "ಸೂರ್ಯೋದಯದ ಹೊತ್ತಿಗೆ ನೀನು ಸಂಧ್ಯಾವಂದನೆ ಮಾಡಿ ಅರ್ಘ್ಯ ಕೊಡುತ್ತಿರಬೇಕು" ಎಂದರೆ ಹಿತವಾದೀತೆ? ಆಗ ಹಿರಿಯರ ಮಾತನ್ನು ಮೀರುವುದಕ್ಕೆ ವಿಚಾರಪರತೆಯೇನೂ ಬೇಕಿಲ್ಲ. ಸೂತಕಕ್ಕೆ ಸಂಬಂಧಪಟ್ಟ ನಿಯಮಗಳನ್ನು ಮುರಿಯುವುದಕ್ಕೂ ಅಷ್ಟೇ—ಬರೀ ಚಾಪೆಯ ಮೇಲೆ ಮಲಗಿದರೆ ಮೈ ನೋಯುತ್ತದೆ. ನಿಯಮವನ್ನು ಮುರಿದು ಸುಪ್ಪತ್ತಿಗೆಯ ಮೇಲೆ ಮಲಗುವುದು ಕೇವಲ ಸುಖದ ಇಚ್ಛೆಯಿಂದ. ನನ್ನ ಹದಿ ವಯಸ್ಸಿನ ಹವ್ಯಾಸಗಳು ಎರಡು ಬಗೆಯವು: ಮನೆಯ ಹೊರಗೆ (ಅಕ್ಕಿಹೆಬ್ಬಾಳಿಗೆ ಹೋದಾಗ) ಈಜುವುದು, ಮರ ಹತ್ತುವುದು, ತೋಟದಲ್ಲಿ (ಕದ್ದು) ಎಳನೀರು ಕುಡಿಯುವುದು, ಆಲೆಮನೆಯಲ್ಲಿ ಬಿಸಿ ಬೆಲ್ಲ ಸವಿಯುವುದು ಇತ್ಯಾದಿ. ಮನೆಯ ಒಳಗೆ—ಸಿಕ್ಕಿದ ಪುಸ್ತಕಗಳನ್ನೆಲ್ಲ ಓದುವುದು. ಹಿರಿಯರು ವಿಧಿಸಿದ ಆಚಾರಗಳು ಇವುಗಳೊಡನೆ ಸ್ಪರ್ಧಿಸಲಾರದೆ ಹೋದುವು. ಅವರು ನಿಯಮಗಳನ್ನು ಅತಿ ಮಾಡಿದರೆಂದೂ ಒಪ್ಪಬೇಕು. ಊಟ ಮಾಡುತ್ತಿದ್ದಾಗ ಹಿರಿಯರೊಬ್ಬರು ತುತ್ತು ತುತ್ತಿಗೂ ಒಂದೊಂದು ಸಲ " 'ರಾಮ' ಅನ್ನು, 'ಕೃಷ್ಣ' ಅನ್ನು" ಎಂದು ಹೇಳುತ್ತಿದ್ದದ್ದು ನೆನಪಿದೆ. ಅದು ಅವರ ವಯಸ್ಸಿನವರಲ್ಲಿ ಸಹಜವಾದದ್ದೇ. 'ಹರಿಸ್ಮರಣೆ ಮಾಡೋ ನಿರಂತರ,' 'ನರಜನ್ಮ ಬಂದಾಗ ನಾಲಿಗೆ ಇರುವಾಗ, ಕೃಷ್ಣಾ ಎನಬಾರದೆ!'—ಈ ಸಂಪ್ರದಾಯದಲ್ಲಿ ಬೆಳೆದವರು ಅವರು. ಕಿರಿಯರಲ್ಲಿ ದೈವಭಕ್ತಿಯನ್ನು ಬೆಳಸಬೇಕು ಎಂಬ ಉದ್ದೇಶವೂ ಅವರಲ್ಲಿ ನಿರೀಕ್ಷಿಸಬೇಕಾದದ್ದೇ. ಆದರೆ ನನ್ನ ವಯಸ್ಸಿನವರ ದೃಷ್ಟಿ ಬೇರೆ.

'ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ' ಎಂದು ದಾಸರಾಯರು ಅಪ್ಪಣೆ ಕೊಡಿಸಿದ್ದಾರೆ. ಆ ಬಗೆಯ ಸಕ್ಕರೆ ಪಾಯಸಗಳನ್ನು ಸಂಪೂರ್ಣವಾಗಿ ದಾಸರಿಗೇ ಬಿಟ್ಟುಕೊಡಲು ನಾನು ಸಿದ್ಧನಿದ್ದೆ. ನನ್ನ ಮಟ್ಟಿಗೆ ರಾಮನಾಮದ ಬದಲು ಸಾದಾ ಕರಿದ ಶ್ಯಾವಿಗೆ ಪಾಯಸ ಕೊಟ್ಟರೆ ಸಾಕು. ಅದಕ್ಕೆ ಹಾಕುವ ಸಕ್ಕರೆ ಕೃಷ್ಣನಾಮವಾಗಬೇಕಾಗಿಲ್ಲ. ಬೂರಾ ಸಕ್ಕರೆ ಸಾಕು— ಸಾಕು ಎನ್ನುವುದೇನು, ಅದೇ ಬೇಕು. (ಈಚೆಗೆ ಬೂರಾ ಸಕ್ಕರೆಯ ಹೆಸರು ಕೇಳಿಬರುತ್ತಿಲ್ಲ. ಕಾಲ ಕೆಟ್ಟುಹೋಯಿತು! ಆಗ ಎಲ್ಲೆಲ್ಲೂ ಸಿಕ್ಕುತ್ತಿದ್ದ ಕೋಲಾರ್ ಬೂರಾ ಸಕ್ಕರೆಗೆ ವಿಶಿಷ್ಟವಾದ ರುಚಿಯಿತ್ತು. ಅದನ್ನು ಕಳ್ಳತನದಲ್ಲಿ—ತುಪ್ಪದಲ್ಲಿ ಕಲಸಿ ತಿನ್ನುವುದೆಂದರೆ—ಆ ಸಂತೋಷ ಅವರ್ಣನೀಯ!) ನಾನು ಪಾಯಸ ಸವಿಯುವಾಗ ಶ್ರದ್ಧೆಯಿಂದ ಅದೊಂದನ್ನೇ ಸವಿಯುತ್ತೇನೆ. One

thing at a time and that done well/Is a very good thing as many can tell. ಹಿರಿಯರ ಸಂತೋಷಕ್ಕಾಗಿ ನಾನು ರಾಮಕೃಷ್ಣ ಎಂದದ್ದು ಉಂಟು. ಅದರಿಂದ ಬಾಯಲ್ಲಿ ನೀರು ಊರಿದ್ದರೆ ಅದರ ನೆನಪೇನೂ ಇಲ್ಲ!

ನನ್ನ ಅನಾಚಾರಕ್ಕೂ ಮಾವನವರ ಪ್ರತಿಕ್ರಿಯೆ

ಎಂ. ಎ. ಕ್ಲಾಸಿಗೆ ಸೇರುವ ವೇಳೆಗೆ ಬ್ರಾಹ್ಮಣರು ಆಚರಿಸಬೇಕಾದ ರಿಚ್ಯುಯಲ್' (ritual) ಎಲ್ಲವನ್ನೂ ಹೆಚ್ಚು ಕಡಮೆ ಬಿಟ್ಟದ್ದಾಗಿತ್ತು. ಮೊದಮೊದಲು ಮಾವನವರ ಮನೆಗೆ ಹೋದಾಗ ಅವರು ನನ್ನ ಸಂಧ್ಯಾವಂದನೆಗೆಂದು ಪಂಚಪಾತ್ರೆ—ಉದ್ಧರಣೆ—ಅರ್ಘ್ಯ ಪಾತ್ರೆಗಳನ್ನು ತಂದಿಡುತ್ತಿದ್ದರು; ನಾನು ಹಿಂದೆಯೇ ಬಣ್ಣಿಸಿರುವ ಸಂಧ್ಯಾವಂದನೆಯ ನಾಟಕವನ್ನು ಅಲ್ಲಿಯೂ ಆಡಿದೆ. ನಾನು ಅದಕ್ಕಾಗಿ ಬಳಸಿದ ಕಾಲ ಕ್ರಮೇಣ ಕಡಿಮೆಯಾಗುತ್ತ ಬಂದದ್ದನ್ನು ಕಂಡೋ ಏನೊ—ಪಾತ್ರೆಗಳನ್ನು ತಂದಿಡುವ ಪದ್ಧತಿ ನಿಂತುಹೋಯಿತು. ಮಾವನವರು ನನ್ನ ವ್ರಾತ್ಯ ಮನೋವೃತ್ತಿಯನ್ನು ಕಂಡು ನೊಂದುಕೊಂಡಿರಬೇಕು. ಆದರೆ ತಮ್ಮ ಅಸಮಾಧಾನವನ್ನು ಯಶಸ್ವಿಯಾಗಿ ನುಂಗಿಕೊಂಡರು—ಮತ್ತೇನು ಮಾಡಿಯಾರು! ಅಳಿಯ-ದೇವರನ್ನು (!!) ಎದುರುಹಾಕಿಕೊಳ್ಳುವುದು ಲೌಕಿಕವಲ್ಲ! ಆದರೆ ಅವರ ಸಂಯಮಕ್ಕೂ ಸಿಲುಕದಷ್ಟು ಎತ್ತರಕ್ಕೆ ಏರಿತು, ನನ್ನ ಅನಾಚಾರ. ಬಿ. ಎ. ಪಾಸಾದ ಮೇಲೆ ಕೂಡ ನನ್ನ ತಲೆಯ ಹಿಂಭಾಗದಲ್ಲಿ ನೀಳವಾದ ಕೂದಲನ್ನು ಬಂಧಿಸಿಟ್ಟ 'ಬೊಂಬಾಯಿಗಂಟು' ಶೋಭಿಸುತ್ತಿತ್ತು. ಗಂಟುಹಾಕುವಷ್ಟು ಕೂದಲು ಇದ್ದರೇ ಚೆನ್ನ ಎಂದು ನಾನು ವಾದಿಸುತ್ತಿದ್ದದ್ದೂ ಉಂಟು—ಹಿರಿಯರ ಸಂತೋಷಕ್ಕಾಗಿ ಮಾತ್ರವಲ್ಲ, ನಂಬಿಕೆಯಿಂದ ಕೂಡ. ಎಂ. ಎ. ಕ್ಲಾಸಿಗೆ ಸೇರಿ ಒಂದೆರಡು ತಿಂಗಳು ಕಳೆಯುವುದರೊಳಗೇ ನನ್ನ ಅಭಿಪ್ರಾಯ ಬದಲಾಯಿಸಿತು. ಅಭಿರುಚಿಯೇ ಬದಲಾಯಿಸಿತೋ ಅಥವಾ ಆಗಿನ ಫ್ಯಾಷನ್ನಿಗೆ (fashion) ತಕ್ಕಂತೆ ಕುಣಿದೆನೋ ಹೇಳಲಾರೆ. ಇಂಗ್ಲಿಷಿನಲ್ಲಿ keeping up with the Joneses ಎಂಬ ಮಾತಿದೆ. ಜೋನ್ಸ್ ಮಹಾಶಯನ ಮನೆಯವರು (ಅಂದರೆ ನೆರೆಹೊರೆಯವರು) ಮಾಡಿದ್ದನ್ನೆಲ್ಲ ನಾವೂ ಮಾಡಬೇಕು—ನಾಗರಿಕತೆಯಲ್ಲಿ ನಾವು ಹಿಂದೆ ಬಿದ್ದೆವು ಎನ್ನಿಸಿಕೊಳ್ಳುವುದುಂಟೆ? ನನ್ನ ಜೊತೆಯ ಜೋನ್ಸ್‌ಗಳೆಲ್ಲ 'ಕ್ರಾಪ್' ಬಿಟ್ಟಿದ್ದರು. ಯಾವುದೋ ಶುಭಲಗ್ನ ನನ್ನ ಅರಿವಿಲ್ಲದೆಯೇ ಕೂಡಿಬಂದಿರಬೇಕು—ನಾನು ಜುಟ್ಟನ್ನು ಕತ್ತರಿಸಿ ಕ್ರಾಪ್ ಮಾಡಿಸಿಕೊಂಡು ಅನಾಚಾರದ ಕೊನೆಯ ಹಂತವನ್ನು ಹತ್ತಿದ್ದಾಯಿತು. ಜುಟ್ಟಿನ ಸುದೃಢವಾದ ಅಸ್ತಿಭಾರವಿಲ್ಲದೆ ಮೊದಲೇ ನರಳಿ ನರಳಿ ಕೃಶವಾಗಿದ್ದ ಸನಾತನಧರ್ಮ ಕುಸಿದುಬಿತ್ತು. ನವರಾತ್ರಿಯ ಕಾಲದಲ್ಲಿ (ಆಗ ಶಿವಮೊಗ್ಗದಲ್ಲಿದ್ದ) ಮಾವನವರು ಬಂದು ನೋಡುತ್ತಾರೆ—ತಮ್ಮ ನೆಚ್ಚಿನ (ಈ ಪದ ಕ್ಲೀಷೆ, ಅಷ್ಟೆ. ಅವರು ನನ್ನನ್ನು ನೆಚ್ಚಿರಲಾರರು) ಅಳಿಯ ರೌರವಾದಿ ನರಕಗಳ ಹಾದಿಯನ್ನು ತುಳಿದು ಮುಗಿಸಿದ್ದಾನೆ! ಈ ಕೊನೆಯ ಪೆಟ್ಟು ಅವರ ಸಂಯಮವನ್ನು ಸಡಿಲಿಸಿತು. "ನೀವು ಶಾಸ್ತ್ರ ಪ್ರಕಾರ ಮಾಡಬೇಕಾದ ಕರ್ಮ ಒಂದನ್ನೂ ಮಾಡುತ್ತಿಲ್ಲ. ಹೋಗಲಿ, ಅದು ಲೋಪ ಮಾತ್ರವಾಯಿತು. ಮಾಡಬಾರದ್ದನ್ನು ಮಾಡಬೇಕಾಗಿತ್ತೆ!

ಇದು ಲೋಪ ಮಾತ್ರವಲ್ಲ, ದೋಷ!" ಎಂದು ನಿಟ್ಟುಸಿರು ಬಿಟ್ಟರು. ಯಾವ ದೇವರೋ ಕಾಣೆ—ಕೊಂಕು ಮಾತಾಡದಿರುವಷ್ಟು ಸೌಜನ್ಯವನ್ನು ನನಗೆ ಕರುಣಿಸಿದ. ನಾನು "ಲೋಪದೋಷ ಪ್ರಾಯಶ್ಚಿತ್ತಾರ್ಥವಾಗಿ ಸಾಮತ್ರಯ ಮಂತ್ರ ಜಪಿಸಿದರಾಯಿತು" ಎಂದದ್ದು ಮನಸ್ಸಿನಲ್ಲಿ, ಬಾಯಲ್ಲಿಲ್ಲ. ಬಾಯಲ್ಲಿ "ಎಂ. ಎ. ಕ್ಲಾಸಿನಲ್ಲಿ ಜುಟ್ಟಿಟ್ಟು ಕೊಂಡಿದ್ದವನು ನಾನೊಬ್ಬನೇ. ಸಹಪಾಠಿಗಳ ಹಾಸ್ಯಕ್ಕೆ ಗುರಿಯಾಗಲಾರೆ. ಅದಕ್ಕಾಗಿ ಕ್ರಾಪ್ ಮಾಡಿಸಿಕೊಂಡೆ" ಎಂದು ಸತ್ಯದ ಮಾತನ್ನೇ ಆಡಿದೆ. ಅವರೂ, ಪಾಪ, ಸಮಾಧಾನ ತಂದುಕೊಂಡು "ಅದೂ ನಿಜ ಅನ್ನಿ" ಎಂದರು.

ಕ್ರಾಪ್ ಮಾಡಿಸಿಕೊಂಡದ್ದಕ್ಕೆ ಕಾರಣ ಅಭಿರುಚಿ ಮತ್ತು ಫ್ಯಾಷನ್ನೇ ಹೊರತು ವೈಚಾರಿಕತೆಯಲ್ಲ ಎಂಬುದು ಸ್ಪಷ್ಟವಾಗಿಯೇ ಇದೆ. ಹೈಸ್ಕೂಲಿನಲ್ಲಿದ್ದ ಕಾಲದಲ್ಲಿ ನಾನು ಮಾಡಿದ 'ಅನಾಚಾರ'ಗಳಲ್ಲಿ ಕೆಲವಕ್ಕಾದರೂ ವೈಚಾರಿಕತೆಯ ಮೆರುಗು ಕೊಡುವ ಪ್ರಯತ್ನ ಮಾಡಿದ್ದೆನೆಂದು ತೋರುತ್ತದೆ. ಎಂ. ಎ. ಕ್ಲಾಸಿಗೆ ಸೇರಿದ ಮೇಲೆ ಅವೆಲ್ಲದರ ಮೇಲೂ ವಿಚಾರಶಕ್ತಿ ಆಡುವಂತಾಯಿತು. ಹಿಂದೆ ಸಂಪ್ರದಾಯವನ್ನೂ ಮುರಿಯುವುದರಲ್ಲಿ ಒಂದು ಬಗೆಯ 'ಖುಷಿ' ಇದ್ದಿರಬೇಕು. ಈಗ ಸಂಪ್ರದಾಯವನ್ನು ಉಪನಿಷತ್ತುಗಳಂಥ 'ಪ್ರಮಾಣ'ಗಳನ್ನೂ ಸಂಶಯ ದೃಷ್ಟಿಯಿಂದ ನೋಡಿ 'ಇವನ್ನು ಒಪ್ಪಬಹುದೆ?' ಎಂದು ಪ್ರಶ್ನೆ ಹಾಕುವುದು ಕರ್ತವ್ಯ ಎಂಬ ಭಾವನೆ ಬಂದಂತಾಯಿತು. ಇದು ನನ್ನ ಓದಿನ ಪ್ರಭಾವ; ಮುಖ್ಯವಾಗಿ ತತ್ವಶಾಸ್ತ್ರದ ಪ್ರಭಾವ. ಸ್ವತಂತ್ರ ವಿಚಾರವಿಲ್ಲದೆ ಸತ್ಯಾನ್ವೇಷಣೆ ಸಾಧ್ಯವಲ್ಲ. ಸಂಶಯ ದೃಷ್ಟಿಯಿಲ್ಲದೆ, 'ಇದು ಸರಿಯೆ?' ಎಂದು ಪ್ರಶ್ನೆ ಹಾಕದೆ, 'ಪ್ರಮಾಣ' ಎನ್ನಿಸಿಕೊಂಡದ್ದನ್ನು ನೆಚ್ಚಿದರೆ ನಮ್ಮ ನಂಬಿಕೆ ಕುರುಡು ನಂಬಿಕೆಯಾಗುತ್ತದೆ. ಫ್ರೆಂಚ್ ತತ್ವಜ್ಞ ಡೇಕಾರ್ಟ್ (Destcartes) ನಿರ್ದಾಕ್ಷಿಣ್ಯವಾಗಿ ಎಲ್ಲವನ್ನೂ ಸಂಶಯಕ್ಕೆ ಗುರಿಮಾಡಿದ. ಕೊನೆಗೆ "ನಾನು ಆಲೋಚನೆ ಮಾಡುತ್ತಿದ್ದೇನೆ. ಆದ್ದರಿಂದ ನಾನು ಇರುವುದು ಸತ್ಯ" ಎಂದುಕೊಂಡು ಅಲ್ಲಿಂದ ತತ್ವಾನ್ವೇಷಣೆಯನ್ನು ಮುಂದುವರಿಸಿದ: ಇಂಗ್ಲೆಂಡಿನ ತತ್ವಜ್ಞ ಹ್ಯೂಮ್‌ಗೆ (Hume) ಕ್ಯಾಂಟ್ (Kant, ಜರ್ಮನಿಯ ತತ್ವಜ್ಞ) ಕೊಟ್ಟ ದೊಡ್ಡ ಪ್ರಶಸ್ತಿಯೆಂದರೆ: ವಿಚಾರರಹಿತವಾದ ಕುರುಡು ನಂಬಿಕೆಯ (dogmatic slumber) ನಿದ್ದೆಯಲ್ಲಿದ್ದ ಯೂರೋಪನ್ನು ಅವನು ಎಚ್ಚರಿಸಿದ ಎಂಬುದು. ಇದೆಲ್ಲ ತಿಳಿದ ಮೇಲೆ ನಾನು ನನ್ನ ಪ್ರಶ್ನೆಗಳಿಗೂ 'ಅನಾಚಾರ'ಕ್ಕೂ ವೈಚಾರಿಕತೆಯ ಆಧಾರವನ್ನು ಹುಡುಕುವಂತಾಯಿತು.

ಉದಾಹರಣೆ: ಸಂಪ್ರದಾಯ "ಸಮುದ್ರಯಾನ ಮಾಡುವುದು ಪಾಪ" ಎಂದು ತೀರ್ಮಾನಿಸಿತ್ತಷ್ಟೆ. ಅದಕ್ಕೆ ನನ್ನ ಹಿಂದಿನ ಪ್ರತಿಕ್ರಿಯೆ: "ಏಕೆ ಮಾಡಬಾರದು? ನಿಮ್ಮ ಮಾತಿನಂತೆ ನಡೆದರೆ ನಾನು ಇಂಗ್ಲೆಂಡ್ ಅಮೆರಿಕಾ ದೇಶಗಳನ್ನು ನೋಡುವಂತಿಲ್ಲವಲ್ಲ!" ಆಗ ನನ್ನಲ್ಲಿ ಎಚ್ಚರವಾಗಿದ್ದದ್ದು ಸಂಪ್ರದಾಯವಿರೋಧ ಮತ್ತು ಹೊಸ ದೇಶಗಳ ಆಕರ್ಷಣೆ—ಅದು ರೊಮ್ಯಾಂಟಿಕ್ ಮನೋವೃತ್ತಿ. ಈಗ ಅದರ ಜೊತೆಗೆ ಬೇರೊಂದು ಆಕರ್ಷಣೆ ಸೇರಿತು: ಆ ದೇಶಗಳಲ್ಲಿ ಆಧುನಿಕ ಶಾಸ್ತ್ರಜ್ಞಾನ ತುಂಬಿದ ವಾತಾವರಣವಿದೆ; ಅಲ್ಲಿಗೆ ಹೋದರೆ ನಮ್ಮ ಮನಸ್ಸು ಬೆಳೆಯುತ್ತದೆ. ಆಕ್ಸ್‌ಫರ್ಡ್, ಕೇಂಬ್ರಿಜ್,

ಹಾರ್ವರ್ಡ್ ಮುಂತಾದ ವಿಶ್ವವಿದ್ಯಾಲಯಗಳ ಸಂಪ್ರದಾಯ ದೊಡ್ಡದು. ಹಿಂದಿನ ಶತಮಾನದ ಮ್ಯಾಥ್ಯೂ ಆರ್ನಲ್ಡ್, ಈ ಶತಮಾನದ ಬ್ರಾಡ್ಲಿ (ಎ. ಸಿ., ಮತ್ತು ಎಫ್. ಎಚ್), ರಸಲ್ ಮೊದಲಾದ ಪ್ರಚಂಡ ಮೇಧಾವಿಗಳಿಂದ ರೂಪಿತವಾದದ್ದು, ಅಲ್ಲಿಯ ವಾತಾವರಣ. ಅವರು ಬರೆದ ಪುಸ್ತಕಗಳು ಇಡೀ ಪ್ರಪಂಚದಲ್ಲಿ ವಿಚಾರ ತರಂಗಗಳನ್ನು ಎಬ್ಬಿಸಿವೆ. ಆಕ್ಸ್‌ಫರ್ಡ್‌ನ ಮಿನಾರಗಳು (dreaming spires) ಕನಸು ಕಾಣುತ್ತವೆಯಂತೆ—ಜ್ಞಾನ ಸ್ವರ್ಗದ ಕನಸು! ಅಲ್ಲಿಗೆ ಹೋಗಬೇಕು, ಆ ಕನಸನ್ನು ನಾವೂ ಕಾಣಬೇಕಾದರೆ, ಅಲ್ಲಿಯ ಡಿಗ್ರಿಯನ್ನು ಪಡೆದರೆ ದೊಡ್ಡ ಕೆಲಸ ಸಿಕ್ಕುತ್ತದೆಂಬ ಆಸೆ ಇರಲಿಲ್ಲವೆಂದು ಹೇಳಲಾರೆ! ಆದರೆ ಜ್ಞಾನ ಸಂಪಾದನೆಯ ಆಸೆಯೂ ಇತ್ತು. ರಮ್ಯ ಮನೋವೃತ್ತಿ, ಆರ್ಥಿಕ ಪ್ರಯೋಜನದ ನಿರೀಕ್ಷೆ, ಜ್ಞಾನ ಸಂಪಾದನೆಯ ಬಯಕೆ, ಇವೆಲ್ಲ ಬೆರೆತಿದ್ದುವು.

ನಾನು ಮೊದಲ ಎಂ. ಎ. ಕ್ಲಾಸಿನಲ್ಲಿದ್ದಾಗ, ಎಂದು ನೆನಪು—ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮುಂತಾದ ದೇಶಗಳಲ್ಲಿ ಕೆಲ ಕಾಲ ಇದ್ದು ಬಂದವರೊಬ್ಬರು ನಮ್ಮ ಯೂನಿಯನ್ನಿನ ಪತಿಯಿಂದ ತಮ್ಮ ಅನುಭವಗಳನ್ನು ಕುರಿತು ಮಾತಾಡಿದರು. ಇಂಗ್ಲೆಂಡಿನ ಪ್ರಸಿದ್ಧವಾದ ಯಾವುದೋ ಒಂದು ಸಂಘದಲ್ಲಿ (ಫೇಬಿಯನ್ ಸೊಸೈಟಿ?) ದೊಡ್ಡ ಚರ್ಚೆಯೊಂದು ನಡೆದಾಗ ಆತ ಸಭೆಯಲ್ಲಿದ್ದರಂತೆ. ಚರ್ಚೆಯಲ್ಲಿ ಭಾಗವಹಿಸಿದವರು ಬರ್ನರ್ಡ್ ಷಾ, ಡೀನ್ ಇಂಗ್, ಬರ್ಟ್ರಂಡ್ ರಸಲ್ (ಹೆಸರುಗಳ ವಿಷಯದಲ್ಲಿ ನನ್ನ ನೆನಪನ್ನು ನೆಚ್ಚಲಾರೆ!) ಮೊದಲಾದ ಘಟಾನುಘಟಿಗಳು. ಚರ್ಚೆಯ ವಿಷಯ ಏನೋ—ಮರೆತುಹೋಗಿದೆ. ಚರ್ಚೆ ಬಹಳ ಹುಮ್ಮಸ್ಸಿನಿಂದ ನಡೆಯಿತಂತೆ. ನಮ್ಮ ಭಾಷಣಕಾರರು ತಮ್ಮ ರೋಮಾಂಚಕಾರಕ ಅನುಭವವನ್ನು ಬಣ್ಣಿಸುತ್ತಿದ್ದಾಗ ನನಗೆ ಆಗಲೇ ಇಂಗ್ಲೆಂಡಿಗೆ ಓಡಿಹೋಗಬೇಕು ಎನ್ನಿಸುತ್ತಿತ್ತು. ಹೋಗುವ ಆಸೆ ಅದೊಂದು ಬಗೆಯ ನೋವು ಎನ್ನುವಷ್ಟು ತೀವ್ರವಾಗಿತ್ತು. ಅಂಥ ತೀಕ್ಷ್ಣ ಮತಿಗಳ ವಿಚಾರಧಾರೆ ಎಷ್ಟು ಆನಂದವನ್ನು ಕೊಡಬಲ್ಲದು ಎಂಬುದರ ಅನುಭವ ಸ್ವಲ್ಪಮಟ್ಟಿಗೆ ರಾಧಾಕೃಷ್ಣನ್‌ರ ತರಗತಿಗಳಲ್ಲಿ ಆಗಿತ್ತು. ಅಂದ ಮೇಲೆ ಇಂಗ್ಲೆಂಡಿಗೆ ಹೋಗುವ ಆಸೆ ಕೇವಲ ರಮ್ಯ ಮನೋವೃತ್ತಿ ಆರ್ಥಿಕ ದೃಷ್ಟಿಗಳಿಂದ ಬಂದದ್ದಲ್ಲ. ನನ್ನ ಆಸೆ ಕೈಗೂಡಲೇ ಇಲ್ಲ ಎಂಬುದು ಇಲ್ಲಿ ಪ್ರಸಕ್ತವಲ್ಲ.

ಸುಮಾರು ೧೯೩೪ರಲ್ಲಿ ಈ ವಿಷಯವನ್ನು ಕುರಿತು ನನ್ನ ಮಾವನವರೊಡನೆ ಮಾತಾಡಿದ ನೆನಪಿದೆ. ಆ ವೇಳೆಗೆ ನಾನು ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದೆ; ಎಂ. ಎ. ಕ್ಲಾಸಿಗೆ ಪಾಠ ಹೇಳುತ್ತಿದ್ದೆ; ಒಂಟಿಕೊಪ್ಪಲಿನಲ್ಲಿ ಮನೆ ಕಟ್ಟಿಕೊಂಡಿದ್ದೆ. ಮಾವನವರೊಡನೆ ಸಂಕೋಚವಿಲ್ಲದೆ ಪೂರ್ಣ ಸಲಿಗೆಯಿಂದ ಮಾತಾಡುವ ಪರಿಪಾಠ ಬೆಳೆದಿತ್ತು. ಆದರೆ ನನ್ನನ್ನು ತಿದ್ದುವ ನನ್ನ ಕರ್ಮಭ್ರಷ್ಟತೆಯನ್ನು ಅವರು ಜೀರ್ಣಿಸಿಕೊಂಡಿದ್ದರು. ಆದರೆ ನನ್ನನ್ನು ತಿದ್ದುವ ಆಸೆಯನ್ನು ಪೂರ್ತಿ ಬಿಟ್ಟಿರಲಿಲ್ಲ. ಒಂದು ದಿನ ನಡೆದ ಸಂಭಾಷಣೆಯನ್ನು ಕೆಳಗೆ ಕಾಣಿಸಿದ್ದೇನೆ:

ನಾನು: ನಾನು ಇಂಗ್ಲೆಂಡಿಗೆ ಹೋದರೆ ಏನು ಮಾಡುತ್ತೀರಿ?

ಮಾವ: ನಾನು ಮಾಡುವುದೇನಿದೆ? ಹೋಗುವವರು ನೀವು.

ನಾ : ಅದು ನಿಮ್ಮ ಮಗಳಿಗೂ ಸಂಬಂಧಪಟ್ಟ ವಿಷಯ ತಾನೆ.
ಮಾ : ನಿಜ. ಆದರೆ ಅವಳು ನಿಮ್ಮ ಕೈಹಿಡಿದ ಮೇಲೆ ಬಂದದ್ದನ್ನು ಅನುಭವಿಸ ಬೇಕು. ನೀವು ಮಾಡುವ ಪುಣ್ಯದಲ್ಲಿ ಅರ್ಧ ಭಾಗ ಅವಳಿಗೆ. ಹಾಗೇ ನಿಮ್ಮ ಪಾಪದಲ್ಲೂ ಅರ್ಧ ಅವಳಿಗೆ. ಅನುಭವಿಸಲೇ ಬೇಕು. ನಾನು ಮಾಡುವುದು ಬಿಡುವುದು ಏನೂ ಇಲ್ಲ.
ನಾ : ಇದೆ. ನಮ್ಮ ನಿಮ್ಮ ಸಂಬಂಧ ಕಡಿದು ಹೋಗುತ್ತದೆಯೇ? ನಾನು ಊಟಕ್ಕೆ ಕರೆದರೆ ಏನು ಮಾಡುತ್ತೀರಿ?
ಮಾ : ಸಂಬಂಧ ಯಾಕೆ ಕಡಿದುಹೋಗಬೇಕು? ನೀವು ಊಟಕ್ಕೆ ಕರೆದರೆ ಬರ್ತೀನಿ—ನಿಮ್ಮ ತಾಯಿ ಅಡಿಗೆ ಮಾಡಿ ಬಡಿಸಿದರೆ. ಅಥವಾ ಇವಳೇ (ನನ್ನ ಅತ್ತೆ) ಬಂದು ಅಡಿಗೆ ಮಾಡುತ್ತಾಳೆ.
ನಾ : ಜಯ ಅಡಿಗೆ ಮಾಡಿದರೆ?
ಮಾ : ಅವಳಿಗೆ ನಿಮ್ಮ ಮೈಲಿಗೆಯಲ್ಲಿ ಅರ್ಧ ಬಂದಿರುತ್ತಲ್ಲ!
ನಾ : ನನ್ನನ್ನ ನಿಮ್ಮ ಮನೆಗೆ ಊಟಕ್ಕೆ ಕರೆಯುತ್ತೀರ?
ಮಾ : ಧಾರಾಳವಾಗಿ. ನಾನು ಬೇರೆ ಪಂಕ್ತೀಲಿ ಕೂತುಕೊಳ್ತೀನಿ, ಅಷ್ಟೆ.

ತಮ್ಮ ನಿಲುವು ಶಾಸ್ತ್ರಕ್ಕೆ ಅನುಸಾರವಾದದ್ದೆಂದು ಅವರು ದೃಢವಾಗಿ ನಂಬಿದ್ದರು. ಆ ಶಾಸ್ತ್ರ ಸರಿಯೆ ಎಂಬ ಪ್ರಶ್ನೆ ಹಾಕತಕ್ಕದ್ದೇ ಅಲ್ಲ ಎಂದೂ ಅವರು ನಂಬಿದ್ದರು. ಆ ನಂಬಿಕೆಗೆ ತಕ್ಕಂತೆ ಅವರ ನಡವಳಿಕೆ ಅವರ ನಿಲುವಿನಲ್ಲಿ ಮೂರು ಅಂಶಗಳನ್ನು ಗುರುತಿಸಿದ್ದೇನೆ: ೧ ನಾನು ವಿಲಾಯಿತಿಗೆ ಹೋಗಿದ್ದರೆ 'ಅಯ್ಯೋ ಹೀಗೆ ಮಾಡಿಬಿಟ್ಟನಲ್ಲ' ಎಂದು ಅವರು ವ್ಯಸನಪಡುತ್ತಿದ್ದರು. ಆದರೆ ಅವರಿಗೆ ನನ್ನ ಮೇಲಿನ ಮತ್ತು ತಮ್ಮ ಮಗಳ ಮೇಲಿನ ಪ್ರೀತಿಯೇನೂ ಕಡಮೆಯಾಗುತ್ತಿರಲಿಲ್ಲ. ೨ ವಿಲಾಯಿತಿಗೆ ಹೋಗಿ ಬಂದರೆ ನನಗೆ ದೊಡ್ಡ ಕೆಲಸವಾಗುತ್ತಿತ್ತು—ಬಹುಶಃ; ಹೆಚ್ಚು ಸಂಬಳ ಬರುತ್ತಿತ್ತು; ಸ್ಥಾನಮಾನ ಹೆಚ್ಚುತ್ತಿತ್ತು. ಇದೆಲ್ಲ ಖಚಿತವಾಗಿದ್ದರೂ ಅವರು ತಮ್ಮ ನಿಲುವನ್ನು ಬದಲಾಯಿಸುತ್ತಿರಲಿಲ್ಲ. "ಇಂಥ ಅಭ್ಯುದಯ ಬರದಿದ್ದರೆ ಬೇಡ. ಅದಕ್ಕಾಗಿ ಇಂಗ್ಲೆಂಡಿಗೆ ಹೋಗಿ ಬರುವುದು ಸರಿಯಲ್ಲ. ಹೀಗೆ ಬರಬಹುದಾದ ಅಭ್ಯುದಯಕ್ಕಿಂತ ಶಾಸ್ತ್ರದ ಕಟ್ಟುಪಾಡಿನಲ್ಲಿ ಸಾಮಾನ್ಯವಾದ ಬದುಕೇ ಲೇಸು" ಎನ್ನುತ್ತಿದ್ದರು. ೩ ಮಗಳ ಮತ್ತು ಅಳಿಯನ ಮೇಲಿನ ವಿಶ್ವಾಸ ಹಿಂದಿನಂತೆಯೇ ಇದ್ದರೂ ಅವರೊಡನೆ ವ್ಯವಹರಿಸುವಾಗ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಎರಡು ಪಕ್ಷದವರೂ ಅದು ಅನಿವಾರ್ಯ ಎಂದುಕೊಳ್ಳಬೇಕು; ಅಸಮಾಧಾನಕ್ಕೆ ಎಡೆಗೊಡಬಾರದು. ಇದು ಅವರ ದೃಷ್ಟಿ.

ಶಾಸ್ತ್ರ ಏನಾದರೂ ಹೇಳಲಿ (ಈ ವಿಷಯದಲ್ಲಿ ಶಾಸ್ತ್ರ ಮೌನವಾಗಿಯೇ ಇರಬಹುದು!), ನನ್ನ ಮಾವನವರ ನಂಬಿಕೆ ವಿಚಾರಸಮ್ಮತವಾದದ್ದಲ್ಲ. ಇಂಗ್ಲೆಂಡಿಗೆ ಹೋದಮಾತ್ರಕ್ಕೆ ಪಾಪ ಬರುವುದಿಲ್ಲ; ಹೋಗಿ ಬಂದವರು ಮಾಡಿದ ಅಡಿಗೆಯನ್ನು ಊಟ ಮಾಡಿದರೆ ಮೈಲಿಗೆಯಾಗುವುದಿಲ್ಲ. ಅವರದ್ದು ತಪ್ಪು ತಿಳಿವಳಿಕೆ. ಆದರೆ ಅವರು

ನೀತಿಯ ದೃಷ್ಟಿಯಿಂದ ಅಪರಾಧಿಸ್ಥಾನದಲ್ಲಿ ನಿಲ್ಲಬೇಕಾದ್ದಿಲ್ಲ. ತಾವು ಯಾವುದನ್ನು ನೀತಿ ಎಂದು ನಂಬಿದ್ದರೋ ಅದನ್ನು ಅವರು ಕಟ್ಟುನಿಟ್ಟಾಗಿ, ನಷ್ಟವನ್ನೂ ಲೆಕ್ಕಿಸದೆ ಪಾಲಿಸುತ್ತಿದ್ದರು. ನನಗೇನಾದರೂ ಸ್ಕಾಲರ್ಶಿಪ್ ಸಿಕ್ಕಿದ್ದರೆ, ಅವರು ಒಪ್ಪಲಿ ಬಿಡಲಿ, ನಾನು ಇಂಗ್ಲೆಂಡಿಗೆ ಹೋಗುತ್ತಿದ್ದೆ. ಬಂದಮೇಲೆ ಅವರನ್ನು ಊಟಕ್ಕೆ ಕರೆದಾಗ ನನ್ನ ತಾಯಿಯನ್ನು 'ನೀನೇ ಇವತ್ತಿನ ಅಡಿಗೆ ವಹಿಸಿಕೊ' ಎಂದು ಬೇಡುತ್ತಿದ್ದೆ. ಅವರ ಮನೆಗೆ ಊಟಕ್ಕೆ ಹೋದಾಗ ಅವರೊಬ್ಬರು ಬೇರೆ ಪಂಕ್ತಿಯಲ್ಲಿ ಕೂತರೆ ನಾನು ಅಸಮಾಧಾನ ಪಟ್ಟುಕೊಳ್ಳುತ್ತಿರಲಿಲ್ಲ. ಅದು ಅವರ ವೈಯಕ್ತಿಕ ವಿಷಯ.

ಮೇಲೆ ಉದಾಹರಿಸಿದ ಸಂಭಾಷಣೆಯೆಲ್ಲ 'ರೆ' ರಾಜ್ಯದ ಮಾತು. ಇಂಗ್ಲೆಂಡಿಗೆ ಹೋಗಿ ಎರಡು ವರ್ಷ ಇದ್ದು ಬರಲು ಆ ಕಾಲದಲ್ಲಿ ೧೦–೧೫ ಸಾವಿರ ರೂಪಾಯಿ ಬೇಕಾಗುತ್ತಿತ್ತು. ಅಷ್ಟು ಹಣ ಖರ್ಚುಮಾಡುವ ಚೈತನ್ಯ ನನಗಿಲ್ಲವೆಂದೂ ಸ್ಕಾಲರ್‌ಶಿಪ್ ದೊರೆಯುವ ಸಂಭವವಿಲ್ಲವೆಂದೂ ನನ್ನ ಮಾವನವರು ಬಲ್ಲರು. ನನ್ನನ್ನು ತಿದ್ದುವುದು ಸಾಧ್ಯವಾದರೂ ಆಗಬಹುದೆಂಬ ಭ್ರಮೆ ಅವರಲ್ಲಿ ಉಳಿದಿತ್ತು. ಒಂದು ಸಲ ಹೇಳಿದರು: "ನೀವು ಕ್ರಮವಾಗಿ ಸಂಧ್ಯಾವಂದನೆ ದೇವತಾರ್ಚನೆ ಮಾಡುವುದಾದರೆ ನಾನು ಜರಿ ಅಂಚಿನ ಮುಗುಟ ತೆಗೆದುಕೊಡುತ್ತೇನೆ. ಅಲ್ಲದೆ ನನ್ನ ಖರ್ಚಿನಲ್ಲಿ ನಿಮಗೆ ಅಖಿಲ ಭಾರತದ ಪ್ರವಾಸ ಮಾಡಿಸುತ್ತೇನೆ."

ನನ್ನ ಉತ್ತರ: "ನೀವು ಮದುವೆಯಲ್ಲಿ ಕೊಟ್ಟ ಮುಗುಟವನ್ನೇ ನಾನೂ ಎಂದೂ ಉಪಯೋಗಿಸಿಲ್ಲ. ಇನ್ನು ಜರಿ ಅಂಚಿನದ್ದು ಏಕೆ, ದಂಡ! (ಜರಿ ಅಂಚಿನ ಪಂಚೆಯನ್ನಾಗಲಿ ಮುಗುಟವನ್ನಾಗಲಿ ನಾನು ಇದುವರೆಗೆ ಉಪಯೋಗಿಸಿಲ್ಲ.) ಇನ್ನು ಭಾರತ ಯಾತ್ರೆ—ನಿಮ್ಮೊಡನೆ ನಾನು ಬರುವುದಿಲ್ಲ. ನೀವು ಕಂಚಿ, ಕಾಶಿ, ಪ್ರಯಾಗ ಮುಂತಾದ ಒಂದೊಂದು ಕ್ಷೇತ್ರದಲ್ಲೂ ನನ್ನನ್ನು ದೇವಸ್ಥಾನಕ್ಕೆ ಎಳೆದುಕೊಂಡು ಹೋಗುತ್ತೀರಿ. ನಿಮ್ಮ ಅಭಿಷೇಕ ಸಹಸ್ರನಾಮಗಳು ಮುಗಿಯುವುದರಲ್ಲಿ ನನಗೆ ಹಸಿವಿನಿಂದ ಅರೆಜೀವವಾಗಿರುತ್ತೆ. ಅದೊಂದರಲ್ಲೂ ನನಗೆ ಆಸಕ್ತಿಯಿಲ್ಲ."

"ಆಸಕ್ತಿ ಇದ್ದಕ್ಕಿದ್ದ ಹಾಗೆಯೇ ಸುಮ್ಮಸುಮ್ಮನೆ ಬಂದುಬಿಡುತ್ತೆಯೆ? ನೀವು ಎಂದೂ ದೇವರ ಪೂಜೆ ಮಾಡಿಲ್ಲ. ಅದರ ಆನಂದ ಹೇಗೆ ಗೊತ್ತಾಗಬೇಕು? ಮಾಡಿ ನೋಡಿ, ಒಂದು ಆರು ತಿಂಗಳು. ನಾನು ಈ ಮಾತನ್ನು ಸೀರಿಯಸ್ ಆಗಿ ಹೇಳುತ್ತಿದ್ದೇನೆ ಮಾಡಿ ನೋಡಿ."

ನಾನು ಒಪ್ಪಿದೆ. ಪೂಜೆ ಮಾಡಕೂಡದೆಂದು ನಾನೇನೂ ಹಟ ತೊಟ್ಟಿರಲಿಲ್ಲವಷ್ಟೆ. ಮಂತ್ರ ಕೈಕರಣಗಳೆಲ್ಲವನ್ನೂ ಕಲಿತು ಸ್ವಾಧೀನ ಮಾಡಿಕೊಂಡೆ. ಅವರು ಹೇಳಿದ್ದು ಆರು ತಿಂಗಳು. ನಾನು ಎರಡು ತಿಂಗಳು ಹೆಚ್ಚಾಗಿಯೇ ಮಾಡಿದೆ—ಕಾಟಾಚಾರಕ್ಕಲ್ಲ, ವಿಧ್ಯುಕ್ತವಾಗಿ, ಕ್ರಮವಾಗಿ, ಶ್ರದ್ಧೆಯಿಂದ, ಮಾಧ್ವರ, ಶ್ರೀವೈಷ್ಣವರ ಪೂಜಾಕ್ರಮವೇನೊ ನನಗೆ ತಿಳಿಯದು. ನಮ್ಮ ಸ್ಮಾರ್ತ ಪದ್ಧತಿಯ ಪ್ರಕಾರ ಹತ್ತಹತ್ತಿರ ಅರ್ಧಕಾಲ ಪುರುಷಸೂಕ್ತ ಹೇಳಿಕೊಂಡು ಅಭಿಷೇಕ ಮಾಡುವುದಕ್ಕೆ ವಿನಿಯೋಗವಾಗುತ್ತದೆ. ಉಳಿದಂತೆ "ಆಗಮಾರ್ಥಂತು ದೇವಾನಾಂ....ದೇವತಾಹ್ವಾನ ಲಾಂಛನಂ, ಇತಿ ಘಂಟಾನಾದಂ ಕೃತ್ವಾ" ಇಂದ ಹಿಡಿದು ಕಲಶದ ಪೂಜೆ, ಅಭಿಷೇಕ ಮುಗಿದ ಮೇಲೆ

ವಸ್ತ್ರ ಗಂಧ ಹೂವು ಅಕ್ಷತೆಗಳ ಸಮರ್ಪಣೆ, ನೈವೇದ್ಯ. ತಾಂಬೂಲ, ಪುನಃ ಪೂಜೆ, ವಿಸರ್ಜನೆ ಇತ್ಯಾದಿಗಳು—ಒಂದು ವಿವರವನ್ನೂ ಬಿಡದೆ ಶಾಸ್ತ್ರೋಕ್ತವಾಗಿ ಪೂಜೆ ಮಾಡಿದೆ. ಮಂತ್ರಗಳನ್ನು—ಮುಖ್ಯವಾಗಿ ಪುರುಷಸೂಕ್ತವನ್ನು—ಉದಾತ್ತ ಅನುದಾತ್ತ ಸ್ವರಿತಗಳ ವಿಷಯದಲ್ಲಿ ಎಲ್ಲೂ ಅಪರಾಧವಾಗದಂತೆ ಉಚ್ಚರಿಸುವುದನ್ನು ಅಭ್ಯಾಸ ಮಾಡಿಕೊಂಡೆ. ಈಗಲೂ ಅವು ತಕ್ಕಮಟ್ಟಿಗೆ ಮನಸ್ಸಿನಲ್ಲಿ ನಿಂತಿವೆ. ಬಳಕೆಯಲ್ಲಿಟ್ಟು ಕೊಂಡಿಲ್ಲವಾದ್ದರಿಂದ ಉದಾತ್ತ ಅನುದಾತ್ತಗಳಲ್ಲಿ ತಪ್ಪಾಗಬಹುದು. ಪುರುಷಸೂಕ್ತದ ಪಠನೆ—ಅದರ ನಾದಮಾಧುರ್ಯದಿಂದಾಗಿ—ನನಗೆ ನಿಜವಾಗಿಯೂ ಆನಂದ ಕೊಟ್ಟಿತು. ವೇದಮಂತ್ರ ಶ್ರವಣ ನನಗೆ ಇಂದಿಗೂ ಪ್ರಿಯವೇ. ಅದಂತಿರಲಿ. ನನ್ನ ಶ್ರದ್ಧೆಯನ್ನು ನೋಡಿ ನನ್ನ ತಾಯಿ ಆನಂದಪಟ್ಟು ಮಾವನವರನ್ನು ಹರಸಿದಳು—ಅವರ ಸದ್ಬೋಧನೆ ಯಿಂದ ನನ್ನಲ್ಲಿ ದೈವಭಕ್ತಿ ಹುಟ್ಟಿತಲ್ಲ ಎಂದು. ಜಯಲಕ್ಷ್ಮಿಯ ಸಂತೋಷಕ್ಕಂತೂ ಪಾರವೇ ಇಲ್ಲ. ಪೂಜಾಸಾಮಗ್ರಿಗಳನ್ನು ಅಣಿಮಾಡಿಡುವುದರಲ್ಲಿ, ಮಂಗಳಾರತಿಯಾದ ಮೇಲೆ ಅದನ್ನು ಎಲ್ಲರೆದುರಿಗೂ ಹಿಡಿಯುವುದರಲ್ಲಿ, ಅವಳು ತೋರಿದ ಉತ್ಸಾಹ ಅಷ್ಟಿಷ್ಟಲ್ಲ.

ವಾಸ್ತವವಾಗಿ ನಾನು ಮಾಡಿದ್ದು ಒಂದು ಪ್ರಯೋಗ. "ದೇವತಾರ್ಚನೆಯಿಂದ ಆನಂದ ಬರುತ್ತದೆ, ಮನಶ್ಶಾಂತಿ ಬರುತ್ತದೆ ಎನ್ನುತ್ತಾರಲ್ಲ, ಬಂದರೆ ಬರಲಿ. ಅದನ್ನು ಸ್ವಾಗತಿಸುತ್ತೇನೆ" ಎಂದು ನಾನು ಮನಸ್ಸನ್ನೂ ಹೃದಯವನ್ನೂ ತೆರೆದಿಟ್ಟಿದ್ದೆ. ಎಂಟು ತಿಂಗಳು ಕಳೆಯಿತು. ಶಿವಮೊಗ್ಗದಿಂದ ಮಾವನವರು ಬಂದಾಗ ನಾನೇ ಪೂಜೆಯ ಮಾತೆತ್ತಿ ಹೇಳಿದೆ. "ನಿಮ್ಮ ಮಾತನ್ನು ಶ್ರದ್ಧೆಯಿಂದ ಪಾಲಿಸಿದ್ದೇನೆ. ನೀವು ಆರು ತಿಂಗಳು ಎಂದಿರಿ. ನಾನು ಎಂಟು ತಿಂಗಳು ಪೂಜೆ ಮಾಡಿದ್ದೇನೆ. ಮರೆಮಾಚದೆ ನನ್ನ ಅನುಭವವನ್ನು ತಿಳಿಸುತ್ತಿದ್ದೇನೆ; ಇತರ ಕಾರ್ಯಕ್ರಮಗಳಿಂದ, ಅಂದರೆ ಕಾಲೇಜಿನಲ್ಲಿ ಚೆನ್ನಾಗಿ ಪಾಠ ಹೇಳಿದ್ದರಿಂದ, ವೇದಿಕೆಯಿಂದ ಚೆನ್ನಾಗಿ ಭಾಷಣ ಮಾಡಿದ್ದರಿಂದ, ಒಳ್ಳೆಯ ಸಂಗೀತ ಕೇಳಿದ್ದರಿಂದ, ಬರುವ ಆನಂದಕ್ಕಿಂತ ಹೆಚ್ಚಿನ ಆನಂದವೇನೂ ದೇವತಾರ್ಚನೆಯಿಂದ ಬರಲಿಲ್ಲ. ಪುರುಷ ಸೂಕ್ತವನ್ನು ಪಠಿಸುವುದರಲ್ಲಿ ನಿಜವಾದ ಆನಂದ ಪಡೆದಿದ್ದೇನೆ. ಆದರೆ ಅದನ್ನು ದೇವತಾರ್ಚನೆ ಮಾಡದೆಯೇ ಹೇಳಿಕೊಳ್ಳ ಬಹುದಲ್ಲ, ತ್ಯಾಗರಾಜ ಕೃತಿಗಳನ್ನು ಹಾಡಿಕೊಳ್ಳುವ ಹಾಗೆ?"

ಮಾವನವರು ಪಕ್ಕೆ ಹಿಡಿದುಕೊಂಡು ನಕ್ಕರು. "ನಿಮ್ಮನ್ನು ತಿದ್ದುವುದಕ್ಕೇ ಭಗವಂತ ಇನ್ನೊಂದು ಅವತಾರ ಮಾಡಬೇಕಾಗುತ್ತೆ. ಇನ್ನುಮೇಲೆ ನಾನು ದೇವರ ಪೂಜೆಯ ಮಾತೆತ್ತುವುದಿಲ್ಲ. ಒಂದು ಉಪಕಾರ ಮಾತ್ರ ಮಾಡುತ್ತೀರ? ಮೈಲಿಗೆ ಯಲ್ಲಿರುವಾಗ ಪುರುಷಸೂಕ್ತ ಹೇಳಬೇಡಿ. ಇನ್ನೆರಡು ತ್ಯಾಗರಾಜಕೃತಿ ಬೇಕಾದರೆ ಹಾಡಿಕೊಳ್ಳಿ!"

ನಾನು ಪೂಜೆಯನ್ನು ನಿಲ್ಲಿಸಿದೆ. ಮಾವನವರು ಕೇಳಿದ ಉಪಕಾರವನ್ನು ಮಾಡ ಲಿಲ್ಲ. ಹುಚ್ಚು ತಿರುಗಿದಾಗ ಪುರುಷಸೂಕ್ತವನ್ನು ಹೇಳಿಕೊಳ್ಳುವುದುಂಟು. ಇದೊಂದೂ ಮಾವನವರ ವಿಶ್ವಾಸಕ್ಕೆ ಅಡ್ಡಿಯಾಗಲಿಲ್ಲ.

ಮುಂದುವರಿಯುವುದು

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಅನ್ನಾ ಕರೆನಿನ

ಪ್ರಥಮ ಕಾಂಡ

ಅನುವಾದ
ದೇಜಗೌ

'ಇಲ್ಲ, ನನ್ನ ಮುದ್ದೆ, ಈಚೆಗಂತು ಯಾವ ನೃತ್ಯಗೋಷ್ಠಿಯೂ ನನಗೆ ಹಿಡಿಸುವುದಿಲ್ಲ.' ಎಂದು ಅನ್ನಾ ನುಡಿದಳು. ತನಗೆಟುಕದಿದ್ದ ವಿಶಿಷ್ಟ ಜಗತ್ತಿನ ಕ್ಷಣದರ್ಶನವನ್ನು ಕಿಟ್ಟಿ ಅವಳ ಕಣ್ಣುಗಳಲ್ಲಿ ಗುರುತಿಸಿದಳು. 'ನೀರಸವಾದ ಮತ್ತು ಬೇಸರ ಹಿಡಿಸುವ ನೃತ್ಯ ಗೋಷ್ಠಿಗಳು ಮಾತ್ರ ನನ್ನ ಪಾಲಿಗಿವೆ.'

'ನಿಮಗೆ ನೃತ್ಯಗೋಷ್ಠಿಗಳು ಸಪ್ಪೆ ಯಾಗುವುದುಂಟೆ ?'

'ಏಕಾಗಬಾರದು ?'

ಆ ಪ್ರಶ್ನೆಗುತ್ತರ ಅನ್ನಾಳಿಗೆ ತಿಳಿದಿದೆಯೆಂದು ಕಿಟ್ಟಿಗರಿವಾಯಿತು. 'ಏಕೆಂದರೆ ಯಾವ ಗೋಷ್ಠಿಯಲ್ಲಾಗಲಿ ನೀವು ರಾಣಿಯಂತೆ ಕಾಣುತ್ತೀರಿ.'

ಅನ್ನಾಳ ಮುಖ ಕೆಂಪೇರಿತು. 'ಮೊದಲನೆಯದಾಗಿ, ನಾನು ಹಾಗಾಗುವುದು ಸಾಧ್ಯವಿಲ್ಲ. ಎರಡನೆಯದಾಗಿ, ಹಾಗಾಗುವ ಸಂಭವವಿದೆಯೆಂದಿಟ್ಟುಕೊಂಡರೂ, ಅದರಿಂದಾಗುವ ವ್ಯತ್ಯಾಸವೇನು ?'

'ಈ ನೃತ್ಯಗೋಷ್ಠಿಗೆ ನೀವು ಹೋಗುತ್ತೀರೇನು ?' ಎಂದು ಕಿಟ್ಟಿ ಕೇಳಿದಳು.

'ನಾನು ಹೋಗಬೇಕಾದೀತೆಂದು ತೋರುತ್ತದೆ. ಇಗೋ, ತೆಗೆದುಕೊ' ಎಂದವಳು ತುದಿಚೂಪಾದ ತೆಳ್ಳನೆಯ ಬೆರಳಿನಿಂದ ಸಡಿಲವಾಗಿದ್ದ ಉಂಗುರವನ್ನೆಳೆಯುತ್ತಿದ್ದ ತನ್ಯಳಿಗೆ ಹೇಳಿದಳು.

'ನೀವು ಹೋಗುವುದರಿಂದ ನನಗೆ ಸಂತೋಷವಾಗಿದೆ. ನಿಮ್ಮನ್ನಲ್ಲಿ ನೋಡ ಬಯಸುತ್ತೇನೆ.'

'ನಿನಗೆ ಸಂತೋಷವಾಗುತ್ತದೆಂಬ ಸಂತೃಪ್ತಿಯಿಂದಾದರೂ ನಾನಲ್ಲಿಗೆ ಬರಬೇಕಾಗಿದೆ. ಗ್ರಿಷ, ನನ್ನ ಕೂದಲೆಳೆಯ ಬೇಡೊ. ಈಗಲೇ ಅದೆಲ್ಲ ಕೆದರಿಕೊಂಡಿದೆ' ಎಂದವಳು ಗ್ರಿಷ ಆಟವಾಡುತ್ತಿದ್ದ ಕೂದಲನ್ನು ಹಿಂದಿನಂತೆ ತಿದ್ದಿದಳು.

'ಲ್ಯಾವೆಂಡರ್ ಗಂಧವನ್ನು ಹಚ್ಚಿಕೊಂಡು ಗೋಷ್ಠಿಗೆ ಬರುತ್ತೀರಷ್ಟೆ?'

'ಲ್ಯಾವೆಂಡರ್ ಏಕೆ ?' ಎಂದು ಅನ್ನಾ ಮುಗುಳು ನಗೆ ಸೂಸಿದಳು. 'ಈಗ ಓಡಿ, ಮಕ್ಕಳೆ, ಓಡಿಹೋಗಿ. ನಿಮಗೆ ಕೇಳಿಸುತ್ತಿಲ್ಲವೆ? ಕುಮಾರಿ ಹಲ್ ನಿಮ್ಮನ್ನು ಉಪಾಹಾರಕ್ಕಾಗಿ ಕರೆಯುತ್ತಿದ್ದಾಳೆ' ಎಂದವಳು ಅವರಿಂದ ಬಿಡಿಸಿಕೊಂಡು, ಊಟದ ಮನೆಗವರನ್ನು ಅಟ್ಟಿಕೊಂಡು ಹೋದಳು.

'ನನ್ನನ್ನೇಕೆ ನೀನು ಕರೆಯುತ್ತೀಯೆಂಬುದು ನನಗೆ ಗೊತ್ತಿದೆ. ಈ ಗೋಷ್ಠಿಯಲ್ಲಿ ನೀನು ಮಹತ್ಸಂಗತಿಗಳನ್ನು ನಿರೀಕ್ಷಿಸುತ್ತಿದ್ದೀಯೆ. ಪ್ರತಿಯೊಬ್ಬರೂ ಅಲ್ಲಿದ್ದುಕೊಂಡು, ಅವುಗಳಲ್ಲಿ ಪಾಲ್ಗೊಳ್ಳಬೇಕೆಂಬುದು ನಿನ್ನ ಅಪೇಕ್ಷೆಯಾಗಿದೆ.'

'ಹೌದು ; ನಿಮಗದು ಗೊತ್ತಾದದ್ದು ಹೇಗೆ ?'

'ಓ, ನಿನ್ನ ಯೌವನದ ಮಹಿಮೆಯೇ ಮಹಿಮೆ !' ಎಂದು ಅನ್ನಾ ಮಾತು ಮುಂದುವರಿಸಿದಳು. 'ಸ್ವಿಟ್ಜರ್‌ಲ್ಯಾಂಡಿನ ಪರ್ವತಸ್ತೋಮಗಳ ಮಂಜಿನಂತಿರುವ ನೀಲಿ ಬಣ್ಣದ ಕಾವಳವನ್ನು ನಾನು ಬಲ್ಲೆ. ಅದು ನನ್ನ ಸ್ಮೃತಿಕೋಶದಲ್ಲಿ ಅಚ್ಚೊತ್ತಿಗೊಂಡಿದೆ. ಶೈಶವ ಅಂತ್ಯಗೊಳ್ಳುತ್ತಿರುವ ಆನಂದಮಯ ಸಮಯದಲ್ಲಿ ಸರ್ವಸ್ವವನ್ನು ಆಚ್ಛಾದಿಸಿಕೊಂಡಿರುವ ಕಾವಳದ ಸಂತೋಷೋಲ್ಲಾಸ ಭರಿತವಾದ ಆ ವಿಸ್ತಾರ ವೃತ್ತದಲ್ಲಿ

ಕ್ರಮಕ್ರಮೇಣ ಕಿರಿದಾಗುತ್ತಿರುವ ದಾರಿಯೊಂದಿದೆ! ಅದರಿಂದಾಚೆಗಿನ ದೃಶ್ಯಗಳಲ್ಲಿ, ಅವೆಷ್ಟೇ ಪ್ರಕಾಶಮಾನವಾಗಿರಲಿ, ಸುಂದರವಾಗಿರಲಿ, ಪ್ರವೇಶಿಸುವುದು ಆನಂದದಾಯಕವಾಗಿರುವುದಲ್ಲದೆ, ಭಯಂಕರವಾಗಿರುತ್ತದೆ. ಅವುಗಳ ಮೂಲಕ ಹೋಗದವರಾರು?'

ಕಿಟ್ಟಿ ಮುಗುಳು ನಕ್ಕಳೇ ಹೊರತು ಮಾತಾಡಲಿಲ್ಲ. 'ಅದರ ಮೂಲಕ ಅವರು ಹೋದದ್ದು ಹೇಗೆ? ಅವರ ಪ್ರೇಮಕಥೆಯನ್ನರಿಯುವ ಕುತೂಹಲ ನನಗಿದೆ. ಅದನ್ನು ತಿಳಿಯುವ ಬಗೆ ಹೇಗೆ?' ಎಂದು ಕಿಟ್ಟಿ ಅನ್ನಾಳ ಗಂಡ, ಅಲೆಕ್ಸಿ ಅಲೆಕ್ಸಾಂಡ್ರೊವಿಚ್ ಕರೆನಿನ್‌ನ ನಿರ್ಭಾವ ಚಹರೆಯನ್ನು ನೆನೆಯುತ್ತ ಆಲೋಚಿಸಿದಳು.

'ನನಗೂ ತುಸು ಗೊತ್ತಿದೆ. ಸ್ಟೀವ್ ಹೇಳಿದ. ನಿನ್ನನ್ನು ಅಭಿನಂದಿಸುತ್ತೇನೆ. ಅವರ ಬಗ್ಗೆ ನನಗೆ ಅಪಾರ ಮೆಚ್ಚುಗೆಯಿದೆ. ರೈಲು ನಿಲ್ದಾಣದಲ್ಲಿ ವ್ರಾನ್ಸ್ಕಿಯವರನ್ನು ಸಂಧಿಸಿದ್ದೆ' ಎಂದು ಅನ್ನಾ ಗೂಢವಾಗಿ ನುಡಿದಳು.

'ಓ, ಅವರೂ ಅಲ್ಲಿದ್ದರೇನು?' ಎಂದು ಕೇಳುವಾಗ ಕಿಟ್ಟಿಯ ಮುಖದಲ್ಲಿ ರಂಗೇರಿತು. 'ಸ್ಟೀವ್ ಏನು ಹೇಳಿದರು?

'ಓ, ಅವನೆಲ್ಲವನ್ನು ತಿಳಿಸಿದ. ಅಂಥ ಸಂಗತಿಯನ್ನು ನಾನು ಸ್ವಾಗತಿಸುತ್ತೇನೆ. ನಿನ್ನೆ ವ್ರಾನ್ಸ್ಕಿ ತಾಯಿಯ ಜತೆಯಲ್ಲಿ ಪ್ರಯಾಣಮಾಡಿದೆ. ಅವರು ತಮ್ಮ ಅಚ್ಚುಮೆಚ್ಚಿನ ಮಗನನ್ನು ಬಿಟ್ಟು ಬೇರೆ ವಿಷಯ ಮಾತಾಡಲೇ ಇಲ್ಲ. ತಾಯಂದಿರು ಎಂಥ ಪಕ್ಷಪಾತಿಗಳೆಂಬುದನ್ನು ಬಲ್ಲೆ; ಆದರೆ....'

'ಅವರ ತಾಯಿ ಏನು ಹೇಳಿದರು?'

'ಓ, ಒಂದೇ ಎರಡೇ, ಹಲವು ವಿಷಯಗಳು! ಮಗ ಅವರ ಪ್ರಾಣಪದಕವೆಂಬುದನ್ನು ಬಲ್ಲೆ. ಅವರ ಶೌರ್ಯಸಾಹಸಗಳ ಬಗ್ಗೆ ನನಗನುಮಾನವಿಲ್ಲ. ಅವರು ತಮ್ಮ ಸಂಪತ್ತನ್ನೆಲ್ಲ ತಮ್ಮ ತಮ್ಮನಿಗೆ ಕೊಟ್ಟುಬಿಡಲು ಅಪೇಕ್ಷಿಸಿದ್ದಾರಂತೆ. ಅವರಿನ್ನೂ ಶೈಶವದಲ್ಲಿದ್ದಾಗಲೇ ಮುಳುಗುತ್ತಿದ್ದ ಹೆಂಗಸೊಬ್ಬಳನ್ನು ರಕ್ಷಿಸುವ ಸಾಹಸ ಕೃತ್ಯದಲ್ಲಿ ಜಯಭೇರಿ ಬಾರಿಸಿದರಂತೆ. ಒಂದು ಮಾತಿನಲ್ಲಿ ಹೇಳುವುದಾದರೆ ಅವರೊಬ್ಬರು ಮಹಾವೀರರು! ಇದನ್ನೆಲ್ಲ ಅವರಮ್ಮ ಹೇಳಿದರು' ಎಂದು ಅನ್ನಾ ನಿಲ್ದಾಣದಲ್ಲವನು ಅಬ್ಬೇಪಾರಿಯೊಬ್ಬಳಿಗೆ ಇನ್ನೂರು ರೂಬಲ್ ಕೊಟ್ಟಿದ್ದನ್ನು ಸುಸ್ಮಿತೆಯಾಗಿ ಸ್ಮರಿಸಿಕೊಂಡಳು.

ಆದರೆ ಅವಳು ಆ ಇನ್ನೂರು ರೂಬಲ್‌ಗಳ ವಿಷಯವನ್ನವಳಿಗೆ ತಿಳಿಸಲಿಲ್ಲ. ಏಕೊ ಏನೊ, ಆ ವಿಷಯವನ್ನು ನೆನೆಸಿಕೊಳ್ಳುವುದೆ ಅವಳಿಗಿಷ್ಟವಾಗಲಿಲ್ಲ. ಆ ದ್ರವ್ಯವ್ಯವಹಾರದಲ್ಲಿ ತನಗೆ ಸಂಬಂಧಿಸಿದಂತೆ ಅಲ್ಲಸಲ್ಲದ ಏನೋ ರಹಸ್ಯವಿದ್ದಿರಬೇಕೆಂದವಳು ಭಾವಿಸಿದಳು.

'ತನ್ನನ್ನು ಮತ್ತೆ ಕಾಣುವಂತೆ ಅವರು ಒತ್ತಾಯಿಸಿದರು' ಎಂದು ಅನ್ನಾ ಮಾತು ಮುಂದುವರಿಸಿದಳು. 'ನನಗೂ ಅದು ಇಷ್ಟವೇ. ನಾಳೆ ಹೋಗಬಹುದೆಂದುಕೊಂಡಿದ್ದೇನೆ. ಓ, ದೇವರ ದಯೆಯಿಂದ ಸ್ಟೀವ್ ಡಾಲಿಯ ಕೋಣೆಯಲ್ಲಿ ಬಹುಹೊತ್ತು ಕಳೆದಿದ್ದಾನೆ' ಎಂದವಳು ವಿಷಯವನ್ನು ಬದಲಾಯಿಸಿ, ಮೇಲೆದ್ದಳು. ಅವಳ ಮನಸ್ಸಿಗೇನೋ ಬೇಸರವಾಗಿರಬೇಕೆಂದು ಕಿಟ್ಟಿ ಊಹಿಸಿಕೊಂಡಳು.

'ಇಲ್ಲ, ಇಲ್ಲ, ನಾನು ಮೊದಲು!' 'ಇಲ್ಲ, ನಾನು!' ಎಂದು ಅದೆ ತಾನೆ ಉಪಾಹಾರ ಮುಗಿಸಿದ್ದ ಮಕ್ಕಳು ಕೂಗುತ್ತ, ಅತ್ತೆ ಅನ್ನಾಳ ಬಳಿಗೆ ಪೈಪೋಟಿಯಿಂದ ಓಡೋಡುತ್ತ ಬಂದರು.

'ಎಲ್ಲರೂ ಒಟ್ಟಿಗೆ!' ಎಂದು ಅನ್ನಾ ನಗುತ್ತ, ಅವರೆಡೆಗೆ ಹಾರಿ, ಅವರನ್ನಪ್ಪಿ ಕೊಂಡು, ಆನಂದಪರವಶರಾಗಿ ಕಿರಿಚುತ್ತಿದ್ದ, ವಿಲಿವಿಲಿ ಒದ್ದಾಡುತ್ತಿದ್ದ ಮಕ್ಕಳನ್ನು ಗಿರಗಿರನೆ ತಿರುಗಿಸಿ, ಕೆಳಕ್ಕೊಗೆದಳು.

೨೧

ದೊಡ್ಡವರ ಉಪಾಹಾರಕ್ಕಾಗಿ ಡಾಲಿ ತನ್ನ ಕೋಣೆಯಿಂದ ಹೊರಗೆ ಬಂದಳು; ಆದರೆ ಅವಳ ಜತೆಯಲ್ಲಿ ಆಬ್ಲಾನ್‌ಸ್ಕಿ ಕಾಣಿಸಲಿಲ್ಲ. ತನ್ನ ಮಡದಿಯ ಕೋಣೆಯಿಂದ ವನು ಬೇರೆ ಬಾಗಿಲಿಂದ ಹೋಗಿರಬೇಕೆಂದು ತೋರಿತು.

'ಮಹಡಿಯಲ್ಲಿ ನಿಮಗೆ ತುಂಬ ಥಂಡಿಯಾಗಬಹುದೆಂದು ನನಗನಿಸುತ್ತದೆ. ನೆಲಮಾಳಿಗೆಯ ಕೋಣೆಗೆ ನಿಮ್ಮ ಸಾಮಾನುಗಳನ್ನು ಬದಲಾಯಿಸುತ್ತೇನೆ. ಅಲ್ಲಿ ನೀವು ನನ್ನ ಬಳಿಯಲ್ಲಿಯೇ ಇದ್ದಂತಾಗುತ್ತದೆ' ಎಂದು ಡಾಲಿ ಅನ್ನಾಳೊಡನೆ ನುಡಿದಳು.

'ನನ್ನ ಬಗ್ಗೆ ಚಿಂತೆ ಬೇಡ' ಎಂದು ಅನ್ನಾ ಡಾಲಿಯ ಮನಸ್ಸಿಗೆ ಸಮಾಧಾನ ವಾಗಿದೆಯೆ ಎಂಬುದನ್ನು ತಿಳಿಯುವ ಸಲುವಾಗಿ ಅನ್ವೇಷಕ ದೃಷ್ಟಿಯಿಂದ ಅವಳ ಮುಖದ ಮೇಲೆ ಕಣ್ಣು ಹಾಯಿಸಿದಳು. 'ಇಲ್ಲಿ ಮನಸ್ಸಿಗೂ ಹಗುರವಾಗುತ್ತದೆ' ಎಂದವಳ ಅತ್ತಿಗೆ ನುಡಿದಳು.

'ಎಲ್ಲಿಂದರಲ್ಲಿ ನಾನು ಯಾವಾಗಲೂ ಮರದ ದಿಮ್ಮಿಯಂತೆ ನಿದ್ರಿಸುವ ಭರವಸೆ ಯಿದೆ.'

'ಇದೆಲ್ಲ ಏನು?' ಎಂದು ಆಬ್ಲಾನ್‌ಸ್ಕಿ ಅಧ್ಯಯನ ಮಂದಿರದಿಂದ ಹೊರಗೆ ಬರುತ್ತಿದ್ದಂತೆ ತನ್ನ ಮಡದಿಯನ್ನು ಪ್ರಶ್ನಿಸಿದನು.

ರಾಜಿ ನಡೆದಿರಬೇಕೆಂದು ಅವನ ಧ್ವನಿಯಿಂದ ಅನ್ನಾ ಕಿಟ್ಟಿಯರಿಬ್ಬರೂ ನಿಶ್ಚಯಿಸಿ ಕೊಂಡರು.

'ಅನ್ನಾ ಕೆಳಗಿನ ಕೋಣೆಗೆ ಬರಬೇಕೆಂದು ಯೋಚಿಸಿದ್ದೇನೆ. ಆದರೆ ತೆರೆಗಳನ್ನಳ ವಡಿಸಬೇಕಾಗಿದೆ. ಅವನ್ನು ಹೇಗೆ ಅಳವಡಿಸಬೇಕೆಂಬುದು ಯಾರಿಗೂ ತಿಳಿಯದು. ಅದನ್ನೆಲ್ಲ ನಾನೇ ಮಾಡಬೇಕಾಗಿದೆ' ಎಂದು ಡಾಲಿ ನುಡಿದಳು.

'ಅವರ ನಡುವೆ ಪೂರ್ಣ ಸಾಮರಸ್ಯ ಫಲಿಸಿದೆಯೋ ಇಲ್ಲವೋ ದೇವರೇ ಬಲ್ಲ' ಎಂದು ಡಾಲಿಯ ನೀರಸ ಪ್ರಶಾಂತ ಧ್ವನಿಯನ್ನಾಲಿಸಿದ ಅನ್ನಾ ಆಲೋಚಿಸಿದಳು.

'ಬಾ, ಡಾಲಿ, ಹಸ್ತವನ್ನು ಬೆಟ್ಟಮಾಡಬೇಡ. ನಿನಗೆ ಸರಿದೋರಿದರೆ ನಾನೇ ಆ ಕೆಲಸ ಮುಗಿಸುತ್ತೇನೆ' ಎಂದವಳ ಗಂಡ ಸೊಲ್ಲಿಸಿದನು.

'ಹೌದು, ಅವರ ನಡುವೆ ಹೊಂದಾಣಿಕೆಯಾಗಿರುವಂತೆ ತೋರುತ್ತದೆ' ಎಂದು ಅನ್ನಾ ಬಗೆದಳು.

'ನೀವೇನು ಮಾಡುತ್ತೀರೆಂಬುದು ನನಗೆ ಗೊತ್ತಿಲ್ಲವೆ?' ಎಂದು ಡಾಲಿ ಪ್ರತಿಕ್ರಿಯೆ ವ್ಯಕ್ತಪಡಿಸಿದಳು. 'ಮಾಡಲಾಗದ್ದನ್ನು ಮಾಡುವಂತೆ ನೀವು ಮಾತ್ವೆಗೆ ಆಜ್ಞೆ ಮಾಡುತ್ತೀರಿ; ಆಜ್ಞೆ ಮಾಡಿ ನೀವು ಹೊರಟುಹೋಗುತ್ತೀರಿ. ಅವನೆಲ್ಲವನ್ನು ಗಜಿಬಿಜಿ ಮಾಡುತ್ತಾನೆ.' ಈ ಮಾತುಗಳು ಹೊಮ್ಮುತ್ತಿದ್ದಂತೆ ರೂಢಿಯ ವಿಡಂಬನಾತ್ಮಕ ಮಂದಹಾಸ ಡಾಲಿಯ ಕಟವಾಯಿಯಲ್ಲಿ ನೆರಿಗೆಗಳನ್ನು ಸೃಷ್ಟಿಸಿತು.

'ಸಂಪೂರ್ಣ ರಾಜಿ; ಸಂದೇಹಕ್ಕೆಡೆಯೇ ಇಲ್ಲ' ಎಂದು ಅನ್ನಾ ಬಗೆದಳು. 'ಇದೆಲ್ಲ ದೇವರ ಅನುಗ್ರಹ.' ಈ ಎಲ್ಲ ಯಶಸ್ಸಿಗೆ ತಾನೇ ಕಾರಣವೆಂದು ಹರ್ಷಗೊಂಡ ಅವಳು ಡಾಲಿಯ ಬಳಿಗೈದಿ, ಅವಳನ್ನು ಚುಂಬಿಸಿದಳು.

'ಹಾಗಾಗದು. ನನ್ನ ಹಾಗೂ ಮಾತ್ವೆ ಬಗ್ಗೆ ಅಂಥ ಕೆಟ್ಟ ಅಭಿಪ್ರಾಯವೇಕೆ?' ಎಂದು ಆಬ್ಲಾನ್‌ಸ್ಕಿ ತನ್ನ ಮಡದಿಯನ್ನು ಕೇಳಿದನು. ಅವನ ಮುಖದ ಮೇಲಣ ಮಂದಹಾಸ ನೀರಸವಾಗಿತ್ತು.

ಇಡೀ ಸಂಜೆ ಡಾಲಿ ತನ್ನ ಗಂಡನೊಡನೆ ವಿಡಂಬನಾತ್ಮಕ ಧಾಟಿಯಲ್ಲಿಯೇ ವರ್ತಿಸುತ್ತಿದ್ದಳು. ಆಬ್ಲಾನ್‌ಸ್ಕಿ ಸಂತೃಪ್ತಿಗೊಂಡಿದ್ದನು, ಉಲ್ಲಾಸದಿಂದಿದ್ದನು. ಅದೆ ತಾನೆ ಕ್ಷಮಿಸಲ್ಪಟ್ಟಿದ್ದ ತಾನು ತನ್ನಪರಾಧವನ್ನು ಮರೆತುಬಿಟ್ಟಂತೆ ತೋರಿಸಿಕೊಳ್ಳಬಾರದೆಂದು ಉಲ್ಲಾಸವನ್ನು ಸಂಯಮಿಸಿಕೊಂಡಿದ್ದನು.

ಒಂಬತ್ತುವರೆ ಗಂಟೆಯ ಸಮಯದಲ್ಲಿ ಆಬ್ಲಾನ್‌ಸ್ಕಿಯ ಟೀಮೇಜಿನ ಸುತ್ತ ನಡೆಯುತ್ತಿದ್ದ ಹಿತಕರವೂ ಉಲ್ಲಾಸದಾಯಕವೂ ಆದ ಕೌಟುಂಬಿಕ ಸಂಭಾಷಣೆಯನ್ನು ಅತ್ಯಂತ ಸಾಮಾನ್ಯ ಸಂಗತಿಯೊಂದು ತಡೆಗಡಿಯಿತು. ಆ ಸಾಮಾನ್ಯ ಸಂಗತಿ ಪ್ರತಿಯೊಬ್ಬರಿಗೂ ವಿಚಿತ್ರವಾಗಿ ಕಂಡಿತು. ಪೀಟರ್ಸ್‌ಬರ್ಗ್ ನಗರದ ಸುಪರಿಚಿತ ವ್ಯಕ್ತಿಗಳ ವಿಷಯವನ್ನು ಪ್ರಸ್ತಾಪಿಸುತ್ತಿದ್ದಾಗ ಅನ್ನಾ ತಟಕ್ಕನೆ ಮೇಲೆದ್ದಳು.

'ನನ್ನ ಚಿತ್ರ ಸಂಪುಟದಲ್ಲಿ ಅವಳ ಭಾವಚಿತ್ರವಿದೆ' ಎಂದವಳು ನುಡಿದಳು. 'ನನ್ನ ಸರ್ಜಿಯ ಭಾವಚಿತ್ರವನ್ನು ಸಹ ನಿಮಗೆ ತೋರಿಸುತ್ತೇನೆ' ಎಂದವಳು ತಾಯಿಯ ಅಭಿಮಾನಪೂರ್ವಕ ಮಂದಹಾಸವನ್ನು ಪ್ರದರ್ಶಿಸಿದಳು.

ಹತ್ತುಗಂಟೆ ಸನ್ನಿಹಿತವಾಗುತ್ತಿದ್ದಂತೆ ಅವಳು ಸಾಮಾನ್ಯವಾಗಿ ತನ್ನ ಮಗನಿಗೆ ಸುರಾತ್ರಿ ಹೇಳಿ, ಅವನನ್ನು ತಾನೇ ಹಾಸುಗೆಯಲ್ಲಿ ಮಲಗಿಸಿ, ನೃತ್ಯಗೋಷ್ಠಿಗೆ ಹೋಗುತ್ತಿದ್ದುದುಂಟಷ್ಟೆ. ಅದೇ ಸಮಯದಲ್ಲೀಗ ತಮ್ಮನ್ನು ಪ್ರತ್ಯೇಕಿಸಿದ್ದ ದೂರವನ್ನು ನೆನೆದಾಗ ಅವಳ ಹೃದಯ ತಳಮಳಗುಟ್ಟುತ್ತಿತ್ತು. ಸಂಭಾಷಣೆ ಯಾವುದೇ ವಿಷಯಕ್ಕೆ ಸಂಬಂಧಿಸಿದ್ದಾಗಿರಲಿ, ಅವಳ ಆಲೋಚನೆಗಳು ಮಾತ್ರ ಗುಂಗುರುಗೂದಲಿನ ಸರ್ಜಿಯ ಕಡೆಗೆ ಹರಿಯುತ್ತಿದ್ದುವು. ಅವನ ಭಾವಚಿತ್ರವನ್ನು ನೋಡುತ್ತ ನೋಡುತ್ತ, ಅವನ ಬಗ್ಗೆ ಮಾತಾಡಬೇಕೆಂದವಳು ಅಪೇಕ್ಷಿಸಿದಳು. ಪ್ರಪ್ರಥಮ ಅವಕಾಶ ದೊರೆತ ಕೂಡಲೇ ಅವಳು ಮೇಲೆದ್ದು, ಚಿತ್ರಪಟವನ್ನು ತರುವ ಸಲುವಾಗಿ ಭರ್‍ರವಾಗಿ ಚುರುಕಾಗಿ ಹೆಜ್ಜೆಯಿಡುತ್ತ ಹೋದಳು. ದೊಡ್ಡದೂ ಆಕರ್ಷಕವೂ ಆದ ಪ್ರಮುಖ ಸೋಪಾನ ಪಂಕ್ತಿಯ ಜಗಲಿಯ ಮೇಲಣ ಮೆಟ್ಟಿಲುಗಳು ಅವಳ ಕೋಣೆಗಭಿಮುಖವಾಗಿದ್ದುವು.

ಅವಳು ದಿವಾನಖಾನೆಯಿಂದ ಕಾಲ್ತೆಗೆಯುತ್ತಿದ್ದಂತೆ ಬಾಗಿಲ ಗಂಟೆ ದ್ವಾರಪ್ರದೇಶ ದಲ್ಲಿ ನಿನದಿಸಿತು.

'ಯಾರವರು ?' ಎಂದು ಡಾಲಿ ಕೇಳಿದಳು.

'ತನಗಾಗಿ ಬಂದಿದ್ದರೆ ಮುಂಚೆಯಾಯಿತು; ಇತರರಿಗಾದರೆ ತಡವಾಯಿತು' ಎಂದು ಕಿಟ್ಟಿ ಗೊಣಗಿಕೊಂಡಳು.

'ನನಗೋಸ್ಕರ ಯಾರೊ ಕಡತಗಳನ್ನು ತಂದಿರಬೇಕು' ಎಂದು ಆಬ್ಲಾನ್‌ಸ್ಕಿ ನುಡಿದನು. ಅನ್ನಾ ಪ್ರಮುಖ ಸೋಪಾನಪಂಕ್ತಿಯನ್ನೇರುತ್ತಿದ್ದಂತೆ, ಭೇಟಿಕಾರನ ಆಗಮನವನ್ನು ಘೋಷಿಸುವ ಸಲುವಾಗಿ ಆಳೊಬ್ಬ ಓಡಿಬಂದನು. ಭೇಟಿಕಾರ ಕೆಳಗಡೆಯ ಹಜಾರದ ದೀಪದೆಡೆ ಕಾಯುತ್ತ ನಿಂತಿದ್ದನು. ಅವಳು ಕೆಳಗಡೆಗೆ ದಿಟ್ಟಿ ಹಾಯಿಸಿದಳು; ಕೂಡಲೆ ವ್ರಾನ್ಸ್ಕಿಯನ್ನು ಗುರುತಿಸಿದಳು; ಭಯಮಿಶ್ರಿತ ವಿಚಿತ್ರತರ ಆನಂದ ಅವಳ ಹೃದಯದಲ್ಲಿ ತುಡಿಯುತ್ತಿತ್ತು. ಅವನು ಕೋಟು ತೆಗೆಯದೆಯೆ, ಜೇಬಿನಿಂದೇನನ್ನೊ ಹೊರಗೆಳೆಯುತ್ತ ನಿಂತಿದ್ದನು. ಅವಳು ಸೋಪಾನಾರ್ಧ ಭಾಗವನ್ನೇರಿದಾಗ, ಅವನು ಕಣ್ಣುಗಳನ್ನು ಮೇಲೆತ್ತಿದನು; ಅವಳನ್ನು ನೋಡಿದನು; ಗಾಬರಿನಾಚಿಕೆಗಳು ಅವನ ಮುಖದ ಮೇಲೆ ಸುಳಿದಾಡಿದುವು. ತುಸು ತಲೆತೊನೆದು ಅವಳು ನಡಗೆ ಮುಂದುವರಿಸಿದಳು; ಮೇಲೆ ಬರುವಂತೆ ಅವನನ್ನು ಕರೆದ ಆಬ್ಲಾನ್‌ಸ್ಕಿಯ ಗಟ್ಟಿ ಕೂಗು ಮರುಕ್ಷಣದಲ್ಲಿಯೇ ಕೇಳಿಸಿತು. ವ್ರಾನ್ಸ್ಕಿಯ ಪ್ರಶಾಂತ ಧ್ವನಿ ಆಬ್ಲಾನ್‌ಸ್ಕಿಯ ಆಹ್ವಾನವನ್ನು ತಿರಸ್ಕರಿಸುವಂತಿತ್ತು.

ಚಿತ್ರಪಟದೊಡನೆ ಅನ್ನಾ ಹಿಂದಿರುಗುವ ಹೊತ್ತಿಗೆ ಅವನು ಹೊರಟುಹೋಗಿದ್ದನು. ಮಾಸ್ಕೋಗೆ ಭೇಟಿ ನೀಡಲಿದ್ದ ಸುಪ್ರಸಿದ್ಧ ವ್ಯಕ್ತಿಯ ಗೌರವಾರ್ಥವಾಗಿ ಮಾರನೆಯ ದಿವಸವೆ ವ್ಯವಸ್ಥೆಗೊಳಿಸಬೇಕಾಗಿದ್ದ ಭೋಜನ ವಿಷಯವನ್ನರಿಯುವ ಸಲುವಾಗಿ ಅವನು ಬಂದಿದ್ದುದಾಗಿ ಆಬ್ಲಾನ್‌ಸ್ಕಿ ಹೇಳುತ್ತಿದ್ದನು.

'ಮೇಲೆ ಬರುವುದಿಲ್ಲವೆಂದು ಅವನು ಖಡಾಖಂಡಿತವಾಗಿ ಹೇಳಿಬಿಟ್ಟ. ಅವನೆಂಥ ವಿಚಿತ್ರವ್ಯಕ್ತಿ!' ಎಂದವನು ನುಡಿದನು.

ಕಿಟ್ಟಿಯ ಮುಖ ಕೆಂಪೇರಿತು. ಅವನೇಕೆ ಬಂದಿದ್ದ, ಅವನೇಕೆ ತಮ್ಮೊಡನೆ ಸೇರಲಿಲ್ಲವೆಂಬುದು ಕಿಟ್ಟಿಗೆ ಮಾತ್ರ ತಿಳಿದಿತ್ತು. 'ಅವರು ಮೊದಲು ನಮ್ಮ ಮನೆಗೆ ಹೋಗಿರಬೇಕು. ನಾನು ಮನೆಯಲ್ಲಿಲ್ಲದ್ದರಿಂದ ಇಲ್ಲಿರಬೇಕೆಂದು ಬಗೆದು ಬಂದಿರಬೇಕು; ತುಂಬ ತಡವಾದ್ದರಿಂದ, ಜತೆಗೆ ಅನ್ನಾ ಇಲ್ಲಿರುವುದರಿಂದ ಅವರು ಒಳಗೆ ಬರಲಿಲ್ಲ' ಎಂದವಳು ಆಲೋಚಿಸಿದಳು.

ದಿಟ್ಟಿಗಳ ವಿನಿಮಯವಾಯಿತೇ ಹೊರತು, ಮಾತು ಮಿಸುಕಲಿಲ್ಲ; ಪ್ರತಿಯೊಬ್ಬರ ದೃಷ್ಟಿಯೂ ಅನ್ನಾಳ ಚಿತ್ರ ಸಂಪುಟದ ಕಡೆಗೆ ತಿರುಗಿತು.

ಒಂಬತ್ತೂವರೆ ಗಂಟೆ ಸಮಯದಲ್ಲಿ ತನ್ನ ಮಿತ್ರನನ್ನು ನೋಡಲು ಭಾವೀ ಭೋಜನಕೂಟದ ಬಗ್ಗೆ ವಿಚಾರಿಸಲು ಬಂದದ್ದರಲ್ಲಿ, ಒಳಗೆ ಬರುವಂತೆ ಕೇಳಿಕೊಂಡ ಕರೆಯನ್ನು ನಿರಾಕರಿಸಿದ್ದರಲ್ಲಿ ಅಸಾಧಾರಣವಾದ ಅಥವಾ ವಿಚಿತ್ರವಾದ ಅರ್ಥವನ್ನಾರೋಪಿಸಲಾಗದು. ಆದರೂ ಆ ವರ್ತನೆ ವಿಚಿತ್ರವಾದದ್ದೆಂದೇ ಪ್ರತಿಯೊಬ್ಬರೂ

ಬಗೆದರು. ಇತರರಿಗದು ವಿಚಿತ್ರವಾಗಿ ಹಾಗೂ ಅಹಿತವಾಗಿ ತೋರದಿದ್ದರೂ, ಅನ್ನಾಳಿಗಂತು ಹಾಗೆ ತೋರಿದ್ದುಂಟು.

೨೨

ದೀಪ ರಾಜಿಯಿಂದ ವಿರಾಜಮಾನವಾದ, ವಿವಿಧ ವರ್ಣಾಕೀರ್ಣ ಪುಷ್ಪರಾಶಿಯಿಂದಲಂಕೃತವಾದ, ಕೆಂಪುಕೋಟು ಪಟವಾಸಗಳಿಂದ ಶೋಭಾಯಮಾನರಾದ ಸೇವಕರಿದ್ದ ಸೋಪಾನಪಂಕ್ತಿಯಲ್ಲಿ ಕಿಟ್ಟಿಯೂ ಅವಳ ತಾಯಿಯೂ ಹೆಜ್ಜೆಯಿರಿಸಿದಾಗ ನೃತ್ಯ ಆದೆ ತಾನೆ ಆರಂಭವಾಗಿತ್ತು. ಜೇನುಗೂಡಿನಲ್ಲಿದ್ದಂತೆ ಕೋಣೆಗಳಿಂದ ನಿರಂತರ ಮರ್ಮರ ಧ್ವನಿ ಕೇಳಿಸುತ್ತಿತ್ತು. ಕೂದಲು ಮತ್ತು ವಸ್ತ್ರಗಳನ್ನು ಸರಿಪಡಿಸಿಕೊಳ್ಳುವ ಸಲುವಾಗಿ ಅವರು ಜಗಲಿಯ ಮೇಲೆ ಮರಗಳ ನಡುವೆ ಕನ್ನಡಿಯ ಮುಂದೆ ನಿಂತುಕೊಂಡಾಗ, ಭ್ರಮಣನೃತ್ಯಸಂಗೀತದ ಮೊದಲ ಚರಣದಿಂದಾರಂಭವಾದ ಮೇಳಗಾನದ ಪಿಟೀಲಿನ ಸುಸ್ಪಷ್ಟ ಮಧುರ ಮಂದ್ರ ಧ್ವನಿಗಳು ಅಲೆಯಲೆಯಾಗಿ ನೃತ್ಯಮಂದಿರದಿಂದ ತೂರಿಬರುತ್ತಿದ್ದುವು. ಮತ್ತೊಂದು ಕನ್ನಡಿಯ ಮುಂದೆ ನಿಂತುಕೊಂಡು ತನ್ನ ಕಪೋಲದ ಮೇಲಣ ಬೂದುಬಣ್ಣದ ಕುರುಳನ್ನು ನೇವರಿಸಿಕೊಂಡಿದ್ದ, ಉಟ್ಟಿದ್ದ ವಸ್ತ್ರಗಳಿಂದ ಕಟುವಾದ ಸುಗಂಧದ್ರವ್ಯ ಮೂಗಿಗಡರುತ್ತಿದ್ದ, ಅಯೋಧ ವಸ್ತ್ರಗಳನ್ನು ಧರಿಸಿದ್ದ ಮುದುಕನೊಬ್ಬ ಮೆಟ್ಟಿಲಿನ ಮೇಲೆ ಅವರಿಗೆದುರಾಗಿ, ತನಗೆ ಪರಿಚಯವಿಲ್ಲದ ಕಿಟ್ಟಿಯನ್ನು ನಖಶಿಖಾಂತವಾಗಿ ನೋಡುವ ಸಲುವಾಗಿ ಪಕ್ಕಕ್ಕೆ ಸರಿದು ನಿಂತುಕೊಂಡನು. ಹಿರಿಯ ರಾಜಕುಮಾರ ಶರ್ಬತ್‌ಸ್ಕಿ ಶುದ್ಧ ಪಟಿಂಗರೆಂದು ಕರೆಯುತ್ತಿದ್ದ ಶಿಷ್ಟಸಮಾಜದ ಯುವಕರಲ್ಲೊಬ್ಬನಾದ, ತುಂಡನೆಯ ಸೊಂಟಕೋಟನ್ನು ಧರಿಸಿದ್ದ, ಗಡ್ಡವಿಲ್ಲದ ತರುಣನೊಬ್ಬ ಸೋಪಾನವನ್ನೇರುತ್ತಿದ್ದಂತೆ ತನ್ನ ಬಿಳಿಯ ಕೊರಳ ಪಟ್ಟಿಯನ್ನು ನೇರಗೊಳಿಸಿಕೊಂಡು, ಮುಂದೆ ಹೋಗುತ್ತಿದ್ದಂತೆ ಅವರಿಗೆ ಮಣಿದು, ತನ್ನೊಡನೆ ಚೌಕಕುಣಿತದಲ್ಲಿ ಭಾಗವಹಿಸುವಂತೆ ಕಿಟ್ಟಿಯನ್ನಾಹ್ವಾನಿಸುವ ಸಲುವಾಗಿ ಹಿಂದಕ್ಕೆ ಬಂದನು. ಮೊದಲ ಸರದಿಯ ಚೌಕಕುಣಿತಕ್ಕಾಗಿ ವ್ರಾಂಸಿಗವಳು ಮಾತುಕೊಟ್ಟಿದ್ದರಿಂದ, ಎರಡನೆಯ ಸುತ್ತಿನಲ್ಲಿ ಜತೆಗೂಡುವುದಾಗಿ ಈ ಯುವಕನಿಗವಳು ವಾಗ್ದಾನ ನೀಡಿದಳು. ಕೈಗವಸಿನ ಗುಂಡಿಯನ್ನು ಹಾಕಿಕೊಳ್ಳುತ್ತ ಬಾಗಿಲಲ್ಲಿ ನಿಂತಿದ್ದ ಅಧಿಕಾರಿಯೊಬ್ಬ ಅವರ ಪ್ರವೇಶಕ್ಕನುವುಮಾಡಿಕೊಡುವ ಸಲುವಾಗಿ ಪಕ್ಕಕ್ಕೆ ಜಗಿದನು; ಗುಲಾಬಿಬಣ್ಣದ ಕಿಟ್ಟಿಯ ಸೌಂದರ್ಯವನ್ನು ಹೀರಿಕೊಳ್ಳುವವನಂತೆ ಅವಳನ್ನೇ ನೋಡುತ್ತ ತನ್ನ ಗಡ್ಡವನ್ನು ಸವರಿಕೊಳ್ಳುತ್ತಿದ್ದನು.

ಆ ನೃತ್ಯಕ್ಕೆ ಸಂಬಂಧಿಸಿದಂತೆ ಮೇಲಾಗಿ, ಕೇಶ ಪ್ರಸಾಧನವೇ ಮೊದಲಾದ ಪೂರ್ವಸಿದ್ಧತೆಗಳಿಗಾಗಿ ಕಿಟ್ಟಿ ತುಂಬ ಶ್ರಮ ವಹಿಸಿದ್ದಳು, ತನ್ನ ಕಲ್ಪನಾ ಸಾಮರ್ಥ್ಯವನ್ನೆಲ್ಲ ಖರ್ಚುಮಾಡಿದ್ದಳು. ಆದರೂ ಅವಳೀಗ ಪಾಟಲವರ್ಣದ ಒಳಕುಪ್ಪಸದ ಮೇಲೆ ಉತ್ತಮವಾದ ನವಿರು ರೇಶ್ಮೆಯ ವಸ್ತ್ರವನ್ನು ಧರಿಸಿಕೊಂಡು ನೃತ್ಯಮಂದಿರವನ್ನು ಪ್ರವೇಶಿಸಿದಳು. ಈ ಚಿತ್ರಾಲಂಕಾರದ ಕಲಾಬತ್ತಿನ ಉಡುಪಿಗಾಗಿ ಅವಳಾಗಲಿ, ಅವಳ ಮನೆಯವರಾಗಲಿ ಏನೇನೂ ಶ್ರಮವಹಿಸಿರಲಿಲ್ಲವೆಂಬಷ್ಟು ಸರಾಗ ಸ್ವಾತಂತ್ರ್ಯಗಳು ಅವಳ

ವರ್ತನೆಯಲ್ಲಿದ್ದು ಕಾಣುತ್ತಿದ್ದುವು ವಾಸ್ತವವಾಗಿ ಈ ರೇಷ್ಮೆವಸ್ತ್ರ ಮತ್ತು ಕಲಾಬತ್ತುಗಳ ಜತೆಯಲ್ಲಿಯೇ ಊರ್ಧ್ವಮುಖ ಕೇಶಾಲಂಕಾರದೊಡನೆ ಹಾಗೂ ಆ ಕೇಶಕ್ಕೆ ಮಕುಟ ಪ್ರಾಯವಾಗಿದ್ದ ದ್ವಿದಳ ಗುಲಾಬಿ ಹೂವಿನೊಡನೆ ಅವಳು ಜನ್ಮಧಾರಣೆ ಮಾಡಿರಬೇಕೆಂದು ತೋರುತ್ತಿತ್ತು.

ನೃತ್ಯಮಂದಿರವನ್ನು ಪ್ರವೇಶಿಸುವ ಮುನ್ನ ತಾಯಿ ತನ್ನ ಮಗಳ ನಡುಪಟ್ಟಿಯ ಅಂಚನ್ನು ಸರಿಸಗೊಳಿಸಲು ಪ್ರಯತ್ನಿಸಿದಾಗ, ಕಿಟ್ಟಿ ಮೆಲ್ಲಗೆ ಅವಳ ಕೈಯನ್ನು ಬಿಸರಿದಳು. ಎಲ್ಲವೂ ಹೇಗಿರಬೇಕೋ ಹಾಗೆ ಸಹಜವಾಗಿಯೇ ಸರಿಯಾಗಿದೆಯೆಂದೂ, ಸುಧಾರಣೆ ಅನವಶ್ಯವೆಂದೂ ಅವಳು ಭಾವಿಸಿದಳು.

ಅಂದು ಕಿಟ್ಟಿಯ ಅದೃಷ್ಟದ ದಿನಗಳಲ್ಲೊಂದಾಗಿತ್ತು. ಅವಳ ಕುಪ್ಪಸ ಬಹಳ ಬಿಗಿಯಾಗಿರಲಿಲ್ಲ; ಕಲಾಬತ್ತು ಅವಳ ಹೆಗಲ ಮೇಲಿಂದ ಜಾರಿಹೋಗಿರಲಿಲ್ಲ; ಅವಳ ಚಿತ್ರಾಲಂಕಾರ ಕುಸಿದಿರಲಿಲ್ಲ ಅಥವಾ ಸಡಿಲವಾಗಲಿಲ್ಲ; ಎತ್ತರದ ಹಿಮ್ಮಡಿಗಳಿದ್ದ ಪಾಟಲವರ್ಣದ ಚಪ್ಪಲಿಗಳು ಅವಳ ಪಾದಗಳನ್ನು ಮುದ್ದಿಸುತ್ತಿದ್ದುವೇ ಹೊರತು, ಕಡಿಯುತ್ತಿರಲಿಲ್ಲ. ತನ್ನ ಕೂದಲಿನ ಭಾಗವೆಂಬಂತೆ ಹೊಂಗೂದಲ ದಪ್ಪ ಗಂಟೊಂದು ಅವಳ ತಲೆಗಂಟಿಕೊಂಡಿತ್ತು. ಅವಳ ಉದ್ದನೆಯ ಕೈಗವಸುಗಳ ಮೂರು ಗುಂಡಿಗಳು ಸಂದು ಬಿಡದಂತೆ ನೇರ್ಪುಗೊಂಡಿದ್ದುವು; ಸುಕ್ಕಿಲ್ಲದ ಗವಸುಗಳಂತು ತೋಳುಗಳ ಆಕಾರವನ್ನು ವಿಕಾರಗೊಳಿಸದಂತೆ, ಅವುಗಳನ್ನು ನಯನಮನೋಹರವಾಗಿ ಮುಚ್ಚಿಕೊಂಡಿದ್ದುವು. ಅವಳ ಕೊರಳ ಸರದ ಪದಕದ ಕಪ್ಪು ಬಣ್ಣದ ಮಕಮಲ್ಲಿನ ಪಟ್ಟಿ ಅತ್ಯಂತ ಮೃದುವಾಗಿ ಅವಳ ಕತ್ತಿಗೆಯನ್ನಪ್ಪಿಕೊಂಡಿತ್ತು. ಆ ಪಟ್ಟಿ ಆಕರ್ಷಕವಾಗಿತ್ತು, ಸಮ್ಮೋಹನಗೊಳಿಸುವಂತಿತ್ತು; ಮನೆಯಲ್ಲಿ ಕನ್ನಡಿಯ ಮುಂದೆ ನಿಂತುಕೊಂಡು ಕಿಟ್ಟಿ ತನ್ನ ಕೊರಳನ್ನು ನೋಡಿಕೊಂಡಾಗ, ಪಟ್ಟಿ ತನಗೆ ಒಪ್ಪುತ್ತದೆಂದು ಭಾವಿಸಿಕೊಂಡಳು. ಬೇರೆ ಅಲಂಕಾರಗಳ ಬಗ್ಗೆ ಏನೆಂದು ಹೇಳದಿದ್ದರೂ, ಪಟ್ಟಿ ಮಾತ್ರ ಮನಮೋಹಕವಾಗಿತ್ತು. ನೃತ್ಯಮಂದಿರದಲ್ಲಿದ್ದಾಗಲೂ ಕನ್ನಡಿಯಲ್ಲದನ್ನು ನೋಡಿಕೊಂಡಾಗ ಕಿಟ್ಟಿಗೆ ನಗು ಬಂತು. ತನ್ನ ಬೆತ್ತಲೆದೋಳು ಭುಜಗಳಲ್ಲವಳು ಅಮೃತಶಿಲೆಯ ತಂಪನ್ನನುಭವಿಸಿದಳು. ಆ ಅನುಭವ ಅವಳಿಗೆ ಮಾದಕವಾಯಿತು. ತಾನು ಸುಂದರಿಯೆಂಬ ಪ್ರಜ್ಞೆಯಿಂದಾಗಿ ಅವಳ ಕಣ್ಣು ಹೊಳೆದುವು, ಅವಳ ಚೆಂದುಟಿಗಳು ಮಂದಹಾಸ ಸೂಸಿದುವು. ಅವಳು ನೃತ್ಯಮಂದಿರದಲ್ಲಿ ಕಾಲಿಟ್ಟುದೆ ತಡ, ನೃತ್ಯಾಹ್ವಾನಕ್ಕಾಗಿ ಕಾಯುತ್ತಿದ್ದ ವರ್ಣರಂಜಿತ ಪಟ್ಟಿಗಳನ್ನು, ಕಲಾಬತ್ತುಗಳನ್ನು ಮತ್ತು ರೇಷ್ಮೆವಸ್ತ್ರಗಳನ್ನು ಧರಿಸಿದ್ದ ಗುಂಪಿನ ಕಡೆಗೆ ಹೋದದ್ದೇ ತಡ, (ಆ ಗುಂಪಿನಲ್ಲಿ ಕಿಟ್ಟಿ ಬಹು ಹೊತ್ತು ನಿಲ್ಲಲಿಲ್ಲ) ಭ್ರಮಣನೃತ್ಯಕ್ಕವಳಿಗೆ ಆಹ್ವಾನ ದೊರೆಯಿತು. ಆಹ್ವಾನ ನೀಡಿದವನು ಇಗೊರುಷ್ಕ ಕೊರ್ಸುನ್‌ಸ್ಕಿ; ಅವನೊಬ್ಬ ಉನ್ನತ ಸುಂದರ ವಿವಾಹಿತ ವ್ಯಕ್ತಿ; ನೃತ್ಯಮಂದಿರದ ಕಲಾವಿದರ ಶ್ರೇಣಿಯಲ್ಲವನು ಪ್ರಪ್ರಥಮ ತಾರೆ; ನೃತ್ಯಗಳ ಸುಪ್ರಸಿದ್ಧ ನಿರ್ದೇಶಕ; ನೃತ್ಯೋತ್ಸವಗಳ ವ್ಯವಸ್ಥಾಪಕ. ಅವನು ಆಗ ತಾನೆ ಭ್ರಮಣ ನೃತ್ಯದ ಮೊದಲರ್ಧಭಾಗವನ್ನು ಕೌಂಟೆಸ್ ಬಾನಿನಳೊಡನೆ ಮುಗಿಸಿದ್ದನು. ಕೇವಲ ಕೆಲವು ಜೋಡಿಗಳು ಮಾತ್ರವೇ ಪ್ರವೇಶಿಸಲು ಧೈರ್ಯಮಾಡಿದ್ದ ಇಡೀ ನೃತ್ಯಾಂಗಣ

ವನ್ನೊಮ್ಮೆ ತನ್ನ ಕಣ್ಣೊಳಗೆ ಬಾಚಿಕೊಂಡಾಗ, ಅವನು ಒಳಗಡೆ ಬರುತ್ತಿದ್ದ ಕಿಟ್ಟಿಯನ್ನು ಕಂಡು, ನೃತ್ಯೋತ್ಸವಗಳ ವ್ಯವಸ್ಥಾಪಕರಿಗೆ ಮಾತ್ರವೇ ಮೀಸಲಾಗಿದ್ದ ಶಿಥಿಲವಾದ, ಆದರೆ ಒಯ್ಯಾರದ ನಡಗೆಯಿಂದ ಅವಳ ಬಳಿಗೆ ಧಾವಿಸಿದನು. ಅವಳ ಅನುಮತಿಯ ಮರ್ಯಾದೆಗು ಸಹ ಕಾಯದೆ, ಅವನು ತನ್ನ ತೋಳನ್ನು ಚಾಚಿ, ಅವಳ ಕೃಶಕಟಿಯನ್ನು ಬಳಸಿದನು. ತನ್ನ ಬೀಸಣಿಗೆಯನ್ನು ಯಾರಿಗೆ ಕೊಡಬಹುದೆಂದವಳು ಕ್ಷಣ ಕಾಲ ಸುತ್ತಣವರ ಕಡೆಗೆ ಕಣ್ಣು ಹಾಯಿಸಿದಳು; ನೃತ್ಯಮಂದಿರದ ಯಜಮಾನಿ ಮುಗುಳು ನಗುತ್ತ, ಅದನ್ನೀಸಿಕೊಂಡಳು.

'ಸಕಾಲದಲ್ಲಿ ನೀನು ಬಂದದ್ದು ಚಲೋ ಆಯಿತು' ಎಂದವನು ತನ್ನ ತೋಳಿಂದ ಅವಳ ನಡುವನ್ನು ಬಾಚಿಕೊಳ್ಳುತ್ತ ನುಡಿದನು. 'ಈ ವಿಲಂಬಾಗಮನ ಚಾಳಿ ನನಗೆ ಹಿಡಿಸದು.'

ತನ್ನ ಎಡದೋಳನ್ನವಳು ಕೊಂಕಿಸಿ ಅವನ ಭುಜದ ಮೇಲಿರಿಸಿದಳು. ಕೆಂಪು ಬಣ್ಣದ ಚಪ್ಪಲಿಗಳನ್ನು ಧರಿಸಿದ್ದ ಅವಳ ಸಣ್ಣ ಪಾದಗಳು ಸಂಗೀತಕ್ಕೆ ಹೊಂದಿಕೊಂಡು, ಹಗುರವಾಗಿ ಚುರುಕಾಗಿ ಜಾರು ಮರದ ನೆಲಗಟ್ಟಿನಮೇಲೆ ಸಂಚಲಿಸಿದುವು.

'ನಿನ್ನೊಡನೆ ಕುಣಿಯುವುದೊಂದೆ ಆನಂದವೆನಿಸುತ್ತದೆ' ಎಂದವನು ಮೊಮ್ಮೊದಲ ಮೆಲ್ಲನೆಯ ಜಾರು ಹೆಜ್ಜೆಗಳ ನಂತರ ನುಡಿದನು. 'ಅದೆಷ್ಟು ನಿರುಕು, ಅದೆಷ್ಟು ಹಗುರ, ಅದೆಷ್ಟು ಮನೋಹರ!' ಎಂದವನು ಸಾಮಾನ್ಯವಾಗಿ ತನ್ನೆಲ್ಲ ಜತೆಗಾತಿಯರಿಗೆ ಹೇಳುವ ಧಾಟಿಯಲ್ಲಿಯೆ ನುಡಿದನು.

ಅವನ ಪ್ರಶಂಸೆಗಾಗಿ ಅವಳು ಮುಗುಳುನಗೆ ಸೂಸಿದಳು; ಅವನ ತೋಳ ಮೇಲಿಂದ ಇಡೀ ಕೋಣೆಯಲ್ಲೆಲ್ಲ ದಿಟ್ಟಿ ಹರಿಸಿದಳು. ನೃತ್ಯಮಂದಿರದ ಮುಖಗಳೆಲ್ಲ ಕಿನ್ನರಲೋಕದ ರಮ್ಯದೃಶ್ಯದಲ್ಲಿ ಕರಗಿಹೋಗುವಂಥ ಪ್ರಥಮಾನುಭವದ ಮೊದಲಗಿತ್ತಿಯಾಗಿರಲಿಲ್ಲ ಅವಳು; ಮತ್ತೆ ಮತ್ತೆ ನೃತ್ಯಮಂದಿರಕ್ಕೆ ಹೋಗುತ್ತಿದ್ದ, ಅಲ್ಲಿಯ ಪ್ರತಿಯೊಂದು ಮುಖವೂ ಬೇಸರ ಬರಿಸುವಷ್ಟು ತಂಗಳು ಅನುಭವವನ್ನು ಪಡೆದ ಹೆಣ್ಣು ಸಹ ಅವಳಾಗಿರಲಿಲ್ಲ; ಆದರೆ ಅವಳು ಇವೆರಡರ ಮಧ್ಯಸ್ಥಿತಿಯಲ್ಲಿದ್ದಳು. ಅವಳು ಭಾವಾವೇಶಕ್ಕೊಳಗಾಗಿದ್ದರೂ, ತನ್ನ ಪರಿಸರವನ್ನು ವೀಕ್ಷಿಸುವಷ್ಟು ಸಮತೋಲನವನ್ನು ಪಡೆದಿದ್ದಳು. ಮಂದಿರದ ಎಡಮೂಲೆಯಲ್ಲವಳು ಸಮಾಜದ ಕೆನೆಯಂತಿದ್ದ ಗುಂಪನ್ನು ಕಂಡಳು. ಅವಳಲ್ಲಿ ತಲ್ಲಣಗೊಳಿಸುವಷ್ಟು ನಗ್ನಳಾಗಿದ್ದ ಕೊರ್ಸುನ್‌ಸ್ಕಿಯ ಮಡದಿ ಚೆಲುವೆ ಲಿಡಿಯನ್ನು ಗುರುತಿಸಿದಳು; ಅಲ್ಲಿಯೇ ಮಂದಿರದ ಯಜಮಾನಿಯಿದ್ದಳು; ಯಾವಾಗಲೂ ಸಮಾಜದ ಸುಸಂಸ್ಕೃತ ಜನರಿಗಂಟಿಕೊಂಡಿರುತ್ತಿದ್ದ, ಮಿರುಗುವ ಬಕ್ಕದಲೆಯ ಕ್ರಿವಿನ್ ಅಲ್ಲಿಯೇ ಇದ್ದನು. ಆ ಮೂಲೆಯ ಕಡೆಗೆ ಕಾಲಿಡಲಂಜುತ್ತಿದ್ದ ಯುವಕರ ಕಣ್ಣು ಮಾತ್ರ ಅಲ್ಲಿಯೇ ನಾಟಿದ್ದುವು. ಅಲ್ಲಿದ್ದ ಆಬ್ಲಾನ್‌ಸ್ಕಿಯನ್ನವಳು ನೋಡಿದಳು; ಕಪ್ಪು ಮೊಕಮಲ್ಲಿನ ಉಡುಪು ಧರಿಸಿದ್ದ ಅನ್ನಾಳ ಸುಂದರಾಕೃತಿಯ ಮೇಲೆಯೂ ಅವಳ ಕಣ್ಣು ಹರಿಯಿತು. ಅವನು ಸಹ ಅಲ್ಲಿದ್ದನು. ವಿವಾಹ ಪ್ರಸ್ತಾಪವನ್ನು ನಿರಾಕರಿಸಿದಾಗಿನಿಂದ ಕಿಟ್ಟಿ ಲೆವಿನ್‌ನನ್ನು ನೋಡಿರಲಿಲ್ಲ. ಕಿಟ್ಟಿಯ ಚುರುಕು ಗಣ್ಣು ಕೂಡಲೇ ಅವನನ್ನು ಗುರುತಿಸಿದುವು; ಅಷ್ಟೇ ಅಲ್ಲ, ಅವನ ಕಣ್ಣು ತನ್ನಲ್ಲಿಯೇ ನಾಟಿವೆಯೆಂಬುದನ್ನು ಸಹ ಅವು ಗಮನಿಸಿದುವು.

'ಮತ್ತೊಂದು ಸರದಿಗೆ ನೀನು ಸಿದ್ಧವೆ? ನೀನು ಬಳಲಲಿಲ್ಲವಷ್ಟೆ?' ಎಂದು ಕೊರ್ಸ್ಸನ್‌ಸ್ಕಿ ತುಸು ಉಸಿರು ಬಿಡುತ್ತ ಪ್ರಶ್ನಿಸಿದನು.

'ಬೇಡ, ಬೇಡ; ಧನ್ಯವಾದಗಳು'

'ನಿನ್ನನ್ನೆಲ್ಲಿಗೆ ಕರೆದೊಯ್ಯಲಿ?'

'ಶ್ರೀಮತಿ ಕರೆನಿನ ಅಲ್ಲಿರುವಂತೆ ತೋರುತ್ತದೆ; ಅವರಲ್ಲಿಗೆ ಕರೆದೊಯ್ಯಿರಿ.'

'ನಿನ್ನಿಷ್ಟದಂತಾಗಲಿ.'

ಮಂದಿರದ ಎಡಮೂಲೆಯಲ್ಲಿದ್ದ ಗುಂಪಿನ ಕಡೆಗೆ ಲಯಬದ್ಧವಾದ ಹೆಜ್ಜೆಯೊಡನೆ ಕೊರ್ಸ್ಸನ್‌ಸ್ಕಿ ಮೆಲ್ಲಮೆಲ್ಲನೆ ಕುಣಿಯುತ್ತ ಹೊರಟನು. ಮೆಲ್ಲಗೆ ಹೆಜ್ಜೆಹಾಕುತ್ತಿದ್ದಂತೆಲ್ಲ ಅವನು 'ಕ್ಷಮಿಸಿ, ಅಮ್ಮ; ಕ್ಷಮಿಸಿ, ತಾಯಿ, ಕ್ಷಮಿಸಿ' ಎಂದು ಪುನರುಕ್ತಿಸುತ್ತಿದ್ದನು. ಕಲಾಬತ್ತು ರೇಷ್ಮೆ ಮೊಕಮಲ್ಲುಗಳ ಸಮುದ್ರದ ನಡುವೆ, ಕುಚ್ಚು ತುರಾಯಿಗಳು ನಲುಗದಂತೆ ಅವನನಳನ್ನು ನಡಸಿಕೊಂಡು ಹೋದನು; ಕೊನೆಯಲ್ಲವನು ತನ್ನ ಜತೆಗಾತಿಯನ್ನು ಗಿರಗಿರನೆ ತಿರುಗಿಸಲಾಗಿ, ಪಾರದರ್ಶಕ ಕಾಲುಚೀಲಗಳನ್ನು ಧರಿಸಿದ್ದ ಅವಳ ತೆಳ್ಳನೆಯ ಮೊಳಕಾಲುಗಳ ಪ್ರದರ್ಶನ ನೋಟಕರಿಗೆ ಹಬ್ಬವಾಗಿತ್ತು; ಅವಳ ಲಂಗದ ತೋಕೆ ಹಾರಾಡುತ್ತ, ಕ್ರಿವಿನ್‌ನ ಮೊಣಕಾಲುಗಳಿಗೆ ಸುತ್ತಿಕೊಂಡಿತು. ಕೊರ್ಸ್ಸನ್‌ಸ್ಕಿ ತಲೆಮಣಿದು, ತನ್ನ ಶರಟಿನ ಮುಂಭಾಗವನ್ನು ನೇರಗೊಳಿಸಿಕೊಂಡು, ಶ್ರೀಮತಿ ಕರೆನಿನಳ ಬಳಿಗೊಯ್ಯುವ ಸಲುವಾಗಿ ಕಿಟ್ಟಿಗೆ ತನ್ನ ಕೈನೀಡಿದನು. ಕೆಂಪೇರಿದ ಕಿಟ್ಟಿ ಕ್ರಿವಿನ್‌ನ ಮೊಳಕಾಲಿಂದ ತನ್ನ ಲಂಗದ ತೋಕೆಯನ್ನು ಬಿಡಿಸಿಕೊಂಡಳು; ಇನ್ನೂ ತಲೆ ತಿರುಗಿದಂತಾಗಿ, ಅನ್ನಾಳನ್ನು ಹುಡುಕುವ ಸಲುವಾಗಿ ಅವಳು ಸುತ್ತಲೂ ಕಣ್ಣು ಹಾಯಿಸಿದಳು. ಕಿಟ್ಟಿ ಊಹಿಸಿಕೊಂಡಿದ್ದಂತೆ ಲೈಲಕ್ ಉಡುಪು ಧರಿಸಿರಲಿಲ್ಲ; ದಂತದಿಂದ ಕೆತ್ತಿದಂತಿದ್ದ ಭುಜ ಮತ್ತು ವಕ್ಷಗಳನ್ನು ತೆರೆದು ತೋರಿಸುವಂತಿದ್ದ ಕಪ್ಪು ಬಣ್ಣದ ಮೊಕಮಲ್ಲಿನ ತುಂಡು ಮೇಲಂಗಿಯನ್ನು ತೊಟ್ಟಿದ್ದಳು; ತೆಳ್ಳನೆಯ ಮಣಿಕಟ್ಟುಗಳುಳ್ಳ ಅವಳ ದುಂಡುದೋಳು ಮನಮೋಹಕವಾಗಿದ್ದುವು. ವೆನಿಷಿಯನ್ ಕಲಾಬತ್ತು ಅವಳ ಮೇಲುಡುಪಿಗೆ ಮೆರುಗುಕೊಟ್ಟಿತ್ತು. ಕೃತಕ ಕುಂತಲವಿಲ್ಲದ ಅವಳ ಕೃಷ್ಣ ಕೇಶದಲ್ಲಿ ವಿವಿಧ ವರ್ಣಗಳ ಪುಷ್ಪ ವೃತ್ತಿಕೆಯೊಂದು ಅಲಂಕೃತಿಗೊಂಡಿತ್ತು; ಅಂಥದೇ ಮತ್ತೊಂದು ವೃತ್ತಿಕೆ ಅವಳ ಕಪ್ಪನೆಯ ಹೆಗಲುಪಟ್ಟಿಯ ಗುಲಾಬಿಯಾಕಾರದ ಚಿತ್ರದಲ್ಲಿ ಅಚ್ಚುಕಟ್ಟಾಗಿ ನೆಲಸಿತ್ತು. ಅವಳ ಕೇಶಾಲಂಕಾರ ಕಣ್ಣು ಕುಕ್ಕುವಂತಿರಲಿಲ್ಲ. ಕತ್ತಿನ ಹಿಂಭಾಗದಲ್ಲಿ ಮತ್ತು ಅವಳ ಕಪೋಲಗಳಲ್ಲಿ ಅಲಂಕಾರಯುತವಾಗಿ ಹಾಗೂ ಸ್ವೇಚ್ಛೆಯಾಗಿ ಹಾರಾಡುತ್ತಿದ್ದ ಗುಂಗುರು ಗೂದಲಿನ ಹರಿಗಳು ಎದ್ದು ಕಾಣುತ್ತಿದ್ದುವು. ಅತ್ಯಂತ ರಮಣೀಯವಾದ ಮುತ್ತಿನ ಹಾರವೊಂದು ಅವಳ ಕಂಠವನ್ನಾಲಿಂಗಿಸಿಕೊಂಡಿತ್ತು.

ಕಿಟ್ಟಿ ಅನ್ನಾಳನ್ನು ಪ್ರತಿನಿತ್ಯ ನೋಡುತ್ತಿದ್ದಳು, ಅವಳನ್ನು ಪ್ರೀತಿಸುತ್ತಿದ್ದಳು; ಲೈಲಕ್ ಉಡುಪು ಅವಳಿಗೆ ಅತ್ಯಂತ ಶೋಭಾಯಮಾನವಾಗಿತ್ತೆಂದು ಅವಳು ಭಾವಿಸಿಕೊಂಡಿದ್ದಳು. ಈಗವಳು ಕಪ್ಪು ಬಣ್ಣದ ಉಡುಪು ಧರಿಸಿರಲಾಗಿ, ಅವಳ ಲಾವಣ್ಯ ಪೂರ್ಣವಾಗಿ ಗೋಚರಿಸುತ್ತಿರಲಿಲ್ಲವೆಂದು ಕಿಟ್ಟಿ ಯೋಚಿಸಿದಳು. ಈಗವಳು ಬೇರೊಬ್ಬ

ಹೆಂಗಸಾಗಿರಬೇಕೆಂದೇ ತಿಳಿದಳು. ಅನ್ನಾ ಲೈಲಕ್ ಉಡುಪು ಧರಿಸಿರಲಾರಳೆಂದೇ ಅವಳು ಬಗೆದಳು. ಅವಳ ಭೂಷಣಾಲಂಕಾರಗಳನ್ನು ಮೀರಿ ಅವಳ ಲಾವಣ್ಯ ವಿಭ್ರಾಜಮಾನ ವಾಗಿತ್ತೆಂಬುದನ್ನವಳು ಬಲ್ಲಳು. ಅವಳ ಸೌಂದರ್ಯದ ಮರೆಯಲ್ಲಿ ಅವಳ ಉಡುಪು ಯಾವಾಗಲೂ ಮುಚ್ಚಿಹೋಗುತ್ತಿತ್ತು. ಆಕರ್ಷಕ ಕಲಾಬತ್ತಿನಂಚಿನ ಅವಳ ಕಪ್ಪು ಮೇಲುಡುಪು ಸಹ ದೃಷ್ಟಿಗಗೋಚರವಾಗಿರುತ್ತಿತ್ತು; ಅದೊಂದು ಬರಿಯ ಚೌಕಟ್ಟಾ ಗಿತ್ತು. ಕೃತ್ರಿಮವಲ್ಲದ, ಸರಳವೂ, ಮನೋಹರವೂ, ಉಲ್ಲಾಸಶೀಲೆಯೂ ಚೈತನ್ಯ ಶಾಲಿಯೂ ಆದ ಅವಳು ಮಾತ್ರ ಕಣ್ಣಿಗೆ ಕಟ್ಟಿದಂತಿರುತ್ತಿದ್ದಳು.

ಅವಳಲ್ಲಿ ಎಂದಿನಂತೆ ನೆಟ್ಟಗೆ ನಿಂತಿದ್ದಳು. ಕಿಟ್ಟಿ ತನ್ನ ಬಳಿಗೈದಿದಾಗ ಅವಳು ಆತಿಥೇಯನೊಡನೆ ಮಾತಾಡುತ್ತಿದ್ದಳು, ಅವಳ ತಲೆ ಅವನ ಕಡೆಗೆ ತುಸು ಉರುಗಿತ್ತು.

'ಇಲ್ಲ, ನಾನು ಕಲ್ಲು ತೂರುವಂಥವಳಲ್ಲ' ಎಂದವಳು ಆತಿಥೇಯ ಕೇಳಿದ ಪ್ರಶ್ನೆ ಗುತ್ತರವಾಗಿ ನುಡಿದಳು. 'ಆದರೆ ಅದು ನನಗರ್ಥವಾಗದು' ಎಂದವಳು ಭುಜ ಕುಣಿಸಿ ದಳು. ಮರುಕ್ಷಣದಲ್ಲಿಯೇ ಆರಕ್ಷಕ ಜವಾಬ್ದಾರಿಯ ಮೃದು ಮಂದಹಾಸದೊಡನೆ ಅವಳು ಕಿಟ್ಟಿಯ ಕಡೆಗೆ ತಿರುಗಿದಳು. ಸ್ತ್ರೀಸಹಜವಾದ ತೀಕ್ಷ್ಣ ಚಂಚಲ ದೃಷ್ಟಿಯಿಂದ ಹುಡುಗಿಯ ಮೇಲುಡುಪಿನ ಮೇಲೆ ಕಣ್ಣು ಹಾಯಿಸಿದನಂತರ ಅವಳು ಕಂಡೂ ಕಾಣ ದಂತೆ ಕಿಟ್ಟಿಯ ಮೇಲುಡುಪು ಮತ್ತು ಚೆಲುವುಗಳ ಮೆಚ್ಚುಗೆಗಾಗಿ ತಲೆದೂಗಿದಳು. ಆದರೂ ಅದು ಬಹುಬೇಗ ಕಿಟ್ಟಿಗರಿವಾಯಿತು. 'ಕುಣಿ ಕುಣಿಯುತ್ತಲೇ ನೀನು ಕೋಣೆಗೆ ಬಂದುಬಿಟ್ಟೆ' ಎಂದು ಅನ್ನಾ ಅವಳೊಡನೆ ಹೇಳಿದಳು.

'ನನ್ನ ನೆರವಿಗಾಗಿ ಯಾವಾಗಲೂ ನಾನವಳನ್ನು ಅವಲಂಬಿಸಿಕೊಂಡಿದ್ದೇನೆ.' ಎಂದು ಹೇಳುತ್ತ ಕೊರ್ಸ್ಸನ್‌ಸ್ಕಿ ಅನ್ನಾಳಿಗೆ ಮಣಿದನು. ಆ ಮುಂಚೆ ಅವಳನ್ನವನು ನೋಡಿರಲಿಲ್ಲ. 'ಈ ಚಿಕ್ಕ ರಾಜಕುಮಾರಿಯಿಂದ ನೃತ್ಯ ಯಾವಾಗಲೂ ಉಲ್ಲಾಸ ದಾಯಕವಾಗಿರುತ್ತದೆ, ಹಿತಕರವಾಗಿರುತ್ತದೆ. ಈ ಭ್ರಮಣ ನೃತ್ಯ ಸಾಧ್ಯವೆ, ಅನ್ನಾ ಅರ್ಕದ್ಯೇವ್ನ ಅವರೆ' ಎಂದವನು ಮತ್ತೆ ಮಣಿದು ಕೇಳಿದನು.

'ನಿಮಗೆ ಪರಿಚಯವಿದೆಯೆ?' ಎಂದು ಯಜಮಾನ ಪ್ರಶ್ನಿಸಿದನು.

'ನನಗೂ ನನ್ನ ಮಡದಿಗೂ ಪರಿಚಯವಿಲ್ಲದವರಾರು? ನಾವು ಬಿಳಿಯ ತೋಳ ಗಳಂತಿದ್ದೇವೆ. ಎಲ್ಲರೂ ನಮ್ಮನ್ನು ಬಲ್ಲರು' ಎಂದು ಕೊರ್ಸ್ಸನ್‌ಸ್ಕಿ ಉತ್ತರಿಸಿದನು. 'ಒಂದೇ ಒಂದು ನೃತ್ಯ, ಅನ್ನಾ ಅರ್ಕದ್ಯೇವ್ನ ಅವರೆ?'

'ನೃತ್ಯ ಮಾಡದಿರುವುದು ಸಾಧ್ಯವಿದ್ದಾಗ ನಾನದರಿಂದ ದೂರವಿರುತ್ತೇನೆ' ಎಂದ ವಳು ನುಡಿದಳು.

'ಈ ರಾತ್ರಿ ಅದು ಅಸಾಧ್ಯ' ಎಂದು ಕೊರ್ಸ್ಸನ್‌ಸ್ಕಿ ಪ್ರತಿಕ್ರಿಯಿಸಿದನು.

ಅಷ್ಟರಲ್ಲಿ ವ್ರಾನ್ಸ್ಕಿ ಅವರೆಡೆಗೆ ಬಂದನು.

'ಖಂಡಿತ ಅನಿವಾರ್ಯವೆನ್ನುವುದಾದರೆ ಬನ್ನಿ. ಶುರುಮಾಡೋಣ' ಎಂದವಳು ವ್ರಾನ್ಸ್ಕಿಯ ವಂದಿತವನ್ನು ಗಮನಿಸದೆಯೆ ನುಡಿದಳು; ತಡವಿಲ್ಲದೆ ಕೊರ್ಸ್ಸನ್‌ಸ್ಕಿಯ ಭುಜದ ಮೇಲೆ ಕೈಯಿಟ್ಟಳು.

‘ಅವರ ಬಗ್ಗೆ ಅವಳಿಗೇಕೆ ಅಸಮಾಧಾನ?’ ಎಂದು ಕಿಟ್ಟಿ ವಿಸ್ಮಯಾಭೂತಳಾದಳು; ಅನ್ನಾ ಉದ್ದೇಶಪೂರ್ವಕವಾಗಿ ವ್ರಾನ್ಸ್ಕಿಯ ಕುಣಿತವನ್ನು ಕಡೆಗಣಿಸಿದ್ದಳೆಂದು ತಿಳಿದಳು. ತನ್ನ ಮೊದಲ ಚೌಕ ಕುಣಿತವನ್ನು ಕಿಟ್ಟಿಯು ನೆನಪಿಗೆ ತಂದುಕೊಡುತ್ತ, ಇತ್ತೀಚಿನ ದಿನಗಳಲ್ಲಿ ಅವಳನ್ನು ನೋಡಲು ಅವಕಾಶವಾಗದಿದ್ದುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸುತ್ತ ವ್ರಾನ್ಸ್ಕಿ ಅವಳನ್ನು ಸಮೀಪಿಸಿದನು. ಅವನ ಮಾತು ಕೇಳಿಸಿಕೊಳ್ಳುತ್ತಿದ್ದಂತೆ ಕಿಟ್ಟಿ ಅನ್ನಾಳ ಭ್ರಮಣ ನೃತ್ಯವನ್ನು ಪ್ರಶಂಸನೀಯ ದೃಷ್ಟಿಯಿಂದ ವೀಕ್ಷಿಸುತ್ತಿದ್ದಳು. ವ್ರಾನ್ಸ್ಕಿ ತನ್ನನ್ನು ಭ್ರಮಣನೃತ್ಯಕ್ಕಾಹ್ವಾನಿಸಬಹುದೆಂದವಳು ಕಾದಳು; ಆದರವನು ಆಹ್ವಾನಿಸಲಿಲ್ಲ; ಆಶ್ಚರ್ಯದಿಂದವಳು ಅವನ ಕಡೆಗೆ ಕಣ್ಣಾಗಿದ್ದಳು. ಅವನ ಮುಖ ರಂಗೇರಿತು, ಅವಸರದಿಂದ ಅವಳಿಗೆ ಆಹ್ವಾನನೀಡಿದನು; ಆದರವನ ತೋಳು ಅವಳ ಕೃಶಮಧ್ಯವನ್ನು ಬಳಸಿ, ಇಬ್ಬರೂ ಮೊದಲ ಹೆಜ್ಜೆ ಹಾಕುತ್ತಿದ್ದಂತೆ, ಸಂಗೀತ ಸ್ಥಗಿತಗೊಂಡಿತು. ತನ್ನ ಮುಖಕ್ಕೆ ತೀರ ಸನಿಹವಾಗಿದ್ದ ಅವನ ಮುಖವನ್ನು ಕಿಟ್ಟಿ ನಿಟ್ಟಿಸಿದಳು. ಅಲ್ಲಿಂದಾಚೆಗೆ ಬಹಳ ಕಾಲ, ವಾಸ್ತವವಾಗಿ ಹಲವು ವರ್ಷಗಳ ತನಕ, ಅವನಿಂದ ಪ್ರತ್ಯುತ್ತರಸಿಗದ ತನ್ನ ಪ್ರೇಮಾವಲೋಕನವನ್ನು ನೆನೆದಾಗಲೆಲ್ಲ ಅವಮಾನಾಘಾತ ಅವಳೆದೆಯನ್ನು ಇರಿಯುತ್ತಿತ್ತು.

ಕೈಗೆಟುಕಿದ ಮೊದಲ ಯುವತಿಯನ್ನು ಹಿಡಿದೆಳೆದುಕೊಂಡು, ಅವಳೊಡನೆ ನರ್ತನ ಪ್ರಾರಂಭಿಸುತ್ತಿದ್ದಂತೆ ಕೊರ್ಸನ್‌ಸ್ಕಿ ಮಂದಿರದ ಮತ್ತೊಂದು ತುದಿಯಿಂದ ‘ಕ್ಷಮಿಸಿ, ಕ್ಷಮಿಸಿ! ಭ್ರಮಣ ನೃತ್ಯ, ಒಂದೇ ಒಂದು ಭ್ರಮಣ ನೃತ್ಯ’ ಎಂದು ಕೂಗಿಕೊಂಡನು.

೨೩

ವ್ರಾನ್ಸ್ಕಿ ಮತ್ತು ಕಿಟ್ಟಿಯರಿಬ್ಬರೂ ಹಲವುಸಲ ಕುಣಿತವನ್ನು ಮೆರೆದರು. ಅದು ಮುಗಿದನಂತರ ಕಿಟ್ಟಿ ತನ್ನ ತಾಯಿಯಿದ್ದ ಗುಂಪನ್ನು ಸೇರಿಕೊಂಡಳು. ಕೌಂಟೆಸ್ ನಾರ್ಡ್‌ಸ್ಟನ್‌ಳೊಡನೆ ಒಂದೆರಡು ಮಾತು ಮುಗಿಸಿದಳೋ ಇಲ್ಲವೋ, ವ್ರಾನ್ಸ್ಕಿ ಮೊದಲನೆಯ ಚೌಕಕುಣಿತಕ್ಕಾಗಿ ಮತ್ತೆ ಅವಳೆಡೆಗೆ ಬಂದನು. ಚೌಕನೃತ್ಯದ ಅವಧಿಯಲ್ಲಿ ಪ್ರಮುಖ ವಿಷಯವನ್ನು ಕುರಿತಂತೆ ಯಾವೊಂದು ಮಾತುಕತೆಯೂ ನಡೆಯಲಿಲ್ಲ. ಕೊರ್ಸನ್‌ಸ್ಕಿ ದಂಪತಿಗಳ ಬಗ್ಗೆ ಹರುಕುಮುರುಕು ಮಾತು ಸಾಗಿತು. ಅವರು ನಲವತ್ತು ವರ್ಷ ವಯಸ್ಸಿನ ಸಣ್ಣ ಮಕ್ಕಳೆಂದು ವ್ರಾನ್ಸ್ಕಿ ವಿನೋದವಾಗಿ ಅವರನ್ನು ವರ್ಣಿಸಿದನು. ನೂತನ ಸಾರ್ವಜನಿಕ ರಂಗಮಂದಿರದ ಯೋಜನೆಯನ್ನು ವಿವರಿಸಿದನು. ಒಂದೇ ಒಂದು ಸಾರಿ ಮಾತ್ರ, ಅದೂ ಲೆವಿನ್ ಅಲ್ಲಿದ್ದಾನೆಯೆ, ಇಲ್ಲವೆ ಎಂದು ಪ್ರಸ್ತಾಪಿಸಿದಾಗ, ತಾನು ತುಂಬ ಮೆಚ್ಚಿಕೊಂಡಿದ್ದ ವ್ಯಕ್ತಿಯೆಂದು ಅವನನ್ನು ಪ್ರಶಂಸಿಸಿದಾಗ ಸಂಭಾಷಣೆ ಅವಳ ಮಟ್ಟಿಗೆ ಹೃದಯ ಸ್ಪರ್ಶಿಯಾಗಿತ್ತು. ಆದರೆ ಚೌಕಕುಣಿತದಿಂದ ಕಿಟ್ಟಿಗೆ ಸಾಕಷ್ಟು ತೃಪ್ತಿಯೊದಗಲಿಲ್ಲ. ಮಜೂರ್ಕ ನೃತ್ಯದ ನಿರೀಕ್ಷೆಯಿಂದ ಅವಳ ಹೃದಯ ಪುಳಕಗೊಂಡಿತ್ತು. ಮಜೂರ್ಕವೊಂದೆ ನಿರ್ಣಾಯಕ ನೃತ್ಯವೆಂದು ಅವಳು ನಂಬಿದ್ದಳು. ಮಜೂರ್ಕ ನೃತ್ಯದ ಕಡೆಗವನು ತನ್ನನ್ನು ಸೆಳೆಯದಿದ್ದರೂ, ಚೌಕ

ಕುಣಿತದ ಸಂರಂಭದಲ್ಲಿ ಅವಳ ಮನಸ್ಸು ಪ್ರಕ್ಷುಬ್ಧಗೊಳ್ಳಲಿಲ್ಲ. ಹಿಂದಿನ ನೃತ್ಯಗೋಷ್ಠಿ
ಗಳಲ್ಲಿ ನಿರ್ಣಯಿಸಿದ್ದಂತೆ ಅವನೊಡನೆ ತಾನು ಮಜೂರ್ಕ ನೃತ್ಯವನ್ನು ನಡಸುವುದಾಗಿ
ಅವಳು ಭರವಸೆಯಿಂದಿದ್ದಳು. ಮಜೂರ್ಕ ನೃತ್ಯದಲ್ಲಿ ತಾನು ತೊಡಗಲಿದ್ದುದರಿಂದ,
ಬೇರೆಯುವರೊಡನೆ ನೃತ್ಯದಲ್ಲಿ ಭಾಗಿಯಾಗುವುದು ಸಾಧ್ಯವಿಲ್ಲವೆಂದು ಐವರು ಯುವಕರ
ಆಹ್ವಾನವನ್ನು ನಿರಾಕರಿಸಿದ್ದಳು. ಕೊಟ್ಟಕೊನೆಯ ಚೌಕ ಕುಣಿತದ ತನಕ ಇಡೀ
ನೃತ್ಯ ಕಿಟ್ಟಿಯ ಮಟ್ಟಿಗೆ ಆಹ್ಲಾದಕರ ವರ್ಣಧ್ವನಿ ಮತ್ತು ಚಲನಗಳ ಸಮ್ಮೋಹಕ
ದೃಶ್ಯವಾಗಿತ್ತು. ಬಹುವಾಗಿ ಬಳಲಿ, ವಿಶ್ರಾಂತಿ ಬೇಕೆನಿಸಿದಾಗ ಮಾತ್ರ ಅವಳು ಕುಣಿಯು
ಲಿಲ್ಲ. ಆದರೆ ನಿರುತ್ಸಾಹದ ಯುವಕನ ಆಹ್ವಾನವನ್ನು ನಿರಾಕರಿಸಲಾರದೆ ಅವನೊಂದಿಗೆ
ಕೊನೆಯ ಚೌಕ ನೃತ್ಯವನ್ನು ಅಭಿನಯಿಸುವಾಗ, ಅವಳು ವ್ರಾನ್ಸ್ಕಿ ಮತ್ತು ಅನ್ನಾರ
ಎದುರುಬದುರಿಗೆ ಬರುವಂತಾಯಿತು. ಸಂಜೆಯಿಂದ ಅವಳಿಗೆ ಅನ್ನಾಳ ಜತೆ ಲಭಿಸಿರಲಿಲ್ಲ.
ಅನ್ನಾ ಈಗ ಸಹ ವಿಭಿನ್ನ ವ್ಯಕ್ತಿಯಂತೆ, ನೂತನ ಅನಿರೀಕ್ಷಿತ ಮಹಿಳೆಯಂತೆ ಕಿಟ್ಟಿಗೆ
ಕಂಡಳು. ಅನ್ನಾ ಕೃತಕೃತ್ಯತೆಯಿಂದೊದಗಿದ ಭಾವೋದ್ರೇಕದ ಸ್ಥಿತಿಯಲ್ಲಿದ್ದುದು
ಕಿಟ್ಟಿಗರಿವಾಯಿತು. ಕಿಟ್ಟಿಗೂ ಅಂಥದೇ ಅನುಭವದ ಪರಿಚಯವಿತ್ತಷ್ಟೆ. ತನ್ನ ಪ್ರಶಂಸೆ
ದ್ರಾಕ್ಷಾಸವದಂತೆ ಅವಳ ತಲೆ ಹೊಕ್ಕಿತ್ತೆಂಬುದು ಸಹ ಕಿಟ್ಟಿಗರಿವಾಯಿತು. ಅವಳಿಗೆ
ಆ ಮನೋಭಾವದ ಅರಿವಿತ್ತು, ಅದರ ಲಕ್ಷಣಗಳು ಗೊತ್ತಿದ್ದುವು, ಅನ್ನಾಳಲ್ಲವನ್ನು
ಗುರುತಿಸಿದಳು; ಅವಳ ಕಣ್ಣುಗಳಲ್ಲಿ ಕಂಪಿಸುವ ಕೋರೈಸುವ ಬೆಳಕನ್ನೂ, ಅವಳಿಗರಿವಿಲ್ಲ
ದೆಯೇ ಅವಳ ತುಟಿಗಳ ಮೇಲೆ ಕುಣಿಯುತ್ತಿದ್ದ ಆನಂದದ ಮತ್ತು ಭಾವೋದ್ರೇಕದ
ಮಂದಹಾಸವನ್ನೂ, ಅವಳ ಚಲನವಲನಗಳಲ್ಲಿ ಹೊಮ್ಮುತ್ತಿದ್ದ ಬುದ್ಧಿಪೂರ್ವಕವಾದ
ಒನಪುಒಯ್ಯಾರಗಳನ್ನೂ ಸೂಕ್ಷ್ಮತೆಲಾಘವಗಳನ್ನೂ ಕಿಟ್ಟಿ ಗುರುತಿಸಿದಳು.

'ಅವಳು ಯಾರಾಗಿರಬಹುದು?' ಎಂದವಳು ತನ್ನಷ್ಟಕ್ಕೆ ತಾನು ಪ್ರಶ್ನಿಸಿ
ಕೊಂಡಳು. 'ಎಲ್ಲರೊ ಅಥವಾ ಒಬ್ಬರೆಯೊ?' ಸಂಭಾಷಣೆಯ ಸೂತ್ರವನ್ನು ಕಳೆದು
ಕೊಂಡು, ಹಿಂದಕ್ಕೆ ಪಡೆಯಲಾರದೆ ಒದ್ದಾಡುತ್ತಿದ್ದ ಜತೆಗಾರ, ಬಡಪಾಯಿ ಯುವಕ
ನನ್ನು ನಿರ್ಲಕ್ಷಿಸಿ, ಬಹಿರಂಗವಾಗಿ ಮಾತ್ರ ಕೊರ್ಸುನ್‌ಸ್ಕಿಯ ವಿನೋದಾತ್ಮಕ
ಮದೋದ್ಧತ ಕೂಗುಗಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತ, ಕಿಟ್ಟಿ ಕುಣಿಯುತ್ತಿದ್ದಳು,
ಕುಸಿದ ಹೃದಯವುಳ್ಳವಳಾಗಿ ವ್ರಾನ್ಸ್ಕಿ ಮತ್ತು ಅನ್ನಾರನ್ನು ಸಂವೀಕ್ಷಿಸುತ್ತಿದ್ದಳು.
'ಇಲ್ಲ, ಅವಳ ತಲೆತಿರುಗಿಗೆ ಕಾರಣವಾದದ್ದು ಮಂದಿಯ ಹೊಗಳಿಕೆಯಲ್ಲ, ಏಕೈಕ
ವ್ಯಕ್ತಿಯ ಪ್ರಶಂಸೆ. ಆದರೆ ಅವನು ಯಾರಿರಬಹುದು? ಅವರೇ ಇರಬಹುದೆ?' ಎಂದ
ವಳು ತನ್ನಷ್ಟಕ್ಕೆ ತಾನು ಗೊಣಗಿಕೊಂಡಳು. ಅವಳೊಡನೆ ವ್ರಾನ್ಸ್ಕಿ ಮಾತಾಡಿದಾಗ
ಲೆಲ್ಲ ಅನ್ನಾಳ ಕಣ್ಣು ಆನಂದದಿಂದ ಹೊಳೆಯುತ್ತಿದ್ದುವು, ಸಂತೋಷದ ಮಂದಹಾಸ
ಅವಳ ಚೆಂದುಟಿಗಳ ಮೇಲೆ ಕುಣಿಯುತ್ತಿತ್ತು. ತನ್ನ ಸಂತೋಷಾಧಿಕ್ಯವನ್ನು ಬಹಿರಂಗ
ವಾಗಿ ಪ್ರದರ್ಶಿಸಬಾರದೆಂದು ಅವಳು ಪ್ರಯತ್ನಿಸುತ್ತಿದ್ದಂತೆ ಕಂಡರೂ, ಅದು ಅವಳಿಗರಿ
ವಿಲ್ಲದಂತೆಯೇ ಮುಕ್ಕಳಿಸುತ್ತಿತ್ತು. 'ಆದರೆ ಅವರು ಯಾವ ಸ್ಥಿತಿಯಲ್ಲಿದ್ದಾರೆ?' ಎಂದು
ಕಿಟ್ಟಿ ಅವನ ಕಡೆಗೆ ಕಣ್ಣು ಹಾಯಿಸಿದಳು; ದಿಗ್ಭ್ರಮೆಗೊಂಡಳು. ಅನ್ನಾಳ ಮುಖದಲ್ಲಿ
ಸ್ಫುಟವಾಗಿ ಪ್ರತಿಬಿಂಬಗೊಂಡಿದ್ದ ಭಾವವನ್ನೇ ಅವಳು ಅವನ ಮುಖದಲ್ಲೀಗ ಕಂಡು

ಕೊಂಡಳು. ಪ್ರಶಾಂತವೂ ಗಂಭೀರವೂ ಆದ ದೃಢ ಸಂಕಲ್ಪದ ಅವನ ಮುಖಭಾವ ಈಗೆಲ್ಲಿ ಹೋಯಿತು? ಎಲ್ಲ ಮಾಯವಾಯಿತು. ಅವಳ ಮುಂದೆ ಮಂಡಿಯೂರಿ ಮಣಿಯಲು ಹಾತೊರೆಯುತ್ತಿದ್ದನೆಂಬಂತೆ ಅವನು ಅವಳೊಡನೆ ಮಾತಾಡಿದಾಗಲೆಲ್ಲ ತಲೆಯನ್ನು ತುಸು ಬಗ್ಗಿಸುತ್ತಿದ್ದನು, ಅವನ ನಯನ ವಿಕ್ಷೇಪದಲ್ಲಿ ಶಂಕೆ ಶರಣಾಗತಿಗಳು ಮಾತ್ರ ಅಭಿವ್ಯಕ್ತವಾಗುತ್ತಿದ್ದುವು. 'ನಿನ್ನನ್ನು ನೋಯಿಸಲಿಷ್ಟವಿಲ್ಲ ನನಗೆ' ಎಂಬುದಾಗಿ ಅವನ ಪ್ರತಿಯೊಂದು ನೋಟವೂ ಹೇಳುವಂತಿತ್ತು. 'ಆದರೆ ನಾನೀಗ ಪಾರಾಗಬೇಕಾಗಿದೆ, ಹೇಗೆನ್ನುವುದೆ ಗೊತ್ತಿಲ್ಲ.' ಆ ಹಿಂದೆ ಅವಳೆಂದೂ ಅವನ ಮುಖದಲ್ಲೀ ಇಂಥ ಭಾವವನ್ನು ಕಂಡಿರಲಿಲ್ಲ.

ಅವರು ಅನ್ಯೋನ್ಯ ಪರಿಚಯಗಳ ಬಗ್ಗೆ ಮಾತಾಡಿಕೊಂಡರು; ಅತ್ಯಂತ ಕ್ಷುಲ್ಲಕವಾದ ವಿಷಯಗಳನ್ನು ಕುರಿತು ಚರ್ಚಿಸಿದರು; ಆದರೆ ಅವರುಸುರಿದ ಪ್ರತಿಯೊಂದು ಮಾತೂ ತನ್ನ ಮತ್ತು ಅವರಿಬ್ಬರ ಭವಿಷ್ಯವನ್ನು ನಿರ್ಣಯಿಸಲಿದೆಯೆಂದು ಕಿಟ್ಟಿ ಭಾವಿಸಿದಳು. ವಿಚಿತ್ರವೇನೆಂದರೆ, ಐವಾನ್ ಇವಾನೊವಿಚ್ ಫ್ರೆಂಚ್ ಭಾಷೆಯಲ್ಲಿ ಮಾತಾಡಲು ಪ್ರಯತ್ನಿಸುತ್ತಿದ್ದಾಗ ತುಂಬ ಹಾಸ್ಯಾಸ್ಪದವಾಗಿರುತ್ತಿತ್ತೆಂದು, ಎಲೆಟ್‌ಸ್ಕಯ ಉತ್ತಮ ಜೋಡಿಯಾಗುತ್ತಿದ್ದಳೆಂದು ಅವರು ವಾಸ್ತವವಾಗಿ ಸಂಭಾಷಿಸಿದರೂ, ಈ ಮಾತುಗಳು ಅವರ ಮಟ್ಟಿಗೆ ವಿಶೇಷಾರ್ಥವನ್ನು ನೀಡುತ್ತಿದ್ದುವು; ಕಿಟ್ಟಿಯಂತೆಯೆ ಅವರು ಸಹ ಆ ಬಗ್ಗೆ ಅರಿವುಳ್ಳವರಾಗಿದ್ದರು. ಇಡೀ ನೃತ್ಯಗೋಷ್ಠಿ, ಇಡೀ ಜಗತ್ತು ಮತ್ತು ಅಲ್ಲಿದ್ದ ಪ್ರತಿಯೊಬ್ಬರೂ ಮಂಜಿನಲ್ಲಿ ಮರೆಯಾದಂತೆ ಕಿಟ್ಟಿಗೆ ಕಾಣುತ್ತಿದ್ದರು. ಶಿಕ್ಷಣದಿಂದೊದಗಿದ ಕಠೋರ ಶಿಸ್ತೊಂದೇ ಅವಳಿಗೆ ಊರೆಯಾಗಿತ್ತು; ಅವಳಿಂದ ನಿರೀಕ್ಷಿಸಬಹುದಾಗಿದ್ದ ಕ್ರಿಯೆಯನ್ನು ಅಂದರೆ ನೃತ್ಯ, ಪ್ರಶ್ನೋತ್ತರ ಮಾತುಕತೆ ಮತ್ತು ಮುಗುಳು ನಗೆಗಳನ್ನು—ನಿರ್ವಹಿಸುವಂತೆ ಪ್ರೇರಿಸಿತ್ತು. ಆದರೆ ಮಜೂರ್ಕ ಪ್ರಾರಂಭವಾಗುವ ಮುನ್ನ, ಕುರ್ಚಿಗಳನ್ನು ತೆಗೆಯುತ್ತಿದ್ದಾಗ ಹಾಗೂ ಕೆಲವು ಮಿಥುನಗಳು ಸಣ್ಣ ಕೋಣೆಯಿಂದ ದೊಡ್ಡ ಕೋಣೆಗೆ ಚಲಿಸುತ್ತಿದ್ದಾಗ, ಕಿಟ್ಟಿ ಭಯ ನಿರಾಶೆಗಳನ್ನನುಭವಿಸುತ್ತಿದ್ದಳು. ಅವಳು ಮೊದಲೇ ಐದು ಆಹ್ವಾನಗಳನ್ನು ನಿರಾಕರಿಸಿದ್ದುದರಿಂದ ಮಜೂರ್ಕ ನೃತ್ಯಕ್ಕೆ ಮನಗೊಡಲಿಲ್ಲ. ಯಾರಾದರೂ ತನಗೆ ಆಹ್ವಾನ ನೀಡಬಹುದೆಂಬ ವಿಷಯದಲ್ಲಿ ಅವಳಿಗೆಳ್ಳಷ್ಟೂ ಭರವಸೆಯಿರಲಿಲ್ಲ. ಬೇರೆಯವರು ಅವಳೊಡನೆ ಗೊತ್ತು ಪಾಡು ಮಾಡಿಕೊಂಡಿರಲೇ ಬೇಕೆನ್ನುವಷ್ಟರಮಟ್ಟಿಗೆ ಅವಳು ಜನಪ್ರಿಯಳಾಗಿದ್ದಳು. ತನಗೆ ಆರೋಗ್ಯವಿಲ್ಲವೆಂದೂ, ಮನೆಗೆ ಹೋಗಬೇಕಾಗಿದೆಯೆಂದೂ ತಾಯಿಗೆ ಹೇಳಬೇಕೆನಿಸಿತು. ಆದರದನ್ನು ತಿಳಿಸುವ ಧೈರ್ಯ ಅವಳಿಗಿರಲಿಲ್ಲ. ತುಂಬ ಕುಸಿದು ಹೋದಂತೆ ಅವಳಿಗರಿವಾಯಿತು.

ಸಣ್ಣ ದಿವಾನಖಾನೆಯ ವಿವಿಕ್ತ ಮೂಲೆಯೊಂದನ್ನಾರಿಸಿಕೊಂಡು, ಕುರ್ಚಿಯೊಂದರಲ್ಲಿ ಕುಸಿದಳು. ಅವಳ ಪಾರದರ್ಶಕ ವಸನಾಂಚಲ ಅವಳ ಸೂಕ್ಷ್ಮ ಮಧ್ಯದ ಸುತ್ತ ಮೋಡದಂತೆ ಮೇಲೆದ್ದಿತು; ತೆಳ್ಳನೆಯ, ಬೆತ್ತಲೆಯ, ಅವಳ ಕೋಮಲ ಬಾಹುವೊಂದು ಪಾಟಲವರ್ಣದ ನೆರಿಗೆಗಳ ನಡುವೆ ಉತ್ಸಾಹ ಶೂನ್ಯತೆಯಿಂದ ಮುದುಡಿಕೊಂಡಿತ್ತು; ಅವಳ ಮತ್ತೊಂದು ಕೈ ಬೀಸಣಿಗೆ ಹಿಡಿದುಕೊಂಡಿತ್ತು; ಶೀಘ್ರವೂ

ಹ್ರಸ್ವವೂ ಆದ ಬೀಸಣಿಗೆಯ ಚಲನೆಗಳ ಮೂಲಕ ಅವಳು ಕಾದು ಕೆಂಪಾಗಿದ್ದ ಮುಖವನ್ನು ತಣ್ಣೊಳಿಸುತ್ತಿದ್ದಳು. ಅದೆ ತಾನೆ ಹುಲ್ಲಿನ ಮೇಲೆ ಕುಳಿತು, ತನ್ನ ಕಾಮನ ಬಿಲ್ಲಿನ ರೆಕ್ಕೆಗಳನ್ನು ಯಾವ ಕ್ಷಣದಲ್ಲಾದರೂ ಬಿಚ್ಚಿ ಹಾರಿಹೋಗುವ ಪಾತರಗಿತ್ತಿಯಂತೆ ಕಾಣುತ್ತಿದ್ದರೂ, ನಿರಾಶೆಯ ದುರ್ಭರ ಭಾರ ಅವಳೆದೆಯಮೇಲೆ ಅದುಮಿಕೊಂಡಂತಿತ್ತು.

'ಪ್ರಾಯಶಃ ನಾನು ತಪ್ಪು ತಿಳಿದುಕೊಂಡಿದ್ದೇನೆ. ಅಂಥಾದ್ದೇನೂ ನಡೆದಿರ ಲಾರದು' ಎಂದವಳು ಆಲೋಚಿಸಿದಳು. ತಾನು ನೋಡಿದ್ದನ್ನೆಲ್ಲ ಅವಳು ಮತ್ತೆ ನೆನಪಿಗೆ ತಂದುಕೊಂಡಳು.

'ಏನಿದು, ಕಿಟ್ಟಿ ?' ಎಂದು ನಿಶ್ಶಬ್ದವಾಗಿ ಜಮಖಾನದ ಮೇಲೆ ನಡೆದು ಬಂದಿದ್ದ ಕೌಂಟೆಸ್ ನಾರ್ಡ್‌ಸ್ಟನ್ ಕೇಳಿದಳು. 'ಇದಾವುದೂ ನನಗರ್ಥವಾಗದು.'

ಕಿಟ್ಟಿಯ ಕೆಳದುಟಿ ಅದುರಿತು ; ಅವಳು ಬೇಗ ಮೇಲೆದ್ದಳು.

'ಕಿಟ್ಟಿ, ನೀನು ಮಜೂರ್ಕ ಕುಣಿಯುವುದಿಲ್ಲವೆ ?'

'ಇಲ್ಲ' ಎಂದು ಕಿಟ್ಟಿ ಸಗದ್ಗದಳಾಗಿ ನುಡಿದಳು.

'ಮಜೂರ್ಕ ನೃತ್ಯಕ್ಕಾಗಿ ಅವರವಳನ್ನು ಕರೆಯುತ್ತಿದ್ದುದು ನನಗೆ ಕೇಳಿಸಿತು.' ಎಂದು ಕೌಂಟೆಸ್ ನುಡಿದಳು. "ಅವರು" ಮತ್ತು "ಅವಳು" ಯಾರೆಂಬುದು ಕಿಟ್ಟಿಗರ್ಥ ವಾಗಿರಬೇಕೆಂದು ಅವಳು ಯೋಚಿಸಿದಳು. "ನೀವು ಕಿಟ್ಟಿಯೊಡನೆ ನರ್ತಿಸುವುದಿಲ್ಲವೆ ?" ಎಂದವಳು ಕೇಳಿದಳು.'

'ಓ, ಆ ಬಗ್ಗೆ ನಾನು ಚಿಂತಿಸುವುದಿಲ್ಲ' ಎಂದು ಕಿಟ್ಟಿ ಉತ್ತರಿಸಿದಳು.

ಅವಳ ಸ್ಥಿತಿ ಅವಳಿಗೆ ವಿನಾ ಬೇರೆಯವರಿಗೆ ಅರ್ಥವಾಗುವಂತಿರಲಿಲ್ಲ. ಪ್ರಾಯಶಃ ತಾನು ಪ್ರೀತಿಸಿದ್ದ ವ್ಯಕ್ತಿಯೊಬ್ಬನ ವಿವಾಹ ಪ್ರಸ್ತಾಪವನ್ನು ಹಿಂದಿನ ದಿನವೇ ತಾನು ನಿರಾಕರಿಸಿದ್ದ ಸಂಗತಿ ಅವಳಿಗಲ್ಲದೆ ಅನ್ಯರಿಗೆ ತಿಳಿದಿರಲಿಲ್ಲ; ಬೇರೊಬ್ಬನಲ್ಲಿ ತಾನು ಭರವಸೆ ಇಟ್ಟುಕೊಂಡಿದ್ದೇ ಅವಳ ಆ ನಿರಾಕರಣೆಗೆ ಕಾರಣವಾಗಿತ್ತು.

ಕಿಟ್ಟಿಯನ್ನು ಕರೆಯುವಂತೆ ತನ್ನೊಡನೆ ಮಜೂರ್ಕ ಕುಣಿಯಲು ಬಂದಿದ್ದ ಕೊರ್ಸ್ಸನ್‌ಸ್ಕಿಗೆ ಕೌಂಟೆಸ್ ನಾರ್ಡ್‌ಸ್ಟನ್ ತಿಳಿಸಿದಳು.

ಮೊದಲ ಜೋಡಿಯಲ್ಲಿಯೇ ಕಿಟ್ಟಿಯೂ ಅವಳ ಜತೆಗಾರನೂ ನರ್ತನ ಮಾಡ ಬೇಕಿತ್ತು. ಸುದೈವದಿಂದ ತನ್ನ ಕಡೆಯ ಜನರಿಗೆ ನಿರ್ದೇಶನ ನೀಡುವ ಸಲುವಾಗಿ ಕೊರ್ಸ್ಸನ್‌ಸ್ಕಿ ಮೇಲಿಂದ ಮೇಲೆ ಅತ್ತಿತ್ತ ಓಡಾಡಬೇಕಾಗಿದ್ದುದರಿಂದ, ಅವನೊಡನೆ ಮಾತಾಡುವ ಅಗತ್ಯವೇ ಅವಳಿಗೆ ಬೀಳುತ್ತಿರಲಿಲ್ಲ. ಅನ್ನಾ ಮತ್ತು ವ್ರಾನ್ಸ್ಕಿಯರು ಅವಳೆದುರಿಗೆ ಕುಳಿತಿದ್ದರು. ದೂರದಲ್ಲಿದ್ದಾಗಲೇ ಅವಳ ಚುರುಕುಗಣ್ಣು ಅವರನ್ನು ಗುರುತಿಸಿದುವು ; ಆ ಜೋಡಿ ನರ್ತಿಸುತ್ತ ಜತೆಯಾಗಿ ಹತ್ತಿರ ಬಂದದ್ದನ್ನವು ಕಂಡವು ; ಅವರ ಚಲನವಲನಗಳನ್ನು ನೋಡಿದಂತೆಲ್ಲ, ತನಗೆ ವಿಪತ್ತು ಸನ್ನಿಹಿತವಾಗುತ್ತಿತ್ತೆಂದೇ ಅವಳು ನಿಶ್ಚಯ ಮಾಡಿಕೊಂಡಳು. ಆ ಜನನಿಬಿಡವಾದ ಮಂದಿರದಲ್ಲಿ ಆ ಇಬ್ಬರೇ ಅವಳ ಕಣ್ಣಿಗೆ ಎಲ್ಲೆಲ್ಲೂ ಬೀಳುತ್ತಿದ್ದರು. ಸದಾ ಸ್ವತಂತ್ರವರ್ತಿಯೂ ಸುನಿಶ್ಚಲವೂ ಆದ ವ್ರಾನ್ಸ್ಕಿಯ ಹಣೆಯಮೇಲೆ ಎಂದೂ ಕಾಣದ ಗಾಬರಿಯ ಮತ್ತು ಶರಣಾಗತಿಯ

ಭಾವವನ್ನವಳು ಕಂಡಳು. ಎಂಥದೋ ದುರ್ನಡತೆಯ ತಪ್ಪನ್ನೆಸಗಿದ ಜಾಣ ನಾಯಿಯ ಚಹರೆಯನ್ನವಳು ಆ ಭಾವದಲ್ಲಿ ಗುರುತಿಸಿದಳು.

ಅನ್ನಾ ಮುಗುಳುನಗೆ ಸೂಸಿದಾಗ ಅವನ ತುಟಿಯ ಮೇಲೆ ಮಂದಹಾಸ ಮಿನುಗುತ್ತಿತ್ತು. ಅವಳು ಚಿಂತಾಮಗ್ನಳಾದಾಗ ಅವನು ಗಂಭೀರವಾಗುತ್ತಿದ್ದನು. ಯಾವುದೋ ಅಲೌಕಿಕ ಶಕ್ತಿಯೊಂದು ಕಿಟ್ಟಿಯ ಕಣ್ಣುಗಳನ್ನು ಅನ್ನಾಳ ಮುಖದ ಕಡೆಗೆ ಆಕರ್ಷಿಸಿತು. ತನ್ನ ಸರಳ ಕಪ್ಪುಡುಗೆಯಲ್ಲಿ ಅವಳು ಸಮ್ಮೋಹಕವಾಗಿದ್ದಳು; ಕಡಗಗಳನ್ನು ಧರಿಸಿದ್ದ ಅವಳ ನಳಿದೋಳುಗಳು ಚಿತ್ತಾಕರ್ಷಕವಾಗಿದ್ದುವು; ಮುಕ್ತಾಹಾರದಿಂದಲಂಕೃತವಾದ ಅವಳ ಮಾಂಸಲಕಂಠ ಮನಮೋಹಕವಾಗಿತ್ತು; ಅಸ್ತವ್ಯಸ್ತವಾಗಿ ಹರಡಿಕೊಂಡಿದ್ದ ಅವಳ ಗುಂಗುರುಗೂದಲು ಮನೋಹರವಾಗಿತ್ತು; ಅವಳ ಕಿರುಗೈಯಡಿಗಳ ಒನಪು ಒಯ್ಯಾರಗಳು ಆಕರ್ಷಕವಾಗಿದ್ದುವು; ಪ್ರೇಮ ಚೈತನ್ಯೋಲ್ಲಾಸಗಳ ಅವಳ ಮುಖ ಭುವನ ಮೋಹಕವಾಗಿತ್ತು. ಅವಳ ಆ ಆಕರ್ಷಕತೆಯಲ್ಲಿ ಭಯಕಾರಿತ್ವಗಳು ಸಂಗಮಗೊಂಡಂತಿದ್ದುವು.

ಕಿಟ್ಟಿ ಮೊದಲಿಗಿಂತ ಮಿಗಿಲಾಗಿ ಆವಳನ್ನು ಮೆಚ್ಚತೊಡಗಿದಂತೆ, ಅವಳ ಸಂಕಟವೂ ಅಧಿಕಗೊಂಡಿತು. ಅವಳು ಹಿಂಡಿ ಹಿಪ್ಪೆಯಾದಂತೆ ಭಾವಿಸಿದಳು; ಆ ಭಾವ ಅವಳ ಮುಖದ ಮೇಲೆ ಅಚ್ಚೊತ್ತಿದಂತಿತ್ತು. ನೃತ್ಯದಲ್ಲಿ ಮುಖಾಮುಖಿಯಾದಾಗ, ವ್ರಾನ್ಸ್ಕಿಗೆ ಕೂಡಲೇ ಅವಳ ಗುರುತು ಸಿಗಲಿಲ್ಲ; ಗುರುತು ಸಿಗಲಾರದಷ್ಟು ಅವಳು ಬದಲಾವಣೆಗೊಂಡಿದ್ದಳು.

ಏನಾದರೂ ಹೇಳಬೇಕೆಂಬ ತುಡಿತದಿಂದಾಗಿ 'ಅದ್ಭುತ ನೃತ್ಯ' ಎಂದವನು ನುಡಿದನು.

'ಹೌದು' ಎಂದವಳು ಉತ್ತರಿಸಿದಳು.

ಮಜೂರ್ಕ ನೃತ್ಯದ ಮಧ್ಯದಲ್ಲಿ, ಕೊರ್ಸುನ್‌ಸ್ಕಿ ರೂಪಿಸಿದ್ದ ತೊಡಕಾದ ಚಿತ್ರ ನೃತ್ಯವನ್ನು ನಿರ್ವಹಿಸುತ್ತಿದ್ದಾಗ, ನೃತ್ತದ ಕೇಂದ್ರದಲ್ಲಿ ತಾನು ನಿಂತುಕೊಂಡು, ಅನ್ನಾ ಪುರುಷರಿಬ್ಬರನ್ನು ಆರಿಸಿಕೊಂಡು, ಕಿಟ್ಟಿಯನ್ನೂ ಮತ್ತೊಬ್ಬಳು ಮಹಿಳೆಯನ್ನೂ ಸನ್ನೆಮಾಡಿ ಹತ್ತಿರಕ್ಕೆ ಕರೆದಳು. ಹತ್ತಿರ ಸರಿಯುತ್ತಿದ್ದಾಗ, ಕಿಟ್ಟಿ ಭಯಚಕಿತಳಾದಂತೆ ಕಂಡಳು. ಅನ್ನಾ ಅಧೋನೇತ್ರೆಯಾಗಿ ಅವಳ ಕಡೆಗೆ ನೋಡುತ್ತ, ಸುಸ್ಮಿತೆಯಾಗಿ ಅವಳ ಕೈಯನ್ನದುಮಿದಳು. ಅವಳ ಮಂದಹಾಸಕ್ಕೆ ಪ್ರತಿಯಾಗಿ ಕಿಟ್ಟಿ ಆಶ್ಚರ್ಯ ನಿರಾಶೆಗಳ ಉತ್ತರ ನೀಡಿದಾಗ, ಅನ್ನಾ ಬೇರೆ ಕಡೆಗೆ ಮುಖ ತಿರುಗಿಸಿಕೊಂಡು, ಮತ್ತೊಬ್ಬ ಹೆಂಗಸಿನ ಜತೆ ಉಲ್ಲಾಸದಿಂದ ಮಾತಾಡತೊಡಗಿದಳು.

'ನಿಜ; ಅವಳಲ್ಲಿ ಯಾವುದೋ ವಿಚಿತ್ರವೂ, ಅಸ್ವಾಭಾವಿಕವೂ, ಮೋಹಕವೂ ಆದ ಶಕ್ತಿಯಿದೆ' ಎಂದು ಕಿಟ್ಟಿ ತನ್ನಷ್ಟಕ್ಕೆ ತಾನಂದುಕೊಂಡಳು.

ಅನ್ನಾ ಊಟಕ್ಕೆ ನಿಲ್ಲಲು ಇಷ್ಟಪಡಲಿಲ್ಲ; ಆದರೆ ನಿಲ್ಲುವಂತೆ ಆತಿಥೇಯ ಅವಳನ್ನು ಒತ್ತಾಯಿಸಿದನು.

'ಓ, ಬನ್ನಿ ಅನ್ನಾ ಅರ್ಕಾಡ್ಯೆವ್ನ' ಎಂದು ಕೊರ್ಸುನ್‌ಸ್ಕಿ ತನ್ನ ತೋಳ್ಸಂದಿಯಲ್ಲಿ ಅವಳ ಬೆತ್ತಲೆಯ ತೋಳನ್ನು ತೂರಿಸಿಕೊಂಡು ಕರೆದನು. 'ನೃತ್ಯದ ಬಗ್ಗೆ ನೂತನಾದ್ಭುತ

ಯೋಚನೆಯೊಂದು ಹೊಳೆದಿದೆ; ಎಂಥ ಅಮೂಲ್ಯ ಆಲೋಚನೆ.' ಅವಳನ್ನವನು ತನ್ನ ಜತೆಯಲ್ಲಿರಿದುಕೊಂಡು ಮೆಲ್ಲಮೆಲ್ಲನೆ ಹೆಜ್ಜೆ ಹಾಕಿದನು. ಅವರ ಆತಿಥೇಯ ಮಂದ ಸ್ಮಿತದ ಮೂಲಕ ತನ್ನ ಅನುಮೋದನೆಯನ್ನು ವ್ಯಕ್ತಪಡಿಸಿದನು.

'ಇಲ್ಲ, ಇಲ್ಲ. ನಾನಿಲ್ಲಿ ನಿಲ್ಲಲಾರೆ' ಎಂದು ಅನ್ನಾ ಮುಗುಳುನಗೆ ಬೀರಿದಳು. ಅವಳು ನಿಲ್ಲಲಾರಳೆಂದು ಅವಳ ನಿಶ್ಚಿತಧ್ವನಿಯ ಉತ್ತರದಿಂದ ಕೊರ್ಸುನ್‌ಸ್ಕಿ ಮತ್ತು ಅವರ ಆತಿಥೇಯರು ಅರ್ಥಮಾಡಿಕೊಂಡರು.

'ಇಲ್ಲ, ಇಲ್ಲ; ಈಗಿರುವಂತೆ, ಪೀಟರ್ಸ್‌ಬರ್ಗ್‌ನ ಇಡೀ ಚಳಿಗಾಲದಲ್ಲಿ ನಾನೆಷ್ಟು ನರ್ತಿಸಿದ್ದೇನೆಯೋ ಅದಕ್ಕಿಂತ ಮಿಗಿಲಾಗಿ ಮಾಸ್ಕೋದ ಈ ಒಂದು ನೃತ್ಯ ಮಂದಿರದಲ್ಲಿ ನಾನು ನರ್ತಿಸಿದ್ದೇನೆ' ಎಂದು ಅನ್ನಾ ತನ್ನ ಪಕ್ಕದಲ್ಲಿ ನಿಂತಿದ್ದ ವ್ರಾನ್ಸ್ಕಿಯ ಕಡೆಗೆ ಕುಡಿನೋಟ ಬೀರುತ್ತ ನುಡಿದಳು. 'ಪ್ರಯಾಣ ಮಾಡುವ ಮುನ್ನ ನನಗೆ ವಿಶ್ರಾಂತಿ ಬೇಕಾಗಿದೆ.'

'ನಿಜಕ್ಕೂ ನಾಳೆಯೇ ನೀವು ಹೋಗಬೇಕಾಗಿದೆಯೇನು?' ಎಂದು ವ್ರಾನ್ಸ್ಕಿ ಪ್ರಶ್ನಿಸಿದನು.

'ಹೌದು, ನನ್ನ ಉದ್ದೇಶವೇ ಅದು' ಎಂದು ಅವನ ಪ್ರಶ್ನೆಯ ದಿಟ್ಟತನಕ್ಕೆ ವಿಸ್ಮಯಗೊಂಡಂತೆ ಅನ್ನಾ ಉತ್ತರಿಸಿದಳು; ಆದರೆ ಉತ್ತರ ಬಾಯಿಂದ ಹೊರಹೊಮ್ಮುತ್ತಿದ್ದಂತೆ ಅವಳ ಕಣ್ಣು ಮತ್ತು ಮುಗುಳುನಗೆಗಳಲ್ಲಿ ರಗರಗಿಸುತ್ತಿದ್ದ ಅದಮ್ಯ ಕಾಂತಿ ಬೆಂಕಿಯಂತೆ ಅವನನ್ನು ದಹಿಸುತ್ತಿತ್ತು.

ಸಂಜೆಯೂಟಕ್ಕೆ ಕಾಯದೆ ಅನ್ನಾ ನೃತ್ಯ ಮಂದಿರದಿಂದ ನಿರ್ಗಮಿಸಿದಳು.

೨೪

'ಹೌದು, ನನ್ನಲ್ಲೇನೋ ಅಹಿತಕರವಾದ, ಜುಗುಪ್ಸೆಯುಂಟುಮಾಡುವ ಗುಣವಿರಬೇಕೆಂದು ತೋರುತ್ತದೆ' ಎಂದು ಲೆವಿನ್ ಶರ್‌ಬತ್‌ಸ್ಕಿಯರ ಮನೆಯಿಂದ ಹೊರಬಿದ್ದು, ಕಾಲ್ನಡಗೆಯಲ್ಲಿ ತನ್ನಣ್ಣನನ್ನು ನೋಡುವ ಸಲುವಾಗಿ ಹೊರಡುವಾಗ ಆಲೋಚಿಸಿದನು. 'ಇತರರೊಂದಿಗೆ ನನಗೆ ಹೊಂದಾಣಿಕೆಯಾಗದು. ನಾನೊಬ್ಬ ಜಂಬಗಾರನೆಂದು ಅವರು ಹೇಳುತ್ತಾರೆ. ಇಲ್ಲ, ಇಲ್ಲ, ನಾನು ಜಂಬಗಾರನಲ್ಲ. ನಾನು ಜಂಬಗಾರನಾಗಿದ್ದರೆ ನನ್ನ ರೀತಿ ನೀತಿಗಳೆ ಬೇರೆಯಾಗಿರುತ್ತಿದ್ದುವು. ಸಂತೋಷ ಚಿತ್ತನೂ, ದಯಾಮಯನೂ, ಬುದ್ಧಿವಂತನೂ, ಪ್ರಶಾಂತ ಸ್ವಭಾವದವನೂ ಆದ ವ್ರಾನ್ಸ್ಕಿಯನ್ನವನು ಚಿತ್ರಿಸಿಕೊಂಡನು. ಆ ಸಂಜೆ ತಾನಿದ್ದ ಅಸಹ್ಯಪರಿಸ್ಥಿತಿಯಲ್ಲಿ ಅವನೆಂದೂ ಇದ್ದಿರಲಿಕ್ಕಿಲ್ಲವೆಂದು ಲೆವಿನ್ ಊಹಿಸಿಕೊಂಡನು. 'ಹೌದು, ಅವಳು ಆರಿಸಿಕೊಳ್ಳುವ ವ್ಯಕ್ತಿಯವನು. ಅವಳು ಆರಿಸಿಕೊಳ್ಳಬೇಕಾದ್ದೇ ಸರಿ. ನಾನು ಯಾರ ಬಗೆಗಾಗಲಿ, ಯಾವ ವಿಷಯದಲ್ಲಾಗಲಿ ಆಕ್ಷೇಪವೆತ್ತಬೇಕಾಗಿಲ್ಲ. ತಪ್ಪು ನನ್ನದು. ನನ್ನ ಬಾಳಿನೊಂದಿಗೆ ತನ್ನ ಬಾಳನ್ನವಳು ಬೆಸೆಯಬಹುದೆಂದು ಯೋಚಿಸುವ ಹಕ್ಕು ನನಗೆಲ್ಲಿದೆ? ನಾನು ಯಾರು? ನಾನು ಏನಾಗಿದ್ದೇನೆ? ಯಾರಿಗೂ ಪ್ರಯೋಜನವಾಗದ ನಾನೊಂದು ಯಃಕಶ್ಚಿತ್ ಪ್ರಾಣಿ' ಅಷ್ಟರಲ್ಲಿವನು ತನ್ನಣ್ಣ ನಿಕೊಲಾಯ್‌ನನ್ನು ನೆನೆಸಿಕೊಂಡನು. ಅವನನ್ನು

ಕುರಿತು ಆಲೋಚನೆ ಮಾಡುವುದೇ ಅವನಿಗೆ ಸವಿಸುಖವಾಯಿತು. 'ಜಗತ್ತೆಲ್ಲ ದ್ವೇಷಮಯವಾದದ್ದು, ಅಸಹ್ಯಕರವಾದದ್ದು ಎಂಬ ಅವನ ಯೋಚನೆ ಸರಿಯಲ್ಲವೆ?' ಎಂದು ಲೆವಿನ್ ತನ್ನನ್ನು ತಾನೆ ಪ್ರಶ್ನಿಸಿಕೊಂಡನು. 'ನಿಕೊಲಾಯ್ ಬಗ್ಗೆ ನಾವು ತಳೆದಿರುವ ಅಭಿಪ್ರಾಯ ಸರಿಯಾದದ್ದೇ ಅಲ್ಲವೇ ಎಂಬ ವಿಷಯದಲ್ಲಿ ನನಗೆ ವಿಶ್ವಾಸವಿಲ್ಲ. ಅಮಲೇರುವ ತನಕ ಕುಡಿದಿದ್ದ, ಚಿಂದಿಯುಡುಗೆಯಲ್ಲಿದ್ದ ಅವನು ಪ್ರಕೋಫಿಯ ದೃಷ್ಟಿಯಿಂದ ದೂಷ್ಯನೆಂಬುದು ನಿಜ. ಆದರೆ ನಾನು ಬೇರೊಬ್ಬ ನಿಕೊಲಾಯ್‌ನನ್ನು ಬಲ್ಲೆ. ಅವನ ಸಹಜಸ್ವಭಾವ ನನಗೆ ಗೊತ್ತಿದೆ. ನಾನು ಅವನಂತಿದ್ದೇನೆಂಬುದೂ ನನಗೆ ತಿಳಿದಿದೆ. ಅವನ ಬಳಿಗೆ ಹೋಗುವುದಕ್ಕೆ ಬದಲಾಗಿ, ಹೊರಗಡೆ ಊಟ ಮುಗಿಸಿ, ನಾನಿಲ್ಲಿಗೆ ಬಂದೆ.'

ಲೆವಿನ್ ಬೀದಿಯ ಲಾಂದ್ರದ ಬಳಿಗೆ ಹೋಗಿ, ತನ್ನ ಕಿಸೆ ಪುಸ್ತಕದಲ್ಲಿದ್ದ ತನ್ನಣ್ಣನ ವಿಳಾಸವನ್ನೋದಿಕೊಂಡನು; ಬಾಡಿಗೆ ಗಾಡಿಯೊಂದನ್ನು ಕೂಗಿ ಕರೆದನು. ತನ್ನ ಸೋದರನ ಸ್ಥಳಾಭಿಮುಖವಾದ ದೀರ್ಘಪ್ರಯಾಣದಲ್ಲಿ ತನಗೆ ಪರಿಚಿತವಾಗಿದ್ದ ನಿಕೊಲಾಯ್ ಜೀವನದ ಘಟನೆಗಳನ್ನೆಲ್ಲ ಸುಸ್ಪಷ್ಟವಾಗಿ ಸ್ಮರಿಸಿಕೊಂಡನು. ತನ್ನ ಸೋದರ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾಗ, ತದನಂತರ ಒಂದು ವರ್ಷದತನಕ ಜತೆಗಾರರ ಅಣಕಕ್ಕೆ ಗುರಿಯಾಗಿದ್ದರೂ, ಸನ್ಯಾಸಿಯಂತೆ ಬದುಕು ನಡೆಸುತ್ತಿದ್ದುದನ್ನವನು ಜ್ಞಾಪಿಸಿಕೊಂಡನು. ಆ ಅವಧಿಯಲ್ಲವನು ಧಾರ್ಮಿಕೋಪಾಸನೆಗಳನ್ನು ಉಪವಾಸಾದಿ ವ್ರತಗಳನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದನು, ಪ್ರಾರ್ಥನಾಸಭೆಗಳಿಗೆ ತಪ್ಪದೆ ಹೋಗುತ್ತಿದ್ದನು, ಇಂದ್ರಿಯ ಸುಖಗಳಿಂದ, ಅದರಲ್ಲಿಯೂ ಸ್ತ್ರೀಲಂಪಟತ್ವದಿಂದ ದೂರವಾಗಿದ್ದನು. ತರುವಾಯ ಇದ್ದಕ್ಕಿದ್ದಂತೆ ಅದನ್ನೆಲ್ಲ ಸಂಪೂರ್ಣವಾಗಿ ಗಾಳಿಗೆ ತೂರಿ, ಅತ್ಯಂತ ಕೀಳುದರ್ಜೆಯ ಸಹವಾಸಕ್ಕೆ ಬಿದ್ದು, ಅಂಕೆಸಂಕೆಯಿಲ್ಲದ ವ್ಯಭಿಚಾರದಲ್ಲಿ ಮುಳುಗಿದನು. ಹಳ್ಳಿಯ ಸಣ್ಣ ಹುಡುಗನನ್ನು ಸಾಕಿಕೊಂಡಿದ್ದು, ಭಾವೋದ್ರೇಕದ ಸ್ಥಿತಿಯಲ್ಲವನನ್ನು ನಿರ್ದಯವಾಗಿ ಬಾರಿಸಿ, ಗಾಯಗೊಳಿಸಿದ್ದಕ್ಕಾಗಿ ನಿಕೊಲಾಯ್ ಹಳ್ಳಿಯ ಕೋರ್ಟಿನಲ್ಲಿ ಕಟ್ಲೆಯನ್ನೆದುರಿಸಬೇಕಾಗಿದ್ದ ಸಂದರ್ಭವನ್ನು ಲೆವಿನ್ ನೆನಪಿಗೆ ತಂದುಕೊಂಡನು. ಇಸ್ಪೀಟಾಟದಲ್ಲಿ ಮೋಸಗಾರನ ಬಲೆಗೆ ಬಿದ್ದು ಹಣ ಕಳೆದುಕೊಂಡಿದ್ದ ಕತೆಯೂ ಅವನ ನೆನಪಿನ ಸುಳಿಯಲ್ಲಿ ಸುಳಿಯಿತು. ಆ ಮೋಸಗಾರನಿಗೆ ನಿಕೊಲಾಯ್ ಪ್ರಾಮಿಸರಿ ನೋಟನ್ನು ಸಹ ಬರೆದುಕೊಟ್ಟಿದ್ದನು. ಆದರೆ ತನ್ನನ್ನವನು ಮೋಸಗೊಳಿಸಿದ್ದಕ್ಕಾಗಿ ನಿಕೊಲಾಯ್ ಅವನ ಮೇಲೆ ಕೋರ್ಟಿನಲ್ಲಿ ದೂರು ಸಲ್ಲಿಸಿದ್ದನು. (ಸರ್ಜಿ ಇವಾನೊವಿಚ್ ಕೊಟ್ಟಿದ್ದ ಹಣವಿದು) ಅಕ್ರಮವರ್ತನೆಗಾಗಿ ತನ್ನಣ್ಣ ಜೈಲಿನಲ್ಲಿ ಕಳೆದ ಒಂದು ದಿನವನ್ನು ಸ್ಮರಿಸಿಕೊಂಡನು. ತಮ್ಮ ತಾಯಿಯ ಆಸ್ತಿಯಲ್ಲಿ ತನಗೆ ನ್ಯಾಯವಾಗಿ ಬರಬೇಕಾಗಿದ್ದ ದಾಯಭಾಗವನ್ನು ಕೊಡದಿದ್ದುದಕ್ಕಾಗಿ ಸರ್ಜಿ ಇವಾನೊವಿಚ್‌ನ ಮೇಲೆ ಹೂಡಿದ್ದ ನಾಚಿಕೆಗೇಡಿನ ಮೊಕದ್ದಮೆಯನ್ನವನು ನೆನೆಸಿಕೊಂಡನು. ಪಶ್ಚಿಮ ಪ್ರಾಂತ್ಯಕ್ಕೆ ಸರ್ಕಾರಿಕೆಲಸದ ಮೇಲೆ ಹೋಗಿದ್ದಾಗ ಗ್ರಾಮದ ಮುಖಂಡನ ಮೇಲೆ ಕೈಮಾಡಿ, ಕೋರ್ಟಿನ ಮೆಟ್ಟಿಲನ್ನು ಹತ್ತಿದ ಕೊಟ್ಟಕೊನೆಯ ಅವಮಾನ ಪ್ರಸಂಗವನ್ನು ಜ್ಞಾಪಿಸಿಕೊಂಡನು. ಇದೆಲ್ಲವೂ ವರ್ಣನೆಗೆ ಮೀರಿದ ಅಸಹ್ಯದ ಕತೆಯಾಗಿತ್ತು; ಆದರೆ

ನಿಕೊಲಾಯ್ ಗೊತ್ತಿಲ್ಲದ, ಅವನ ಜೀವನ ವೃತ್ತಾಂತವನ್ನರಿಯುದ, ಅವನ ನಿಜಸ್ವಭಾವ ತಿಳಿಯದ ಜನರಿಗನಿಸಿದಂತೆ ಲೆವಿನ್‌ನಿಗೆ ಮಾತ್ರ ಅವನು ಅಸಹ್ಯವಾಗಿ ತೋರುತ್ತಿರಲಿಲ್ಲ.

ನಿಕೊಲಾಯ್ ಉಪವಾಸ ಪ್ರಾರ್ಥನಾದಿ ಧಾರ್ಮಿಕ ವ್ರತಗಳನ್ನಾಚರಿಸುತ್ತ, ಸನ್ಯಾಸತ್ವದ ಪವಿತ್ರ ಸ್ಥಿತಿಯಲ್ಲಿದ್ದಾಗ, ತನ್ನ ರಾಗಭಾವಗಳನ್ನು ಸಂಯಮದಲ್ಲಿಟ್ಟು ಕೊಳ್ಳುವ ದಾರಿಯನ್ನು ಧರ್ಮದಲ್ಲಿ ಹುಡುಕುತ್ತಿದ್ದಾಗ, ಯಾರೂ ಅವನನ್ನು ಬೆಂಬಲಿಸ ಲಿಲ್ಲ; ಅದಕ್ಕೆ ಪ್ರತಿಯಾಗಿ, ತಾನು ಮೊದಲುಗೊಂಡು ಎಲ್ಲರೂ ಅವನನ್ನು ಅಪಹಾಸ್ಯ ಮಾಡುತ್ತಿದ್ದುದುಂಟು. ಸನ್ಯಾಸಿಯೆಂದು, ನೋವನೆಂದು ಕರೆದು ಎಲ್ಲರೂ ಅವನನ್ನು ಕೀಟಲೆಮಾಡುತ್ತಿದ್ದರು. ಅವನು ಕೆಟ್ಟಾಗ ಯಾರೂ ಅವನಿಗೆ ಸಹಾಯ ನೀಡಲು ಸಿದ್ಧ ರಾಗಿರಲಿಲ್ಲ; ಅಷ್ಟೇ ಅಲ್ಲ, ಎಲ್ಲರೂ ಭೀತಿ ಜುಗುಪ್ಸೆಗಳಿಂದ ಅವನನ್ನು ಹೊರಗಟ್ಟು ತ್ತಿದ್ದರು.

ತನ್ನಣ್ಣ ನಿಕೊಲಾಯ್‌ನ ಜೀವನ ವಿಧಾನ ವಿರೂಪಗೊಂಡಿದ್ದರೂ, ತನ್ನನ್ನು ಶಪಿಸುತ್ತಿದ್ದವರ ಅಪರಾಧಕ್ಕಿಂತ ಅಧಿಕತರವಾದ ಅಪರಾಧವನ್ನು ಅವನ ಆತ್ಮವಾಗಲಿ, ಅವನಾತ್ಮದ ನಿಗೂಢ ಅಂತರಾಳವಾಗಲಿ ಕಂಡಿರಲಿಲ್ಲ. ನಿಗ್ರಹಿಸಲು ಸಾಧ್ಯವಾಗದ ರಾಗಭಾವಗಳೊಡನೆ ಹಾಗೂ ಪ್ರಕ್ಷುಬ್ಧ ಮನಸ್ಸಿನ ಸಹಿತ ಹುಟ್ಟಿದ್ದಕ್ಕಾಗಿ ಅವನ ಮೇಲೆ ತಪ್ಪು ಹೊರಿಸುವಂತಿರಲಿಲ್ಲ. ಯಾವಾಗಲೂ ಒಳ್ಳೆಯವನಾಗಿರಬೇಕೆಂಬುದೇ ಅವನ ಅಪೇಕ್ಷೆಯಾಗಿತ್ತು. 'ಅವನಿಗೆ ನನ್ನದೆಲ್ಲವನ್ನು ತಿಳಿಸಿಬಿಡುತ್ತೇನೆ; ತನ್ನದೆಲ್ಲವನ್ನು ನನಗೆ ತಿಳಿಸುವಂತೆ ಅವನನ್ನು ಪ್ರೇರಿಸುತ್ತೇನೆ; ಅವನ ಮೇಲೆ ನನಗಿರುವ ಪ್ರೀತಿಯನ್ನು ಬಹಿರಂಗಗೊಳಿಸುತ್ತೇನೆ; ಆ ಮೂಲಕ ಅವನನ್ನು ಗ್ರಹಿಸಲು ಪ್ರಯತ್ನಿಸುತ್ತೇನೆ' ಎಂದು ಲೆವಿನ್ ನಿರ್ಧರಿಸಿಕೊಂಡು ತನ್ನ ಸೋದರ ಉಳಿದಿದ್ದ ಹೋಟೆಲಿನ ಬಳಿ ಬರುವ ಹೊತ್ತಿಗೆ ಹನ್ನೊಂದು ಗಂಟೆ ಹೊಡೆಯಿತು.

'ಮಹಡಿಯ ಮೇಲೆ, ಹನ್ನೆರಡು ಮತ್ತು ಹದಿಮೂರನೆಯ ಕೋಣೆಗಳು' ಎಂದು ದ್ವಾರಪಾಲಕ ಲೆವಿನ್‌ನ ಪ್ರಶ್ನೆಗುತ್ತರವಾಗಿ ನುಡಿದನು.

'ಅವನು ಒಳಗಿದ್ದಾನೆಯೆ?'

'ಇರಬಹುದೆಂದು ಕೊಂಡಿದ್ದೇನೆ'

ಹನ್ನೆರಡನೆಯ ನಂಬರಿನ ಕೋಣೆ ಕಿರುಗುಡುತ್ತಿತ್ತು, ಅರ್ಧತೆರೆದಿತ್ತು. ತೆರಪಿನ ಮೂಲಕ ಹರಿಯುತ್ತಿದ್ದ ಬೆಳಕಿನಲ್ಲಿ ಅಗ್ಗದ ಕೀಳ್ಮಟ್ಟದ ತಂಬಾಕಿನ ದಟ್ಟ ಧೂಮ ಸುರುಳಿಸುರುಳಿಯಾಗಿ ಹರಡಿಕೊಂಡಿತ್ತು. ಅಪರಿಚಿತ ಧ್ವನಿಯೊಂದು ಲೆವಿನ್‌ನಿಗೆ ಕೇಳಿ ಸಿತು. ಆದರೆ ತನ್ನಣ್ಣ ಅಲ್ಲಿದ್ದಾನೆಂದು ತತ್‌ಕ್ಷಣ ತಿಳಿಯಿತು. ಅವನ ಕೆಮ್ಮು ಕಿವಿದೆರೆಯ ಮೇಲೆ ಬೀಳುತ್ತಿತ್ತು.

ಅವನು ಬಾಗಿಲು ತಲುಪಿದಾಗ 'ಆ ವ್ಯವಹಾರದ ಯಶಸ್ಸು ಜ್ಞಾನವಿವೇಕಗಳನ್ನವ ಲಂಬಿಸಿದೆ' ಎಂಬುದಾಗಿ ಅಪರಿಚಿತಧ್ವನಿಯೆಂದು ಹೇಳುತ್ತಿತ್ತು.

ಕಾನ್‌ಸ್ಟೆಂಟಿನ್ ಲೆವಿನ್ ಕೋಣೆಯೊಳಗೆ ಕಣ್ಣು ಹಾಕಿದನು. ಮಾತಾಡುತ್ತಿದ್ದ ವನು ಹಳೆಯಕಾಲದ ರಷ್ಯನ್‌ಕೋಟು ಧರಿಸಿದ್ದ, ದಟ್ಟಗೂದಲಿನ ಯುವಕನೆಂಬುದನ್ನ ವನು ಅರಿತನು. ಕೊರಳಪಟ್ಟಿ ತೋಳುಗಳಿಲ್ಲದ ಉಣ್ಣೆಯುಡುವು ಧರಿಸಿದ್ದ, ಸಿಡುಬು

ಕಲೆಯ ಯುವತಿಯೊಬ್ಬಳು ಸೋಫಾದ ಮೇಲೆ ಕುಳಿತಿದ್ದಳು. ನಿಕೊಲಾಯ್ ಕಾಣಿಸುತ್ತಿರಲಿಲ್ಲ. ತನ್ನ ಸೋದರ ಅವರಂಥ ವಿಚಿತ್ರವ್ಯಕ್ತಿಗಳ ಸಹವಾಸಕ್ಕೆ ಬೀಳಬಹುದೆ ಎಂಬ ಆಲೋಚನೆ ತನ್ನ ಮನಸ್ಸಿನಲ್ಲಿ ಮೂಡಿದ್ದೆ ತಡ ಲೆವಿನ್‌ನ ನರನಾಡಿಗಳಲ್ಲಿ ಚಳುಕು ಹರಿದಂತಾಯಿತು. ಲೆವಿನ್ ಬಂದದ್ದನ್ನು ಯಾರೂ ಗಮನಿಸಲಿಲ್ಲ. ತನ್ನ ಷೂಗಳನ್ನು ತೆಗೆಯುವಾಗ, ರಷ್ಯನ್ ಕೋಟು ಧರಿಸಿದ್ದ ಯುವಕ ಹೇಳುತ್ತಿದ್ದುದನ್ನವನು ಆಲಿಸಿದನು. ಯಾವುದೋ ಉದ್ಯಮದ ಬಗ್ಗೆ ಅವನು ಮಾತಾಡುತ್ತಿದ್ದನು.

'ಈ ಉತ್ತಮವರ್ಗದ ಜನರೆಲ್ಲ ನರಕಕ್ಕೆ ಬೀಳಲಿ' ಎಂದವನ ಅಣ್ಣ ಕೆಮ್ಮುತ್ತ ಉದ್ಗರಿಸಿದನು. 'ಮಾಷ, ಒಂದಿಷ್ಟು ಊಟ ತರಿಸು, ವೈನ್ ಉಳಿದಿದ್ದರೆ ಅದನ್ನು ಕಳಿಸು, ಉಳಿದಿಲ್ಲವಾದರೆ ತರಿಸಲು ಏರ್ಪಾಡು ಮಾಡು.'

ಹೆಂಗಸು ಮೇಲೆದ್ದು, ಬಾಗಿಲಿಗೆ ಬಂದಾಗ ಲೆವಿನ್ ಕಣ್ಣಿಗೆ ಬಿದ್ದನು.

'ದೊಡ್ಡ ಮನುಷ್ಯರೊಬ್ಬರು ಬಂದಿದ್ದಾರೆ, ನಿಕೊಲಾಯ್ ದಿಮಿತ್ರಿಚ್' ಎಂದವಳು ನುಡಿದಳು.

'ಯಾರದು? ಏನು ಬೇಕು?' ಎಂದು ನಿಕೊಲಾಯ್ ರೋಷದಿಂದ ಕೂಗಿಕೊಂಡನು.

'ನಾನೆ' ಎಂದು ಲೆವಿನ್ ಉತ್ತರಿಸುತ್ತ, ಕೋಣೆಯಿಂದ ಬರುತ್ತಿದ್ದ ಬೆಳಕಿನ ಪಟ್ಟೆಯಲ್ಲಿ ಹೆಜ್ಜೆ ಹಾಕಿದನು.

'ನಾನೆಂದರೆ ಯಾರು?' ಎಂದು ನಿಕೊಲಾಯ್ ಮತ್ತಷ್ಟು ರೋಷಾವೇಶದಿಂದ ಕೂಗಾಡಿದನು. ಅವನು ದಿಗ್ಗನೆದ್ದು, ಏನನ್ನೋ ಎಡಹಿ, ತನ್ನ ಕಡೆಗೆ ಬರುತ್ತಿದ್ದುದು ಲೆವಿನ್‌ನಿಗೆ ಕೇಳಿಸಿತು. ಭಯಚಕಿತ ಹೆಗ್ಗಣ್ಣುಗಳ, ನತಸೂಕ್ಷ್ಮ ಮಹಾಕಾಯದ, ಸುಪರಿಚಿತನಾದರೂ ರೋಗದಿಂದ ವಿಚಿತ್ರವಾಗಿ ಕಾಣುತ್ತಿದ್ದ ತನ್ನ ಸೋದರನನ್ನವನು ಮರುಕ್ಷಣದಲ್ಲಿಯೇ ಬಾಗಿಲಲ್ಲಿ ಸಂಧಿಸಿದನು. ಅವನನ್ನು ನೋಡಿದ ಕೂಡಲೇ ಲೆವಿನ್‌ನ ಎದೆ ಕಂಪಿಸಿತು.

ಲೆವಿನ್ ಅವನನ್ನು ನೋಡಿ ಮೂರು ವರ್ಷಗಳಾಗಿದ್ದುವು. ಆಗಿಗಿಂತ ಈಗ ನಿಕೊಲಾಯ್ ತುಂಬ ತೆಳ್ಳಗಾಗಿದ್ದನು. ಅವನು ತುಂಡು ಜಾಕೀಟು ಧರಿಸಿದ್ದನು. ದಪ್ಪನೆಯ ಗೆಣ್ಣುಗಳ ಅವನ ಕೈ ಎಂದಿಗಿಂತ ದೊಡ್ಡದಾಗಿ ಕಂಡುವು. ಅವನ ಕೂದಲು ತೆಳ್ಳಗಾಗಿತ್ತು; ನೆಟ್ಟಗಿದ್ದ ಅದೇ ಮೀಸೆ ಅವನ ತುಟಿಗಳ ಮೇಲೆ ಜೋಲು ಬಿದ್ದಿದ್ದುವು; ಅದೇ ಕಣ್ಣು ವಿಚಿತ್ರವಾಗಿ ಮುಗ್ಧತೆಯಿಂದ ಹೊಸಬನನ್ನು ದುರದುರನೆ ನೋಡಿದುವು.

'ಹಾ, ಕಾನ್‌ಸ್ಟೆಂಟಿನ್,' ಎಂದವನು ತನ್ನ ಸೋದರನ ಗುರುತು ಸಿಕ್ಕಿದ ಕೂಡಲೇ ಉದ್ಗಾರ ತೆಗೆದನು. ಅವನ ಕಣ್ಣುಗಳಲ್ಲಿ ಸಂತೋಷವುಕ್ಕಿತು. ಆದರೆ ಮರುಕ್ಷಣವೇ ಅವನು ಮತ್ತೊಬ್ಬ ಯುವಕನ ಕಡೆಗೆ ದಿಟ್ಟಿ ಹರಿಸಿದನು. ಅವನ ತಲೆಕೊರಳುಗಳು ಸೆಳವಿಗೊಳಗಾದಂತೆ ನುಲಿದುವು. ಅವನ ಆ ಚೇಷ್ಟೆ ಲೆವಿನ್‌ನಿಗೆ ತಿಳಿದಿತ್ತು. ಕೊರಳಪಟ್ಟಿ ಬಿಗಿಯಾಯಿತೆನ್ನುವ ರೀತಿಯಲ್ಲಿ ನಿಕೊಲಾಯ್ ಕೊರಳನ್ನು ಚಾಚಿ, ಸುತ್ತಲೂ ತಲೆಯನ್ನು ತೂನೆದನು; ಕೂಡಲೇ ನಮೆದು ಹೋಗಿದ್ದ ಅವನ ಮುಖದ ಭಾವ ಬದಲಾಯಿಸಿತು; ಉನ್ಮಾದ, ಕ್ರೌರ್ಯ ಮತ್ತು ಯಾತನೆಗಳು ಅವನ ಮುಖದ ಮೇಲೆ ಮುದ್ರೆಗೊಂಡುವು.

‘ನಿಮಗೂ ನನಗೂ ಏನೇನೂ ಸಂಬಂಧವಿಲ್ಲವೆಂದು ನಿನಗೆ, ಹಾಗೆಯೇ ಸರ್ಗಿ ಇವಾನೊವಿಚ್‌ನಿಗೆ ಪತ್ರ ಬರೆದೆ. ನಿನಗೇನು ಬೇಕು?’

ಅವನು ಲೆವಿನ್ ಊಹಿಸಿಕೊಂಡಿದ್ದ ವ್ಯಕ್ತಿಯಾಗಿರಲಿಲ್ಲ. ಅವನ ಬಗ್ಗೆ ಯೋಚಿಸುವಾಗ ಲೆವಿನ್ ಅವನ ಸ್ವಭಾವದ ಅತ್ಯಂತ ವಿರೂಪಮುಖವನ್ನು ಸಂಪೂರ್ಣವಾಗಿ ಮರೆತಿದ್ದನು. ಅವನೊಡನೆ ಮಾತಾಡುವುದು ಸಹ ಕಷ್ಟವಾಗಿತ್ತು. ಈಗವನ ಮುಖದಲ್ಲಿ ಲೆವಿನ್ ದಿಟ್ಟಿ ನಟ್ಟಾಗ, ಸೆಳವಿನ ತುಯ್ತದ ಅವನ ತಲೆಯನ್ನು ನೋಡಿದಾಗ, ಅವನ ಸ್ವಭಾವವೆಲ್ಲ ನೆನಪಾಯಿತು.

‘ಯಾವೊಂದು ಉದ್ದೇಶವೂ ಇಲ್ಲದೆ, ನಿನ್ನನ್ನು ನೋಡಲೆಂದೇ ನಾನು ಬಂದಿದ್ದೇನೆ’ ಎಂದು ಲೆವಿನ್ ದೈನ್ಯದಿಂದ ನುಡಿದನು.

ಸೋದರನ ದೈನ್ಯದಿಂದಾಗಿ ನಿಕೊಲಾಯ್ ಮೃದುವಾದಂತೆ ತೋರಿದನು. ಅವನ ತುಟಿ ತಿರುಚಿದುವು.

‘ಓ, ಹಾಗೊ....’ ಎಂದವನು ಉಸುರಿದನು. ‘ಒಳಗೆ ಬಾ. ಕುಳಿತುಕೊ. ಊಟ ಮಾಡುತ್ತೀಯೇನು? ಮಾಷ, ಮೂರೂಟಕ್ಕೆ ಹೇಳು. ಬೇಡ, ಬೇಡ, ತುಸು ತಡಿ. ಇವನಾರು ಗೊತ್ತೆ ನಿನಗೆ?’ ಎಂದವನು ರಷ್ಯನ್ ಕೋಟಿನ ಯುವಕನ ಕಡೆಗೆ ಕೈ ತೋರಿಸುತ್ತ ಕೇಳಿದನು. ‘ಇವನ ಹೆಸರು ಕ್ರಿತ್‌ಸ್ಕಿ. ಕೀವ್‌ನಲ್ಲಿದ್ದಾಗಿನಿಂದ ನಾವು ಗೆಳೆಯರಾಗಿದ್ದೇವೆ. ಇವನೊಬ್ಬ ಅದ್ಭುತ ವ್ಯಕ್ತಿ. ಪೋಲೀಸರು ಇವನ ಬೆನ್ನು ಹತ್ತಿದ್ದಾರೆ. ಇವನು ದಗಾಕೋರನಲ್ಲವೆಂಬುದೇ ಅವರ ಕೆಂಗಣ್ಣಿಗೆ ಕಾರಣ.’

ತನ್ನದೇ ರೀತಿಯಲ್ಲವನು ಕೋಣೆಯಲ್ಲಿದ್ದ ಪ್ರತಿಯೊಬ್ಬರ ಮೇಲೆಯೂ ಕಣ್ಣು ಹಾಯಿಸಿದನು. ಬಾಗಿಲಲ್ಲಿ ನಿಂತಿದ್ದ ಹೆಂಗಸು ಹೊರಗೆ ಹೋಗುವವಳಂತೆ ಚಲಿಸಿದ್ದನ್ನು ಗಮನಿಸಿದ ಅವನು ‘ನಾನು ನಿನಗೆ ಹೇಳಿದೆನಲ್ಲವೆ? ತುಸು ತಡಿ’ ಎಂದು ಕೂಗಿದನು. ಅನಂತರ ಸುತ್ತಲೂ ಮತ್ತೊಮ್ಮೆ ಕಣ್ಣು ಹಾಯಿಸಿ, ಲೆವಿನ್‌ನಿಗೆ ಸುಪರಿಚಿತವಾಗಿದ್ದ ಅಸಮಂಜಸವೂ ವಿಚಿತ್ರವೂ ಆದ ಶೈಲಿಯಲ್ಲಿ ತನ್ನ ಸೋದರನಿಗೆ ಕ್ರಿತ್‌ಸ್ಕಿಯ ಕತೆಯನ್ನು ನಿರೂಪಿಸಲನುವಾದನು: ಬಡವಿದ್ಯಾರ್ಥಿಗಳ ಸಹಾಯಕ್ಕಾಗಿ ಸಂಘವನ್ನು ಸಂಸ್ಥಾಪಿಸಿದ್ದಕ್ಕಾಗಿ, ಭಾನುವಾರಗಳಲ್ಲಿ ಶಾಲೆಯಲ್ಲಿ ಪಾಠಕಲಿಸಿದ್ದಕ್ಕಾಗಿ ಅವನನ್ನು ವಿಶ್ವವಿದ್ಯಾಲಯದಿಂದ ಬಹಿಷ್ಕರಿಸಲಾಗಿತ್ತು; ತದನಂತರ ಅವನು ಗ್ರಾಮೀಣ ಶಾಲೆಯ ಉಪಾಧ್ಯಾಯನಾಗಿದ್ದು, ಅಲ್ಲಿಂದಲೂ ವಜಾಗೊಂಡಿದ್ದನು; ತರುವಾಯ ಒಂದಲ್ಲ ಒಂದು ನೆಪದ ಮೇಲೆ ಅವನು ನ್ಯಾಯಾಲಯದ ಕಟಕಟೆಯನ್ನು ಹತ್ತಬೇಕಾಗಿತ್ತು.

‘ನೀವು ಕೀವ್ ವಿಶ್ವವಿದ್ಯಾಲಯದಲ್ಲೋದಿದವರೆ?’ ಎಂದು ವಕ್ರಮೌನವನ್ನು ಮುರಿಯುವ ಸಲುವಾಗಿ ಲೆವಿನ್ ಕ್ರಿತ್‌ಸ್ಕಿಯನ್ನು ಪ್ರಶ್ನಿಸಿದನು.

‘ಹೌದ್ಹೌದು’ ಎಂದು ಕ್ರಿತ್‌ಸ್ಕಿ ಸಿಡುಕಿದನು. ಅವನ ಮುಖ ಕೋಪದಿಂದ ಉರಿಯುತ್ತಿತ್ತು.

‘ಆ ಹೆಂಗಸಿದ್ದಾಳಲ್ಲ’ ಎಂದು ನಿಕೊಲಾಯ್ ಅವಳ ಕಡೆಗೆ ತೋರಿಸುತ್ತ ‘ಅವಳೆ ಮಾಷ. ನನ್ನ ಜೀವನ ಸಂಗಾತಿ’ ಎಂದು ನುಡಿದನು. ‘ಅವಳನ್ನು ದಾರಿ ತಪ್ಪಿದ ಮನೆಯಿಂದ ಕರೆತಂದೆ. (ಆ ಮಾತು ಹೇಳುವಾಗ ಅವನು ತಲೆ ತೊನೆದನು.) ಆದರೆ ನಾನವ

ಳನ್ನು ಪ್ರೀತಿಸುತ್ತೇನೆ; ಗೌರವಿಸುತ್ತೇನೆ. ನನ್ನ ಗೆಳೆತನವನ್ನಪೇಕ್ಷಿಸುವವರೆಲ್ಲರೂ ಅವಳನ್ನು ಪ್ರೀತಿಸಬೇಕು, ಗೌರವಿಸಬೇಕು, ತಿಳಿಯಿತೆ?' ಎಂದವನು ದನಿಯೇರಿಸಿ, ಹುಬ್ಬು ಗಂಟಿಕ್ಕಿಕೊಂಡು ನುಡಿದನು. 'ನಾವು ಮದುವೆಯಾಗಿದ್ದರೆ ಹೇಗಿರುತ್ತಿದ್ದೆವೋ ಹಾಗೆಯೇ ಇದ್ದೇವೆ. ನೀನೀಗ ಎಂಥವರ ಜತೆಯಲ್ಲಿದ್ದೀಯೆ ಎಂದು ನಿನಗೆ ಮನವರಿಕೆಯಾಗಿರಬೇಕಲ್ಲವೆ? ನೀನಿಲ್ಲಿರುವುದು ನಿನ್ನ ಯೋಗ್ಯತೆಗೆ ಕೀಳೆನಿಸಿದರೆ, ಮಾಫಿಯೋ ಮಂಜೋ, ಅಗೋ, ನಿನಗಾಗಿ ಬಾಗಿಲು ತೆರೆದಿದೆ.'

ಮತ್ತೊಮ್ಮೆ ಅವನ ಕಣ್ಣುಗಳು ಪ್ರಶ್ನಾರ್ಥಕವಾಗಿ ಎಲ್ಲ ಮುಖಗಳ ಮೇಲೆ ಸುಳಿದಾಡಿದುವು.

'ಅದು ನನ್ನ ಗೌರವಕ್ಕೆ ಕುಂದೆಂದು ಏಕೆ ತಿಳಿಯಬೇಕೋ ಕಾಣೆ.'

'ಈಗ ಮಾಷ, ಮೂವರಿಗೆ ಊಟಬೇಕೆಂದು ಹೇಳು. ವೋದ್ಕ ಮತ್ತು ವೈನ್.... ಇಲ್ಲ, ಒಂದು ನಿಮಿಷ ತಡೆ....ಬೇಡ, ಬೇಡ....ಹೋಗು.'

೨೫

'ನೋಡಿದಿಯೊ?' ಎಂದು ನಿಕೊಲಾಯ್ ಹುಬ್ಬು ಗಂಟಿಕ್ಕಿಕೊಂಡು, ಶ್ರಮಪೂರ್ವಕವಾಗಿ ಸುತ್ತಲೂ ತಿರುಚುತ್ತ ಮಾತು ಮುಂದುವರಿಸಿದನು. ಏನು ಹೇಳಬೇಕೊ, ಹೇಗೆ ವರ್ತಿಸಬೇಕೋ ಎಂಬುದನ್ನು ತಿಳಿಯದಂತಿದ್ದನು. 'ಅಗೊ, ಅದು ನಿನಗೆ ಕಾಣಿಸಿತೆ?' ಕೋಣೆಯ ಮೂಲೆಯೊಂದರಲ್ಲಿ ಒಟ್ಟಿಗೆ ಕಟ್ಟುಗೊಂಡು ಬಿದ್ದಿದ್ದ ಕಬ್ಬಿಣದ ಸರಳುಗಳ ಕಡೆಗೆ ನಿಕೊಲಾಯ್ ಅವನ ಗಮನ ಸೆಳೆದನು. 'ಅದು ಕಾಣಿಸಿತೆ? ಹೊಸ ಉದ್ಯಮವೊಂದನ್ನೀಗ ಪ್ರಾರಂಭಿಸಿದ್ದೇವೆ. ತಯಾರಿಕೆಯ ಘಟಕವನ್ನು ಸ್ಥಾಪಿಸಿದ್ದೇವೆ.'

ಅವನ ಮಾತು ಲೆವಿನ್‌ನಿಗೆ ಅಸ್ಪಷ್ಟವಾಗಿ ಕೇಳಿಸಿತು. ಅವನ ಕ್ಷಯರೋಗದ ಮುಖವನ್ನು ನೋಡಿದಂತೆಲ್ಲ, ಸೋದರನ ದುರವಸ್ಥೆಗಾಗಿ ಅವನು ಪರಿತಪಿಸುತ್ತಿದ್ದನು. ಅವನ ನೂತನೋದ್ಯಮದ ಬಗೆಗಿನ ವಿವರವನ್ನು ಕೇಳಿಸಿಕೊಳ್ಳುವ ಸಹನೆ ಅವನಿಗಿರಲಿಲ್ಲ. ಆತ್ಮಾವಹೇಳನದಿಂದ ರಕ್ಷಣೆ ಪಡೆಯುವ ಸಲುವಾಗಿ ಆ ಸಂಘ ತನ್ನಣ್ಣ ಕೊಟ್ಟ ಕೊನೆಯದಾಗಿ ಹಿಡಿದುಕೊಂಡಿದ್ದ ತೃಣವೆಂಬುದನ್ನವನು ಗ್ರಹಿಸಿದನು.

ನಿಕೊಲಾಯ್ ಲೆವಿನ್‌ರ ಮಾತುಕತೆ ಮುಂದುವರಿಯಿತು. 'ಬಂಡವಾಳಷಾಹಿ ಕಾರ್ಮಿಕರನ್ನು ಹಿಂಡಿಹಿಪ್ಪೆಮಾಡುತ್ತಿದೆಯೆಂಬುದು ನಿನಗೆ ಗೊತ್ತಿದೆ. ನಮ್ಮ ಕಾರ್ಮಿಕರು ಮತ್ತು ರೈತರು ಶ್ರಮದ ಭಾರವನ್ನೆಲ್ಲ ತಮ್ಮ ಹೆಗಲ ಮೇಲೆ ಹೊತ್ತಿದ್ದಾರೆ. ಅವರೆಷ್ಟು ಪ್ರಯತ್ನಿಸಿದರೂ ತಮ್ಮ ಪ್ರಾಣಿ ಜೀವನದಿಂದ ಮೇಲೇಳದಂಥ ಸ್ಥಿತಿಯಲ್ಲಿದ್ದಾರೆ. ತಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳಬಹುದಾದ, ವಿರಾಮವನ್ನು ಅನುಭವಿಸಬಹುದಾದ, ಅದರ ಫಲವಾಗಿ ಶಿಕ್ಷಣವನ್ನು ಪಡೆಯಬಹುದಾದ ದುಡಿಮೆಯ ಲಾಭವನ್ನೆಲ್ಲ ಬಂಡವಾಳಗಾರರು ಅವರಿಂದ ಕಸಿದುಕೊಳ್ಳುತ್ತಿದ್ದಾರೆ. ಕಾರ್ಮಿಕರು ಕಷ್ಟಪಟ್ಟು ದುಡಿದಂತೆಲ್ಲ, ವರ್ತಕರು ಮತ್ತು ಭೂಮಾಲಿಕರು ಹೆಚ್ಚು ಹೆಚ್ಚು ಶ್ರೀಮಂತರಾಗುತ್ತಿದ್ದಾರೆ. ದುಡಿಮೆಗಾರರಂತು ಹೊರೆ ಹೊರುವ ಪ್ರಾಣಿಗಳಿಗಿಂತ ಕನಿಷ್ಠವಾಗಿ ಬಾಳು ಹೋರೆಯುತ್ತಾರೆ. ಇಂದಿನ ನಮ್ಮ ಸಮಾಜದ ಪರಿಸ್ಥಿತಿಯಿದು. ಈ

ವ್ಯವಸ್ಥೆ ಬದಲಾಗಬೇಕು' ಎಂದವನು ಲೆವಿನ್‌ನ ಕಡೆಗೆ ಪ್ರಶ್ನಾರ್ಥಕ ದೃಷ್ಟಿಯನ್ನು ಬೀರುತ್ತ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದನು.

ತನ್ನಣ್ಣನ ಉಬ್ಬುಗೆನ್ನೆ ಮೂಳೆಯ ಮೇಲೆ ಗೋಚರಿಸಿದ ಹೊಳಪನ್ನೇ ನೋಡುತ್ತ 'ನಿಜ, ನಿಜ' ಎಂದು ಲೆವಿನ್ ಉತ್ತರಿಸಿದನು.

'ಆದ್ದರಿಂದಲೇ ನಾವೀಗ ಕಮ್ಮಾರರ ಸಂಘವನ್ನು ಸ್ಥಾಪಿಸಿದ್ದೇವೆ. ನಾವಿಲ್ಲಿ ಉತ್ಪತ್ತಿ ಮಾಡುವ ಪ್ರತಿಯೊಂದು ಸಾಮಗ್ರಿಯೂ, ಗಳಿಸುವ ಪ್ರತಿಯೊಂದು ದಮ್ಮಡಿಯೂ, ಎಲ್ಲಕ್ಕಿಂತ ಮಿಗಿಲಾಗಿ, ಎಲ್ಲ ಉತ್ಪನ್ನ ಸಾಧನಗಳೂ ಎಲ್ಲರ ಒಡೆತನದಲ್ಲಿರುತ್ತವೆ.'

'ಈ ಸಂಘ ಎಲ್ಲಿಂದ ಕಾರ್ಯ ನಿರ್ವಹಿಸುತ್ತದೆ?' ಎಂದು ಲೆವಿನ್ ಕೇಳಿದನು.

'ಕಜನ್ ಜಿಲ್ಲೆಯ ವಜ್‌ದ್ರೆವ್ ಹಳ್ಳಿಯಿಂದ.'

'ಹಳ್ಳಿಯಲ್ಲೇಕೆ? ನನಗೆ ತಿಳಿದಂತೆ ಹಳ್ಳಿಯಲ್ಲಿಯೇ ಮಾಡಬೇಕಾದ ಕೆಲಸ ಸಾಕಷ್ಟಿದೆ. ಕಮ್ಮಾರರ ಸಂಘವನ್ನು ಹಳ್ಳಿಯಲ್ಲೇಕೆ ಪ್ರಾರಂಭಿಸಬೇಕು?'

'ಏಕೆಂದೆಯಾ? ರೈತರು ಹಿಂದಿನಂತೆ ಈಗಲೂ ಗುಲಾಮರಾಗಿದ್ದಾರೆ. ನೀನು ಮತ್ತು ನಿನ್ನ ಮುರುಕು ಅಣ್ಣ ಇದ್ದೀರಲ್ಲ, ನೀವಿಬ್ಬರೂ ಅವರನ್ನು ಗುಲಾಮಗಿರಿಯಿಂದ ವಿಮೋಚನೆಗೊಳಿಸುವ ಪ್ರಯತ್ನಕ್ಕೆ ವಿರೋಧವಾಗಿದ್ದೀರಿ' ಎಂದು ನಿಕೊಲಾಯ್ ಲೆವಿನ್ ತನ್ನ ಸೋದರನ ಆಕ್ಷೇಪಕ್ಕೆ ಕೋಪಗೊಂಡು ಸಿಡಿದನು.

ಲೆವಿನ್ ನಿಡುಸುಯ್ದನು; ಕೊಳಕು ಕೋಣೆಯ ಸುತ್ತ ಕಣ್ಣು ಹಾಯಿಸಿದನು. ಅವನ ನಿಡುಸುಯ್ಲು ನಿಕೊಲಾಯ್‌ನ ಕೋಪವನ್ನು ಮತ್ತಷ್ಟು ಕೆರಳಿಸಿದಂತೆ ತೋರಿತು.

'ನಿನ್ನ ಮತ್ತು ಸರ್ಜಿ ಇವಾನೊವಿಚ್‌ನ ಶ್ರೀಮಂತಾಭಿಪ್ರಾಯಗಳನ್ನು ನಾನು ಬಲ್ಲೆ. ಜಾರಿಯಲ್ಲಿರುವ ಹೊಲ್ಲೆಹಗಳನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ತನ್ನೆಲ್ಲ ಬುದ್ಧಿಶಕ್ತಿಯನ್ನವನು ಖರ್ಚುಮಾಡುತ್ತಿದ್ದಾನೆಂಬುದನ್ನು ಬಲ್ಲೆ.'

'ಸರ್ಜಿ ಇವಾನೊವಿಚ್‌ನ ವಿಚಾರವನ್ನೇಕೆ ಇಷ್ಟು ಅಂಟಿಸಿಕೊಂಡಿದ್ದೀಯೆ?' ಎಂದು ಲೆವಿನ್ ಮುಗುಳನಗೆ ಸೂಸಿದನು.

'ಏಕೆಂದೆಯಾ? ಕಾರಣವಿದು!' ಎಂದು ನಿಕೊಲಾಯ್ ಲೆವಿನ್ ಸರ್ಜಿ ಇವಾನೊವಿಚ್‌ನ ನಾಮಸೂಚನೆಗಾಗಿ ದಡಾರನೆ ಕೂಗಿಕೊಂಡನು. 'ಕಾರಣವಿದು!....ಹೇಳಿ ಪ್ರಯೋಜನವೇನು? ಅದೇ ಹಳೆಯ ಕತೆ....ನೀನಿಲ್ಲಿಗೆ ಬಂದದ್ದೇಕೆ? ಇಂಥ ಸಂಗತಿಗಳ ಬಗ್ಗೆ ನಿನಗೆ ತಾತ್ಸಾರವಿದೆ. ನಿನ್ನ ನಿಲವೇ ಸರಿಯೆನ್ನುತ್ತೇನೆ. ಇಲ್ಲಿಂದ ನಡಿ. ದೇವರಾಣೆಗೂ ನೀನು ಇಲ್ಲಿಂದ ಹೊರಡು' ಎಂದವನು ಮೇಲೇಳುತ್ತ ಸೊಲ್ಲಿಸಿದನು. 'ಹೊರಡು! ಇಲ್ಲಿಂದ ಹೊರಡು!'

'ನಾನೆಂದೂ ಅವುಗಳನ್ನು ತಾತ್ಸಾರದಿಂದ ಕಂಡಿಲ್ಲ.' ಎಂದು ಲೆವಿನ್ ವಿನೀತನಾಗಿ ನುಡಿದನು. 'ನಾನು ನಿನ್ನ ಮಾತಿಗೆ ಪ್ರತಿ ಹೇಳುತ್ತಲೂ ಇಲ್ಲ.'

ಅಷ್ಟರಲ್ಲಿ ಮಾಷ ಮರಳಿದಳು. ನಿಕೊಲಾಯ್ ಅವಳ ಕಡೆಗೆ ಕೋಪದ ದೃಷ್ಟಿ ಹರಿಸಿದನು. ಅವಳು ಬೇಗ ಬೇಗ ಅವನ ಬಳಿಗೈದಿ, ಅವನ ಕಿವಿಯಲ್ಲೇನೊ ಪಿಸುಗುಟ್ಟಿದಳು.

‘ನನ್ನ ಮನಸ್ಸು ನೆಟ್ಟಗಿಲ್ಲ; ನಾನು ಬೇಗ ರೇಗಿಗೊಳಗಾಗುತ್ತೇನೆ’ ಎಂದು ನಿಕೊಲಾಯ್ ತನ್ನನ್ನು ತಾನು ಸಂಯಮಿಸಿಕೊಳ್ಳಲು ಪ್ರಯತ್ನಿಸುತ್ತ, ಬಲವಾಗಿ ಉಸಿರಾಡುತ್ತಿದ್ದನು. ‘ಸರ್ಜಿ ಇವಾನೊವಿಚ್‌ನ ವಿಚಾರವಾಗಿ ಹಾಗೂ ಅವನ ಲೇಖನ ವನ್ನು ಕುರಿತು ನೀನು ನನ್ನೊಡನೆ ಮಾತಾಡುತ್ತೀಯೆ. ಆ ಲೇಖನ ಸುಳ್ಳಿನ ಸರಮಾಲೆ, ಕಸದ ತಿಪ್ಪೆ, ಆತ್ಮವಂಚನೆಯ ಜಾಲ! ನ್ಯಾಯದ ಸ್ವರೂಪವನ್ನರಿಯದ ಮನುಷ್ಯ ಆ ಬಗ್ಗೆ ಬರೆಯುವುದಾದರೂ ಹೇಗೆ? ಆ ಲೇಖನವನ್ನು ಓದಿದ್ದೀಯಾ?’ ಎಂದವನು ಕ್ರಿತ್‌ಸ್ಕಿಯನ್ನು ಪ್ರಶ್ನಿಸಿದನು. ಮತ್ತೆ ಮೇಜಿನ ಬಳಿ ಕುಳಿತುಕೊಂಡು, ಜಾಗಮಾಡುವ ಸಲುವಾಗಿ ಚದರಿಹೋಗಿದ್ದ ಸಿಗರೇಟುಗಳನ್ನು ಒತ್ತಟ್ಟಿಗೆ ತಳ್ಳಿದನು.

‘ಇಲ್ಲ, ನಾನು ಓದಿಲ್ಲ’ ಎಂದು ಕ್ರಿತ್‌ಸ್ಕಿ ಸಂಭಾಷಣೆಯಲ್ಲಿ ತೊಡಗಲಿಷ್ಟವಿಲ್ಲದೆ ಖಿನ್ನತೆಯಿಂದ ನುಡಿದನು.

‘ಏಕೆ ಓದಿಲ್ಲ?’ ಎಂದು ನಿಕೊಲಾಯ್ ತನ್ನ ಸಿಡುಕನ್ನೆಲ್ಲ ಕ್ರಿತ್‌ಸ್ಕಿಯ ಮೇಲೆ ತಿರುಗಿಸುತ್ತ ಕೇಳಿದನು.

‘ಅದರ ಓದಿನಲ್ಲಿ ಕಾಲ ಪೋಲುಮಾಡಲಿಷ್ಟವಿಲ್ಲ.’

‘ಕಾಲ ಪೋಲಾಗುತ್ತದೆಂದು ಹೇಗೆ ಬಲ್ಲೆ? ಈ ಪ್ರಶ್ನೆ ಕೇಳಿದ್ದಕ್ಕಾಗಿ ಕ್ಷಮಿಸು. ಹಲವರಿಗೆ ಅದು ಅರ್ಥವಾಗುವುದಿಲ್ಲ. ಅದರ ಗಹನತೆಯಿಂದಾಗಿ ಅದು ಅವರ ತಲೆಗೆ ಹೊಗುವುದಿಲ್ಲ. ಆದರೆ ಅದು ನನಗೆ ಕಷ್ಟವೆನಿಸುವುದಿಲ್ಲ. ಅವನ ಭಾವನೆಗಳನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ; ಅವುಗಳಲ್ಲಿ ಯಾವುದು ತಪ್ಪೆಂಬುದೂ ನನಗೆ ಗೊತ್ತು.’

ಯಾರೂ ತುಟಿ ಮಿಸುಕಲಿಲ್ಲ. ಕ್ರಿತ್‌ಸ್ಕಿ ನಿದಾನವಾಗಿ ಮೇಲೆದ್ದು, ತನ್ನ ಟೋಪಿಯನ್ನು ಕೈಗೆತ್ತಿಕೊಂಡನು.

‘ನಿನಗೆ ಊಟ ಬೇಡವೆ? ಸರಿ, ಹಾಗಾದರೆ ನಮಸ್ಕಾರ. ನಾಳೆ ಆ ಕಮ್ಮಾರನನ್ನು ಜತೆಯಲ್ಲಿ ಕರೆದುಕೊಂಡು ಬಾ.’

ಅವನು ಹೊರಗೆ ಹೋದ ಕೂಡಲೇ ನಿಕೊಲಾಯ್ ಲೆವಿನ್ ಮುಗುಳು ನಗೆ ನಕ್ಕು ಕಣ್ಣು ಮಿಟುಕಿಸಿದನು.

‘ಅವನು ಸಹ ಕಷ್ಟದಲ್ಲಿದ್ದಾನೆ’ ಎಂದವನು ನುಡಿದನು. ‘ನಾನು ಬಲ್ಲೆ....’

ಹಜಾರದಿಂದ ಕ್ರಿತ್‌ಸ್ಕಿ ಕರೆಯಲಾಗಿ ಅವನ ಯೋಚನೆ ಅರೆಗಡಿಯಿತು.

‘ಏನು ಬೇಕು?’ ಎಂದು ನಿಕೊಲಾಯ್ ಅವನ ಬಳಿ ಸಾರುತ್ತಿದ್ದಂತೆ ಪ್ರಶ್ನಿಸಿದನು. ಮಾಷ ಒಬ್ಬಳೇ ಉಳಿಯಲಾಗಿ, ಲೆವಿನ್ ಅವಳೊಡನೆ ಮಾತು ತೆಗೆದನು.

‘ನನ್ನಣ್ಣ ನಿಮಗೆ ಬಹುದಿನಗಳಿಂದ ಗೊತ್ತೇನು?’

‘ಒಂದು ವರ್ಷದ ಮೇಲಾಯಿತು. ಅವರ ಆರೋಗ್ಯ ತುಂಬ ಹದಗೆಟ್ಟಿದೆ. ಸಿಕ್ಕಾಬಟ್ಟೆ ಕುಡಿಯುತ್ತಾರೆ’ ಎಂದವಳು ಸೊಲ್ಲಿಸಿದಳು.

‘ಕುಡಿಯುತ್ತಾನೆಯೇ? ಏನನ್ನು?’

‘ವೋಡ್ಕ, ಅದು ಅವರಿಗೊಗ್ಗುವುದಿಲ್ಲ.’

‘ಅವನು ನಿಜಕ್ಕೂ ಸಿಕ್ಕಾಬಟ್ಟೆ ಕುಡಿಯುತ್ತಾನೆಯೇ?’ ಎಂದು ಲೆವಿನ್ ಮೆಲ್ಲದನಿಯಲ್ಲಿ ಕೇಳಿದನು.

'ಹೌದು' ಎಂದವಳು ನಿಕೊಲಾಯ್ ಹಿಂದಿರುಗಿದ ಬಾಗಿಲ ಕಡೆಗೆ ಗಾಬರಿಯಿಂದ ನೋಡುತ್ತ ನುಡಿದಳು.

'ನೀವೇನು ಮಾತಾಡುತ್ತಿದ್ದಿರಿ?' ಎಂದವನು ಹುಬ್ಬು ಗಂಟಿಕ್ಕಿಕೊಂಡು, ಒಬ್ಬರಿಂದೊಬ್ಬರ ಕಡೆಗೆ ಭಯಚಕಿತ ನೇತ್ರಗಳನ್ನು ಹೊರಳಿಸುತ್ತ ಪ್ರಶ್ನಿಸಿದನು. 'ಏನು ಮಾತಾಡುತ್ತಿದ್ದಿರಿ, ಹೇಳಿ?'

'ಏನೂ ಇಲ್ಲ' ಎಂದು ಲೆವಿನ್ ಇರಿಸು ಮುರಿಸಿನಿಂದ ಉತ್ತರಿಸಿದನು.

'ನಿನಗಿಷ್ಟವಿಲ್ಲವಾದರೆ ನನಗೆ ಹೇಳ ಬೇಡ. ಆದರೆ ಅವಳೊಂದಿಗೆ ನೀನು ಮಾತಾಡಿ ಪ್ರಯೋಜನವಿಲ್ಲ. ಅವಳು ನೀಚ ಹೆಂಗಸು. ನೀನಾದರೊ ಸಭ್ಯ' ಎಂದವನು ತಲೆಯಲ್ಲಾಡಿಸಿದನು. ಕೂಡಲೇ ಅವನು ದನಿಯೇರಿಸಿ, ಮಾತು ಮುಂದುವರಿಸಿದನು: 'ನಿನಗೆಲ್ಲವೂ ಅರ್ಥವಾಗುತ್ತದೆ. ಎಲ್ಲವನ್ನು ತಿಳಿದುಕೊಂಡಿದ್ದೀಯೆ. ಅಸಮಾಧಾನದಿಂದಿದ್ದೀಯೆ. ನನ್ನ ದೌರ್ಬಲ್ಯಗಳ ಬಗ್ಗೆ ನಿನಗೆ ಕನಿಕರವಿದೆ.'

'ನಿಕೊಲಾಯ್ ದಿಮಿತ್ರಿಚ್, ನಿಕೊಲಾಯ್ ದಿಮಿತ್ರಿಚ್' ಎಂದು ಮಾಷ ಅವನ ಕಿವಿಯಲ್ಲಿ ಪಿಸುಗುಟ್ಟಿದಳು.

'ಓ ಸರಿ, ಸರಿ .. ಊಟವೆಲ್ಲಿ? ಅಹ, ಇಗೋ ಇಲ್ಲಿದೆ' ಎಂದವನು ತಟ್ಟೆಯೊಂದಿಗೆ ಒಳಗೆ ಬಂದ ಪರಿಚಾರಕನನ್ನು ನೋಡುತ್ತ ನುಡಿದನು. 'ತಾ ಇಲ್ಲಿ; ಇಲ್ಲಿಡು' ಎಂದವನು ಸಿಡುಕಿ, ವೋದ್ಕ ಬಾಟಲಿಯನ್ನು ಬಿರು ಬಿರನೆ ಕೈಗೆತ್ತಿಕೊಂಡು, ಗಳಾಸಿಗೆ ಸುರಿದುಕೊಂಡು, ಗಟಗಟನೆ ಹೀರಲಾರಂಭಿಸಿದನು. 'ನೀನೂ ಒಂದಿಷ್ಟು ಕುಡಿ' ಎಂದವನು ಹೃಷ್ಟಚಿತ್ತನಾಗಿ ಲೆವಿನ್‌ನನ್ನು ಪುಸಲಾಯಿಸಿದನು. 'ಸರ್ಗಿ ಇವಾನೊವಿಚ್‌ನ ಸಹವಾಸ ನನಗೆ ಬೇಡ. ನಿನ್ನನ್ನು ನೋಡಿ ನನಗೆ ತುಂಬ ಸಂತೋಷವಾಯಿತು. ಹೇಳಿ ಕೇಳಿ ನಾವು ಅಪರಿಚಿತರೇನಲ್ಲ. ಸಹವಾಸ ಮರ್ಯಾದೆಗಾಗಿ ಕುಡಿ. ಏನು ಮಾಡುತ್ತಿದ್ದೀಯೆ, ಹೇಳು' ಎಂದವನು ಲೋಭದಿಂದ ರೊಟ್ಟಿಚೂರನ್ನಗಿಯುತ್ತ ಮಾತು ಮುಂದುವರಿಸಿದನು. ಮತ್ತೊಂದು ಗಳಾಸು ವೋದ್ಕ ತುಂಬಿಕೊಂಡು 'ನಿನ್ನ ಬದುಕು ಹೇಗೆ ನಡೆದಿದೆ?' ಎಂದು ಕೇಳಿದನು.

'ನಾನಿನ್ನೂ ಒಬ್ಬೊಂಟಿಗನಾಗಿ ಹಳ್ಳಿಯಲ್ಲಿಯೇ ಇದ್ದೇನೆ; ಆಸ್ತಿಪಾಸ್ತಿಗಳನ್ನು ನೋಡಿಕೊಳ್ಳುತ್ತಿದ್ದೇನೆ' ಎಂದು ಲೆವಿನ್ ಉತ್ತರಿಸಿದನು. ಅವನ ಕಡೆ ನೋಡದಂತೆ ನಟಿಸುತ್ತಿದ್ದರೂ, ತನ್ನಣ್ಣನ ಕುಡಿತ ತಿಂಡಿಗಳಲ್ಲಿ ವ್ಯಕ್ತವಾಗುತ್ತಿದ್ದ ಆಸೆಬುರುಕತನವನ್ನು ಕಂಡು ಲೆವಿನ್ ದಿಗ್ಭ್ರಾಂತನಾದನು.

'ನೀನೇಕೆ ಮದುವೆ ಮಾಡಿಕೊಳ್ಳಬಾರದು?'

'ಅವಕಾಶ ಕೂಡಿಬರಲಿಲ್ಲ' ಎಂದು ನುಡಿಯುವಾಗ ಲೆವಿನ್‌ನ ಮುಖ ಕೆಂಪೇರಿತು.

'ಅದು ಹೇಗೆ ಸಾಧ್ಯ? ನನಗಾದರೊ ಈಗ, ಎಲ್ಲ ಮುಗಿದು ಹೋದಂತೆಯೇ ಸರಿ. ನನ್ನ ಬದುಕನ್ನು ಹಾಳುಮಾಡಿಕೊಂಡಿದ್ದೇನೆ. ಆದರೆ ನನಗಗತ್ಯವಿದ್ದಾಗ, ನನಗೆ ನ್ಯಾಯವಾಗಿ ದೊರೆಯಬೇಕಾಗಿದ್ದ ಪಾಲನ್ನು ನನಗೆ ಕೊಟ್ಟಿದ್ದರೆ, ನನ್ನ ಬದುಕು ತೀರ ಭಿನ್ನವಾಗಿರುತ್ತಿತ್ತೆಂದು ನಾನು ಈ ಮೊದಲೇ ಹೇಳಿದ್ದುಂಟು. ಈಗಲೂ ಅದನ್ನೇ ಹೇಳುತ್ತಿದ್ದೇನೆ.'

ಲೆವಿನ್ ವಿಷಯಾಂತರಕ್ಕವಸರಿಸಿದನು. 'ನಿನ್ನ ಮನುಷ್ಯ ಪೊಕ್ರೊವ್‌ಸ್ಕಾಯ್ ಹಳ್ಳಿಯಲ್ಲಿರುವ ನನ್ನ ಕಚೇರಿಯಲ್ಲಿ ಗುಮಾಸ್ತೆ ಕೆಲಸ ಮಾಡುವ ವಿಷಯ ನಿನಗೆ ಗೊತ್ತೆ?'

ನಿಕೊಲಾಯ್ ತಲೆಯನ್ನು ಚಿಮ್ಮಿ ಆಲೋಚನಾಮಗ್ನನಾದನು. 'ಪೊಕ್ರೊವ್‌ಸ್ಕಾಯ್ ಹಳ್ಳಿಯಲ್ಲೇನು ವಿಶೇಷ ಹೇಳು. ಈಗ ಅಲ್ಲೇನು ನಡೆಯುತ್ತಿದೆ? ಮನೆ ಇನ್ನೂ ಇದೆ ತಾನೆ? ಭೂರ್ಜವೃಕ್ಷಗಳೇನಾಗಿವೆ? ನಮ್ಮ ಶಾಲೆಯೊ? ಮಾಲಿ ಫಿಲಿಪ್ ಇನ್ನೂ ಬದುಕಿರುವನೆ? ಬಳ್ಳಿಮನೆಯನ್ನೂ, ಅದರಲ್ಲಿರುವ ಪೀಠವನ್ನೂ ಅದೆಷ್ಟು ಸಲ ನೆನೆಯುತ್ತೇನೆಯೋ ಕಾಣೆ. ಮನೆಯಲ್ಲಿ ಮಾತ್ರ ಏನೊಂದೂ ಮಾರ್ಪಾಡು ಮಾಡ ಬೇಡ. ಬೇಗ ಮದುವೆ ಮಾಡಿಕೊ. ಎಂದಿನಂತೆ ಸಂಸಾರ ಸಾಗಲಿ. ಅನಂತರ ಬಂದು ನಿನ್ನನ್ನು ಕಾಣುತ್ತೇನೆ; ಅದೂ ನಿನ್ನ ಮಡದಿ ಒಳ್ಳೆಯವಳಾದರೆ ಮಾತ್ರ.'

'ಈಗಲೇ ಬಂದು ಬಿಡು. ನಮ್ಮ ಕೂಡು ಬದುಕು ನಿಜಕ್ಕೂ ಸುಂದರವಾಗು ತ್ತದೆ.'

'ಸರ್ಜಿ ಇವಾನೊವಿಚ್ ಅಲ್ಲಿ ಕಾಣಿಸಿಕೊಳ್ಳುವುದಿಲ್ಲವೆಂಬುದು ಖಂಡಿತವಾದರೆ, ನಾನು ಬಂದರೂ ಬರಬಹುದು.'

'ಇಲ್ಲ; ಅವನಲ್ಲಿಗೆ ಬರುವುದಿಲ್ಲ. ಅಲ್ಲಿ ನಾನೊಬ್ಬನೇ ಇದ್ದೇನೆ.'

'ನನಗದು ಗೊತ್ತು. ನಮ್ಮಿಬ್ಬರಲ್ಲಿ–ಅಂದರೆ ನನ್ನ ಮತ್ತು ಸರ್ಜಿಯರ ನಡುವೆ–ನಿನಗೆ ಯಾರು ಇಷ್ಟ; ನೀನು ಯಾರನ್ನಾರಿಸಿಕೊಳ್ಳುತ್ತೀಯೆ? ಹೇಳು' ಎಂದವನು ತನ್ನ ಸೋದರನ ಕಣ್ಣುಗಳನ್ನೆ ದೈನ್ಯದಿಂದ ನೋಡುತ್ತ ನುಡಿದನು.

ಅವನ ದೈನ್ಯಭಾವದಿಂದಾಗಿ ಲೆವಿನ್‌ನ ಹೃದಯ ಕರಗಿತು. 'ಈ ವಿಷಯದಲ್ಲಿ ನನ್ನ ಅಭಿಪ್ರಾಯ ಅನಿವಾರ್ಯವೇನು? ಹಾಗಾದರೆ ಹೇಳುತ್ತೇನೆ, ಕೇಳು. ನಿನ್ನ ಮತ್ತು ಸರ್ಜಿ ಇವಾನೊವಿಚ್‌ರ ಕಲಹದಲ್ಲಿ ನಾನು ಯಾರ ಪಕ್ಷವನ್ನೂ ವಹಿಸಿಕೊಳ್ಳಲಾರೆ. ನಿಮ್ಮಿಬ್ಬರಲ್ಲಿ ಯಾರೂ ಸರಿಯಿಲ್ಲ. ಬಹಿರಂಗದಲ್ಲಿ ನೀನು ತಪ್ಪಿತಸ್ಥನಾದರೆ, ಅಂತರಂಗ ದಲ್ಲಿ ಅವನು ತಪ್ಪಿತಸ್ಥ.'

'ಅಹ! ನಿನಗದು ಅರ್ಥವಾಗಿದೆಯಷ್ಟೆ? ಅರ್ಥವಾಗಿರುವುದುಂಟಷ್ಟೆ!' ಎಂದು ನಿಕೊಲಾಯ್ ಹರ್ಷೋತ್ಕರ್ಷದಿಂದ ಕೂಗಿಕೊಂಡನು.

'ಆದರೆ ನನ್ನ ಮನಸ್ಸನ್ನು ನೀನರಿಯಬೇಕೆನ್ನುವುದಾದರೆ, ನಿನ್ನ ಗೆಳೆತನಕ್ಕೆ ಹೆಚ್ಚು ಬೆಲೆ ಕೊಡುತ್ತೇನೆ, ಏಕೆಂದರೆ....'

'ಏಕೆ? ಏಕೆ?'

ನತದೃಷ್ಟ ನಿಕೊಲಾಯ್‌ಗೆ ಗೆಳೆತನದ ಅಗತ್ಯತೆ ವಿಶೇಷವಾಗಿತ್ತೆಂಬ ಕಾರಣವನ್ನು ಬಹಿರಂಗಗೊಳಿಸಲು ಲೆವಿನ್‌ನಿಗೆ ಕಷ್ಟವಾಯಿತು. ಆದರೆ ನಿಕೊಲಾಯ್ ಸೂಕ್ಷ್ಮಗ್ರಹಣ ಸಾಮರ್ಥ್ಯದಿಂದ ಅವನ ಮನೋಗತವನ್ನೂಹಿಸಿಕೊಂಡನು. ಅವನು ಹುಬ್ಬುಗಂಟಿಕ್ಕಿ ಕೊಂಡು, ವೋದ್ಕಬಾಟಲಿಯನ್ನೆಳೆದುಕೊಂಡನು.

'ಸಾಕು, ಸಾಕುಮಾಡಿ, ನಿಕೊಲಾಯ್ ದಿಮಿತ್ರಿಚ್!' ಎಂದು ಮಾಷ ತುಂಬಿ ಕೊಂಡಿದ್ದ ಚಿತ್ತಲೆಯ ತೋಳನ್ನು ಮದ್ಯಶೀಷೆಯ ಕಡೆಗೆ ಚಾಚಿದಳು.

'ನಿಲ್ಲು! ಮಧ್ಯೆ ಬಾಯಿ ಹಾಕಬೇಡ. ಎರಡು ಬಿಗೀತೀನಿ, ನೋಡು!' ಎಂದವನು ಬೊಬ್ಬಿರಿದನು.

ಮಾಷ ದಯಾರ್ದ್ರ ದೀನ ಮಂದಹಾಸವನ್ನು ಸೂಸಿದಳು. ನಿಕೊಲಾಯ್ ಪ್ರತಿಮಂದಹಾಸ ಬೀರಿದನು. ಮಾಷ ಮದ್ಯ ಶೀಷೆಯನ್ನು ಕೈಗೆತ್ತಿಕೊಂಡಳು.

'ಪ್ರಾಯಶಃ ಇವಳಿಗರ್ಥವಾಗುವುದಿಲ್ಲವೆಂದು ನಿನಗನಿಸಿತಲ್ಲವೆ?' ಎಂದು ನಿಕೊಲಾಯ್ ಸೊಲ್ಲೆತ್ತಿದನು. 'ನಮ್ಮಿಬ್ಬರಿಗಿಂತ ಸ್ಪಷ್ಟವಾಗಿ ಇವಳು ಗ್ರಹಿಸುತ್ತಾಳೆ. ಇವಳ ಸ್ವಭಾವದಲ್ಲಿ ವಿಶಿಷ್ಟವಾದ ಮಾಧುರ್ಯವಿದೆ, ಸದ್ಗುಣವಿದೆ. ಈ ವಿಚಾರದಲ್ಲಿ ನಿನ್ನ ಅಭಿಪ್ರಾಯವೇನು?'

'ಈ ಮುನ್ನ ನೀವೆಂದಾದರೂ ಮಾಸ್ಕೋದಲ್ಲಿ ತಂಗಿದ್ದಿರೇನು?' ಎಂದು ಲೆವಿನ್ ಏನಾದರೂ ಹೇಳಲೇಬೇಕೆಂಬ ಕಾರಣಕ್ಕಾಗಿ ಕೇಳಿದನು.

'ಅವಳೊಡನೆ ಮಾತಾಡುವಾಗ ಬಿಂಕ ಬಿಗುಮಾನ ಅನಾವಶ್ಯಕ. ಅವಳು ಪುಕ್ಕಲು ಹೆಣ್ಣು. ಅವಳ ವಿಚಾರದಲ್ಲಿ ಸಾಮಾನ್ಯವಾಗಿ ಯಾರೂ ಬಿಂಕ ಬಿಗುಮಾನ ತೋರುವುದಿಲ್ಲ. ಅವಳೊಮ್ಮೆ ಸೂಳೆಯ ಮನೆಯಿಂದ ಪರಾರಿಯಾಗಲು ಪ್ರಯತ್ನ ನಡಸಿ, ಸಿಕ್ಕಿಕೊಂಡು, ಮೊಕದ್ದಮೆಯನ್ನೆದುರಿಸುವಾಗ ಮಾತ್ರ ಹಳ್ಳಿಯ ನ್ಯಾಯಾಧಿಪತಿ ಅವಳನ್ನು ಛೇಡಿಸಿದ್ದನು.' ದಿಡೀರನೆ ಅವನು ಗಟ್ಟಿಯಾಗಿ ಅರಚಿದನು: 'ಅಯ್ಯೋ ದೇವರೆ, ಜಗತ್ತಿನಲ್ಲಿ ಎಂಥ ಅವಿವೇಕದ ಸಂಗತಿಗಳು ನಡೆಯುತ್ತಿವೆ! ಈ ಹೊಸ ಸಂಸ್ಥೆಗಳು, ಈ ಗ್ರಾಮೀಣ ನ್ಯಾಯಾಧಿಪತಿಗಳು, ಈ ಜಿಲ್ಲಾ ಪರಿಷತ್ತುಗಳು! ಇವೆಷ್ಟು ಘೋರ ಭಯಾನಕವಾಗಿವೆ?'

ಈ ನೂತನ ಸಂಸ್ಥೆಗಳ ವಿರುದ್ಧವಾಗಿ ತಾನು ನಡಸಬೇಕಾಗಿದ್ದ ಸಂಘರ್ಷಗಳನ್ನವನು ವರ್ಣಿಸಲನುವಾದನು.

ಸಕಲ ಸಾರ್ವಜನಿಕ ಸಂಸ್ಥೆಗಳ ನಿಷ್ಪ್ರಯೋಜಕತ್ವವನ್ನು ಕುರಿತ ತನ್ನಣ್ಣನ ಆಕ್ಷೇಪಗಳನ್ನು ಕೇಳುತ್ತ ಕೇಳುತ್ತ ಲೆವಿನ್‌ನ ಮನಸ್ಸು ಅಸಮಾಧಾನಕ್ಕೀಡಾಯಿತು. ತನ್ನಣ್ಣನ ಅಭಿಪ್ರಾಯದಲ್ಲಿ ತನಗೆ ಸಮ್ಮತಿ ಇದ್ದರೂ, ಅದನ್ನು ಹಲವು ಸಲ ಸ್ಪಷ್ಟಪಡಿಸಿದ್ದರೂ, ತತ್ಕಾಲದಲ್ಲಿ ಅವನ ಮನಸ್ಸು ಆ ಬಗ್ಗೆ ವಿಮುಖವಾಗಿತ್ತು. 'ಬೇರೊಂದು ಜಗತ್ತಿನಲ್ಲಿ ಅದನ್ನೆಲ್ಲ ನಾವು ಗ್ರಹಿಸುತ್ತೇವೆ' ಎಂದವನು ಅಣಕದ ಬಾಣವೆಸೆದನು.

'ಬೇರೊಂದು ಜಗತ್ತಿನಲ್ಲೆ? ಆ ಬೇರೊಂದು ಜಗತ್ತಿನ ಬಗ್ಗೆ ನನಗೆ ವಿಶ್ವಾಸವಿಲ್ಲ. ವಿಶ್ವಾಸ ತಿಲಮಾತ್ರವೂ ಇಲ್ಲ' ಎನ್ನುವಾಗ ನಿಕೊಲಾಯ್‌ನ ಗಾಬರಿಯ ದೃಷ್ಟಿ ತನ್ನ ಸೋದರನ ಕಣ್ಣುಗಳಲ್ಲಿ ನಾಟಿತು. 'ಈ ಎಲ್ಲ ಮಾಲಿನ್ಯವನ್ನು, ಗೊಂದಲವನ್ನು ಹಾಗೂ ಮೃಗೀಯತೆಯನ್ನು, ನಿನ್ನ ಹಾಗೂ ಇತರರ ಎಲ್ಲ ವಕ್ರತೆಗಳನ್ನಿಲ್ಲಿಯೆ ತೊರೆದು ಹೋಗುವುದೇಲೇಸು. ಆದರೆ ನನಗೆ ಮರಣವೆಂದರೆ ಭಯ, ಭಯವೋ ಭಯ' ಅವನು ಗಡಗಡನೆ ನಡುಗಿದನು. 'ಇಗೋ ಒಂದಿಷ್ಟಾದರೂ ಕುಡಿ. ನಿನಗೆ ಶಾಂಪೇನ್ ಬೇಕೇನು? ಇಲ್ಲ, ಹೊರಗೆ ಹೋಗೋಣವೇನು? ಎಲ್ಲಿಯಾದರೂ ಹೋಗಿ, ಜಿಪ್ಸಿಗಳ ಸಂಗೀತ ಕೇಳೋಣ, ಬಾ. ಜಿಪ್ಸಿ ಮತ್ತು ರಷ್ಯನ್‌ರ ಸಂಗೀತವೆಂದರೆ ನನಗೆ ಬಲು ಮೆಚ್ಚು.'

ಅವನ ಮಾತು ತೊದಲಲಾರಂಭಿಸಿತು. ಪರಸ್ಪರ ಸಂಬಂಧವಿಲ್ಲದ ರೀತಿಯಲ್ಲಿ ಅವನು ಒಂದು ವಿಷಯದಿಂದ ಮತ್ತೊಂದು ವಿಷಯಕ್ಕೆ ಜಾರುತ್ತಿದ್ದನು. ಹೊರಗೆ

ಹೋಗಬಾರದೆಂದು ಅವನನ್ನೊಪ್ಪಿಸಿ, ಮಾಷಳ ನೆರವಿನೊಡನೆ ಲೆವಿನ್ ಅಮಲೇರಿದ ಅವನನ್ನು ಹಾಸುಗೆಯ ಮೇಲೆ ಕೆಡವಿದನು.

ತುರ್ತು ಪರಿಸ್ಥಿತಿಯಲ್ಲಿ ಪತ್ರ ಬರೆಯುವುದಾಗಿಯೂ, ಅವನಲ್ಲಿಗೆ ಹೋಗಿ, ಅವನ ಸಹವಾಸದಲ್ಲಿರುವಂತೆ ನಿಕೋಲಾಯ್‌ನನ್ನು ಪ್ರಚೋದಿಸುವುದಾಗಿಯೂ ಮಾಷ ಲೆವಿನ್‌ನಿಗೆ ವಾಗ್ದಾನಮಾಡಿದಳು.

೨೬

ಬೆಳಗ್ಗೆ ಮಾಸ್ಕೋವನ್ನು ಬಿಟ್ಟ ಲೆವಿನ್ ಸಂಜೆಯೊಳಗಾಗಿ ಮನೆ ಸೇರಿದನು. ರೈಲು ಬೋಗಿಯಲ್ಲವನು ಸಹಪ್ರಯಾಣಿಕರೊಂದಿಗೆ ರಾಜಕೀಯದ ಬಗ್ಗೆ, ಹೊಸ ರೈಲು ದಾರಿಗಳ ಬಗ್ಗೆ, ಅಂತೆಯೇ ಇತರ ವಿಷಯಗಳ ಬಗ್ಗೆ ಮಾತುಕತೆ ನಡೆಸಿದನು. ಅವನು ಮಾಸ್ಕೋದಲ್ಲಿದ್ದ ಹಾಗೆಯೇ ಮತ್ತೆ ಆಲೋಚನೆಗಳ ಗೊಂದಲದಿಂದ, ತನ್ನ ಬಗೆಗಿನ ಅತೃಪ್ತಿಯಿಂದ, ಬೇರೊಬ್ಬರಿಗೆ ಅಪರಾಧವೆಸಗಿದ ಸಂಕಟದಿಂದ ಬೇಗುದಿಗೊಳಗಾದನು. ಆದರವನು ನಿಲ್ದಾಣದಿಂದ ಹೊರಗೆ ಬಂದು, ಮಡಿಚಿಕೊಂಡಿದ್ದ ಕೊರಳಪಟ್ಟಿಯ ಕೋಟು ಧರಿಸಿದ ಒಕ್ಕಣ್ಣ ಬಂಡಿಯವ ಇಗ್ನಾತ್‌ನನ್ನು ಕಂಡ ಕೂಡಲೇ, ನಿಲ್ದಾಣದ ಕಿಟಕಿಗಳ ಮೂಲಕ ತೂರಿ ಬರುತ್ತಿದ್ದ ಮಬ್ಬು ಬೆಳಕಿನಲ್ಲಿ ತನ್ನ ಜಾರುಬಂಡಿಯನ್ನು, ಉಂಗುರ ಕುಚ್ಚುಗಳಿಂದಲಂಕೃತವಾದ ಸಜ್ಜುಳ್ಳ, ಕಟ್ಟಿಗೊಂಡಿದ್ದ ಬಾಲದ ತನ್ನ ಕುದುರೆಗಳನ್ನು ಕಂಡಾಗ, ಗಾಡಿಗೆ ಸಾಮಾನನ್ನು ಭರ್ತಿಮಾಡುತ್ತಿದ್ದಂತೆ ಇಗ್ನಾತ್ ಹಳ್ಳಿಯ ಸುದ್ದಿಯನ್ನು, ಕಂಟ್ರಾಕ್ಟರ್ ಬಂದಿದ್ದ ಮತ್ತು ಪಾವ ಕರುಹಾಕಿದ ವಿಷಯವನ್ನು ತಿಳಿಸಿದಾಗ, ಮನಸ್ಸಿನ ಗೊಂದಲ ನಿಧಾನವಾಗಿ ಹರಿದುಹೋಗುತ್ತಿದ್ದಂತೆ, ತನ್ನ ತಪ್ಪರಿವು ಮತ್ತು ತನ್ನ ಬಗೆಗಿನ ಅತೃಪ್ತಿ ಕರಗಿಹೋಗುತ್ತಿದ್ದಂತೆ ಅವನಿಗೆ ಭಾಸವಾಯಿತು. ಇಗ್ನಾತ್ ಮತ್ತು ಕುದುರೆಗಳ ದರ್ಶನದಿಂದಲೇ ಅವನ ಮನಸ್ಸು ಪರಿವರ್ತನೆಗೊಳಗಾಯಿತು. ಆದರೆ ತನಗಾಗಿ ತಂದಿದ್ದ ಕುರಿದೊಪಲನ್ನು ಹೊದ್ದುಕೊಂಡು, ಗಾಡಿಯೊಳಗೆ ಕುಳಿತು ಸವಾರಿಸುವಾಗ, ಜಮೀನಿನಲ್ಲಿ ಮಾಡಬೇಕಾದ ಕೆಲಸಗಳನ್ನು ನೆನೆದಾಗ, ತನಗಾಗಿ ಕಾದಿದ್ದ ಕಾರ್ಯಭಾರದ ಬಗ್ಗೆ ಆಲೋಚಿಸಿದಾಗ, ಒಮ್ಮೆ ಚೈತನ್ಯಯುಕ್ತವಾದ ಸವಾರಿಕುದುರೆಯಾಗಿದ್ದು ಈಗ ಮುದಿಯಾಗಿದ್ದ ಡಾನ್ ತಳಿಯ ಪಕ್ಕದ ಕುದುರೆಯನ್ನು ನೋಡಿದಾಗ, ಮಾಸ್ಕೋದಲ್ಲಿ ಸಂಭವಿಸಿದ್ದ ಘಟನೆಗಳನ್ನು ಹೊಸ ಬೆಳಕಿನಲ್ಲಿ ಅರ್ಥೈಸಿಕೊಳ್ಳಲಾರಂಭಿಸಿದನು. ತಾನೊಬ್ಬ ಪರಕೀಯನಾಗದೆ, ತಾನೇ ತಾನಾಗಿರಬೇಕೆಂದು ಭಾವಿಸಿದನು. ಹಿಂದಿಗಿಂತ ಉತ್ತಮನಾಗಿರಬೇಕೆಂದಷ್ಟೆ ಅವನು ಆಶಿಸಿದನು. ಮೊತ್ತಮೊದಲನೆಯದಾಗಿ, ವಿವಾಹದಿಂದ ತಸಗೊದಗಲಿದ್ದ ಅಸಾಧಾರಣ ಸುಖದ ಆಶೆಯನ್ನು ಆ ಕ್ಷಣದಿಂದಲೇ ತಡೆಗಟ್ಟುವುದೆಂದವನು ನಿರ್ಣಯಿಸಿಕೊಂಡನು. ಜತೆಜತೆಯಲ್ಲಿಯೇ ಸದ್ಯದ ಜೀವನದ ಬಗ್ಗೆ ಹೇಸಿಕೆ ಪಡಬಾರದೆಂದು ಸಂಕಲ್ಪಿಸಿಕೊಂಡನು. ಎರಡನೆಯದಾಗಿ, ಪ್ರಾಣಿಸಹಜವಾದ ವಿಷಯಲಂಪಟಕ್ಕೆ ಮತ್ತೆ ತುತ್ತಾಗಬಾರದೆಂದು ನಿರ್ಧರಿಸಿಕೊಂಡನು. ವಿವಾಹ ಪ್ರಸ್ತಾಪದ ಬಗ್ಗೆ ಆಲೋಚಿಸುತ್ತಿದ್ದಾಗ, ವಿಷಯಲಂಪಟತನದ ನೆನಪೇ ಅವನನ್ನು ಯಾತನೆಗೀಡುಮಾಡಿತ್ತು. ಅನಂತರ ತನ್ನ

ಸೋದರ ನಿಕೊಲಾಯ್ ನೆನಪಿಗೆ ಬರಲಾಗಿ, ಪುನಃ ಅವನನ್ನೆಂದು ಮರೆಯುವುದಿಲ್ಲವೆಂದೂ, ಅವನ ಜಾಡನ್ನು ಬಿಡುವುದಿಲ್ಲವೆಂದೂ, ಅವನೊಡನೆ ಯಾವಾಗಲೂ ಸಂಪರ್ಕವಿರಿಸಿಕೊಂಡು, ಸಹಾಯದ ಅಗತ್ಯವಿದ್ದಾಗ ಅವನಿಗೆ ಸಹಾಯವೊದಗಿಸುವುದೆಂದೂ ಅವನು ನಿಶ್ಚಯಿಸಿಕೊಂಡನು. ಅಂಥ ಸಂದರ್ಭ ಬೇಗ ಒದಗಬಹುದೆಂದು ಸಹ ಅವನು ಭಾವಿಸಿದನು. ಕಮ್ಯೂನಿಸಂ ಪರವಾದ ತನ್ನ ಸೋದರನ ಮಾತುಕತೆ ನೆನಪಾದುವು. ಆ ಸಮಯದಲ್ಲವನು ಅವುಗಳನ್ನು ತೀರ ಹಗುರವಾಗಿ ತೆಗೆದುಕೊಂಡಿದ್ದನು. ಈಗವನು ಆ ದಿಶೆಯಲ್ಲಿ ಗಂಭೀರವಾಗಿ ಆಲೋಚಿಸಲಾರಂಭಿಸಿದನು. ಆರ್ಥಿಕವ್ಯವಸ್ಥೆಯ ಸುಧಾರಣೆ ಅವಿವೇಕವೆಂದವನು ಬಗೆದನು. ಆದರೆ ಸಾಮಾನ್ಯ ಜನತೆಯ ದಾರಿದ್ರ್ಯದೊಡನೆ ಹೋಲಿಸಿದಾಗ, ತನ್ನ ಸಂಪತ್ತು ಅನ್ಯಾಯವಾದದ್ದೆಂದು ಅವನು ಎಂದೋ ತೀರ್ಮಾನಕ್ಕೆ ಬಂದಿದ್ದನು. ಅವನು ಯಾವಾಗಲೂ ಕಷ್ಟಪಟ್ಟು ದುಡಿಯುತ್ತಿದ್ದನು, ಎಂದೂ ಭೋಗ ಜೀವನವನ್ನು ನಡೆಸುತ್ತಿರಲಿಲ್ಲ. ಆದರೂ ಈಗ ಹಿಂದಿಗಿಂತ ಮಿಗಿಲಾಗಿ ದುಡಿಯುವುದಾಗಿಯೂ, ಹಿಂದಿಗಿಂತ ಸರಳವಾಗಿ ಜೀವನ ನಡೆಸುವುದಾಗಿಯೂ, ಅವನು ಪ್ರತಿಜ್ಞಾಬದ್ಧನಾದನು. ಅಂಥ ಜೀವನದಿಂದೊದಗುವ ಆತ್ಮಸುಖಕ್ಕೆಣೆಯಾದ ಸುಖ ಮತ್ತೊಂದಿರಲಾರದೆಂಬ ಅರಿವು ಅವನಲ್ಲಿ ಮೂಡಿತು. ಈ ಎಲ್ಲ ವಿಧಾನಗಳಿಂದ ತನ್ನನ್ನು ತಾನು ಸುಧಾರಿಸಿಕೊಳ್ಳುವುದು ಸುಲಭವೆಂದವನಿಗೆ ಕಂಡಿತು. ಇಂಥದೇ ಆಹ್ಲಾದಕರವಾದ ಧ್ಯಾನದಲ್ಲಿ ಅವನ ಪ್ರಯಾಣ ಸಾಗಿತು. ಸಂಜೆ ಸುಮಾರು ಎಂಟುಗಂಟೆಯ ಹೊತ್ತಿಗೆ ಅವರು ಮನೆಯನ್ನು ತಲುಪಿದಾಗ, ನೂತನೋತ್ತಮ ಜೀವನದ ಉಲ್ಲಾಸಕರ ಭರವಸೆಯಿಂದ ಅವನ ಹೃದಯ ತುಂಬಿತುಳುಕುತ್ತಿತ್ತು.

ಹಿಂದೆ ದಾದಿಯಾಗಿದ್ದು, ಈಗ ಮನೆವಾರ್ತೆಗಾತಿಯಾಗಿದ್ದ ಅಗಫಿಯ ಮಿಖಾಯ್‌ಲೊವ್ನಳ ಕೋಣೆಯ ಕಿಟಕಿಯಿಂದ ತೂರಿಬಂದ ಬೆಳಕು ದ್ವಾರಪ್ರದೇಶದ ಮುಂಭಾಗದ ಮಂಜಿನ ಮೇಲೆ ಬಿದ್ದಿತ್ತು. ಅವಳಿನ್ನೂ ಮಲಗಿರಲಿಲ್ಲ. ಅದೆ ತಾನೆ ಅವಳೆಬ್ಬಿಸಿದ ಕುಜ್ಮ ನಿದ್ದೆಗಣ್ಣಿನಲ್ಲಿಯೇ ಬರುಗಾಲಿನಲ್ಲಿ ಮುಖಮಂಟಪದ ಕಡೆಗೆ ಓಡಿದಳು. ಬೇಟೆನಾಯಿ ಲಾಸ್ಕ ಕೂಡ ಓಡೋಡಿ, ಕುಜ್ಮಳಿಗೆ ಅಡ್ಡಲಾಗಿ, ಅವಳನ್ನು ಬೀಳಿಸುವುದರಲ್ಲಿತ್ತು. ಅದು ಕುಂಯ್‌ಗುಡುತ್ತ, ಲೆವಿನ್‌ನ ಮೊಳಕಾಲುಗಳ ಮೇಲೆ ಬಿದ್ದು ಒದ್ದಾಡುತ್ತ, ತನ್ನ ಹಿಂಗಾಲುಗಳ ಮೇಲೆ ನಿಂತುಕೊಂಡು, ಅವನೆದೆಯ ಮೇಲೆ ತನ್ನ ಮುಂಗಾಲಿನ ಪಂಜಗಳನ್ನಪ್ಪಳಿಸಲಿಚ್ಛಿಸಿತು. ಆದರದಕ್ಕೆ ಧೈರ್ಯ ಬರಲಿಲ್ಲ.

'ನಮ್ಮ ನಿರೀಕ್ಷೆಗಿಂತ ಮೊದಲೇ ಬಂದುಬಿಟ್ಟಿರಿ, ಪ್ರಭು' ಎಂದು ಅಗಫಿಯಾ ಮಿಖಾಯ್‌ಲೋವ್ನ ನುಡಿದಳು.

'ನನಗೆ ಮನೆಗೀಳು, ಅಗಫಿಯಮಿಖಾಯ್‌ಲೋವ್ನ. ಪ್ರವಾಸ ಸೊಗಸಾಗಿರುತ್ತದೆ, ನಿಜ. ಆದರೆ ಗೃಹಾಗಮನಕ್ಕೆಣೆಯಾದ ಆನಂದ ಮತ್ತೊಂದಿಲ್ಲ' ಎಂದವನು ಅಧ್ಯಯನ ಮಂದಿರದ ಕಡೆಗೆ ಹೋಗುತ್ತ ಉತ್ತರಿಸಿದನು.

ಮೋಂಬತ್ತಿಯನ್ನು ಹತ್ತಿಸಿ ಕೋಣೆಯನ್ನು ಬೆಳಕು ಮಾಡಲಾಯಿತು. ಪರಿಚಿತವಾದ ವಿವರಗಳು ಮೂರ್ತಸ್ವರೂಪ ತಳೆದುವು: ಸಾರಗದ ಕವಲ್ಕೊಂಬುಗಳು, ಪುಸ್ತಕದ ಬೀರುಗಳು, ಕನ್ನಡಿ, ಬಹುದಿನಗಳಿಂದ ರಿಪೇರಿಗಾಗಿ ಕಾದುಕೊಂಡಿದ್ದ

ಮುಂಚೊಟ್ಟೆಲೆಯ ಮುಂಭಾಗ, ತನ್ನ ತಂದೆಯ ಸೋಫ, ಬೂದಿತಟ್ಟೆಯೂ, ತನ್ನ ಕೈ ಬರಹದಿಂದ ತುಂಬಿಕೊಂಡಿದ್ದ ಪುಟಗಳುಳ್ಳ ಟಿಪ್ಪಣಿ ಪುಸ್ತಕವೂ, ತೆರೆದ ಪುಸ್ತಕವೂ ಇದ್ದ ದೊಡ್ಡ ಮೇಜು—ಜಾರು ಬಂಡಿಯ ಮೇಲಿದ್ದಾಗ ಸಂಕಲ್ಪಿಸಿಕೊಂಡಿದ್ದ ನೂತನ ಜೀವನ ನಿರ್ಮಾಣ ಸಾಧ್ಯವೆ ಎಂಬ ಸಂದೇಹ ಕ್ಷಣಕಾಲ ಆ ಸಾಮಾನುಗಳ ನೋಟದ ಪರಿಣಾಮವಾಗಿ ಉದಿಸಿತು. ಹಳೆಯ ಬದುಕಿನ ಈ ಸಲಕರಣೆಗಳೆಲ್ಲ ಅವನ ಮನಸ್ಸನ್ನು ಆಕ್ರಮಿಸಿಕೊಂಡು 'ಇಲ್ಲ, ಸಾಧ್ಯವಿಲ್ಲ; ನೀನು ನಮ್ಮಿಂದ ತಪ್ಪಿಸಿಕೊಂಡು ಓಡಿ ಹೋಗಲಾರೆ; ನೀನು ಭಿನ್ನವ್ಯಕ್ತಿಯಾಗಲಾರೆ; ಈತನಕ ನೀನು ಹೇಗಿದ್ದೆಯೋ ಹಾಗೆಯೇ ಇರುತ್ತೀಯೆ; ಸದಾ ಸಂದೇಹಗಳ ಧಾಳಿಗೊಳಗಾಗುತ್ತೀಯೆ; ಯಾವಾಗಲೂ ನೀನು ಅತೃಪ್ತನಾಗಿರುತ್ತೀಯೆ; ಯಾವಾಗಲೂ ಸುಧಾರಣೆಗಾಗಿ ಪ್ರಯತ್ನಿಸಿ, ಸೋಲುತ್ತೀಯೆ; ಎಂದೂ ಕೈಗೂಡಲಾರದ, ಎಂದೆಂದಿಗೂ ನಿನಗೆ ಸಾಧ್ಯ ವಾಗದ ಸುಖಕ್ಕಾಗಿ ದಾರಿಕಾಯುತ್ತೀಯೆ' ಎಂದು ಉದ್ಗರಿಸಿದುವು.

ಆದರೆ ಅವನ ಉಪಕರಣಗಳು ಹೇಳಿದ್ದಿಷ್ಟು ಮಾತ್ರ; ಭೂತಕಾಲಕ್ಕೆ ಶರಣಾಗ ಕೂಡದೆಂದೂ, ತನಗಿಷ್ಟವಾದದ್ದನ್ನು ಮಾಡುವ ಶಕ್ತಿ ಅವನಿಗಿದೆಯೆಂದೂ ಅವನ ಅಂತರಂತದೊಳಗಿನ ಮತ್ತೊಂದು ಧ್ವನಿ ಹೇಳುತ್ತಿತ್ತು. ಈ ಬೇರೊಂದು ಧ್ವನಿಯನ್ನು ಕೇಳಿಸಿಕೊಳ್ಳುತ್ತ ಅವನು ಭಾರವಾಗಿದ್ದೆರಡು ಮೂಕಗಂಟೆಗಳು ನೆಲೆಗೊಂಡಿದ್ದ ಕೋಣೆಯ ಮೂಲೆಗೆ ಹೋದನು; ತನ್ನ ಹುರುಪನ್ನುಕ್ಕಿಸುವ ನಂಬಿಕೆಯಿಂದ ಅವನು ಗರಡಿಯ ಮಲ್ಲನಂತೆ ಅವುಗಳನ್ನು ತಿರುಗಿಸತೊಡಗಿದನು. ಬಾಗಿಲ ಮತ್ತೊಂದು ಕಡೆ ಯಿಂದ ಹೆಜ್ಜೆಗಳ ಕಿರುಕಲು ಧ್ವನಿ ಕೇಳಿಸುತ್ತಿತ್ತು. ಅವನು ಬಿರುಬಿರನೆ ಮೂಕ ಗಂಟೆ ಗಳನ್ನು ಕೆಳಗಿಟ್ಟನು.

ಅವನ ಪಾರುಪತ್ಯಗಾರ ಒಳಗೆ ಪ್ರವೇಶಿಸಿದನು; ಭಗವಂತನ ಕೃಪೆಯಿಂದ ಎಲ್ಲವೂ ಸರಿಯಾಗಿ ಸಾಗುತ್ತಿತ್ತೆಂದೂ, ಆದರೆ ಒಣಗಿಸುವ ಹೊಸ ಯಂತ್ರದಿಂದಾಗಿ ಮೇವು ಗೋಧಿ ಸುಟ್ಟು ಕರಿಕಲಾಗಿತ್ತೆಂದೂ ಅವನು ನುಡಿದನು. ಈ ವಿಷಯ ತಿಳಿದಾಗ ಲೆವಿನ್‌ನಿಗೆ ಗಾಬರಿಯಾಯಿತು. ಒಣಗಿಸುವ ಯಂತ್ರದ ಕೆಲವು ಭಾಗಗಳನ್ನು ಭಾಗಶಃ ಅವನೇ ರೂಪಿಸಿ, ಅದನ್ನು ನಿರ್ಮಿಸಿದ್ದನು. ಒಣಗಿಸುವ ಯಂತ್ರ ಬೇಡವೆಂದು ಪಾರುಪತ್ಯಗಾರ ಯಾವಾಗಲೂ ವಿರೋಧಿಸುತ್ತಿದ್ದನು. ಈಗವನು ತನ್ನ ವಿಜಯೋ ತ್ಸಾಹವನ್ನಡಗಿಸಿಕೊಂಡು, ಆ ಯಂತ್ರ ಮೇವು ಗೋಧಿಯನ್ನು ಕರಿಕಲುಗೊಳಿಸಿತೆಂದು ಪ್ರಕಟಿಸಿದನು. ನೂರು ಸಲ ಹೇಳಿಕೊಟ್ಟಿದ್ದ ಸಲಹೆಗಳನ್ನು ಕಡೆಗಣಿಸಿದ್ದರಿಂದಲೇ ಮೇವು ಗೋಧಿ ಸುಟ್ಟು ಹೋಗಿರಬೇಕೆಂಬ ಸಂಗತಿ ಲೆವಿನ್‌ನಿಗೆ ಖಾತರಿಯಾಯಿತು. ಅವನು ದಿಗ್ಭ್ರಮೆಗೊಂಡು, ಆ ಮನುಷ್ಯನನ್ನು ಛೀಮಾರಿ ಮಾಡಿದನು.

ಆದರೆ ಆನಂದದಾಯಕವಾದ ಬೇರೆ ಸುದ್ದಿಯೂ ಅವನಿಗಾಗಿ ಕಾದಿತ್ತು. ಪಾವ ಕರು ಹಾಕಿತ್ತು. ದನಗಳ ಪ್ರದರ್ಶನದಲ್ಲಿ ಕೊಂಡುಕೊಂಡಿದ್ದ ಪಾವ ಬಹು ಬೆಲೆಯ ಅತ್ಯುತ್ತಮ ತಳಿಯ ಹಸುವಾಗಿತ್ತು.

'ನನ್ನ ಕುರಿದೊಗಲಿನ ಅಂಗಿಯನ್ನು ತಾ, ಕುಜ್ಮ. ಲಾಂದ್ರವೂ ಬೇಕು. ನಾನು ಪಾವಳನ್ನು ನೋಡಿಕೊಂಡು ಬರುತ್ತೇನೆ' ಎಂದವನು ಪಾರುಪತ್ಯಗಾರನಿಗೆ ಆಜ್ಞಾಪಿ ಸಿದನು.

ಅತ್ಯುತ್ತಮ ಹಸುಗಳ ಕೊಟ್ಟಿಗೆ ಮನೆಯ ಹಿಂಗಡೆಯಲ್ಲಿತ್ತು. ಅಂಗಳವನ್ನು ದಾಟಿ, ಲೈಲಕ್ ಮರಗಳ ಬದಿಯ ಮಂಜುಗುಡ್ಡೆಗಳನ್ನು ಹಾಯ್ದು, ಅವನು ಕೊಟ್ಟಿಗೆಯನ್ನು ತಲುಪಿದನು. ಮಂಜಿಡಿದ ಕದವನ್ನು ಹಿಡಿದೆಳೆಯಲಾಗಿ, ಸಗಣಿಯ ಬಿಸಿ ಹೊಗೆಯ ವಾಸನೆ ಅವನ ಮೂಗಿನ ಹೊಳ್ಳೆಗಳನ್ನು ಪ್ರವೇಶಿಸಿತು. ಲಾಂದ್ರದ ಅಪರಿಚಿತ ಬೆಳಕಿನಿಂದ ಸೋಜಿಗಗೊಂಡ ಹಸುಗಳು ಹೊಸ ಒಣ ಹುಲ್ಲಿನ ಮೇಲೆ ತುಯ್ದಾಡಿದುವು. ಡಚ್ ತಳಿಯ ಹಸುವಿನ ಕಲಬೆರಕೆ ಕಪ್ಪು ಬಣ್ಣದ ನುಣ್ಣನೆಯ, ಅಗಲವಾದ ಬೆನ್ನಿನ ಭಾಗ ಅವನ ಕಣ್ಣಿಗೆ ಬಿತ್ತು. ಮೂಗಿನುಂಗುರದ ಬರ್ಕ್ಯೂತ್ ಗೂಳಿ ಮೇಲೇಳಲು ಯೋಚಿಸಿತು; ಆದರದು ಕೂಡಲೇ ತನ್ನ ಮನಸ್ಸನ್ನು ಬದಲಾಯಿಸಿ, ಜನ ಹಾಯ್ದು ಹೋಗುತ್ತಿದ್ದಂತೆ ಒಂದೆರಡು ಸಲ ಘೂಂಕರಿಸಿತು. ನೀರಾನೆಯಂಥ ಬೃಹದಾಕಾರದ ಕೆಂಗಂದು ಬಣ್ಣದ ಸುಂದರ ಹಸು ಪಾವ ತಾನು ಮೂಸುತ್ತಿದ್ದ ಕರುವನ್ನು ಮರೆಮಾಡಿಕೊಂಡು, ಬಂದವರ ಕಡೆಗೆ ತನ್ನ ಬೆನ್ನು ತಿರುಗಿಸಿಕೊಂಡು ನಿಂತಿತ್ತು.

ಲೆವಿನ್ ರೊಪ್ಪವನ್ನು ಪ್ರವೇಶಿಸಿ, ಪಾವಳನ್ನು ಪರೀಕ್ಷಿಸಿ, ಕೆಂಗಂದು ಮಚ್ಚೆಯ ಕರುವನ್ನು ಮೇಲೆತ್ತಿ, ನಡುಗುತ್ತಿದ್ದ, ಉದ್ದನೆಯ ಕಾಲುಗಳ ಮೇಲೆ ನಿಲ್ಲಿಸಿದನು. ಭಯಗೊಂಡ ಪಾವ ಪ್ರತಿಭಟನೆಗಾಗಿ ಗರ್ಜಿಸತೊಡಗಿತು; ಆದರೆ ಲೆವಿನ್ ಕರುವನ್ನು ಅದರ ಬಳಿ ಮೆಲ್ಲನೆ ಸರಿಸಿದಾಗ, ಅದು ಸಮಾಧಾನದಿಂದ ನಿಡುಸುಯ್ದು, ಒರಟು ನಾಲಗೆಯಿಂದ ತನ್ನ ಕರುವನ್ನು ನೆಕ್ಕತೊಡಗಿತು. ಮೊಲೆತೊಟ್ಟು ಹುಡುಕುತ್ತಿದ್ದ ಕರು ತಾಯಿಯ ಕೆಚ್ಚಲಿಗೆ ಮೂತಿಹಾಕಿ ತಿವಿಯುತ್ತ, ತನ್ನ ಬಾಲವನ್ನು ಗಿರಗಿರನೆ ತಿರುಗಿಸುತ್ತಿತ್ತು.

'ಬೆಳಕು ಸಾಲದು. ಲಾಂದ್ರವನ್ನಿಲ್ಲಿ ತಾ, ಫ್ಯಾದೊರ್' ಎಂದು ಲೆವಿನ್ ಕರುವನ್ನವಲೋಕಿಸುತ್ತ ನುಡಿದನು. 'ಇದು ತನ್ನ ತಾಯಿಯಂತೆಯೆ ಇದೆ. ಆದರೆ ಬಣ್ಣ ಮಾತ್ರ ಅಪ್ಪನಂತಿದೆ. ಭೇಷ್, ಟೊಂಕ ಉದ್ದವಾಗಿದ್ದು, ಅಗಲವಾಗಿದೆ. ಏ, ವಸಿಲಿ ಫ್ಯಾದೊರೊವಿಚ್, ಇದು ತುಂಬ ಸುಂದರವಾಗಿದೆಯಲ್ಲವೆ?' ಎಂದವನು ಕರುವನ್ನು ಕಂಡ ಸಂತೋಷದ ಭರದಲ್ಲಿ ಮೇವು ಗೋಧಿಯ ಸಂಗತಿಯನ್ನು ಸಂಪೂರ್ಣವಾಗಿ ಮರೆತು ಪ್ರಶ್ನಿಸಿದನು.

'ಅದರ ಸೌಂದರ್ಯದ ಬಗ್ಗೆ ಆಶ್ಚರ್ಯವೇಕೆ? ಆದಿರಲಿ....ನೀವು ಬಿಟ್ಟ ದಿನವೇ ಕಂತ್ರಾಟುದಾರ ಸೆಮ್ಯಾನ್ ಬಂದಿದ್ದ. ವ್ಯವಹಾರದ ವಿಷಯದಲ್ಲಿ ನೀವವನೊಡನೆ ಮಾತಾಡಿ ಮುಗಿಸಬೇಕಾಗಿದೆ, ಕಾನ್‌ಸ್ಟೆಂಟಿನ್ ದಿಮಿತ್ರಿಚ್' ಎಂದು ಪಾರುಪತ್ಯಗಾರ ನುಡಿದನು. 'ಒಣಗಿಸುವ ಯಂತ್ರದ ಬಗ್ಗೆ ಈಗಾಗಲೇ ನಿಮಗೆ ವರದಿ ಸಲ್ಲಿಸಿಯಾಗಿದೆ.'

ಬಹು ವಿಸ್ತಾರವೂ ಜಟಿಲವೂ ಆದ ಆಸ್ತಿಯ ನಿರ್ವಹಣೆಗೆ ಸಂಬಂಧಿಸಿದ ಸಮಸ್ಯೆಗಳಲ್ಲಿ ಮುಳುಗಲು ಲೆವಿನ್‌ನಿಗೆ ಅದಷ್ಟೇ ಸಾಕಾಗಿತ್ತು. ಕೊಟ್ಟಿಗೆಯಿಂದವನು ನೆಟ್ಟಗೆ ಲೆಕ್ಕದ ಮನೆಗೆ ಹೋದನು. ಅಲ್ಲವನು ಪಾರುಪತ್ಯಗಾರ ಹಾಗೂ ಕಂತ್ರಾಟುದಾರರೊಡನೆ ಮಾತುಕತೆ ನಡಸಿದನು. ಆ ತರುವಾಯ ಅವನು ಮನೆಗೆ ಮರಳಿ, ನೇರವಾಗಿ ಮಹಡಿಯ ದಿವಾನಖಾನೆಗೆ ಹೋದನು.

೨೭

ಅದೊಂದು ದೊಡ್ಡ ಬಂಗಲೆ. ಅದರಲ್ಲಿದ್ದವನು ತಾನೊಬ್ಬನಾದರೂ ಲೆವಿನ್ ಅದನ್ನು ಪೂರ್ಣವಾಗಿ ಶಾಖಗೊಳಿಸಿ, ಎಲ್ಲ ಕೋಣೆಗಳನ್ನು ಬಳಸಿಕೊಳ್ಳುತ್ತಿದ್ದನು. ಅದು ವಿವೇಕವಲ್ಲವೆಂದೂ, ಅಪರಾಧವೆಂದೂ, ವಾಸ್ತವವಾಗಿ ತನ್ನ ನೂತನ ಸಂಕಲ್ಪಗಳಿಗೆ ವಿರೋಧವಾದದ್ದೆಂದೂ ಅವನು ತಿಳಿದಿದ್ದನು; ಆದರೆ ಈ ಮನೆಯೇ ಅವನಿಗೆ ಇಡೀ ಜಗತ್ತಾಗಿತ್ತು. ತನ್ನ ತಂದೆ ತಾಯಿಯರು ಬಾಳಿ ಬದುಕಿದ ಮತ್ತು ಸತ್ತ ಜಗತ್ತದು. ತನಗೆ ಆದರ್ಶವೆಂದು ತಿಳಿದ ಜೀವನವನ್ನವನು ಅಲ್ಲಿ ನಡಸಿದ್ದನು. ತನ್ನ ಮಡದಿ ಮತ್ತು ಕುಟುಂಬಗಳೊಡನೆ ಅದನ್ನು ಪುನಶ್ಚೇತನಗೊಳಿಸುವ ನಂಬಿಕೆ ಅವನಿಗಿತ್ತು.

ತನ್ನ ತಾಯಿಯ ನೆನಪು ಲೆವಿನ್‌ಗೆ ಸ್ಪಷ್ಟವಾಗಿರಲಿಲ್ಲ. ಅವಳನ್ನು ಕುರಿತ ಕಲ್ಪನೆ ಅವನಿಗೊಂದು ಪವಿತ್ರ ಸ್ಮೃತಿಯಾಗಿತ್ತು. ತನ್ನ ತಾಯಿಯಲ್ಲೇನು ಸುಂದರವೂ ಪವಿತ್ರವೂ ಆದ ಆದರ್ಶವನ್ನು ಕಂಡಿದ್ದನೋ ಅದರ ನಿದರ್ಶನವನ್ನವನು ತನ್ನ ಭಾವೀ ಪತ್ನಿಯ ಕಲ್ಪನೆಯಲ್ಲಿ ಕಂಡುಕೊಂಡಿದ್ದನು. ವಿವಾಹವೊಂದು ಸಾಮಾಜಿಕ ಪ್ರಕ್ರಿಯೆಯೆಂದು ಅವನ ಗೆಳೆಯರು ತಿಳಿದುಕೊಂಡಿದ್ದರಷ್ಟೆ. ಆದರೆ ವಿವಾಹ ಸಂಬಂಧವಾದ ಲೆವಿನ್‌ನ ಕಲ್ಪನೆ ಪೂರ್ಣ ಭಿನ್ನವಾಗಿತ್ತು. ಜೀವನದಲ್ಲಿ ಅದೊಂದೇ ಅವನಿಗೆ ಪ್ರಮುಖ ಘಟನೆಯಾಗಿ ಪರಿಣಮಿಸಿತ್ತು; ಅವನ ಬದುಕಿನ ಸವಿಯೆಲ್ಲ ಅದೊಂದನ್ನೇ ಅವಲಂಬಿಸಿತ್ತು. ಆದರೀಗ ಅದರ ಯೋಚನೆಯನ್ನೆಲ್ಲ ಅವನು ತಿರಸ್ಕರಿಸಬೇಕಾಗಿತ್ತು.

ಆದರೆ ಎಂದಿನಂತೆ ಟೀ ತೆಗೆದುಕೊಳ್ಳುವ ಸಲುವಾಗಿ ಅವನು ದಿವಾನಖಾನೆಯನ್ನು ಪ್ರವೇಶಿಸಿ, ಪುಸ್ತಕ ಹಿಡಿದುಕೊಂಡು ತೋಳ್ಕುರ್ಚಿಯ ಮೇಲೆ ಆಸೀನನಾದಾಗ, ಅಗಾಫಿಯಾ ಮಿಖಾಯ್‌ಲೋವ್ನ ಟೀ ತಂದು, 'ನಿಮ್ಮ ಅನುಮತಿಯಿಂದ ನಾನಿಲ್ಲಿ ಕುಳಿತುಕೊಳ್ಳುತ್ತೇನೆ, ಪ್ರಭು' ಎಂದು ನುಡಿದು ಕಿಟಕಿಯ ಬಳಿ ಕುಳಿತುಕೊಂಡಾಗ, ವಿಚಿತ್ರವಾಗಿ ಕಂಡರೂ ಅವನು ಮಾತ್ರ ಕನಸುಗಳಿಂದ ಮುಕ್ತಗೊಂಡಿರಲಿಲ್ಲ; ಅವುಗಳಿಂದ ಮುಕ್ತಗೊಂಡಾಗಲೇ ತನ್ನ ಬದುಕು ಅಸಹನೀಯವಾಗುತ್ತದೆಂದು ಅವನು ತಿಳಿದಿದ್ದನು. ಅವಳ ಮೂಲಕವೋ, ಬೇರೊಬ್ಬಳ ಮೂಲಕವೋ ಅವು ಫಲಕಾರಿಯಾಗುತ್ತವೆಂದು ಅವನು ಬಗೆದಿದ್ದನು. ಅವನು ಓದುತ್ತಿದ್ದ; ಓದನ್ನು ಮನನ ಮಾಡಿಕೊಳ್ಳುತ್ತಿದ್ದ; ನಿರಂತರವಾಗಿ ಗಳಹುತ್ತಿದ್ದ ಅಗಾಫಿಯಾ ಮಿಖಾಯ್‌ಲೋವ್ನಳ ಮಾತನ್ನು ಆಲಿಸುವ ಸಲುವಾಗಿ ಮಾತ್ರ ಆಗಿಂದಾಗ್ಗೆ ಅವನ ಧ್ಯಾನಕ್ಕೆ ಭಂಗವಾಗುತ್ತಿತ್ತು; ಅದೇ ಸಮಯದಲ್ಲಿ ತನ್ನ ಮನೆ ವಾರ್ತೆಗೆ ಮತ್ತು ತನ್ನ ಭವಿಷ್ಯದ ಕುಟುಂಬಕ್ಕೆ ಸಂಬಂಧಿಸಿದಂತೆ ಅಸಂಬದ್ಧವಾದ ಕಾಣ್ಕೆಗಳು ಅವನ ಕಲ್ಪನೆಯಲ್ಲಿ ಮೂಡುತ್ತಿದ್ದುವು. ತನ್ನ ಅಂತರಂಗದ ಆಳದಲ್ಲಿ ಯಾವುದೋ ಒಂದು ಶಕ್ತಿ ಬೇರು ಬಿಡುತ್ತಿದ್ದಂತೆ ಮತ್ತು ಪ್ರಬಲವಾಗುತ್ತಿದ್ದಂತೆ ಅವನಿಗರಿವಾಗುತ್ತಿತ್ತು.

ಕುದುರೆಕೊಳ್ಳಲೆಂದು ತಾನು ನೀಡಿದ್ದ ಹಣವನ್ನು ನಾಸ್ತಿಕ ಪ್ರೊಖಾರ್ ಕುಡಿತಕ್ಕಾಗಿ ಪೋಲುಮಾಡಿ ಅಮಲೇರಿ, ಬಾಯಿಗೆ ನೀರು ಬಿಡುವ ತನಕ ಮಡದಿಯನ್ನು ಹೊಡೆದಿದ್ದನೆಂಬ ಸಂಗತಿಯನ್ನು ಲೆವಿನ್ ಅಗಾಫಿಯಾ ಮಿಖಾಯ್‌ಲೊವ್ನಳಿಂದ ಕೇಳಿ

ತಿಳಿದುಕೊಂಡನು; ಅವನದನ್ನು ಆಲಿಸುತ್ತಿದ್ದಂತೆಯೇ ಪುಸ್ತಕವನ್ನೂ ಓದುತ್ತಿದ್ದನು; ತನ್ನ ಓದಿನಿಂದ ಪ್ರಚೋದಿತವಾದ ಆಲೋಚನಾ ಸರಣಿಯಿಂದವನು ವಿಮುಖನಾಗಲಿಲ್ಲ. 'ಶಾಖ'ವನ್ನು ಕುರಿತ ಟಿಂಡಾಲ್‌ನ ಪುಸ್ತಕವದು. ತನ್ನ ಪ್ರಯೋಗಗಳ ಜಾಣ್ಮೆಯ ಬಗ್ಗೆ ಆತ್ಮಪ್ರತ್ಯಯವುಳ್ಳವನಾಗಿದ್ದರೂ ತಾತ್ತ್ವಿಕದೃಷ್ಟಿಯ ಕೊರತೆಯಿಂದಾಗಿ ತಾನು ಟಿಂಡಾಲ್‌ನ ಬಗ್ಗೆ ಪ್ರಕಾಶಪಡಿಸಿದ್ದ ವಿಮರ್ಶೆಯನ್ನು ನೆನೆದನು. ಒಡನೆಯೇ ಆನಂದದಾಯಕವಾದ ಆಲೋಚನೆಯೊಂದು ಅವನ ಮನಸ್ಸಿನ ಮೇಲ್ಮೈಯಲ್ಲಿ ತೇಲಾಡಿತು: ಎರಡು ವರ್ಷಗಳೊಳಗೆ ನನ್ನ ಮಂದೆಯಲ್ಲಿ ಮತ್ತೆರಡು ಡಚ್ ಹಸುಗಳಿರುತ್ತವೆ; ಪ್ರಾಯಶಃ ಆಗಿನ್ನೂ ಪಾವ ಜೀವಂತವಾಗಿರುತ್ತಾಳೆ; ಬರ್‌ಕೂತ್‌ನಿಗೆ ಜನಿಸಿದ ಆ ಹನ್ನೆರಡು ಕಡಸುಗಳು ಮತ್ತು ಆ ಮೂವರು ಚೆಲುವೆಯರು....ಓ, ಅದೆಷ್ಟು ಅದ್ಭುತ!

ಅವನು ಮತ್ತೆ ಓದು ಶುರುಮಾಡಿದನು. 'ಅದೆಲ್ಲ ಸರಿಯೆ. ವಿದ್ಯುಚ್ಛಕ್ತಿ ಮತ್ತು ಶಾಖಗಳು ಒಂದೆ ಎಂದು ಪರಿಗಣಿಸೋಣ. ಆದರೆ ಸಮಸ್ಯೆಯೊಂದರ ಪರಿಹಾರಕ್ಕೆಂದು ಗೊತ್ತಾದ ಸಮೀಕರಣದಲ್ಲಿ ಒಂದು ಸಂಖ್ಯೆಯ ಬದಲಿಗೆ ಮತ್ತೊಂದು ಸಂಖ್ಯೆಯನ್ನಿರಿಸಲು ಸಾಧ್ಯವೆ? ಅದರ ಫಲಿತಾಂಶವೇನಾದೀತು? ಪ್ರಾಕೃತಿಕ ಶಕ್ತಿಗಳ ಪರಸ್ಪರ ಸಂಬಂಧವನ್ನು ಸಹಜ ರೀತಿಯಲ್ಲಿಯೇ ಗ್ರಹಿಸಬೇಕಾಗುತ್ತದೆ....ಪಾವಳ ಮಗಳ, ಅಂತೆಯೇ ಈ ಮೂರು ಹಸುಗಳ ಹೊಟ್ಟೆಯಲ್ಲಿ ಹುಟ್ಟುವ ಎಲ್ಲ ಕರುಗಳ ಮೈ ಕಂದುಬಣ್ಣದ ಮಚ್ಚೆಗಳಿಂದ ಕೂಡಿರುವುದಾದರೆ ನನಗೆ ತುಂಬ ಸಂತೋಷವಾಗುತ್ತದೆ. ಭೇಷ್! ಮಂದೆಯನ್ನು ತೋರಿಸಲಿಕ್ಕಾಗಿ ನಾನು ಮತ್ತು ನನ್ನ ಹೆಂಡತಿ ನಮ್ಮ ಅತಿಥಿಗಳನ್ನು ಕರೆದೊಯ್ಯುತ್ತೇವೆ. "ಕಾನ್‌ಸ್ಟೆಂಟಿನ್ ಮತ್ತು ನಾನು ಆ ಕರುವನ್ನು ಮಗುವಿನಂತೆ ಸಾಕಿದೆವು" ಎಂದು ಮಡದಿ ನುಡಿಯುತ್ತಾಳೆ; "ಅಂಥ ವಿಷಯಗಳಲ್ಲಿ ನಿನಗೆ ಆಸಕ್ತಿ ಮೂಡಿದ್ದು ಹೇಗೆ?" ಎಂದು ಅತಿಥಿಗಳು ಕೇಳುತ್ತಾರೆ; "ಅವರ ಆಸಕ್ತಿಯೇ ನನ್ನ ಆಸಕ್ತಿ" ಎಂದವಳು ಹೇಳುತ್ತಾಳೆ. ಆದರೆ ಅವಳು ಯಾರು? ಎಲ್ಲಿದ್ದಾಳೆ?' ಮಾಸ್ಕೋದಲ್ಲಿ ನಡೆದ ಘಟನೆಗಳೆಲ್ಲ ಅವನಿಗೆ ನೆನಪಾದುವು. 'ಸರಿ, ಸರಿ, ನಾನೀಗ ಮಾಡುವುದಾದರೂ ಏನು? ಅದು ನನ್ನ ತಪ್ಪಲ್ಲ. ಆದರೀಗ ಪ್ರತಿಯೊಂದೂ ಹೊಸ ತಿರುವನ್ನು ತೆಗೆದುಕೊಳ್ಳಬೇಕಾಗಿದೆ. ಬದುಕು ಅವಕ್ಕನುವು ಮಾಡಿಕೊಡ ವುದಿಲ್ಲವೆಂದು, ಭೂತಕಾಲ ಅದಕ್ಕವಕಾಶ ನೀಡುವುದಿಲ್ಲವೆಂದು ಹೇಳುವುದೆ ಮೂರ್ಖತನ. ನಾನು ಉತ್ತಮಗೊಳ್ಳಲು, ಮತ್ತಷ್ಟು ಉತ್ತಮಗೊಳ್ಳಲು ಹೋರಾಡಬೇಕಾಗಿದೆ.'

ಅವನು ಆಲೋಚನೆಯಲ್ಲಿ ಮುಳುಗಿದನು. ತನ್ನ ದಣಿ ಹಿಂದಿರುಗಿದ ಸಂತೋಷದಿಂದ ಹಿಗ್ಗುತ್ತ, ಹೊರಗೆ ಓಡಿಹೋಗಿ ಬಗುಳುತ್ತಿದ್ದ ಮುದಿ ಲಾಸ್ಕ ಹೊಸ ಗಾಳಿಯ ವಾಸನೆಯನ್ನು ಹೊತ್ತು ಬಾಲವಲ್ಲಾಡಿಸುತ್ತ ಒಳಗೆ ಬಂತು. ಅದು ದೈನ್ಯದಿಂದ ಅವನ ಪಕ್ಕಕ್ಕೆ ಬಂದು, ತನ್ನ ಮೂತಿಯನ್ನವನ ಕೈಯೊಳಗಿಟ್ಟು, ತನ್ನನ್ನು ಮುದ್ದಿಸಲೆಂದು ಕುಂಯ್ಗುಡುತ್ತಿತ್ತು.

ಮುಂದುವರಿಯುವುದು

ಸಾದರ ಸ್ವೀಕಾರ

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೧ ಇವರ ಪ್ರಕಟಣೆಗಳು:—

೧. ತಮಸ್—ಅನುವಾದಕರು : ಶ್ರೀಮತಿ ಶಾರದಾಸ್ವಾಮಿ, ಡಾ॥ ಎಸ್. ಎಂ. ರಾಮಚಂದ್ರ ಸ್ವಾಮಿ ; ಪುಟ ೩೦೦, ಬೆಲೆ ೪೦ ರೂ.

೨. ಮಾರ್ಕ್ಸ್ : ಕೂಲಿ, ಬೆಲೆ ಮತ್ತು ಲಾಭ—ಅನುವಾದಕರು : ಕೆ.ಎಲ್. ಗೋಪಾಲಕೃಷ್ಣ ರಾವ್ ; ಪುಟ ೮೪, ಬೆಲೆ ೨ ರೂ.

೩. ಲೆನಿನ್ : ಬುದ್ಧಿಜೀವಿಗಳ ಕುರಿತು—ಅನುವಾದಕರು : ಕೆ. ಎಲ್. ಗೋಪಾಲಕೃಷ್ಣ ರಾವ್ ; ಪುಟ ೩೧೬, ಬೆಲೆ ೬-೭೫ ರೂ.

೪. ಮಾರ್ಕ್ಸ್ ಎಂಗೆಲ್ಸ್ : ಪ್ರಥಮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ೧೮೫೭-೫೯—ಅನುವಾದಕರು : ಕೆ. ಎಲ್. ಗೋಪಾಲಕೃಷ್ಣರಾವ್ ; ಪುಟ ೩೪೧, ಬೆಲೆ ೧೦ ರೂ.

೫. ಇವಾನ್ (ಒಂದು ನೀಳ್ಗತೆ)—ಅನುವಾದಕರು : ಕೆ. ಎಲ್. ಗೋಪಾಲಕೃಷ್ಣರಾವ್ ; ಪುಟ ೧೪೨, ಬೆಲೆ ೭ ರೂ.

೬. ಮಕ್ಸೀಂ ಗೋರ್ಕಿ : ನನ್ನ ವಿಶ್ವವಿದ್ಯಾಲಯಗಳು—ಅನುವಾದಕರು : ಕೆ. ಎಲ್. ಗೋಪಾಲಕೃಷ್ಣರಾವ್ ; ಪುಟ ೨೧೩, ಬೆಲೆ ೧೩ ರೂ.

೭. ತನು-ಮನ (ಕಾಯಿಲೆಯಲ್ಲಿ ದೇಹ ಮತ್ತು ಮನುಸ್ಸುಗಳ ಸಂಬಂಧ)—ಲೇಖಕರು : ಡಾ॥ ಸಿ. ಆರ್. ಚಂದ್ರಶೇಖರ್ ; ಪುಟ ೧೧೫, ಬೆಲೆ ೧೦ ರೂ.

೮. ನೊಂಬು (ಫಕೀರ್ ಮುಹಮ್ಮದ್ ಕಟ್ಪಾಡಿ ಅವರ ಆಯ್ದ ಕಥೆಗಳು)—ಲೇಖಕರು : ಫಕೀರ್ ಮುಹಮ್ಮದ್ ಕಟ್ಪಾಡಿ ; ಪುಟ ೧೪೨, ಬೆಲೆ ೧೨ ರೂ.

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಪ್ರೊ|| ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್
41, ಆರನೆಯ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು–೫೭೦ ೦೦೯

2. ಎಚ್. ಸಂಜೀವಯ್ಯ
ಭೌತಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

3. ಎ. ಆರ್. ನಾಗಭೂಷಣ, ಇಂಗ್ಲಿಷ್ ಉಪನ್ಯಾಸಕ
1235, ಕೆ. ಎಂ. ಪುರಂ, ಮೈಸೂರು–೫೭೦ ೦೦೪

4. ಡಾ|| ಹಾ. ತಿ. ಕೃಷ್ಣೇಗೌಡ
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

5. ಡಾ|| ಪಿ. ಆರ್. ಅನಂತರಾವ್
ಔಷಧ ಶಾಸ್ತ್ರ ಪ್ರಾಧ್ಯಾಪಕರು
6ನೇ ಮೈನ್, 7ನೇ ಕ್ರಾಸ್, ಸರಸ್ವತಿಪುರಂ, ಮೈಸೂರು–೫೭೦ ೦೦೯

6. ಪ್ರಭಾ ಎನ್.
212 (ಹಳೇ ನಂ. 19)
28ನೇ ಕ್ರಾಸ್, 7ನೇ ಬ್ಲಾಕ್, ಜಯನಗರ, ಬೆಂಗಳೂರು–೫೬೦ ೦೮೨

7. ಗ ರಾಜೇಗೌಡ
ಕಾರ್ಯಕ್ರಮ ಸಮನ್ವಯಾಧಿಕಾರಿ (ತರಬೇತಿ ವಿಭಾಗ)
ರಾಜ್ಯ ಸಂಪನ್ಮೂಲ ಕೇಂದ್ರ, 501, ಚಿತ್ರಭಾನು ರಸ್ತೆ
ಎ ಮತ್ತು ಬಿ ಬ್ಲಾಕ್, ಕುವೆಂಪುನಗರ, ಮೈಸೂರು–೫೭೦ ೦೨೩

8. ಡಾ|| ಆರ್ವಿಯಸ್. ಸುಂದರಂ, ರೀಡರ್
ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ,
ಮೈಸೂರು–೫೭೦ ೦೦೬

9. ಪ್ರೊ|| ಎ. ಎನ್. ಮೂರ್ತಿರಾವ್
185, ಎಚ್. ಎ. ಎಲ್. ಲೇ ಔಟ್, 2ನೇ ಹಂತ, ಸಂಜಯನಗರ
ಬೆಂಗಳೂರು–೫೬೦ ೦೨೪

10. ಪ್ರೊ|| ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ನಾಗರಿಕತೆಯ ಇತಿಹಾಸ

ಕಥಾಸಂಕಲನ

ಕನ್ನಡ ಪ್ರತಿಭೆ

ಕನ್ನಡ ಪರಂಪರೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮುದ್ರಣಾಲಯ, ಮೈಸೂರು.